ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಜುಲೈ 17, 2013 ಪುಟ 20 ರೂ. 14/-

ಸಂದರ್ಶನ
ಶ್ರೀಕಂಠ ಕೂಡಿಗೆ

ರಂಗತರಂಗ
ಹೊಂಗಿರಣ




ಬಿಗ್‌ಬಾಸ್
ಗೋಲ್‌ಮಾಲ್
ಸೋತು ಗೆದ್ದ ಅರುಣ್ ಸಾಗರ್



ಗಣಿ ಇಲಾಖೆಯಲ್ಲಿ
ಶ್ರೀನಿವಾಸನ
ಲೂಟಿ



ವಂಚಕ ರಿಪ್ಪನ್
ಪೊಲೀಸರೇ
ಬಲಿಪಶು





KGF
ಶಾಸಕಿ
ಾಮಕ್ಕನ



ಕೊಪ್ಪಳ
ಭಂಡ
ತಂಗಡಗಿ
ಬ್ರದರ್ಸ್



ಮಂಡ್ಯ
ಸತ್ಯಾನಂದನ
ನೀಲಿ ಲೀಲೆ



ಬಾಗಲಕೋಟೆ
ಆರೋಗ್ಯ ಇಲಾಖೆಗೆ
ಬಳ್ಳಾರಿ ಎಂಬ
ವೈರಸ್

ಅಸಂಖ್ಯ ವ್ಯಕ್ತಿತ್ವಗಳ ಅಲಿಗೆ ಪುಟ್ಟಯ್ಯ ನಾಯಕ



•ಪಾರ್ವತೀಶ ಸಂಪಾದಕ


ಬಿಡಿ ಚಿತ್ರಗಳು

ಕೆಳೆದುಹೋದ ಕಾಲವನ್ನು ನೆನೆಯುವುದು, ನಾವು ಕಂಡುಕೇಳರಿಯದ ಬದುಕು ಹಾಗೂ ಅಂತಹ ಬದುಕನ್ನು ಬದುಕಿದವರ ಬಗ್ಗೆ ತಿಳಿಯುವುದು ಯಾವಾಗಲೂ ಮುದ ನೀಡುವಂತದ್ದು.

ಅಲಿಗೆ ಪುಟ್ಟಯ್ಯ ನಾಯಕರು ಅಂತಹ ಭಾವನೆ ಮೂಡಿಸಬಲ್ಲ ವ್ಯಕ್ತಿ.



ಅಸಂಖ್ಯ ವ್ಯಕ್ತಿತ್ವಗಳ ವ್ಯಕ್ತಿಯೆಂಬಂತೆ ಭಾಸವಾಗುವ ಪುಟ್ಟಯ್ಯ ನಾಯಕ 19-20ನೇ ಶತಮಾನವೆರಡರಲ್ಲೂ ಮಲೆನಾಡಿನಲ್ಲಿ ಬದುಕಿ ನಿರ್ಗಮಿಸಿದವರು. ಕುವೆಂಪುರವರ ಕೆಲ ಬರಹಗಳಲ್ಲಿ ಅಲಿಗೆ ಪುಟ್ಟಯ್ಯ ನಾಯಕರ ಪ್ರಸ್ತಾಪವಿದೆ. ಕುವೆಂಪುರೊಂದಿಗೆ ಪತ್ರ ವ್ಯವಹಾರ ಹೊಂದಿದ್ದವರಲ್ಲಿ ಅಲಿಗೆ ಕೂಡ ಒಬ್ಬರಾಗಿದ್ದರು. ಸಾಹಿತಿ ಹರಿಹರಪ್ರಿಯ ಸಂಕಲಿಸಿ ಪ್ರಕಟಿಸಿರುವ 'ಕುವೆಂಪು ಪತ್ರಗಳು' ಎಂಬ ಪುಸ್ತಕದಲ್ಲಿ ಅಲಿಗೆ ಹಾಗೂ ಕುವೆಂಪು ನಡುವೆ ಹರಿದಾಡಿದ ಕೆಲ ಪತ್ರಗಳು ಓದಲು ಸಿಗುತ್ತವೆ. ಇದಲ್ಲದೆ ಮಂಜಪ್ಪ ಗೌಡ, ದೇವಂಗಿ ಮಾನಪ್ಪ ಮುಂತಾದ ಮಲೆನಾಡಿನ ತಮ್ಮ ಓರಗೆಯವರಿಗೆ, ಹಿರಿಯ ಬಂಧುಗಳಿಗೂ ಕುವೆಂಪು ಬರೆದಿರುವ ಪತ್ರಗಳು ಆಸಕ್ತಿದಾಯಕ. ಅದರಲ್ಲಿ ಕುವೆಂಪುರ ಪೂರ್ವಿಕರ, ವೈಯಕ್ತಿಕ ಬದುಕಿನ, ಮದುವೆ, ದುಡ್ಡುಕಾಸು, ಆಧ್ಯಾತ್ಮ ಮುಂತಾದವುಗಳ ಪ್ರಸ್ತಾಪವಿದೆ. ಅಲಿಗೆಯವರ ಬಗ್ಗೆ ಅಪಾರ ಗೌರವವಿದ್ದ ಕುವೆಂಪು ಅದನ್ನು ತಮ್ಮ 'ನೆನಪಿನ ದೋಣಿ'ಯ ಮೊದಲ ಪುಟದಲ್ಲೇ ದಾಖಲಿಸಿದ್ದಾರೆ. ಮಲೆನಾಡಿನ ಪ್ರತಿಷ್ಠಿತ ಅಲಿಗೆ ಕುಟುಂಬದ ಪುಟ್ಟಯ್ಯ ನಾಯಕರು ಗಾಂಧಿವಾದಿ, ಪ್ರಯೋಗಶೀಲ ಕೃಷಿಕ, ಶಿಕ್ಷಣದ ಮಹತ್ವ ಅರಿತಿದ್ದವರು. ವೈಚಾರಿಕತೆ, ಆಧ್ಯಾತ್ಮಿಕತೆ ಎರಡೂ ಬೆಸೆದಿದ್ದ, ಓದು-ಸಾಹಿತ್ಯಾಭಿರುಚಿ ಎಲ್ಲವನ್ನೂ ಹೊಂದಿದ್ದ ಅಪರೂಪದ ವ್ಯಕ್ತಿ. ಕುತೂಹಲ ಹುಟ್ಟಿಸುವ ಅಲಿಗೆಯವರ ಬದುಕಿನ ವಿವರಗಳನ್ನು ನೀಡುವ 'ಅಜ್ಞಾತ ಮಹಾಪುರುಷ- ಅಲಿಗೆ ಪುಟ್ಟಯ್ಯ ನಾಯಕ' ಎನ್ನುವ ಪುಸ್ತಕ ಈಗ ಪ್ರಕಟವಾಗಿದೆ. ಅಮೆರಿಕಾ ಕನ್ನಡಿಗ ಬಿ.ಎಂ. ಕುಮಾರಸ್ವಾಮಿ ಹಾಗೂ ಬೆಂಗಳೂರಿನ ಸುರಾನಾ ಕಾಲೇಜಿನ ಡಾ. ಬಿ.ಆರ್. ಸತ್ಯನಾರಾಯಣರ ಪ್ರಯತ್ನದಿಂದ ಇದು ಸಾಧ್ಯವಾಗಿದೆ.



ಅತ್ತ ಪೂರ ರೈತನಂತೆಯೂ ಇರದ, ಇತ್ತ ಪೂರ್ಣ ರಾಜಕಾರಣಿ, ಸ್ವಾತಂತ್ರ್ಯ ಹೋರಾಟಗಾರನಂತೆಯೂ ಇರದಿದ್ದ ಆದರೂ 'ಇವೆಲ್ಲವೂ ಆಗಿದ್ದ ಅಲಿಗೆ ಆ ಕಾಲದ ವಿಶಿಷ್ಟ ವ್ಯಕ್ತಿ. 1950ರ ವೇಳೆಗಾಗಲೇ ಜಪಾನ್ ಮಾದರಿಯ ಭತ್ತದ ಕೃಷಿಯ ಪ್ರಯೋಗ ನಡೆಸಿ ಕೃಷಿ ಖರ್ಚು ಕಡಿಮೆ ಮಾಡಿಕೊಂಡು ಜಾಸ್ತಿ ಭತ್ತದ ಇಳುವರಿ ಪಡೆದಿದ್ದ ಪುಟ್ಟಯ್ಯ ನಾಯಕ ತಮ್ಮ ತೋಟವನ್ನೇ ಕೃಷಿ ಪ್ರಯೋಗ ಶಾಲೆಯನ್ನಾಗಿ ಮಾಡಿಕೊಂಡಿದ್ದರು.

ತೀರ್ಥಹಳ್ಳಿ ಪ್ರಾಂತ್ಯದ ಜನಸಾಮಾನ್ಯರ ವ್ಯಾಜ್ಯ-ಆಸ್ತಿ ವಿವಾದಗಳನ್ನು ಸರ್ವಸಮ್ಮತವಾಗಿ ಬಗೆಹರಿಸುತ್ತಿದ್ದ ಅಲಿಗೆ ಪುಟ್ಟಯ್ಯ ನಾಯಕರು ದಶಕಗಳ ಕಾಲ ಅಲ್ಲಿನ ಸುಪ್ರೀಂಕೋರ್ಟ್‌ನಂತಿದ್ದರು. ಇದರ ಹಿನ್ನೆಲೆಯಲ್ಲಿ ಅವರ ಜಮೀನುದಾರಿಕೆಯ ಹಿಡಿತ ಹಾಗೂ ಪರಂಪರೆ ಇದ್ದೀತಾದರೂ ಅಲಿಗೆಯವರ ವ್ಯಕ್ತಿತ್ವದ ಪ್ರಭಾವವೇ ಅವರಿಗೆ ಆ ಸ್ಥಾನ ದೊರಕಿಸಿಕೊಟ್ಟಿರಲಿಕ್ಕೂ ಸಾಕು.

ವಯಸ್ಸಿನಲ್ಲಿ ಕುವೆಂಪುಗಿಂತ ಕೊಂಚ ಹಿರಿಯರಾಗಿದ್ದ ಅಲಿಗೆ ಕುವೆಂಪುರ ಬಹು ದೊಡ್ಡ ಅಭಿಮಾನಿ ಹಾಗೂ ಆರಾಧಕ. ಕುವೆಂಪು ಕುರಿತಂತೆ ಅಲಿಗೆಯ ನೆನಪಿನಲ್ಲಿ ಕೆಲ ಸ್ಮರಣೀಯ ಘಟನೆಗಳಿವೆ.

ಸಾಗರದ ಸಾಕ್ಷಿ ಎಂಬ ಪತ್ರಿಕೆಯು ಕುವೆಂಪು ಬಗ್ಗೆ ಬಿಟ್ಟೂಬಿಡದೆ ಕೆಟ್ಟದಾಗಿ ಬರೆಯುತ್ತಿದ್ದಾಗ ಅವರೊಂದಿಗೆ ಅಲಿಗೆ ಜಗಳಾಡುತ್ತಾರೆ. ಆ ಜಗಳ ಅಷ್ಟು ಸ್ವಾರಸ್ಯಕರವಿರದಿದ್ದರೂ 'ಸಾಕ್ಷಿ' ಯಾಕೆ ಕುವೆಂಪು ವಿರುದ್ಧ ಇತ್ತು? ಅದನ್ನು ನಡೆಸುತ್ತಿದ್ದವರಾರು? ಕುವೆಂಪು ವಿರುದ್ಧದ 'ಸಾಕ್ಷಿ'ಯ ಆಕ್ಷೇಪಣೆಗೆ ಸಕಾರಣಗಳಿದ್ದವೆ ಅಥವಾ ಅದೊಂದು ಮೇಲ್ಜಾತಿ ಅಸಹನೆಯಷ್ಟೇ ಆಗಿತ್ತಾ ಎಂಬ ಕುತೂಹಲ ಮೂಡುತ್ತದೆ.

ಮನುಷ್ಯ ಸಂಬಂಧಗಳ ಬಗ್ಗೆ ಕುವೆಂಪುರ ವಿಚಿತ್ರ ವರ್ತನೆಗಳನ್ನೂ ಕಾರುಣ್ಯರಹಿತ ನಿರ್ಭಾವುಕತೆಯನ್ನೂ ಅಲಿಗೆಯವರ ನೆನಪುಗಳು ದಾಖಲಿಸಿವೆ.

ಅದು ಕುವೆಂಪುರವರ ತಾಯಿ ಸೀತಮ್ಮ ಹಾಗೂ ಸೋದರಿಯರಾಗಿದ್ದ ದಾನಮ್ಮ-ಪುಟ್ಟಮ್ಮ ಎಂಬುವರ ಬದುಕಿಗೆ ಸಂಬಂಧಿಸಿದ್ದ. ಕುವೆಂಪುಗೆ ತಂದೆಯ ಮನೆ ಕುಪ್ಪಳ್ಳಿಯೊಂದಿಗೆ ಹೆಚ್ಚು ಒಡನಾಟವಿತ್ತೇ ಹೊರತು ತಾಯಿಯ ತವರು ಮನೆ ಹಿರೇಕೊಡಗಿಯೊಂದಿಗೆ ಅಲ್ಲ.

ತಾಯಿ ಸೀತಮ್ಮ ಹಾಗೂ ಸೋದರಿಯರಿಬ್ಬರೂ ಅತ್ಯಂತ ಕಷ್ಟದ ಅಸಹಾಯಕ ಸ್ಥಿತಿಯಲ್ಲಿದ್ದಾಗಲೂ ಅವರ ಕಷ್ಟಗಳಿಗೆ ಕುವೆಂಪು ಸ್ಪಂದಿಸಲಿಲ್ಲವೆಂಬ ಸಂಗತಿ ಇಲ್ಲಿ ಪ್ರಸ್ತಾಪವಾಗಿದೆ. ಜೊತೆಗೆ ತನ್ನ ಆ ನಿರ್ಭಾವುಕ ವರ್ತನೆಯ ಬಗ್ಗೆ ಕುವೆಂಪು ಪಶ್ಚಾತ್ತಾಪ ಪಡುತ್ತಾರೆ.

ಅಲಿಗೆಯವರ ವ್ಯಕ್ತಿ ವೈಶಿಷ್ಟ್ಯ ಹಾಗೂ ಸಾಹಿತ್ಯಾಭಿರುಚಿಯನ್ನು ನಿರೂಪಿಸುವ ಕೆಲ ಪ್ರಸಂಗಗಳು ಇಲ್ಲಿ ಸಿಗುತ್ತವೆ.

ಅದು ಕುವೆಂಪುರ ಜನ್ಮಸ್ಥಳ ಕುರಿತಾದ ಸಂಗತಿ.

ಕುವೆಂಪುಗೆ ತಾನು ಜನಿಸಿದ ಸ್ಥಳ, ಮನೆಯನ್ನು ಪುಟ್ಟ ಮಗುವಾಗಿದ್ದಾಗ ನೋಡಿದ್ದು ಬಿಟ್ಟರೆ ಆ ನಂತರ, ಅದೂ ತಾಯಿ ಸೀತಮ್ಮ ತೀರಿಕೊಂಡ ನಂತರ ಹಿರೇಕೊಡಗಿಯೊಂದಿಗೆ ಒಡನಾಟವೇ ಇರಲಿಲ್ಲ. ಹಾಗಾಗಿ 'ನೆನಪಿನ ದೋಣಿಯಲ್ಲಿ' ಆತ್ಮಕಥೆ ಬರೆಯಲು ತಯಾರಾಗುತ್ತಿದ್ದಾಗ ಕುವೆಂಪು ಅಲಿಗೆಗೆ ಒಂದು ಪತ್ರ ಬರೆದು ತಮ್ಮ ಜನನ ಸಮಯ, ಸ್ಥಳ ಪರಿಸರ ಇತ್ಯಾದಿ ಕುರಿತಂತೆ ಮಾಹಿತಿ ಸಂಗ್ರಹಿಸಿ ಒದಗಿಸುವಂತೆ ಕೇಳುತ್ತಾರೆ.

ಆಗ ಅಲಿಗೆ ಕುವೆಂಪುರಿಗೆ ಬರೆದ ಪತ್ರ, ನೀಡಿದ ಮಾಹಿತಿ ಹೀಗಿದೆ:

"ನೀವು ಹುಟ್ಟುವಾಗ ನಿಮ್ಮ ತಾಯಿಯ ತವರಿನಲ್ಲಿ ರಾಮಾಯಣ ಭಾರತಾದಿಗಳು. ಪ್ರಸಂಗ ಯಕ್ಷಗಾನ ತಾಳಮದ್ದಳೆ ಭಾಗವತರಾಟ ಇತ್ಯಾದಿ ರೂಪಗಳಲ್ಲಿ ಹಾಜರಿದ್ದು, ನಿಮ್ಮ ಆಗಮನವನ್ನು ನಿರೀಕ್ಷಿಸುತ್ತಾ, ನಿಮಗೆ ಸುಸ್ವಾಗತ ಬಯಸಿದ್ದುದನ್ನು ನಾನು ಪ್ರತ್ಯಕ್ಷ ಹಾಜರಿದ್ದು ಕಂಡಿದ್ದೇನೆ; ನೀವು ಹುಟ್ಟಿದ್ದು ರಾತ್ರಿ, ಮಧ್ಯರಾತ್ರಿಗೆ ಮುನ್ನ. ಆವೊತ್ತು ರಾತ್ರಿ ಗಂಡಸರ ಊಟ ಮುಗಿದಿತ್ತು. ಹೆಂಗಸರು ಊಟಕ್ಕೆ ಸಿದ್ಧವಾಗುತ್ತಿದ್ದರೆಂದು ತೋರುತ್ತದೆ. ಜಗಲಿಯಲ್ಲಿ 'ಕರ್ಣಾರ್ಜುನರ ಕಾಳಗ'ದ ಪ್ರಸಂಗಕ್ಕೆ ಪೂರ್ವಸಿದ್ಧತೆ ನಡೆದಿತ್ತು. ವಾದ್ಯಗಳನ್ನೆಲ್ಲ ಅವರವರ ಜಾಗದಲ್ಲಿಟ್ಟು, ಭಾಗವಹಿಸುವ ಪಾತ್ರಧಾರಿಗಳೂ ಮಂಡಲಾಕಾರವಾಗಿ ಕುಳಿತಿದ್ದರು. ಸುಸ್ವನಗಳೂ ಅಲ್ಲೊಂದು ಇಲ್ಲೊಂದು ಪೀಠಿಕಾಪ್ರಾಯವಾಗಿ ಕೇಳತೊಡಗಿದ್ದುವು. ಅಷ್ಟರಲ್ಲಿ ಬೇನೆ ತೊಡಗಿದೆಯಂತೆ ಎಂಬ ವಾರ್ತೆ ಒಳಗಣಿಂದ ಬಂತು. ಸರಿ, ಎಲ್ಲರೂ ಎದ್ದರು. ಕರ್ಣಾರ್ಜುನರು ಆವೊತ್ತು ಕಾಳಗ ಮಾಡಲಿಲ್ಲ. ಹೆರಿಗೆಗೆ ಅವಶ್ಯಕವಾದ ತಟ್ಟಿಕಟ್ಟುವುದೇ ಮೊದಲಾದ ಕಾರ್ಯಗಳಲ್ಲಿ ತೊಡಗಿದರು!...





-ಇದು ಅಲಿಗೆಯವರ ಸರಳ ನಿರೂಪಣಾ ಶೈಲಿ, ಜೊತೆಗಿರುವ ತೆಳು ಹಾಸ್ಯ ಲೇಪನವೂ ಖುಷಿ ನೀಡುವಂತಿದೆ.

ಆದರೆ ಇದು ಕುವೆಂಪು ಕೈಗೆ ಸಿಕ್ಕ ನಂತರ ಹೇಗೆ ಬದಲಾಗುತ್ತದೆ ನೋಡಿ...

'ಆರಮ್ಮ ನೀನು?'
'ಶ್ರೀಗುರುಕೃಪೆ ನಾನು!'
'ಎಲ್ಲಿಂದ ಬಂದೆ?'
'ದಕ್ಷಿಣೇಶ್ವರದಿಂದಲೈತಂದೆ...
'ನೀನಾರಮ್ಮಾ, ಇಲ್ಲಿ ಸಂಭ್ರಮಿಸುತಿರ್ಪೆಯಲ್ಲಾ?'
'ಅಕ್ಕ, ನಾನ್ ಸಹ್ಯಾದ್ರಿಯ ಅಧಿದೇವಿ.
ನನ್ನ ಗರ್ಭದೊಳೊಂದು
ದಿವ್ಯಕೃತಿ ಆವಿರ್ಭವಿಪುದೆಂದು
ಆಕಾಶದಾದೇಶವನು ಆಲಿಸಿದೆನಿಂದು.
ಅದಕಾಗಿ ಅರಸಿ ಬಂದು ನೋಡುತಿಹೆನಿಲ್ಲಿ ನಿಂದು.'
'ಇಲ್ಲೆಲ್ಲಿಯೊ ಹುಟ್ಟಿಹನಂತಮ್ಮಾ ಅವನು.
ಕಳುಹಿಂದಳೆನ್ನನು ಭವತಾರಿಣಿ ಜಗದಂಬೆ.
ಆಶೀರ್ವಾದದ ತಂದಿಹೆನು.
ತೋರುವೆಯೇನ್, ಅಮ್ಮಾ?'
'ತೋರುವೆ, ಬಾರಮ್ಮಾ...
ಅವನಾರೌ, ತಾಯೀ?'
'ಶ್ರೀಗುರು ಕೃಪೆಮಾಡಿಹ ವಾಗ್ದೇವಿಯ ಹೃದಯ ಶಿಶು;
ಯುಗಯುಗವ್ಯೂ ದೇಶದೇಶದಲಿ ಸಂಭವಿಸುವ
ಆವೇಶದ ಯಜ್ಞಪಶು;
ಇವನ ಗುರುವಹನಿಹನು ಕಾಶಿಯಲಿ,
ಭೀಷಣ ತಪೋಮಗ್ನ.
ಗುರುವಿನೆಡೆಗೊಯ್ವಾತನಿಹನು
ಮಲೆಯಾಳದಾ ಕೊಚ್ಚಿಯಲಿ,
ಅರಮನೆಯೊಳೊ ಅಣುಗ ಚಿಂತಾನಿಮಗ್ನ.'

-ಸರ್ವ ಸಾಧಾರಣ ಘಟನೆಯೊಂದಕ್ಕೆ ಅಲೌಕಿಕತೆಯ ಲೇಪನ ನೀಡುವ ಕುವೆಂಪುಗೆ ತಾವೊಬ್ಬ ಅವತಾರ ಪುರುಷನಿರಬೇಕೆಂದು ಗಾಢ ನಂಬಿಕೆಯಿತ್ತು. ಇನ್ನೂ ಮೇಲಾಗಿ ಅದೊಂದು ಸಂಚಾರಿ ಭಾವನಾಗಿರಲಿಲ್ಲ. ಸ್ಥಾಯಿಭಾವನಾಗಿ ಅವರ ಮನಸ್ಸಲ್ಲಿ ಕುಳಿತಿತ್ತು.

ಇದು, ಒಬ್ಬ ಪ್ರತಿಭಾವಂತ ಕವಿ ದೈವತ್ವಕ್ಕೇರುವ ಪ್ರಯಾಣದಲ್ಲಿ ಅಲಿಗೆ ಪುಟ್ಟಯ್ಯನಂತಹ ಸರಳ ಜನ ಕಳೆದುಹೋಗುವ ಪರಿ. 1974ರಲ್ಲಿ ಅಲಿಗೆ ಪುಟ್ಟಯ್ಯನಾಯಕ ತೀರಿಕೊಂಡರು. ಇದಾಗಿ ನಾಲ್ಕು ದಶಕಗಳ ನಂತರ ಅಲಿಗೆ ಬದುಕು ಹಾಗೂ ವ್ಯಕ್ತಿತ್ವ ಕುರಿತಂತೆ ಬರೆಯಬೇಕೆಂಬ ಹಂಬಲ ಕೆಲವರಿಗಾದರೂ ಅನಿಸಿದ್ದು ಮೆಚ್ಚಬೇಕಾದ ವಿಚಾರ. ಮಲೆನಾಡಿನಲ್ಲಿ ಆಗಿಹೋದ ಇಂತಹ ಇನ್ನೂ ಅನೇಕರಿದ್ದಾರೆ. ಸುಳ್ಯದ ಕೋಳಂಬೆ ಪುಟ್ಟಣ್ಣಗೌಡ, ಶಿವಮೊಗ್ಗೆಯ ಅಪ್ಪಣ್ಣ ಹೆಗಡೆ... ಹೀಗೆ. ಇವರ ಬದುಕನ್ನು ಶೋಧಿಸಿ ದಾಖಲಿಸುವ ಕೆಲಸ ಆದರೆ ಚೆನ್ನ.

ಅಲಿಗೆ ಪುಟ್ಟಯ್ಯನಾಯಕರ ಬದುಕಿನ ಬಗ್ಗೆ ದಾಖಲಿಸುವಾಗ ಬಿ.ಎಂ. ಕುಮಾರಸ್ವಾಮಿ ಹಾಗೂ ಡಾ. ಬಿ.ಆರ್. ಸತ್ಯನಾರಾಯಣರವರು ಅಪಾರ ಶ್ರಮ ಪಟ್ಟಿದ್ದಾರೆ. ಆದರೆ ಇವರು ದಾಖಲಿಸಿರುವ ನೆನಪುಗಳೆಲ್ಲಾ ಅಲಿಗೆಯವರ ಮಕ್ಕಳು ಹಾಗೂ ಬಂಧು-ಮಿತ್ರರದ್ದೇ ಹೆಚ್ಚಿವೆ. ಓರ್ವ ರೈತನಾಗಿ ಸಾಮಾಜಿಕ ನಾಯಕನಾಗಿ ಎಂಟು ದಶಕಗಳ ಕಾಲ ಇದ್ದ ಅಲಿಗೆ ಬಗ್ಗೆ ಅಲ್ಲಿನ ರೈತರು, ಕೂಲಿಗಳು, ಇತರ ಸಣ್ಣಪುಟ್ಟ ಕಾಯಕದ ಜನರ ನೆನಪುಗಳೂ ದಾಖಲಾಗಿದಿದ್ದರೆ ಈ ಪ್ರಯತ್ನಕ್ಕೆ ಇನ್ನಷ್ಟು ವೈವಿಧ್ಯತೆ ಬಂದಿರುತ್ತಿತ್ತೇನೋ! ನಮ್ಮ ಬುದ್ಧಿಜೀವಿ ಬರಹಗಾರರು ಒಂದೋ ಮೇಲ್ವರ್ಗಗಳ ಅಥವಾ ಮೇಲ್ಜಾತಿಗಳ ಒಡನಾಟದಲ್ಲೇ ತೃಪ್ತಿ ಕಾಣುತ್ತಿರುತ್ತಾರೆ.

ಇದೊಂದು ಸರ್ವಕಾಲಿಕ ಸಮಸ್ಯೆ.

ಓದುಗರಲ್ಲಿ ಒಂದು ಮನವಿ...

'ನಮಗೆ ಪತ್ರಿಕೆ ಸರಿಯಾಗಿ ಸಿಗುತ್ತಿಲ್ಲ' ಎಂಬ ಕೆಲ ಓದುಗರ ಆಕ್ಷೇಪಗಳು ಆಗಾಗ್ಗೆ ನಮ್ಮ ಕಚೇರಿತನಕ ತಲುಪುತ್ತಿದೆ. ಲಂಕೇಶ್‌ಗೆ ಎಲ್ಲಾ ಜಿಲ್ಲಾ, ತಾಲ್ಲೂಕು ಹಾಗೂ ಪುಟ್ಟ ಟೌನ್ ಸೆಂಟರ್‌ಗಳೂ ಸೇರಿದಂತೆ ಇನ್ನೂರೈವತ್ತಕ್ಕೂ ಹೆಚ್ಚು ವಿತರಣಾ ಏಜೆಂಟರಿದ್ದಾರೆ. ಅಂತಹ ಸ್ಥಳಗಳಲ್ಲಿ ಓದುಗರಿಗೆ ಪತ್ರಿಕೆ ಸುಲಭ ವಾಗಿ ಲಭ್ಯವಿದೆ. ಆದರೆ ಪೇಟೆಗಳಿಂದ ಕೊಂಚ ದೂರವಿರು ವವರಿಗೆ ಹಾಗೂ ಆಗಾಗ್ಗೆ ಪೇಟೆಯತ್ತ ಬರಲಾಗದ, ಕೊಂಚ ಇಂಟೀರಿಯರ್ ಏರಿಯಾಗಳಲ್ಲಿ ಇರುವವರಿಗೆ ನಿಯಮಿತವಾಗಿ 'ಲಂಕೇಶ್' ಪಡೆಯುವುದು ಸ್ವಲ್ಪ ಕಷ್ಟವಾಗುತ್ತಿರಲೂಬಹುದು.

ಇದಲ್ಲದೆ ಅನೇಕ ಊರುಗಳಲ್ಲಿ ಬಸ್ ಸ್ಟ್ಯಾಂಡ್ ನವೀಕರಣ, ಹೊಸ ನಿಲ್ದಾಣಗಳ ನಿರ್ಮಾಣದಿಂದಾಗಿ ಅಲ್ಲಿದ್ದ ಪತ್ರಿಕಾ ಸ್ಟಾಲ್‌ಗಳೂ ಕಾಣೆಯಾಗಿವೆ. ಇದರಿಂದಾಗಿ ಕೆಲ ಪುಟ್ಟ ಪಟ್ಟಣಗಳಲ್ಲೂ ತಾತ್ಕಾಲಿಕವಾಗಿ 'ಲಂಕೇಶ್' ವಿತರಣೆಗೆ ಅಡಚಣೆಯಾಗುತ್ತಿದೆ.

ಇದಕ್ಕಿರುವ ಸದ್ಯದ ಪರಿಹಾರವೆಂದರೆ ಪತ್ರಿಕೆಯ ಚಂದಾದಾರರಾಗುವುದು.

ಚಂದಾ ವಿವರ

ವಾರ್ಷಿಕ	ರೂ. 700
ಒಂದೂವರೆ ವರ್ಷಕ್ಕೆ	ರೂ. 1000
ಎರಡು ವರ್ಷಕ್ಕೆ	ರೂ. 1400

- ಹೀಗೆ ಚಂದಾ ಹಣವನ್ನು 'ಲಂಕೇಶ್ ಮೀಡಿಯಾ' ಹೆಸರಲ್ಲಿ ಡಿಡಿ/ಚೆಕ್/ಎಂಓ ಮೂಲಕ ಕಳುಹಿಸಿದರೆ 'ಲಂಕೇಶ್' ಅನ್ನು ನಾವೇ ಕಚೇರಿಯಿಂದ ನೇರವಾಗಿ ಓದುಗರಿಗೆ ಅಂಚೆ ಮೂಲಕ ತಲುಪಿಸುತ್ತೇವೆ. ನಿತ್ಯದ ಕೆಲಸಗಳ ಗಡಿಬಿಡಿಯಲ್ಲಿ ಮ್ಯಾಗಜೀನ್ ಸ್ಟಾಲ್ ಹುಡುಕಿಕೊಂಡು ಹೋಗಲಾಗದ ಓದುಗರೂ ಈ ಸೌಲಭ್ಯ ಬಳಸಿಕೊಳ್ಳಬಹುದು.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ

ವ್ಯವಸ್ಥಾಪಕರು
9880302817
080-26676427 ಅನ್ನು ಸಂಪರ್ಕಿಸಿ.

ಚಂದಾ ಹಣ ಕಳುಹಿಸುವಾಗ ನಿಮ್ಮ ಹೆಸರು, ವಿಳಾಸ, ಫೋನ್ ನಂಬರ್ ಅನ್ನು ಸ್ಪಷ್ಟವಾಗಿ ಬರೆಯಿರಿ.

- ವ್ಯವಸ್ಥಾಪಕರು
ಲಂಕೇಶ್ ಮೀಡಿಯಾ

ಕರ್ನಾಟಕದೊಳಗೊಂದು ಖಾಸಗಿ 'ಇನ್‌ಫೋಸಿಸ್ ರಾಜ್ಯ'!




• ಗೌರಿ ಲಂಕೇಶ್
ಪ್ರಧಾನ ಸಂಪಾದಕಿ
editorlankesh@gmail.com

ಕಂಡಹಾಗೆ

ಬಿಜೆಪಿ ಸರ್ಕಾರ ಮಾಡಿಟ್ಟುಹೋಗಿರುವ ಎಡವಟ್ಟುಗಳಲ್ಲಿ ಹಲವನ್ನು ಹಾಲಿ ಕಾಂಗ್ರೆಸ್ ಸರ್ಕಾರ ಮುಂದುವರೆಸುತ್ತಿರುವುದನ್ನು ರಾಜ್ಯದ ದುರಂತ ಎನ್ನದೆ ವಿಧಿ ಇಲ್ಲ. ಅದಕ್ಕೊಂದು ಒಂದು ತಾಜಾ ಉದಾಹರಣೆ ಬೆಂಗಳೂರಿನ ಹೊರವಲಯದಲ್ಲಿರುವ ಎಲೆಕ್ಟ್ರಾನಿಕ್ ಸಿಟಿಯಲ್ಲಿ ಇನ್ಫೋಸಿಸ್‌ನ ಮುಖ್ಯಸ್ಥ ನಾರಾಯಣಮೂರ್ತಿ ತರಹದ ಪರಾವಲಂಬಿ ಬಂಡವಾಳಶಾಹಿಗಳು ತಮ್ಮದೇ ಖಾಸಗೀ ಸರ್ಕಾರವನ್ನು ನಡೆಸಲು ರಾಜ್ಯ ಸರ್ಕಾರ ಇತ್ತೀಚೆಗೆ ಅನುಮತಿ ನೀಡಿರುವುದು.

ಕಳೆದ ಮಾರ್ಚ್ ತಿಂಗಳಲ್ಲಿ ರಾಜ್ಯ ವಿಧಾನಸಭೆಗೆ ಚುನಾವಣೆಗಳು ಘೋಷಣೆಯಾಗುವ ಕೇವಲ ಎರಡು ದಿನಗಳ ಮುನ್ನ (ಮಾರ್ಚ್ 19ರಂದು) ಆಗಿನ ಬಿಜೆಪಿ ಸರ್ಕಾರದ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಇದೇ ಎಲೆಕ್ಟ್ರಾನಿಕ್ ಸಿಟಿಗೆ ಸಂಬಂಧಿಸಿದಂತೆ ಗೆಜೆಟ್ ಪತ್ರವೊಂದನ್ನು ಹೊರಡಿಸಿ ಇದಕ್ಕೆ 'ಪಟ್ಟಣ ಪ್ರದೇಶ ಪ್ರಾಧಿಕಾರ' ಎಂಬ ಪ್ರತ್ಯೇಕ ಸ್ಥಾನಮಾನವನ್ನು ನೀಡಿದ್ದರು. ಆಗಲೇ ಈ ಕ್ರಮದ ವಿರುದ್ಧ ಪ್ರತಿಭಟನಾ ದನಿಗಳು ಕೇಳಿಬಂದಿದ್ದವು. ಆದ್ದರಿಂದ ಸಿದ್ದರಾಮಯ್ಯನವರ ಕಾಂಗ್ರೆಸ್ ಸರ್ಕಾರ ಆ ರಾಜ್ಯಪತ್ರವನ್ನು ಹಿಂದೆ ಪಡೆದು ಹೊಸ ನಿಯಮಗಳನ್ನು ಜಾರಿಗೆ ತರಬಹುದೆಂಬ ನಿರೀಕ್ಷೆ ಹಲವರಲ್ಲಿ ಇತ್ತು. ಆದರೆ ಆ ನಿರೀಕ್ಷೆಯನ್ನು ಹುಸಿಯಾಗಿರುವ ಈಗಿನ ಸರ್ಕಾರ ಇದೇ ಮೇ10ರಂದು ಬೃಹತ್ ಐಟಿ ಕಂಪನಿಗಳು ನೇಮಿಸಿರುವ ಐವರು ಪ್ರತಿನಿಧಿಗಳ ಜೊತೆಗೆ ಸರ್ಕಾರದ ವತಿಯಿಂದ ಐವರು ಅಧಿಕಾರಿಗಳನ್ನು ಈ ಪಟ್ಟಣ ಪ್ರದೇಶ ಪ್ರಾಧಿಕಾರಕ್ಕೆ ನಾಮ ನಿರ್ದೇಶನ ಮಾಡಿದೆ. ಇದರ ಅರ್ಥ ಇಷ್ಟೇ: ಇನ್ನು ಮುಂದೆ 903 ಎಕರೆಗಳಷ್ಟು ವಿಸ್ತಾರ ಪ್ರದೇಶದಲ್ಲಿ ಹರಡಿಕೊಂಡಿರುವ ಎಲೆಕ್ಟ್ರಾನಿಕ್ ಸಿಟಿಯ ಮೇಲೆ ರಾಜ್ಯ ಸರ್ಕಾರಕ್ಕೆ ಯಾವ ಅಧಿಕಾರವೂ ಇರುವುದಿಲ್ಲ, ಬದಲಾಗಿ ಅಲ್ಲಿ ಏನಿದ್ದರೂ ಇನ್ಫಿ ನಾಣಿ ತರಹದ ಉದ್ಯಮಪತಿಗಳ ಸಾಮ್ರಾಜ್ಯ ನಿರಾತಂಕವಾಗಿ ಆಡಳಿತ ನಡೆಸಲಿದೆ. ಯಾಕೆಂದರೆ ಇನ್ನು ಮುಂದೆ ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಎಲ್ಲಾ ಕಟ್ಟಡಗಳ ತೆರಿಗೆಯನ್ನು ಆ ಪ್ರಾಧಿಕಾರವೇ ವಸೂಲಿ ಮಾಡುತ್ತದೆ. ಜೊತೆಗೆ ರಸ್ತೆ ಕುಡಿಯುವ ನೀರಿನ ಸರಬ್ಬರಾಜು, ವಿದ್ಯುತ್ ಸಂಪರ್ಕ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ, ಕಸ ವಿಲೇವಾರಿ, ಪರಿಸರದ ರಕ್ಷಣೆ, ಪಾರ್ಕ್, ಆಟದ ಮೈದಾನ, ರಸ್ತೆ ದೀಪ, ಬಸ್ ಸ್ಟಾಪ್ ಇತ್ಯಾದಿ ಸಾರ್ವಜನಿಕ ಸೌಲಭ್ಯಗಳ ಉಸ್ತುವಾರಿಯನ್ನೂ ಪ್ರಾಧಿಕಾರವೇ ನೋಡಿಕೊಳ್ಳಲಿದೆ. ರಾಜ್ಯ ಸರ್ಕಾರದ ಕೆಲಸವೇನಿದ್ದರೂ ನಾಣಿ ತರಹದವರ ಆದೇಶವನ್ನು ಶಿರಸಾವಹಿಸಿ ಪಾಲಿಸುವುದು; ಅವರು ಕೇಳಿದಷ್ಟು ಕುಡಿಯುವ ನೀರನ್ನು, ವಿದ್ಯುತ್ತನ್ನು, ಇತರೆ ಸೌಕರ್ಯಗಳನ್ನು ನೀಡುವುದು. ಅಂದರೆ ಆ ಪ್ರದೇಶದಲ್ಲೀಗ ಪ್ರಜಾಪ್ರಭುತ್ವಕ್ಕೇ ಕೊಡಲಿ ಏಟು ಬಿದ್ದಿದೆ ಎಂದರೆ ತಪ್ಪಾಗಲಾರದು!

ಹೇಳಿಕೇಳಿ ನಾಣಿ ತರಹದ ಉದ್ಯಮಿಗಳಿಗೆ ಪ್ರಜಾಪ್ರಭುತ್ವ ಎಂದರೇನೇ ಅಲರ್ಜಿ. ಯಾಕೆಂದರೆ ಪ್ರಜಾಪ್ರಭುತ್ವ ವ್ಯವಸ್ಥೆಯಡಿ ಜನಪ್ರತಿನಿಧಿಗಳಿಗೆ ಉದ್ಯಮಿಗಳ ಜರೂರತ್ತಿಗಿಂತಲೂ ಜನಸಾಮಾನ್ಯರ ಅಗತ್ಯಗಳನ್ನು ಪೂರೈಸುವ ಒತ್ತಡ ಇದ್ದೇ ಇರುತ್ತದೆ. ಆ ಕಾರಣಕ್ಕೆ ಉದ್ಯಮಿಗಳಿಗೆ ಸರ್ಕಾರ ಎಂದರೆ ತಮ್ಮ ಬೆಳವಣಿಗೆಗೆ ತೊಡರುಗಾಲು ಹಾಕುವ ವ್ಯವಸ್ಥೆ ಎಂಬ ಅಭಿಪ್ರಾಯವಿದೆ. ಇಂತಹ ಅಭಿಪ್ರಾಯಕ್ಕೆ ತಕ್ಕಂತೆ ಈಗ ಕರ್ನಾಟಕದಲ್ಲಿ



ಸುಮಾರು 1,000 ಎಕರೆಯಷ್ಟು ಪ್ರದೇಶವನ್ನು ಐಟಿ ಉದ್ಯಮಿಗಳ ಸುಪರ್ದಿಗೆ ಸರ್ಕಾರ ಬಿಟ್ಟುಕೊಟ್ಟಿದೆ.

ಇವತ್ತು ಎಲೆಕ್ಟ್ರಾನಿಕ್ ಸಿಟಿಯಲ್ಲಿ ಇನ್ಫೋಸಿಸ್, ವಿಪ್ರೋ, ಹ್ಯೂಲೆಟ್ ಪಾಕರ್ಡ್, ಹೆಚ್‌ಸಿಎಲ್ ತರಹದ ಹತ್ತಾರು ಬೃಹತ್ ಐಟಿ ಕಂಪನಿಗಳಲ್ಲದೆ ನೂರಾರು ಮಧ್ಯಮ ಮತ್ತು ಚಿಕ್ಕಪುಟ್ಟ ಕಂಪನಿಗಳೂ ಇವೆ. ಈ 'ಸಿಟಿ'ಯಲ್ಲಿ ಸುಮಾರು ಒಂದು ಲಕ್ಷ ಜನ ಕೆಲಸ ಮಾಡುತ್ತಿದ್ದು ಅವರ ಹಲವಾರು ಅಗತ್ಯಗಳ ಪೂರೈಕೆಗೆಂದು ಇದೇ ಪ್ರದೇಶದಲ್ಲಿ ಸಾವಿರಾರು ಫ್ಲಾಟ್‌ಗಳಿರುವ ವಸತಿ ಸಂಕೀರ್ಣಗಳು, ಐಶಾರಾಮಿ ಮಾಲ್‌ಗಳು, ಅಂತರರಾಷ್ಟ್ರೀಯ ಮಟ್ಟದ ಶಾಲಾ ಕಾಲೇಜುಗಳು, ತಾರಾ ಹೋಟೆಲ್‌ಗಳು ಇತ್ಯಾದಿಗಳು ತಲೆ ಎತ್ತಿವೆ. ಅಷ್ಟೇ ಅಲ್ಲ, ಸದ್ಯದಲ್ಲೇ ಅಲ್ಲಿ 120 ಎಕರೆ ಪ್ರದೇಶದಲ್ಲಿ ನಿಯೋಟೌನ್ ಎಂಬ 'ನಗರವೇ' ಪ್ರಾರಂಭವಾಗಲಿದೆ. ಇದರ ಜೊತೆಗೆ ನಿಯೋಮಾಲ್ ಎಂಬ ದೈತ್ಯಾಕಾರದ ಮಾಲ್ ಕೂಡ ಪ್ರಾರಂಭವಾಗಲಿದೆ. ಭಾರತದಲ್ಲೇ ಅತಿ ದೊಡ್ಡ ಮಾಲ್ ಆಗಲಿರುವ ನಿಯೋಮಾಲ್‌ನಲ್ಲಿ ಬಾರ್‌ಗಳು, ಹೋಟೆಲ್‌ಗಳು, ಸಿನಿಮಾ ಮಂದಿರಗಳು, ಮನರಂಜನಾ ಕೇಂದ್ರಗಳು ಇರಲಿವೆ. ಈ ಎಲ್ಲ ಕಟ್ಟಡಗಳ ಮೇಲೆ ಸೂಕ್ತ ತೆರಿಗೆ ವಿಧಿಸಿದರೆ ಅದೇ ಪ್ರತಿವರ್ಷ ನೂರಾರು ಕೋಟಿ ರೂಪಾಯಿಗಳಾಗುತ್ತದೆ.

ಬಿಜೆಪಿಯ ಯಡಿಯೂರು ಕಾರ್ಪೊರೇಟರ್ ಎನ್.ಆರ್. ರಮೇಶ್ ಅವರು ಎಲೆಕ್ಟ್ರಾನಿಕ್ ಸಿಟಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಡಿ ತರಬೇಕೆಂದು ಹಿಂದಿನಿಂದಲೂ ಒತ್ತಾಯ ಮಾಡುತ್ತಾ ಬಂದಿದ್ದಾರೆ. ಅವರ ಪ್ರಕಾರ "ಇವತ್ತು ಬಿಬಿಎಂಪಿ ವ್ಯಾಪ್ತಿಗೆ ಸೇರಿರುವ ಸಾಮಾನ್ಯ ಕಟ್ಟಡದ ಮೇಲೆ ವಿಧಿಸುವ ತೆರಿಗೆ ಚದುರ ಅಡಿಗೆ ಇಪ್ಪತ್ತು ರೂಪಾಯಿಗಳು. ಆದರೆ ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಹವಾನಿಯಂತ್ರಿತ, ಲಿಫ್ಟ್‌ಗಳನ್ನು ಹೊಂದಿರುವ ಆಧುನಿಕ ಐಟಿ ಕಂಪನಿಗಳ ಕಟ್ಟಡಗಳ ಮೇಲೆ ನಿಗದಿಪಡಿಸಿರುವ ತೆರಿಗೆ ಚದುರ ಅಡಿಗೆ ಕೇವಲ ಹತ್ತು ರೂಪಾಯಿಗಳು. ಅಂದರೆ ಕಡಿಮೆ ಆದಾಯವನ್ನು ಹೊಂದಿರುವ ಮಧ್ಯಮವರ್ಗ ಮತ್ತು ಕೆಳವರ್ಗಗಳ ಜನರು ರಾಜ್ಯ ಬೊಕ್ಕಸಕ್ಕೆ ಕೊಡುತ್ತಿರುವ ತೆರಿಗೆಗಿಂತಲೂ ಕೋಟ್ಯಾಂತರ ರೂಪಾಯಿಗಳ ಆದಾಯ ಹೊಂದಿರುವ ಐಟಿ ಕಂಪನಿಗಳು ಕೊಡುತ್ತಿರುವ ತೆರಿಗೆಯ ದರ ಕಡಿಮೆಯದ್ದು. ಇದು ಯಾವ ನ್ಯಾಯ? ಇದಕ್ಕೆ ಬದಲಾಗಿ ಸೂಕ್ತ ತೆರಿಗೆಯನ್ನು ಐಟಿ ಕಂಪನಿಗಳ ಕಟ್ಟಡಗಳ ಮೇಲೆ ವಿಧಿಸಿದರೆ ಬಿಬಿಎಂಪಿಗೆ ಪ್ರತಿವರ್ಷ 300 ಕೋಟಿ ರೂಪಾಯಿಗಳಿಗಿಂತಲೂ ಅಧಿಕ ಆದಾಯ ಬರುತ್ತದೆ. ಆ ಆದಾಯದಲ್ಲಿ ಬೆಂಗಳೂರಿನ ಮೂಲಭೂತ ಸಮಸ್ಯೆಗಳನ್ನು ಪರಿಹರಿಸಬಹುದು."

ಈ ನಿಟ್ಟಿನಲ್ಲಿ ಎಲೆಕ್ಟ್ರಾನಿಕ್ ಸಿಟಿಯನ್ನು ಬಿಬಿಎಂಪಿ ವ್ಯಾಪ್ತಿಯಡಿ ತರುವ ಪ್ರಯತ್ನಕ್ಕೂ ರಮೇಶ್ ಚಾಲನೆ ನೀಡಿದ್ದರು. ಕಳೆದ ಆಗಸ್ಟ್‌ನಲ್ಲಿ ಈ ಕುರಿತು ಬಿಬಿಎಂಪಿಯಲ್ಲಿ ಒಂದು ನಿರ್ಣಯವನ್ನೂ ತೆಗೆದುಕೊಳ್ಳಲಾಗಿತ್ತು. ಆದರೆ ಬಿಜೆಪಿಯಲ್ಲೇ ಅದಕ್ಕೆ ವಿರೋಧವಿದ್ದಿದ್ದರಿಂದ ಆಗಿನ ಶೆಟ್ಟರ್ ಸರ್ಕಾರ ಆ ನಿರ್ಣಯಕ್ಕೆ ತನ್ನ ಸಮ್ಮತಿಯನ್ನು ನಿರಾಕರಿಸಿತ್ತು.

ಅಂದಹಾಗೆ 70ರ ದಶಕದಲ್ಲಿ ಸರ್ಕಾರದ ಅಂಗವಾಗಿದ್ದ ಕಿಯೋನಿಕ್ಸ್ ಎಂಬ ಸಂಸ್ಥೆ ಎಲೆಕ್ಟ್ರಾನಿಕ್ ಸಿಟಿಯನ್ನು ಸ್ಥಾಪಿಸಿದಾಗ ರಾಜ್ಯ ಸರ್ಕಾರ ಅದಕ್ಕೆ ಭೂಮಿಯನ್ನು ಉಚಿತವಾಗಿ ನೀಡಿತ್ತು. ಆನಂತರ ಆ ಸಿಟಿ ಬೆಳೆಯುತ್ತಾ ಹೋದಂತೆ ಅಲ್ಲಿ ಸ್ಥಾಪನೆಗೊಂಡ ಕಂಪನಿಗಳಿಗೆ ರಾಜ್ಯ ಸರ್ಕಾರ ಹಲವಾರು ತೆರಿಗೆ ವಿನಾಯತಿಗಳನ್ನು ನೀಡಿತು. ಜೊತೆಗೆ ಅಲ್ಲಿನ ಕಂಪನಿಗಳಿಗೆ ಅಗತ್ಯವಾಗಿದ್ದ ಉತ್ತಮ ವಿದ್ಯುತ್ ಸಂಪರ್ಕವನ್ನು ನೀಡಿತಲ್ಲದೆ, ರಾಜ್ಯ ಸರ್ಕಾರದ ಬೊಕ್ಕಸದಿಂದಲೇ ಆ ಪ್ರದೇಶದ ಅಭಿವೃದ್ಧಿಗೆ ಯಥೇಚ್ಛ ಹಣವನ್ನು ವೆಚ್ಚ ಮಾಡಿತ್ತು. ಇದರ ಜೊತೆಗೆ ಕಾವೇರಿ ನೀರು, ಒಳಚರಂಡಿ ವ್ಯವಸ್ಥೆ ರಸ್ತೆ ದೀಪ ಇತ್ಯಾದಿಗಳನ್ನೂ ಜನರ ತೆರಿಗೆ ಹಣದಿಂದಲೇ ವ್ಯವಸ್ಥೆ ಮಾಡಲಾಗಿತ್ತು. ಇತ್ತೀಚೆಗೆ ಎಲೆಕ್ಟ್ರಾನಿಕ್ ಸಿಟಿಯ ಉದ್ಯೋಗಿಗಳಿಗೆ ಅನುಕೂಲವಾಗಲೆಂದೇ ನಗರದಲ್ಲೇ ಅತಿ ಉದ್ದನೆಯ ಮತ್ತು

9ನೇ ಪುಟ ನೋಡಿ>>>

ಲಂಕೇಶ್ ಬಳಗಕ್ಕೊಂದು ಸಾಂಸ್ಥಿಕ ರೂಪ...

ಲಂಕೇಶ್ ಮೀಡಿಯಾ

ಮೂರು ದಶಕಗಳ ಪರಂಪರೆ ಹಾಗೂ ಮರುಹುಟ್ಟು ಪಡೆದ ಎಂಟನೇ ವರ್ಷದಲ್ಲಿ 'ಲಂಕೇಶ್ ಬಳಗ'ವು ಇನ್ನೊಂದು ಹೊಸ ಹೆಜ್ಜೆ ಇಡುತ್ತಿದೆ.

ಲಂಕೇಶ್ ಬಳಗವು ನಿರ್ವಹಿಸುತ್ತಿರುವ ಪತ್ರಿಕೆಗಳು, ಪುಸ್ತಕಗಳ ಪ್ರಕಟಣೆ, ಕೋಚಿಂಗ್ ಸಾಂಸ್ಕೃತಿಕ ಚಟುವಟಿಕೆಗಳೆಂಬ ವೈವಿಧ್ಯಮಯ ಕ್ಷೇತ್ರಗಳನ್ನು ಒಂದೆಡೆ ಸಮೀಕರಿಸಿ ಅದಕ್ಕೊಂದು ವಿಶಾಲ ಸಾಂಸ್ಥಿಕ ರೂಪ ನೀಡುವ ನಿರ್ಧಾರ ಮಾಡಿದ್ದೇವೆ.

ಅದು 'ಲಂಕೇಶ್ ಮೀಡಿಯಾ' ಎನ್ನುವ ಹೆಸರಿನ ಏಕೀಕೃತ ಸಂಸ್ಥೆಯಾಗಿ ಇನ್ನು ಮುಂದೆ ಕಾರ್ಯ ನಿರ್ವಹಿಸಲಿದೆ.

2005 ರ ಮಾರ್ಚ್ 8 ರಂದು 'ಲಂಕೇಶ್' ಹೊಸ ವಾರಪತ್ರಿಕೆಯಾಗಿ ಮರುಹುಟ್ಟು ಪಡೆದಾಗ ನಮ್ಮ ತಂಡದ ಬಳಿ ಇದ್ದದ್ದು ಅಗಾಧ ಧೈರ್ಯ, ಆತ್ಮವಿಶ್ವಾಸ ಹಾಗೂ ಕಷ್ಟಪಟ್ಟು ದುಡಿಯಬೇಕೆಂಬ ಛಲ ಮಾತ್ರ.


ನಾವು ಇಷ್ಟಪಟ್ಟು ಆಯ್ಕೆ ಮಾಡಿಕೊಂಡ ಹಾದಿ ಇದು.

ಕರ್ನಾಟಕದ ಜನತೆ ನಮ್ಮ ತಂಡದ ಬೆನ್ನಿಗೆ ನಿಂತರು, ಬೆಂಬಲಿಸಿದರು.

ಅತ್ಯಂತ ಸವಾಲೆನಿಸುವ ಸನ್ನಿವೇಶದಲ್ಲಿ ಹೀಗೆ ಚಾಲನೆ ಪಡೆದ 'ಲಂಕೇಶ್' ಅತಿ ಬೇಗನೆ ತನ್ನ ಚಟುವಟಿಕೆಗಳನ್ನು ವಿಸ್ತರಿಸಿಕೊಂಡಿತು. 2006 ರಲ್ಲಿ ಗೈಡ್ ಮಾಸ ಪತ್ರಿಕೆ, 2007 ರಲ್ಲಿ ಲಂಕೇಶ್ ಪ್ರಕಾಶನ, 2008 ರಲ್ಲಿ ಗೈಡ್ ಪ್ರಕಾಶನ, 2009 ರಲ್ಲಿ ಚಾರು ಪ್ರಕಾಶನ, 2010 ರಲ್ಲಿ ಗೈಡ್ ಕೋಚಿಂಗ್ ಸೆಂಟರ್, 2011 ರಲ್ಲಿ ಜಾಬ್ ನ್ಯೂಸ್ ಪಾಕ್ಷಿಕ ಪತ್ರಿಕೆ... ಹೀಗೆ ಒಂದರ ಹಿಂದೊಂದರಂತೆ ಹೊಸ ಸಾಧ್ಯತೆಗಳನ್ನು ಹುಡುಕುತ್ತಾ, ಬೆಳೆಯುತ್ತಾ ಬಂದಿದೆ.

ನಮ್ಮ ತಂಡ ಕೈಹಾಕಿದ ಈ ಯಾವ ಹೊಸ ಸಾಹಸಗಳಲ್ಲೂ ಪೆಟ್ಟು ತಿನ್ನಲಿಲ್ಲ ಎನ್ನುವುದೊಂದು ವಿಶೇಷ. ಅಲ್ಲದೆ ಹೀಗೆ ಹರಡಿಕೊಳ್ಳುತ್ತಾ ಹೋದ ಕಾರ್ಯಚಟುವಟಿಕೆಗಳಿಂದಾಗಿಯೇ 'ಲಂಕೇಶ್'ನಂತಹ ಒಂದು ಮೀಡಿಯಂ ಗಾತ್ರದ ಸಂಸ್ಥೆಯು ಅಸ್ತಿತ್ವ ಉಳಿಸಿಕೊಳ್ಳಲು ಸಾಧ್ಯವಾಯಿತು. ಹಣಕಾಸು, ಜನಸಂಪರ್ಕ, ನೆಟ್‌ವರ್ಕ್ ಹಾಗೂ ಪ್ರಭಾವ ಬೆಳೆಯುತ್ತಾ ಒಟ್ಟಾರೆಯಾಗಿ ನಮ್ಮ ತಂಡವು ಸ್ವಾವಲಂಬನೆ ಸಾಧಿಸುವಂತೆ ಆಗಿದೆ.

ಇದೀಗ ಈ ಬಲವನ್ನೆಲ್ಲಾ ಕ್ರೂಢೀಕರಿಸಿಕೊಂಡು ಇನ್ನಷ್ಟು ಮುನ್ನಡೆಯುವ ಯೋಚನೆ ನಮ್ಮದು. ಅದಕ್ಕೆ ಪೂರ್ವಭಾವಿಯಾಗಿ ನಮ್ಮ ಟೀಂ ವರ್ಕ್‌ಗೆ ಒಂದು ಸಾಂಸ್ಥಿಕ ರೂಪ ನೀಡಲಾಗುತ್ತಿದೆ. ನಮ್ಮ ಪ್ರಕಟಣೆಗಳ ಪೈಕಿ ಲಂಕೇಶ್ ವಾರ ಪತ್ರಿಕೆ ಹಾಗೂ ಗೈಡ್ ಮಾಸ ಪತ್ರಿಕೆಗೆ ಒಂದು ರಚನೆ, ಜಾಬ್ ನ್ಯೂಸ್‌ಗೆ ಇನ್ನೊಂದು ಹಾಗೂ ಗೈಡ್ ಪ್ರಕಾಶನ ಮತ್ತು ಗೈಡ್ ಕೋಚಿಂಗ್ ಸೆಂಟರ್‌ಗೆ ಬೇರೆಬೇರೆಯಾದ ಆಡಳಿತಾತ್ಮಕ ಹಾಗೂ ಹಣಕಾಸು ನಿರ್ವಹಣಾ ಪದ್ಧತಿಗಳಿದ್ದವು. ನಮ್ಮ ಏಜೆಂಟರಿಗೆ ಇದರಿಂದಾಗಿ ಬಿಲ್ ಪಾವತಿಸುವಾಗ ವಿಪರೀತ ಗೊಂದಲಗಳಾಗುತ್ತಿತ್ತು. ಹೊಸ ಸಂಸ್ಥೆ 'ಲಂಕೇಶ್ ಮೀಡಿಯಾ' ಈ ಎಲ್ಲಾ ಗೊಂದಲಗಳನ್ನು ಇನ್ನು ಮುಂದೆ ನಿವಾರಿಸಲಿದೆ.



ಪಾರ್ವತೀಶ

ಲಂಕೇಶ್ ವಾರ ಪತ್ರಿಕೆ, ಗೈಡ್, ಜಾಬ್ ನ್ಯೂಸ್, ಗೈಡ್ ಪ್ರಕಾಶನ ಮತ್ತು ಗೈಡ್ ಕೋಚಿಂಗ್ ಸೆಂಟರ್‌ಗಳೆಲ್ಲಾ ಇನ್ನು ಮುಂದೆ 'ಲಂಕೇಶ್ ಮೀಡಿಯಾ' ಎಂಬ ಏಕೀಕೃತ ಸಂಸ್ಥೆಯಡಿ ವಿಲೀನಗೊಂಡು ಕಾರ್ಯ ನಿರ್ವಹಿಸಲಿವೆ. ಬಹಳ ಮುಖ್ಯವಾಗಿ ನಮ್ಮ ಏಜೆಂಟರು ಇನ್ನು ಮುಂದೆ ಮೇಲಿನ ಎಲ್ಲದರ ಬಿಲ್‌ಗಳನ್ನು 'ಲಂಕೇಶ್ ಮೀಡಿಯಾ' ಹೆಸರಲ್ಲಿ ಪಾವತಿಸಬೇಕು.

ಇನ್ನುಳಿದಂತೆ ಲಂಕೇಶ್ ಪ್ರಕಾಶನ ಹಾಗೂ ಚಾರು ಪ್ರಕಾಶನಗಳು ತಮ್ಮ ಸ್ವತಂತ್ರ ಅಸ್ತಿತ್ವವನ್ನು ಉಳಿಸಿಕೊಂಡು ಮುಂದುವರೆಯಲಿದೆ.

ಆರಂಭದಿಂದಲೂ ಲಂಕೇಶ್ ಬಳಗದೊಂದಿಗೆ ಗುರುತಿಸಿಕೊಂಡು ಸಂಸ್ಥೆಯ ಬೆಳವಣಿಗೆಗೆ ಕೊಡುಗೆ ನೀಡಿರುವವರು ನೂತನ 'ಲಂಕೇಶ್ ಮೀಡಿಯಾ' ಸಂಸ್ಥೆಯ ನಿರ್ವಹಣೆಯಲ್ಲಿ ಗೌರಿ ಲಂಕೇಶರಿಗೆ ಹೆಗಲು ನೀಡಲಿದ್ದಾರೆ. ಒಟ್ಟಾರೆಯಾಗಿ ಇದೊಂದು ಟೀಂ ವರ್ಕ್.

ಇದು ಲಂಕೇಶ್ ಮೀಡಿಯಾದ ಸಾಂಸ್ಥಿಕ ರೂಪ ಕುರಿತಾದ ವಿವರಣೆ–ಇನ್ನುಳಿದಂತೆ ಲಂಕೇಶ್ ವಾರ ಪತ್ರಿಕೆ, ಗೈಡ್ ಹಾಗು ಜಾಬ್ ನ್ಯೂಸ್ ಪತ್ರಿಕೆಗಳಿಗೆ ಇನ್ನಷ್ಟು ಕಸುವು ತುಂಬಿ ಚೈತನ್ಯಪೂರ್ಣಗೊಳಿಸುವ ಪ್ರಯತ್ನಗಳಿಗೂ ಚಾಲನೆ ನೀಡಲಾಗಿದೆ.

'ಲಂಕೇಶ್' ವಾರ ಪತ್ರಿಕೆಯು ರಾಜಕೀಯ, ವಿಶ್ಲೇಷಣೆ, ವರದಿಗಳೊಂದಿಗೆ ಕಲೆ–ಸಾಹಿತ್ಯ–ನಾಟಕ–ಎಕಾನಮಿ–ಸಿನಿಮಾ ಕುರಿತಂತೆ ವಿಶಿಷ್ಟ ಒಳನೋಟಗಳನ್ನು ನೀಡುವ, ಓದುಗರಿಗೆ ಮುದ ನೀಡುವ ಬರಹಗಳಿಂದ ತುಂಬಿರಬೇಕೆಂಬ ಬಯಕೆ ನಮ್ಮದು. 'ಲಂಕೇಶ್' ಕೇವಲ ಓದುಗರ ಕುತೂಹಲ ತಣಿಸುವ, ಕಾಲಾಯಾಪನೆಯ ಪತ್ರಿಕೆಯಾಗಷ್ಟೇ ಉಳಿಯಬಾರದು. ಪತ್ರಿಕೆಯ ಒಟ್ಟಂದವು, ಅದು ಸೂಸುವ ಆತ್ಮಸೌಂದರ್ಯವು ಜನರ ಬದುಕಿನ ಭಾಗವಾಗಿ ಪ್ರತಿಫಲಿಸಬೇಕು. ಆ ಆಶಯದಿಂದ 'ಲಂಕೇಶ್'ನಲ್ಲಿ ಕೆಲವು ಹೊಸ ಅಂಕಣಗಳನ್ನು ಆರಂಭಿಸಿದ್ದೇವೆ. ಓದುಗರ ಗಮನಕ್ಕೆ ಬರಲೇಬೇಕಾದ ರಾಜಕೀಯ–ಸಾಹಿತ್ಯ– ಸಿನಿಮಾ ಸೇರಿದಂತೆ ಹಗರಣ, ಅನ್ಯಾಯಗಳ ವಿಚಾರಗಳನ್ನು ಎಚ್ಚರದಿಂದ ಆರಿಸಿ ನೀಡುತ್ತೇವೆ.

ಇದಕ್ಕೆ, ಖರ್ಚಾಗುವ ಪ್ರತಿ ಪುಟವೂ ಉಪಯುಕ್ತಕರವಾಗುವಂತೆ ಇರಲಿದೆ.

ಈ ರಾಶಿ ಕೆಲಸಗಳ ನಿರ್ವಹಣೆಗಾಗಿ 'ಲಂಕೇಶ್'ನಲ್ಲೂ ಕೊಂಚ ಬದಲಾವಣೆ ಬರಲಿದೆ.

ಗೌರಿ ಲಂಕೇಶರು ಇನ್ನು ಮುಂದೆ 'ಲಂಕೇಶ್' ವಾರಪತ್ರಿಕೆಯ ಪ್ರಧಾನ ಸಂಪಾದಕಿಯಾಗಿ ಕಾರ್ಯ ನಿರ್ವಹಿಸುತ್ತಾರೆ.

ಪಾರ್ವತೀಶ್ ಸಂಪಾದಕರಾಗಿರುತ್ತಾರೆ.


'ಲಂಕೇಶ್ ಮೀಡಿಯಾ'ದ ಈ ಕೆಲಸಗಳು ಒಂದು ಹಂತಕ್ಕೆ ಬಂದನಂತರ ನಮ್ಮ ತಂಡ ಇನ್ನೊಂದಿಷ್ಟು ಹೊಸ project ಗಳತ್ತ ಹೊರಳಲಿದೆ.

ಆ ಕನಸುಗಳ ಬಗ್ಗೆ ಹೇಳಿಕೊಳ್ಳಲು ಇನ್ನೂ ಸಮಯವಿದೆ.

'ಲಂಕೇಶ್ ಮೀಡಿಯಾ'ಗೆ ನಿಮ್ಮ ಹಾರೈಕೆಗಳಿರಲಿ.

• ಲಂಕೇಶ್ ಮೀಡಿಯಾ

ಮಂಡ್ಯ: ಲಾಯರ್ ಸತ್ಯಾನಂದನ 'ನೀಲಿ'ಲೀಲೆ




ಕಣ್ಣುಮುಚ್ಚಿ ಹಾಲು ಕುಡಿಯುವ ಕಳ್ಳ ಬೆಕ್ಕು ಒಂದಲ್ಲ ಒಂದು ದಿನ ಸಿಕ್ಕಿ ಬೀಳಲೇ ಬೇಕು. ಇದು ಮಂಡ್ಯದ ವಕೀಲ, ಕೆಪಿಸಿಸಿ ಸದಸ್ಯ ಟಿ.ಸಿ.ಸತ್ಯಾನಂದನಿಗೆ ಸರಿಯಾಗಿ ಅನ್ವಯಿಸುತ್ತದೆ. ತನ್ನನ್ನು ತಾನು ಮಹಾನ್ ಸಮಾಜಸೇವಕ ಅಂತ ಬಿತ್ತರಿಸಿಕೊಳ್ಳುತ್ತಿದ್ದ ಈತ ಮೊನ್ನೆ ಯುವತಿಯೊಬ್ಬಳ ಜೊತೆ ತನ್ನ ಕಾರ್‌ನಲ್ಲೇ 'ರಾಸಲೀಲೆ' ನಡೆಸುತ್ತಿರುವಾಗ ರೆಡ್‌ಹ್ಯಾಂಡಾಗಿ ಸಿಕ್ಕಿಬಿದ್ದಿದ್ದಾನೆ. ಈ ವಿಷಯವಾಗಿ ಪೊಲೀಸರಿಂದ ಕೇಸು ಜಡಿಸಿಕೊಂಡು ಮಾನ ಬೀದಿಗೆ ತಂದುಕೊಂಡಿದ್ದರೂ ತನ್ನ ಘನಕಾರ್ಯವನ್ನು ಟಿವಿಯಲ್ಲಿ ಬಿತ್ತರಿಸಿದ ಎಂಬ ಒಂದೇ ಕಾರಣಕ್ಕೆ ಸುದ್ದಿ ವಾಹಿನಿಯೊಂದರ ವರದಿಗಾರನಿಗೆ ಫೋನಾಯಿಸಿ ಮಾನನಷ್ಟ ಮೊಕದ್ದಮೆ ಹೂಡುತ್ತೇನೆಂದು ಧಮಕಿ ಹಾಕಲು ಹೋಗಿ ಅಲ್ಲೂ ತಗುಲಿಕೊಂಡಿದ್ದಾನೆ.

ಮಾಜಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣರ ಬೆಂಬಲಿಗ, ಸಚಿವ ಟಿ.ಬಿ.ಜಯಚಂದ್ರರ ಅನುಯಾಯಿ ಎಂಬಂತೆ ಬಿಂಬಿಸಿಕೊಳ್ಳುವ ಸತ್ಯಾನಂದ ಕಾಂಗ್ರೆಸ್ ಪಕ್ಷದಲ್ಲಿದ್ದರೂ ನಗಣ್ಯ ನಾದವನು. ಕೌನ್ಸಿಲರ್ ಚುನಾವಣೆಯನ್ನು ಗೆಲ್ಲಲಾಗದ ಸತ್ಯಾನಂದ ಸದಾ ಸುದ್ದಿಯಲ್ಲಿರಬೇಕೆಂದು ಹಂಬಲಿಸುವ ವ್ಯಕ್ತಿ, ಈ ಮೊದಲು ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಅಕ್ರಮ ನಿವೇಶನ ಹಂಚಲಾಗಿದೆ ಎಂದು ಆರೋಪಿಸಿ ಕಳೆದ ಬಾರಿ ಶಾಸಕರಾಗಿದ್ದ ಸಿ.ಎಸ್.ಪುಟ್ಟರಾಜು, ಎಂ.ಶ್ರೀನಿವಾಸ್, ಹಾಲಿ ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ, ನಗರಸಭಾ ಸದಸ್ಯ ಎಂ.ಜೆ.ಚಿಕ್ಕಣ್ಣ ಮೊದಲಾದವರ ಮೇಲೆ ಮೊಕದ್ದಮೆ ಹೂಡಿ ಭಾರೀ ಸುದ್ದಿ ಮಾಡಿದ್ದ. ಟಿ.ಬಿ.ಜಯಚಂದ್ರರ ಮೂಲಕ ಈ ವಿಷಯ ವಿಧಾನಸಭೆಯಲ್ಲೂ ಚರ್ಚೆಯಾಗುವಂತೆ ಮಾಡಿಸುವಲ್ಲೂ ಯಶಸ್ವಿಯಾಗಿದ್ದ. ಅಂದಹಾಗೆ ಮಾಹಿತಿ ಹಕ್ಕು ಕಾಯ್ದೆಯೇ ಇವನ ಬಂಡವಾಳ.

ಇತ್ತೀಚೆಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಅಂಬರೀಶ್ ವಿರೋಧಿ ಪಡೆಯಲ್ಲಿ ಗುರುತಿಸಿಕೊಂಡಿದ್ದ ಸತ್ಯಾನಂದನ ಮೇಲೆ ಹಲವರ ಕಣ್ಣಿತ್ತು. ಇವನ ರಂಗಿನಾಟಗಳೆಲ್ಲ ತಿಳಿದಿದ್ದ ಸ್ವಪಕ್ಷೀಯರೆ ಸತ್ಯಾನಂದನನ್ನು ಈ ರೀತಿ 'ಫಿಟ್' ಮಾಡಲು ಕಾದಿದ್ದರು. ಅಂತವರಿಗೆ ಸತ್ಯಾನಂದ ಈಗ 'ಲೀಲಾ'ಜಾಲವಾಗಿ ಆಹಾರವಾಗಿದ್ದಾನೆ.

ಶ್ರೀರಂಗಪಟ್ಟಣ ತಾಲ್ಲೂಕಿನ ಮೈಸೂರು-ಬೆಂಗಳೂರು ಹೆದ್ದಾರಿಯ ಅಂಚಿನಲ್ಲಿರುವ ಕೋಡಿಶೆಟ್ಟಿಪುರ ಗ್ರಾಮದಲ್ಲಿರುವ ಶಂಭುಲಿಂಗೇಶ್ವರ ದೇವಸ್ಥಾನಕ್ಕೆ ವಾರದಲ್ಲಿ ಒಂದೆರಡು ಸಲ ಬಂದುಹೋಗುವ ಭಕ್ತರನ್ನು ಬಿಟ್ಟರೆ ಇನ್ನುಳಿದಂತೆ ಅಕ್ಷರಶಃ ನಿರ್ಜನ ವಾತಾವರಣವೇ ಸರಿ. ಆದರೆ ಈಗ್ಗೆ ಕೆಲ ತಿಂಗಳುಗಳಿಂದ ವಕೀಲರ ಸ್ಟಿಕ್ಕರ್ ಅಂಟಿಸಿಕೊಂಡ ಕೆಎ-11 ಎಂ-4669 ನಂಬರಿನ ಕಾರೊಂದು ದೇವಸ್ಥಾನದ ಆವರಣದಲ್ಲಿ ಗಂಟೆಗಟ್ಟಲೇ ನಿಂತಿರುವುದನ್ನು ಅಲ್ಲಿನ ಗ್ರಾಮಸ್ಥರು ಗಮನಿಸಿದ್ದರು. ಮೊದಮೊದಲು ಜನ ನಿರ್ಲಕ್ಷಿಸಿದರಾದರೂ ಅದು ಪದೇಪದೇ ಬಂದು ಅಲ್ಲಿ ನಿಂತಿರುತ್ತಿದ್ದುದು ಹಲವರಲ್ಲಿ ಅನುಮಾನ ಮೂಡಿಸಿತ್ತು.

ಅದೇರೀತಿ ಜೂನ್ 22ರ ಶನಿವಾರವೂ ಆ ಕಾರು ಸಂಜೆ 5.45ರ ಸುಮಾರಿಗೆ ಅಲ್ಲಿಗೆ ಬಂದಿದೆ. ಪ್ರತಿ ಶನಿವಾರ ಈ ಕಾರು ಇಲ್ಲಿಗೆ ತಪ್ಪದೇ ಬರುತ್ತದಲ್ಲಾ ಎಂದುಕೊಂಡ ಕೋಡಿಶೆಟ್ಟಿಪುರ ಗ್ರಾಮದ ನಾಗರಾಜು, ರಾಜೇಶ್ ಎಂಬುವರು ಹೋಗಿ ನೋಡಿದಾಗ ಕಾರಿನಲ್ಲಿ ಇದೇ ಲಾಯರ್ ಸತ್ಯಾನಂದ ಹಾಗೂ ಯುವತಿಯೊಬ್ಬಳು Almost ಬೆತ್ತಲೆ ಸ್ಥಿತಿಯಲ್ಲಿದ್ದರು. ಕೂಡಲೇ ಅವರಿಬ್ಬರು ಈ ವಿಷಯವನ್ನು ಗ್ರಾಮದ muKfysfTrige ತಿಳಿಸಿದ್ದಲ್ಲದೆ ಹೆದ್ದಾರಿ ಪೊಲೀಸರ ಗಮನಕ್ಕೂ ತಂದರು.



ತನ್ನ ರಾಸಲೀಲೆ ಬಯಲಾಗಿದ್ದು ತಿಳಿಯುತ್ತಿದ್ದಂತೆಯೇ ಸತ್ಯಾನಂದ ಯುವತಿಯೊಂದಿಗೆ ಕಾರಿನಲ್ಲಿ ಪರಾರಿಯಾಗಲು ಅಣಿಯಾಗಿದ್ದ ಅಷ್ಟರಲ್ಲಿ ಸ್ಥಳಕ್ಕಾಗಮಿಸಿದ ಹೆದ್ದಾರಿ ಪೊಲೀಸರು ಗ್ರಾಮಸ್ಥರ ಸಹಾಯದಲ್ಲಿ ಪರಾರಿಯಾ ಗುತ್ತಿದ್ದ ಸತ್ಯಾನಂದನನ್ನು ಹಿಡಿದರು. ರೆಡ್‌ಹ್ಯಾಂಡಾಗಿ ತಗುಲಿಕೊಂಡಿದ್ದರೂ ಪೊಲೀಸರ ಸಮ್ಮುಖದಲ್ಲೇ ಆ ಇಬ್ಬರು ಯುವಕರಿಗೆ ಬೆದರಿಕೆ ಹಾಕಿದ್ದಲ್ಲದೆ ಆದ್ಯಾರಿಗೋ ಫೋನಾಯಿಸಿ ಪೊಲೀಸರಿಗೆ ಹೇಳಿಸಿ ಅಲ್ಲಿಂದ ಕಾಲ್ಕಿತ್ತಿದ್ದ. ಆದರೆ ಪ್ರತ್ಯಕ್ಷದರ್ಶಿ ರಾಜೇಶ್ ಶ್ರೀರಂಗಪಟ್ಟಣ ಪೊಲೀಸರಿಗೆ ಲಿಖಿತ ದೂರೊಂದನ್ನು ನೀಡಿ ಸತ್ಯಾನಂದ ಮಾಡಿದ ಅನೈತಿಕ ಕೆಲಸ ಮತ್ತು ಅದನ್ನು ಬಯಲು ಮಾಡಿದ ತಮಗೇ ಬೆದರಿಕೆ ಹಾಕಿದ್ದೆಲ್ಲವನ್ನೂ ವಿವರಿಸಿದರು. ಅಂತೂ ಪೊಲೀಸರು 294(ಎ) ಹಾಗೂ 506 ಕಲಂ ಅಡಿ ಸತ್ಯಾನಂದನ ವಿರುದ್ಧ ಕೇಸು ಜಡಿದಿದ್ದಾರೆ.

ಆದರೆ ಇದಕ್ಕೊಂದು ಸಬೂಬಿನ ಕಥೆ ಕಟ್ಟುತ್ತಿರುವ ಸತ್ಯಾನಂದ ಆಕೆ ತನ್ನ ಸಹೋದ್ಯೋಗಿಯಾಗಿದ್ದು ಇಬ್ಬರೂ ಯಾವುದೋ ವಿಷಯದ ಬಗ್ಗೆ ಚರ್ಚೆ ಮಾಡುತ್ತಿದ್ದೆವಷ್ಟೆ ಅಂತ ತಿಪ್ಪೆ ಸಾರಿಸುವ ಪ್ರಯತ್ನದಲ್ಲಿದ್ದಾನೆ. ಚರ್ಚೆ ಮಾಡಲು ಅಲ್ಲಿಗೇ ಏಕೆ ಹೋಗಬೇಕಾಗಿತ್ತೆಂಬ ಪ್ರಶ್ನೆಗೆ 'ಮೈಸೂರಿನಿಂದ ಬರ್ತಿದ್ದೆವು. ಹಾಗೇ ಸುಮ್ಮನೆ ಅಲ್ಲಿ ನಿಂತುಕೊಂಡಿದ್ದೆವು' ಎಂಬ ಉತ್ತರ ಅವನಲ್ಲಿ ಸಿದ್ಧವಾಗಿತ್ತು. ಆದರೆ ಸಂಜೆ 5.30ರಿಂದ 6.30ರವರೆಗೆ ಸತ್ಯಾನಂದ ಹಾಗೂ ಯುವತಿಯ ಮೊಬೈಲ್ ನೆಟ್‌ವರ್ಕ್ ಶಂಭುಲಿಂಗೇಶ್ವರ ದೇವಸ್ಥಾನದ ಬಳಿಯೇ ಹರಿದಾಡಿರುವುದು ಪತ್ತೆಯಾಗಿರೋದರಿಂದ ಅವನ ಅಷ್ಟೂ ಹೇಳಿಕೆಗಳು ಸುಳ್ಳೆಂಬುದು ಸಾಬೀತಾಗುತ್ತದೆ.

ಅಂಬರೀಶ್ ವಿರೋಧಿ ಪಾಳಯದಲ್ಲಿ...

ಎಸ್.ಎಂ.ಕೃಷ್ಣ ಟಿ.ಬಿ.ಜಯಚಂದ್ರ, ಡಿ.ಕೆ.ಶಿವಕುಮಾರ್ ರಂತಹ ನಾಯಕರ ಸಂಪರ್ಕ ದಕ್ಕಿಸಿಕೊಂಡಿರುವ ಸತ್ಯಾನಂದ ಅವರ ಕೃಪೆಯಿಂದಾಗಿಯೇ ಕೆಪಿಸಿಸಿ ಸದಸ್ಯತ್ವವನ್ನೂ ಗಿಟ್ಟಿಸಿಕೊಂಡಿದ್ದಾನೆ. ಆದರೆ ಮಂಡ್ಯ ರಾಜಕಾರಣದ ಗುಂಪುಗಾರಿಕೆಯಲ್ಲಿ ಈತ ಅಂಬರೀಷ್ ವಿರೋಧಿ ಪಾಳಯದಲ್ಲೇ ಮೊದಲಿನಿಂದಲೂ ಗುರುತಿಸಿಕೊಂಡು ಬಂದಿದ್ದ. ಕಳೆದ ಲೋಕಸಭಾ ಚುನಾವಣೆಯಲ್ಲಂತೂ ಕಾಂಗ್ರೆಸ್ ಅಭ್ಯರ್ಥಿ ಅಂಬರೀಶ್‌ರನ್ನು ಬೆಂಬಲಿಸದೆ ಬಿಜೆಪಿ ಅಭ್ಯರ್ಥಿ ನಾಗಮಂಗಲದ ಎಲ್.ಆರ್.ಶಿವರಾಮೇಗೌಡರ ಪರ ಬಹಿರಂಗ ಪ್ರಚಾರಕ್ಕೆ ಇಳಿದುಬಿಟ್ಟಿದ್ದ. ಆ ಚುನಾವಣೆಯಲ್ಲಿ ಅಂಬರೀಶ್ ಸೋಲುವ ಮೂಲಕ ಕಾಂಗ್ರೆಸ್ ನೆಲಕಚ್ಚಿತ್ತು. ಇದೇ ಕಾರಣಕ್ಕಾಗಿ ಯುವ ಕಾಂಗ್ರೆಸ್ ಅಧ್ಯಕ್ಷ ಚಿದಂಬರ್ ಬೆಂಬಲಿಗರು ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್ ಎದುರೇ ಸತ್ಯಾನಂದನ ಮೇಲೆ ಏರಿ ಹೋಗಿದ್ದೂ ಉಂಟು.

ಈ ಸಲದ ವಿಧಾನಸಭೆ ಚುನಾವಣೆಯಲ್ಲಿ Once again ಅಂಬರೀಶ್ ಮಂಡ್ಯ ಕ್ಷೇತ್ರದಿಂದ ಸ್ಪರ್ಧಿಸಲು ಆಸಕ್ತಿ ವಹಿಸುತ್ತಿದ್ದಂತೆ ಮಾಜಿ ಸಚಿವ ಆತ್ಮಾನಂದರ ಪರ ನಿಂತಿದ್ದ ಎಸ್.ಎಂ.ಕೃಷ್ಣ ಕೂಡಾ ಅಂಬರೀಷ್‌ಗೆ ಸೆಡ್ಡು ಹೊಡೆದದ್ದರಿಂದ ಮಂಡ್ಯ ಕೈ ಟಿಕೆಟ್ ದೊಡ್ಡ ಕಗ್ಗಂಟಾಗಿ ಉಲ್ಬಣಿಸಿತ್ತು. ಅದರೆ ಅಂಬರೀಶ್‌ಗೆ ಟಿಕೆಟ್ ನೀಡಲು ಹೈಕಮಾಂಡ್ ನಿರ್ಧರಿಸುತ್ತಿದ್ದಂತೆ 15 ಮಂದಿ ನೂತನ ನಗರಸಭಾ ಸದಸ್ಯರು ಸಾಮೂಹಿಕ ರಾಜೀನಾಮೆಗೆ ಸಿದ್ಧ ಎಂಬ ಪತ್ರ ಬರೆದು ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್‌ಗೆ ಕಳುಹಿಸುವ ಪ್ರಹಸನ ನಡೆದಿತ್ತು. ಆ ರಾಜೀನಾಮೆ ಹೈಡ್ರಾಮಾದ ಹಿಂದೆಯೂ ಇದೇ ಸತ್ಯಾನಂದನ ಪಾತ್ರವಿತ್ತು. ಇಷ್ಟೆಲ್ಲ ವಿರೋಧ, ಗೊಂದಲಗಳ ಹೊರತಾಗಿಯೂ ಅಂಬರೀಷ್ 43,000 ಮತಗಳ ದಾಖಲೆ ಅಂತರದಲ್ಲಿ ಜಯಿಸಿದ್ದಲ್ಲದೆ ವಸತಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವರಾಗಿ ನೇಮಕವಾದದ್ದು ಆತ್ಮಾನಂದನ ಟೀಮಿಗೆ ದೊಡ್ಡ ಮುಖಭಂಗವೇ ಆದಂತಾಗಿತ್ತು. ಅಂಬಿ ವಿರೋಧಿ ಪಡೆಯಲ್ಲೆ ಗುರುತಿಸಿಕೊಂಡ ಸತ್ಯಾನಂದನಿಗೂ ಇದು ಉರಿ ಹೊತ್ತಿಸಿತ್ತು.


ಮಾಧ್ಯಮದವರನ್ನೇ ಬೆದರಿಸಿದ ಭೂಪ

ಯುವತಿಯೊಂದಿಗೆ ಅನೈತಿಕ ಚಟುವಟಿಕೆಯಲ್ಲಿದ್ದಾಗ ಗ್ರಾಮಸ್ಥರ ಕೈಗೆ ತಗುಲಿಕೊಂಡಿದ್ದಲ್ಲದೆ ಅವರಿಗೇ ಕೊ... ಬೆದರಿಕೆ ಹಾಕಿ ಕೇಸು ಜಡಿಸಿಕೊಂಡಿರುವ ಸತ್ಯಾನಂದ... ದರ್ಪ ಇಷ್ಟಾದರು ಕಡಿಮೆಯಾದಂತಿಲ್ಲ. ರಾಜೇಶ್ ಎಂಬ... ಎಸ್ಪಿಯವರಿಗೆ ದೂರು ನೀಡುತ್ತಿದ್ದಂತೆಯೇ ಮಾಧ್ಯಮ... ವರಿಗೆಲ್ಲ ವಿಷಯ ಬಹಿರಂಗವಾಗಿ ಸುದ್ದಿ ಬಿತ್ತರಿಸಿದ್ದ... ಇದರಿಂದ ಕೆರಳಿ ಹೋದ ಮಹಾನ್ ಮಾನಸ್ಥ ಸತ್ಯಾನ... ಸುದ್ದಿ ವಾಹಿನಿಯೊಂದರ ಜಿಲ್ಲಾ ವರದಿಗಾರನಿಗೆ ಫೋ... ಮಾಡಿ 'ನನ್ನ ಸ್ಪಷ್ಟೀಕರಣ ಕೇಳದೆ ಹೇಗೆ ಸುದ್ದಿ ಮಾಡಿ... 11.30ರ ವೇಳೆಗೆ ಎಫ್‌ಐಆರ್ ದಾಖಲಾಗು... ಮುಂಚೆಯೇ 9.30ಕ್ಕೆ ಸುದ್ದಿ ಮಾಡಿದ್ದೀಯ. ಇದರ ಹಿಂ... ಯಾರ ಕೈವಾಡವಿದೆ ಎಂದು ಗೊತ್ತಿದೆ. ಬೇರೆ ಜಿಲ್ಲೆಯಿಂ... ಇಲ್ಲಿ ಕೆಲಸ ಮಾಡಲು ಬಂದಿದ್ದೀಯ. ನಾನು ಮನ... ಮಾಡಿದರೆ ಏನೋ ಮಾಡಬಹುದಿತ್ತು' ಎಂದೇ... ಒದರಿದ್ದಾನೆ. ಅಷ್ಟಕ್ಕೇ ಸತ್ಯಾನಂದನ ಪ್ರತಾಪ ನಿಂತಿ... 'ನಿನ್ನ ಅಡ್ರೆಸ್ ಕೊಡು ಮಾನನಷ್ಟ ಮೊಕದ್ದಮೆ ನೋಟಿ... ಕಳುಹಿಸುತ್ತೇನೆ' ಎಂತಲೂ ಅರಚಾಡಿದ್ದಾನೆ. ಅದೇರಿ... ತನ್ನ ಬಗ್ಗೆ ಸುದ್ದಿ ಮಾಡಿದ ಸ್ಥಳೀಯ ಪತ್ರಿಕೆಗಳ ವಿರುದ್ಧ... ಮಾನನಷ್ಟ ಮೊಕದ್ದಮೆ ಹೂಡುವುದಾಗಿ ಹೇಳಿಕೊಂ... ತಿರುಗಾಡುತ್ತಿರುವ ಸ(ನಿ)ತ್ಯಾನಂದನ ಬೆನ್ನ ಹಿಂದೆ ಮಂಡ... ಜನ ಮುಸಿಮುಸಿ ನಗುತ್ತಿರುವುದು ಅವನಿಗೆ ತಿಳಿದಿದ್ದಂತಿ... ಒಟ್ಟಿನಲ್ಲಿ ಕೆಟ್ಟ ಮೇಲೂ ಸತ್ಯಾನಂದ ಬುದ್ಧಿ ಕಲಿತಿ... ಎನ್ನುವುದಂತೂ ಸಾಬೀತಾಗಿದೆ.

ಇದಾದನಂತರ ಸತ್ಯಾನಂದನನ್ನು ಹಣಿಯಲು ಸಮಯ... ಕಾಯುತ್ತಿದ್ದ ಅಂಬರೀಶ್ ಬೆಂಬಲಿಗರಿಗೆ ಕೋಡಿಶೆಟ್ಟಿಪು... ದಲ್ಲಿ ಅನೈತಿಕ ಚಟುವಟಿಕೆಯಲ್ಲಿ ತೊಡಗಿದ್ದ ಪ್ರಕರ... ಸುಖತ್ತಾಗ ಸಿಕ್ಕಿದೆ. ಆವತ್ತೇನಾದರೂ ಅಂಬಿ ಬೆಂಬಲಿಗರಿ... ಕೊಂಚ ಮೊದಲೇ ವಿಷಯ ಗೊತ್ತಾಗಿ ಸ್ಥಳಕ್ಕಾಗಮಿಸಿದ್ದ... ರಾಜಕಾರಣದ 'ರೆಬೆಲ್' ಏಟುಗಳೆಲ್ಲ ಸತ್ಯಾನಂದ... ಮೈಮೇಲೆ ದಾಖಲಾಗುವ ಸಂಭವವಿತ್ತು. ಸ್ವಲ್ಪದರಲ್ಲಿ... ಧರ್ಮದೇಟುಗಳಿಂದ ಬಚಾವಾಗಿದ್ದಾನೆ. ಆದರೆ ... ಅವಕಾಶವನ್ನು ಸರಿಯಾಗಿ ಬಳಸಿಕೊಳ್ಳಲು ನಿರ್ಧರಿಸಿರು... ಅಂಬಿ ನಿಷ್ಠರು ಸತ್ಯಾನಂದ ಎಸ್ಕೇಪ್ ಆಗದಂತೆ ಎಚ್ಚ... ವಹಿಸುತ್ತಿದ್ದಾರೆ. ಪೊಲೀಸ್ ಠಾಣೆಯಲ್ಲಿ ಮಾತ್ರ ಕಂಪ್ಲೇಂಟ್... ನೀಡಿದರೆ ಸತ್ಯಾನಂದ ಪ್ರಭಾವ ಬಳಸಿ ಮುಚ್ಚಿಹಾಕು... ಹುನ್ನಾರ ನಡೆಸಬಹುದೆನ್ನುವ ಕಾರಣಕ್ಕೆ ಪ್ರತ್ಯಕ್ಷದರ್ಶಿ... ರಾಜೇಶ್‌ನಿಂದ ಮೊದಲು ಜಿಲ್ಲಾ ಎಸ್.ಪಿ. ಬೊರಸೆಯವರಿ... ದೂರು ನೀಡಿಸಿ ನಂತರ ಶ್ರೀರಂಗಪಟ್ಟಣದಲ್ಲಿ ಕೇಸ್... ದಾಖಲಾಗುವಂತೆ ನೋಡಿಕೊಂಡಿದ್ದಾರೆ.

● ನಾಗೇಶ್...

ಪ್ರಜಾವಾಣಿ ಮತ್ತು ಪದ್ಮರಾಜ ದಂಡಾವತೆ



ಪ್ರಜಾವಾಣಿಯ ಸಹಸಂಪಾದಕ ಪದ್ಮರಾಜ ದಂಡಾವತೆ ಈ ಜುಲೈ ತಿಂಗಳ ಅಂತ್ಯಕ್ಕೆ ನಿವೃತ್ತರಾಗುವುದಿದೆ. ಒಂದೋ ಅವರಿಗೆ ನಿವೃತ್ತಿ ಸಿಗಲೂಬಹುದು ಅಥವಾ ಹಲ ತಿಂಗಳ ಸೇವಾವಧಿ ವಿಸ್ತರಣೆಯಾಗಲೂಬಹುದು ಎಂಬ ಸ್ಥಿತಿ ಇದೆ. ದಂಡಾವತಿ ಒಂದು ವೇಳೆ ನಿವೃತ್ತರಾದರೆ ಸಿ.ಜಿ. ಮಂಗಳಾ ಅಥವಾ ವಿಜಯ ಪೂಣಚ್ಚ ಆ ಸ್ಥಾನಕ್ಕೆ ಬರುತ್ತಾರೆ.

ತಕ್ಕಮಟ್ಟಿಗೆ ಚೆನ್ನಾಗಿಯೇ ಬರೆಯಬಲ್ಲವರಾದ ದಂಡಾವತೆಯವರ ನಾಯಕತ್ವದಡಿಯ, ಕಳೆದ ಎರಡು ಮೂರು ವರ್ಷಗಳ ಪ್ರಜಾವಾಣಿಯ ನಿಲುವುಗಳ ಒಂದು ಓದುಗರಲ್ಲಿ ಹಲವು ಬಾರಿ ಗೊಂದಲ ಉಂಟಾಗಿದೆ. ಅಂದರೆ ಯಾವುದೇ ಒಂದು ಸರ್ಕಾರವನ್ನು ಬೆಂಬಲಿಸುವ ಅಥವಾ ಟೀಕಿಸುವ ವಿಚಾರದಲ್ಲಿ consistency ಹಾಗೂ ವಾಸ್ತವಾಂಶಗಳಿದ್ದವೇ ಎಂಬ ಗೊಂದಲ ಅದು.

ಈ ಗೊಂದಲ ಈಗಲೂ ಓದುಗರಲ್ಲಿದೆ. ಏಕೆಂದರೆ ಹೊಸ ಕಾಂಗ್ರೆಸ್ ಸರ್ಕಾರದ ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಬಂದ ದಿನದಿಂದಲೂ 'ಪ್ರಜಾವಾಣಿ' ಸಿದ್ದು ವಿರುದ್ಧ ಒಂದಲ್ಲ ಒಂದು ಬಾಣ ಬಿಡುತ್ತಲೇ ಇರುವುದು ಜನಸಾಮಾನ್ಯರಿಗೂ ಗೋಚರಿಸುತ್ತಿದೆ. ತಪ್ಪುಗಳಾದಾಗ ಟೀಕಿಸುವುದು ಒಂದು ರೀತಿ, ಆದರೆ ದಂಡಾವತೆಯವರು ಮೊಸರಲ್ಲಿ ಯಾಕೆ ಕಲ್ಲು ಹುಡುಕುತ್ತಿದ್ದಾರೆಂಬುದು ಕುತೂಹಲಕಾರಿ ವಿಚಾರ.

ಇದಲ್ಲದೆ ಇವತ್ತಿನ ಸ್ಪರ್ಧಾತ್ಮಕ, ಕಾಲಘಟ್ಟದಲ್ಲಿ ಪ್ರಜಾವಾಣಿ ಕೆಲವೊಮ್ಮೆ pace ಹಾಗೂ Rythm ಮಿಸ್ ಮಾಡಿಕೊಂಡಂತೆ ಕಾಣುವುದುಂಟು. ಉದಾಹರಣೆಗೆ ಮಣಿಪಾಲದ ಅತ್ಯಾಚಾರದ ಆರೋಪಿಗಳು ಸಿಕ್ಕಿಬಿದ್ದಾಗ ಮರುದಿನದ ಪ್ರಜಾವಾಣಿಯಲ್ಲಿ ಮುಖಪುಟದಲ್ಲಿ 'ಹಗುರ ಅಂಬಾರಿಗೆ ನಿರ್ಧಾರ'ವೆಂಬ ಸುದ್ದಿ ಆದ್ಯತೆ ಪಡೆದಿತ್ತು. ಇದೇನೆಂದು, ಹೀಗ್ಯಾಕೆಂದು ಓದುಗರಿಗೆ ಅರ್ಥವಾಗದ ಸಂಗತಿ ಇದು. ಏಕೆಂದರೆ ಬೇರೆಲ್ಲಾ ದಿನಪತ್ರಿಕೆಗಳು ಆರೋಪಿಗಳ ಸುದ್ದಿಯನ್ನಷ್ಟೇ ಅಲ್ಲಾ ಅವರು ಭಜರಂಗಿಗಳೆಂಬುದನ್ನು ಹೈಲೈಟ್ ಮಾಡಿದ್ದವು. ಪ್ರಜಾವಾಣಿಯಲ್ಲಿ ಆಗಾಗ್ಗೆ ಇಂತಹದ್ದು ಘಟಿಸುವುದು ಅದರ ನಿಷ್ಠಾವಂತ ಓದುಗರಲ್ಲಿ ಬೇಸರ ಮೂಡಿಸುತ್ತದೆ.

ಪ್ರಜಾವಾಣಿಯಂತಹ ಒಂದು ದೊಡ್ಡ ಪರಂಪರೆಯಿರುವ ಬೃಹತ್ ಪತ್ರಿಕೆಯನ್ನು ಮುನ್ನಡೆಸುವುದು ಸುಲಭದ ಮಾತಲ್ಲ. ಅದಕ್ಕೆ, ದಂಡಾವತೆಯವರಂತಹ ಅನುಭವಿಗಳ ಜೊತೆಗೆ ಪ್ರತಿಭಾವಂತ, ಉತ್ಸಾಹಿ ಯುವ ಪತ್ರಕರ್ತರ ದೊಡ್ಡ ಟೀಂ ಬೇಕಾಗುತ್ತದೆ. ವಿಪರ್ಯಾಸ ಏನೆಂದರೆ ಈ ಅವಧಿಯಲ್ಲಿ ಪ್ರಜಾವಾಣಿ ಬಳಗವು ಕಾರ್ಟೂನಿಸ್ಟ್ ಮಹಮ್ಮದ್ ಸೇರಿದಂತೆ ದಿನೇಶ್ ಅಮೀನ್ ಮಟ್ಟು, ದೇವೂ ಪತ್ತಾರ ಮುಂತಾದ ಪ್ರತಿಭಾವಂತರನ್ನು ಕಳೆದುಕೊಂಡಿದೆ. ದಂಡಾವತೆಯವರು ಕೊಂಚ ಹುಷಾರಾಗಿ ಹ್ಯಾಂಡಲ್ ಮಾಡಿದಿದ್ದರೆ ಇವರಲ್ಲಿ ಕೆಲವರಾದರೂ ಪ್ರಜಾವಾಣಿಯಲ್ಲೇ ಉಳಿದಿರುತ್ತಿದ್ದರೇನೋ!

ದಂಡಾವತೆಯವರಿಗೆ ಪತ್ರಿಕೋದ್ಯಮದಲ್ಲಿ ಇನ್ನಷ್ಟು ಕಾಲ ಕೆಲಸ ಮಾಡುವ ಅವಕಾಶ ಸಿಗಲಿ. ಆ ಮೂಲಕ ನಂಬರ್ ಒನ್ ಸ್ಥಾನಕ್ಕಾಗಿ ವಿಜಯ ಕರ್ನಾಟಕದೊಂದಿಗೆ ಹೋರಾಡುತ್ತಿರುವ ಪ್ರಜಾವಾಣಿಗೆ ಇನ್ನಷ್ಟು ಹೊಸ ಹುರುಪು, ಚೈತನ್ಯ ಸಿಗುವಂತಾಗಲಿ.

ಮೀಡಿಯಾ ಮಸಾಲ

ಸಮಯ ಟೀವಿಗೀಗ ಕಷ್ಟಕಾಲ

ಸಮಯ ಟಿವಿ ನಿಂತಿದೆ..!

ಕನ್ನಡ ನ್ಯೂಸ್ ಚಾನಲ್‌ಗಳ ಪೈಕಿ ದೊಡ್ಡ ಮಾಧ್ಯಮ ಪಿತ್ರ ಸಂಸ್ಥೆಗಳ ಬೆಂಬಲವಿರದ ಚಾನಲ್ ಆಗಿದ್ದ ಸಮಯಕ್ಕೀಗ ಕೆಟ್ಟ ಕಾಲ. ಕಷ್ಟ ಕಾಲವೂ ಹೌದು.

ಮುನ್ನೂರಾ ಐವತ್ತು ಸಿಬ್ಬಂದಿಗೆ ಮೂರು ತಿಂಗಲ ಕಾಲ ಸಂಬಳವನ್ನೂ ನೀಡಲಾಗದೆ ಒದ್ದಾಡಿದ ಸಮಯ ಮ್ಯಾನೇಜ್‌ಮೆಂಟ್ ವಿರುದ್ಧ ಈಗ ಕಬ್ಬನ್‌ಪಾರ್ಕ್ ಪೊಲೀಸರಿಗೆ ದೂರು ನೀಡಲಾಗಿದೆ.

ದೂರು ಕೊಟ್ಟವರು ಸಮಯದ ಸಿಬ್ಬಂದಿಯೆ!

ಆದರೆ ಯಾರ ವಿರುದ್ಧ ದೂರುವುದೆಂಬುದೇ ಗೋಜಲಿನ ವಿಚಾರ.


ಏಕೆಂದರೆ ಹಾಲಿ ಸಮಯದ ಮ್ಯಾನೇಜಿಂಗ್ ಡೈರೆಕ್ಟರ್ ಎಂದೇ ಹೇಳಿಕೊಳ್ಳುತ್ತಿದ್ದ ಮಂಜುನಾಥ್ "ನಾನು ಮಾಲೀಕನಲ್ಲ" ಎನ್ನುತ್ತಿದ್ದಾರೆ. ಅಸಲಿ ಮಾಲೀಕ ಎಂದೇ ಭಾವಿಸಲಾಗಿದ್ದ ಉದ್ಯಮಿ ಸಚಿನ್ ನಾರಾಯಣ್ ಮಾಲೀಕನಾಗಿರಬಹುದೇ ಎಂದು ನೋಡಿದರೆ ಅದೂ ಗೊಂದಲಕಾರಿಯಾಗಿದೆ. ಸಮಯ ಶುರುವಾಗಿದ್ದು ಜಾರಕಿಹೊಳಿ ಸೋದರರಿಂದ. ಅದು ನಂತರ ಮುರುಗೇಶ ನಿರಾಣಿ ಮತ್ತು ಯಡಿಯೂರಪ್ಪ ಬಳಗದ ಕೈಸೇರಿ ಅಲ್ಲಿಂದ ಸಚಿನ್ ನಾರಾಯಣ್ ಹಾಗೂ ಶಾಂತಾ ಎಂಬ ಹುಂಬ ಮಹಿಳೆಯ ಕೈ ಸೇರಿತ್ತು.

ಆದರೆ ಈ ಓನರ್‌ಶಿಪ್ ವರ್ಗಾವಣೆಯ ಪ್ರಕ್ರಿಯೆಯಲ್ಲಿ ಕೊಂಡುಕೊಂಡವರು ಚಾನಲ್ ಮಾರಿದವರಿಗೆ ಪೂರ್ತಾ ಹಣ ನೀಡದೆ ಹೋದ ಕಾರಣ ಮಾಲೀಕತ್ವವು ಪ್ರತಿ ಹಂತದಲ್ಲೂ ಹರಿದು ಹಲವು ಜನರ ಕೈಯಲ್ಲಿ ಹಂಚಿಹೋಗಿದೆ. ನಿರಂತರವಾಗಿ ನಷ್ಟವಾಗುತ್ತಾ ಹೋದದ್ದೂ ಸಹ ಈ ಮಾಲೀಕತ್ವದ ವಿಚಾರ ಪೆಂಡಿಂಗ್ ಉಳಿಯಲು ಕಾರಣವಾಗಿರಬಹುದು.

ಯಾವುದೋ ಒಂದು ರಾಜಕೀಯ ಪಕ್ಷ, ಜಾತಿ ಧರ್ಮದ ತುತ್ತೂರಿಯಾಗದೆ ತನ್ನತನ ಪ್ರೂವ್ ಮಾಡಲು ಕಳೆದ ಆರೆಂಟು ತಿಂಗಳಿಂದ ಹೋರಾಡಿದ ಸಮಯ ಅಕಾಲಿಕವಾಗಿ ನಿತ್ರಾಣಗೊಂಡಿದೆ. ಅಲ್ಲಿದ್ದ ಮುನ್ನೂರೈವತ್ತು ಪತ್ರಕರ್ತರಿಗೆ, ತಾಂತ್ರಿಕ ಸಿಬ್ಬಂದಿಗೆ ಮುಂದೇನು ಎಂಬ ಪ್ರಶ್ನೆ ಕಾಡುತ್ತಿದೆ.

ವಿಶ್ವೇಶ್ವರ ಭಟ್ ವಿಜಯವಾಣಿಗೆ?

ಸುವರ್ಣ ಚಾನಲ್‌ನಿಂದ ಬಿಡುಗಡೆ ಪಡೆದ ನಂತರ ಕೇವಲ ಕನ್ನಡಪ್ರಭ... ಸಂಪಾದಕರಾ ಗುಳಿದಿರುವ ವಿಶ್ವೇಶ್ವರ ಭಟ್ ವಿಜಯವಾಣಿ ದಿನಪತ್ರಿಕೆ ಸೇರುವ ಪ್ರಯತ್ನ ಮಾಡುತ್ತಿದ್ದಾರೆಂಬ ರೂಮರ್ ಇದೆ.



ವಿಜಯ ಸಂಕೇಶ್ವರ್ ವಿಜಯವಾಣಿಯು ವಿಜಯ ಕರ್ನಾಟಕ ಹಾಗೂ ಪ್ರಜಾವಾಣಿಯ ನಂತರ ಈಗಾಗಲೇ ಮೂರನೇ ಸ್ಥಾನದಲ್ಲಿದೆ. ಸಂಕೇಶ್ವರ್ ಹಾಗೂ ವಿ.ಭಟ್ ಈ ಮೊದಲು ವಿಜಯ ಕರ್ನಾಟಕದಲ್ಲಿ ಜೊತೆಯಾಗಿ ಕೆಲಸ ಮಾಡಿದ್ದವರೆ.

ಕನ್ನಡ ಪತ್ರಿಕೋದ್ಯಮಕ್ಕೆ ಹೊಸ ವೇಗ-ರಭಸ ತಂದು ಕೊಂಚ ಯಶಸ್ಸನ್ನೂ ಸಾಬೀತುಪಡಿಸಿರುವ ವಿಶ್ವೇಶ್ವರ ಭಟ್ ಹೊಸದೇನನ್ನಾದರೂ ಯೋಚಿಸುತ್ತಲೇ ಇರುತ್ತಾರೆ. ಆದರೆ ಹಿಂದೂತ್ವ ಕೋಮುವಾದಿ ರಾಜಕೀಯದ ಬಗ್ಗೆ ಅತಿಯಾದ ಅಕ್ಕರೆ ಇಟ್ಟುಕೊಂಡಿರುವುದೇ ಅವರ ದೊಡ್ಡ ದೌರ್ಬಲ್ಯ. ಅಕಸ್ಮಾತ್ ವಿ. ಭಟ್ ವಿಜಯವಾಣಿಗೆ ಬರುವುದೇ ಆದರೆ ಅದರ ಹಾಲಿ ಸಂಪಾದಕರಾಗಿರುವ ತಿಮ್ಮಪ್ಪ ಭಟ್ ಎಲ್ಲಿಗೆ ಹೋಗುತ್ತಾರೆಂಬುದು ತಿಳಿಯದು.

ಸೂಚನೆ: ಮೀಡಿಯಾ ಮಸಾಲಾಗೆ ಮಾಹಿತಿ ಕಳುಹಿಸುವವರು ಇನ್ನು ಮುಂದೆ kannadamediamasala@gmail.com (ಕನ್ನಡ ಮೀಡಿಯಾ ಮಸಾಲ)ಗೆ ನೇರವಾಗಿ ಕಳುಹಿಸಲು ಕೋರಿದೆ.

ಗಣಿ ನಿರ್ದೇಶಕ ಶ್ರೀನಿವಾಸನ ಲೂಟಿ ಕರಾಮತ್ತು

ಇಡೀ ಭಾರತದಲ್ಲಿ ಚಿನ್ನದ ನಿಕ್ಷೇಪಗಳುಳ್ಳ ಏಕೈಕ ...ವೆಂದರೆ ಅದು ಕರ್ನಾಟಕ. ಹಾಗೆ ದೇಶದ ಅತೀ ...ಷ್ಟು ಕಬ್ಬಿಣದ ಅದಿರುಗಳಿರುವುದೂ ಕರ್ನಾಟಕದಲ್ಲೇ. ...ದಿಗರಿಗಿದು ಗೊತ್ತಿದೆಯೋ ಇಲ್ಲವ್ರೋ ಗೊತ್ತಿಲ್ಲ. ...ವರ್ಷ ಭಾರತದಿಂದ ರಫ್ತಾಗುವ ಒಟ್ಟು ಸಿಮೆಂಟಿನ ...ಲಿಸ ಶೇ.85ರಷ್ಟು ಸಿಮೆಂಟನ್ನು ಕರ್ನಾಟಕದ ಸುಣ್ಣದ ...ಲ್ಲು ನಿಕ್ಷೇಪಗಳಿಂದಲೇ ಉತ್ಪಾದಿಸಲಾಗುತ್ತದೆ. ಹೇಗೆ ...ಕಲ್, ಕನಕಪುರ, ಚಾಮರಾಜನಗರ, ಕೊಳ್ಳೇಗಾಲದ ...ಗಳನ್ನು ದೋಚಿ ಗ್ರಾನೈಟ್ ಶಿಲಾಸಂಪತ್ತನ್ನು ವಿದೇಶ...ಗೆ ಸಾಗಿಸಿ ಗ್ರಾನೈಟ್ ದೊರೆಗಳು ಧನಾಢ್ಯರಾದರೋ ...ಗೆ ಎಸಿಸಿ, ಬಿರ್ಲಾ, ರಾಜಶ್ರೀ, ಅಲ್ಟ್ರಾಟೆಕ್; ಇತ್ಯಾದಿ ...ತ್ಯ ಸಿಮೆಂಟ್ ಕಂಪೆನಿಗಳು ಪ್ರತಿ ವರ್ಷ ವಿದೇಶಕ್ಕೆ ...ಫ್ತು ಮಾಡುವ ಸರಿಸುಮಾರು 40 ಸಹಸ್ರ ಕೋಟಿ ...ರೂಪಾಯಿಗಳ ಸಿಮೆಂಟಿನ ಮೂಲ ಕೂಡ ಗುಲಬರ್ಗಾ ...ಜಿಲ್ಲೆಯ ಸುಣ್ಣದ ಕಲ್ಲುಗಣಿಗಳೇ!

... ಚಿನ್ನ, ಕಬ್ಬಿಣದ ಅದಿರು, ಗ್ರಾನೈಟ್, ಅಲ್ಯುಮಿನಿಯಂ ...ತ್ಪಾದನೆಗೆ ಮೂಲವಸ್ತುವಾದ ಬಾಕ್ಸೈಟ್, ಸಿಮೆಂಟಿನ ...ರಧಾತುವಾದ ಸುಣ್ಣದ ಕಲ್ಲು; ಹೀಗೆ ಪ್ರತಿ ವರ್ಷ ಲಕ್ಷ ...ಕೋಟಿ ರೂಪಾಯಿಗಳ ಲೆಕ್ಕದಲ್ಲಿ ವಿದೇಶಿ ವಿನಿಮಯಕ್ಕೆ ...ಕಾರಣವಾಗುವ ಕನ್ನಡ ತಾಯಿಯ ಖನಿಜ ಸಮೃದ್ಧ ...ಭೂಗರ್ಭದಿಂದ ಕನ್ನಡಿಗರು ಕೂಡ ಪೆಟ್ರೋಲ್ ...ಮಾಲಿಕರಾದ ಅರಬರಂತೆ ಕುಬೇರರಾಗಬೇಕಿತ್ತಲ್ಲವೇ?

... ಬದಲಿಗೆ ಗಣಿ ಕಳ್ಳರು, ಸಿಮೆಂಟ್ ಕಂಪೆನಿಗಳು, ...ಗ್ರಾನೈಟ್ ದೊರೆಗಳು, ಜಿಂದಾಲ್ ಸ್ಟೀಲ್, ಬಲ್ಡೋಟಾ, ...ಬಿರ್ಲಾ ಸಿಮೆಂಟ್, ಜಿಂದಾಲ್ ಅಲ್ಯುಮಿನಿಯಂ, ಗಾಲಿ ...ಜನಾರ್ದನ ರೆಡ್ಡಿ, ಡೀಕೆ, ಪೀಕೆ ಪೊನ್ನುರಾಜ್‌ರಂಥ ...ಕೋಡೆಕೋರರಷ್ಟೇ ಸಹಸ್ರಾರು ಕೋಟಿಗಳ ...ಒಡೆಯರಾಗುತ್ತಿದ್ದಾರೆಂದರೆ ಏನರ್ಥ?

ಗಣಿ ನಿರ್ದೇಶಕ ಶ್ರೀನಿವಾಸ್


... ಕರ್ನಾಟಕದ ಖನಿಜ ಸಂಪತ್ತು ಮತ್ತು ಅದರ ...ಲೂಟಿಗಾಗಿ ನಡೆಯುವ ಷಡ್ಯಂತ್ರಗಳು, ಲಾಬಿ, ಮಾಫಿಯಾ ...ಸಲತ್ತು ಮತ್ತು ಕಾನೂನು ಕಣ್ಣಾಮುಚ್ಚಾಲೆಯ ವಿವರಗಳು ...ಕ್ಕೂ ಭಯಾನಕ ಮತ್ತು ಕನ್ನಡಿಗರ ವಿವೇಚನೆಗೆ ...ಮೀರಿದ್ದು. ಸಿದ್ದು ಮುಖ್ಯಮಂತ್ರಿಯಾಗುತ್ತಾರೆಂದೋ, ...ಕುಮಾರಸ್ವಾಮಿ ಸರ್ಕಾರವಿದ್ದಿದ್ದರೆ ಇನ್ನೇನೋ ಲಾಭವಾಗು...ತ್ತಿತ್ತೆಂದೋ ಜಾತಿಯ ಮಟ್ಟಕ್ಕಷ್ಟೇ ತಲೆಕೆಡಿಸಿಕೊಳ್ಳುವ ...ನಿಗೆ ಸದ್ದಿಲ್ಲದೆ, ಯಾರ ಗಮನಕ್ಕೂ ಬಾರದೆ ಇಳಕಲ್ಲಿನ ...ಯಾವುದೋ ಬೆಟ್ಟದ ಸಂದಿಯ ಕಲ್ಲಿನ ಕ್ವಾರಿಯ ಲಾಭ, ...ವರ ಅಕ್ರಮ ಗಳಿಕೆಯ ಕಾರಸ್ಥಾನ ಅರ್ಥವಾಗುವುದಿಲ್ಲ.

... ಬಳ್ಳಾರಿಯ ಯಾವುದೋ ಕಾಡಿನ ಮೂಲೆಯಲ್ಲಿ ...ದೋಚಲ್ಪಟ್ಟ ಅದಿರಿನ ಲಾಭವೆಂಬುದು ಬಿಜೆಪಿಯಂಥ ...ದರುಳರ ಕೂಟವನ್ನು ಅಧಿಕಾರಸ್ಥರನ್ನಾಗಿ ಮಾಡುತ್ತದೆ. ...ಮಂತ್ರಿಯೊಬ್ಬನ ಸಮೇತ ಮುಖ್ಯಮಂತ್ರಿಯನ್ನೇ ...ಜೈಲುಪಾಲಾಗುವಂತೆ ಮಾಡುತ್ತದೆ. ಡೀಕೆಯಂಥ ...ಕಳ್ಳಗಳ್ಳನೊಬ್ಬ ಇಡೀ ಕಾಂಗ್ರೆಸ್ ಸರ್ಕಾರವನ್ನೇ ಬ್ಲಾಕ್‌ಮೇಲ್ ...ಮಾಡುತ್ತಾನೆಂದರೆ, ಬಲ್ಡೋಟಾ, ಜಿಂದಾಲ್ ಥರದ ಅದಿರು ...ಕಂಪೆನಿಗಳು ರಾಜ್ಯದ ಹಣೆಬರಹವನ್ನೇ ನಿರ್ಧರಿಸುವ ಮಟ್ಟಕ್ಕೆ ...ಬೆಳೆಯುತ್ತಾರೆಂದರೆ, ಬರೋಬ್ಬರಿ ಒಂದು ಡಜನ್ ಗಣಿಕಳ್ಳರು ...ಸ್ವತಃ ಶಾಸಕರಾಗಿ ಕೆಲವರು ಮಂತ್ರಿಗಳೂ ಆಗುತ್ತಾರೆ. ...ದು ಕನ್ನಡ ಜನತೆ ತಮ್ಮ ಖನಿಜ ಸಂಪತ್ತು ಮತ್ತು ...ನೈಸರ್ಗಿಕ ಸಂಪನ್ಮೂಲದ ಬಗ್ಗೆ ತಾಳಿರುವ ನಿರ್ಲಕ್ಷ ಮತ್ತು ...ಕಾಣಿಸಿಗೇಡಿತನದ ಪ್ರತಿಷ್ಠೆಯಷ್ಟೆ.

... ಇಂಥ ಅವ್ಯವಸ್ಥೆಯ ಲಾಭ ಕೇವಲ ಗ್ರಾನೈಟ್, ...ಸಿಮೆಂಟ್ ಅಥವಾ ಅದಿರು ಕಂಪೆನಿಗಳಿಗಷ್ಟೇ ಅಲ್ಲ; ಬಸಪ್ಪ ...ನಂಥ ಗಣಿ ಇಲಾಖೆಯ ನಿರ್ದೇಶಕರಿಗೂ ಆಗಿದೆ. ...ಯಾವ ಸರ್ಕಾರ, ಯಾವ ಗಣಿ ಇಲಾಖೆ ನಾಡಿನ ಖನಿಜ ...ಸಂಪತ್ತನ್ನು ರಕ್ಷಿಸುತ್ತದೆಯೆಂದು ನಾವೆಲ್ಲ ನಂಬಿದ್ದೇವೋ ...ವನ್ನು ಬಸಪ್ಪನ ನಂತರ ಸುಳ್ಳೆಂದು ಸಾಬೀತುಮಾಡಿದ ...ಮತ್ತೊಬ್ಬ ಐಎಎಸ್ ಖದೀಮನೇ ಹೆಚ್.ಆರ್. ...ಶ್ರೀನಿವಾಸ್.


ಪತ್ನಿ ಆತ್ಮಹತ್ಯೆ

... ಸದ್ಯ ಖನಿಜ ಮತ್ತು ಭೂವಿಜ್ಞಾನ ಇಲಾಖೆಯ ...ನಿರ್ದೇಶಕನಾಗಿ ಕಳೆದ ಐದು ವರ್ಷಗಳಿಂದಲೂ ಸದ್ದಿಲ್ಲದೇ ...ದೋಚುತ್ತಿರುವ ಶ್ರೀನಿವಾಸ್ ಮಾಡಿದ ಅನಾಚಾರಗಳು ...ಬದಿರದಲ್ಲ, ಬಿಜೆಪಿ ಆಳ್ವಿಕೆಯಲ್ಲಿ ಮುಖ್ಯಮಂತ್ರಿಗಳು ...ಬದಲಾದಂತೆಲ್ಲ ಯಡ್ಡಿ, ಸದಾನಂದಗೌಡ, ಶೆಟ್ಟರ್-...ಗೆ ಒಬ್ಬರಾದ ಮೇಲೊಬ್ಬರ ಹಿಡಿತಕೊಳಪಟ್ಟ ... ಇಲಾಖೆಯನ್ನು ಪರೋಕ್ಷವಾಗಿ ನಿಯಂತ್ರಿಸುತ್ತಿದ್ದದ್ದು ...ಮುಖ್ಯ ಕಾರ್ಯದರ್ಶಿ ಎಸ್.ವಿ. ರಂಗನಾಥ್. ಬಸಪ್ಪರೆಡ್ಡಿ ...ನ ಗಣಿ ಇಲಾಖೆ ನಿರ್ದೇಶಕನಾಗಿ ಬಂದ ಹೆಚ್.ಆರ್. ...ಶ್ರೀನಿವಾಸ್ ಮೂಲತಃ ಕರ್ನಾಟಕದವರಾದರೂ ...ಅಧಿಕಾರಿಯಾಗಿ ಬಿಹಾರ ಕೇಡರ್‌ನ ಐಎಎಸ್ ಅಧಿಕಾರಿ.



ಎಚ್.ಆರ್. ಶ್ರೀನಿವಾಸ್

ಬಿಹಾರ ಕೇಡರ್‌ನ ಐಎಎಸ್ ಓರ್ವನನ್ನು ನಿಯೋಜನೆ ಅಂದರೆ ಡೆಪ್ಯೂಟೇಷನ್ ಆಧಾರದ ಮೇಲೆ 2006ರಲ್ಲಿ ದೇವೇಗೌಡರು ಕರ್ನಾಟಕಕ್ಕೆ ಕರೆಸಿಕೊಂಡಿದ್ದಕ್ಕೂ ಕಾರಣವಿತ್ತು. ಈತ ದೇವೇಗೌಡರಿಗೆ ಪರಮಾಪ್ತರಾಗಿದ್ದ ಕರ್ನಾಟಕದ ಮತ್ತೊಬ್ಬ ಹಿರಿಯ ಐಎಎಸ್ ಅಧಿಕಾರಿ ಪ್ರಭಾಕರ್‌ಗೆ ಸಮೀಪದ ಸಂಬಂಧಿಯಾಗಿದ್ದ. 2006ರ ಹೊತ್ತಿಗೆ ಬಿಹಾರದ ಲಾಲೂ ಸರ್ಕಾರದಲ್ಲಿ ಈತ ಅಧಿಕಾರಿಯಾಗಿದ್ದಾಗಲೇ ಈತನ ಪತ್ನಿ ಸೀಮೆಎಣ್ಣೆ ಸುರಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು ಬಿಹಾರದಾದ್ಯಂತ ದೊಡ್ಡ ವಿವಾದವಾಗಿತ್ತು.



ಜಿಂದಾಲ್ ಕಂಪನಿಯ ಸಜ್ಜನ್ ಜಿಂದಾಲ್

ಇಂಥಾ ಹೆಚ್.ಆರ್. ಶ್ರೀನಿವಾಸ್ ಬಿಹಾರದಲ್ಲೆಲ್ಲೂ ಮುಖ ತೋರಿಸಲಾಗದ ಪರಿಸ್ಥಿತಿಯಲ್ಲಿರುವಾಗಲೇ ಕೈಹಿಡಿದ ದೇವೇಗೌಡರು ಲಾಲೂಗೊಂದು ಮಾತು ಹೇಳಿ ಕರ್ನಾಟಕಕ್ಕೆ ಹಾಕಿಸಿಕೊಂಡರು. ಬಂದು ಬಂದಿದ್ದೇ ಕೃಷಿ ಮಾರುಕಟ್ಟೆ ಮಂಡಳಿಗೆ ಎಂ.ಡಿ.ಯಾದ ಶ್ರೀನಿವಾಸ್ ಅಲ್ಲೂ ಕಾಮಗಾರಿ ಹಗರಣಕ್ಕೆ ಕೈಯಿಟ್ಟು ನೂರಾರು ಕೋಟಿ ಲೂಟಿಯ ಆರೋಪ ಹೊತ್ತುಕೊಂಡ. ಯಡ್ಡಿ ಮುಖ್ಯಮಂತ್ರಿಯಾಗು ತ್ತಿದ್ದಂತೆ ಮುಖ್ಯ ಕಾರ್ಯದರ್ಶಿ ಎಸ್.ವಿ. ರಂಗನಾಥ್‌ಗೆ ಬೆಣ್ಣೆ ತಿಕ್ಕಿಯೇ ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ವಕ್ಕರಿಸಿದವನು ಐದು ವರ್ಷಗಳಾದರೂ ಅಲ್ಲಾಡುತ್ತಿಲ್ಲ ವೆಂದರೆ, ಅದರ ಮರ್ಮ ಮತ್ತು ಕರ್ಮದ ಹಕೀಕತ್ತೇ ಬೇರೆಯಿದೆ.

ಮತ್ತೆ ಗಣಿ ಸಂತೆ


ಹಿಂದಿನಂತೆ ಈಗ ಕಬ್ಬಿಣದ ಅದಿರು ಲೂಟಿಯಾಗುತ್ತಿಲ್ಲ ವಾದರೂ ಈ ಹಿಂದೆ ದೋಚಿದ ಅದಿರಿನ ಲೆಕ್ಕವಿನ್ನೂ ಚುಕ್ತಾ ಆಗಿಲ್ಲ. ಕರ್ನಾಟಕದ ಗಣಿ ಲೂಟಿಗೆ ಸಂಬಂಧಪಟ್ಟಂತೆ ಸುಪ್ರೀಂಕೋರ್ಟಿನಲ್ಲಿ ಕೇಸಿದೆ. ಸಿಇಸಿ ಅಂದರೆ ಕೇಂದ್ರ ಉನ್ನತಾಧಿಕಾರ ಸಮಿತಿಯ ವರದಿಯ ಮೇರೆಗೆ ಸಿಬಿಐ ಜನಾರ್ದನ ರೆಡ್ಡಿಯನ್ನು ಜೈಲಿಗೆ ಹಾಕಿ ಇನ್ನೂ ಅನೇಕ ಗಣಿ ಕಳ್ಳರ ಬುಡಕ್ಕೆ ಕೈ ಇಟ್ಟಾಗಿದೆ. ನಡೆದ ಹಗಲು ದರೋಡೆಯ ಪಾಪದ ಫಲವಾಗೇ ಸುಪ್ರೀಂಕೋರ್ಟ್ ಬಳ್ಳಾರಿ ಸುತ್ತಮುತ್ತಲ 42 ಗಣಿ ಲೈಸೆನ್ಸುಗಳನ್ನು ರದ್ದುಪಡಿಸಿದೆ. ಈ ರೀತಿ ಅಕ್ರಮ ಗಣಿಗಾರಿಕೆಯ ಆರೋಪ ಹೊತ್ತು 'ಸಿ' ಕ್ಯಾಟಗರಿಗೆ ಸೇರ್ಪಡೆಯಾದ ಗಣಿ ಲೈಸನ್ಸುಗಳನ್ನು ಮತ್ತೆ ಹರಾಜು ಹಾಕುವುದು ಸದ್ಯ ಗಣಿ ಇಲಾಖೆಯಲ್ಲಿ ಗಂಟು ಕಳ್ಳರ ಸಂತೆ ಸೇರಿದಂತಾಗಿದೆ.



ಜಿಂದಾಲ್ ಸ್ಟೀಲ್‌ವರ್ಕ್ಸ್(JSW) ಕಂಪೆನಿ

ಡೀಕೆಯ ಲೂಟಿ ಕಾಯಲು ರೆಡ್ಡಿ ವೀರಣ್ಣ ಕೊಟ್ಟ 14 ಕೋಟಿ!

ಸುಪ್ರೀಂಕೋರ್ಟ್ ನಿರ್ದೇಶನದ ಮೇರೆಗೆ ಕರ್ನಾಟಕದ ಅಕ್ರಮ ಗಣಿಗಾರಿಕೆಯ ತನಿಖೆಗೆಂದೇ ಸ್ಥಾಪನೆಗೊಂಡ ಸಿಇಸಿ ಅಂದರೆ ಕೇಂದ್ರ ಉನ್ನತಾಧಿಕಾರ ಸಮಿತಿ ಎತ್ತಿಂದೆತ್ತ ಅಳೆದು ನೋಡಿದರೂ ಕಾಂಗ್ರೆಸ್ ಅಧಿಪತಿ ಡಿ.ಕೆ. ಶಿವಕುಮಾರ್‌ರ ಬಾಲಾಜಿ ಮಿನರಲ್ಸ್ ಕಂಪೆನಿಯನ್ನು ಕಪ್ಪು ಪಟ್ಟಿಗೆ ಸೇರಿಸಬೇಕಿತ್ತು.



ವಿಚಿತ್ರವೆಂಬಂತೆ ಡೀಕೆಯ ಕಂಪೆನಿ 'ಬಿ' ಕ್ಯಾಟಗರಿಗೆ ಸೇರ್ಪಡೆಯಾಗಿದೆ!

ಇದರರ್ಥ ಡೀಕೆಯ ಬಾಲಾಜಿ ಮಿನರಲ್ಸ್ ನ್ಯಾಯಬದ್ಧವಾಗೇ ಗ್ರಾನೈಟ್, ಅದಿರು ಇತ್ಯಾದಿ ಗಣಿಗಾರಿಕೆಯಲ್ಲಿ ತೊಡಗಿದೆ?

ಇವತ್ತು ಕನಕಪುರದ ಸುತ್ತಮುತ್ತಲ ಯಾವುದೇ ಕಾಡಿಗೆ ಕಾಲಿಟ್ಟರೂ ಡೀಕೆ ನಡೆಸುತ್ತಿರುವ ಗ್ರಾನೈಟ್ ಲೂಟಿ ಎಂಥ ದಡ್ಡನಿಗಾದರೂ ಗೊತ್ತಾಗಲೇಬೇಕು. ಒಂದಲ್ಲ ಎರಡಲ್ಲ ಬರೋಬ್ಬರಿ ಒಂದು ಡಜನ್ ಅಕ್ರಮ ಕ್ವಾರಿಗಳ ಮೂಲಕ ಗ್ರಾನೈಟ್ ದೋಚುತ್ತಿರುವ ಡೀಕೆಯ ಬಾಲಾಜಿ ಮಿನರಲ್ಸ್‌ನ ಬಾರಾಖೂನ್ ಮಾಫಿ ಮಾಡಿದಂತೆ ಸಿಇಸಿಗೆ ನಕಲಿ ದಾಖಲೆ ಕೊಟ್ಟು ದಿಕ್ಕು ತಪ್ಪಿಸಿದ್ದು ಇದೇ ಗಣಿ ನಿರ್ದೇಶಕ ಶ್ರೀನಿವಾಸ್!

ಏಕೆಂದರೆ ಡೀಕೆಯ ಬಾಲಾಜಿ ಮಿನರಲ್ಸ್‌ನ ಪಾಲುದಾರನಾಗಿರುವವನು ಕುಖ್ಯಾತ ಸೆಲಗಳ್ಳ ಮತ್ತು ಅದಿರು ಚೋರ ರೆಡ್ಡಿ ವೀರಣ್ಣ!

ಅಧಿಕಾರದಲ್ಲಿ ಬಿಜೆಪಿಯಿರಲಿ, ಕಾಂಗ್ರೆಸ್ಸೇ ಇರಲಿ ಸರ್ಕಾರದ ಘಟಾನುಘಟಿ ಮಂತ್ರಿಗಳನ್ನೇ ಪಾಲುದಾರರನ್ನಾಗಿ ಮಾಡಿಕೊಂಡು ದೋಚುವ ಕಲೆ ರೆಡ್ಡಿ ವೀರಣ್ಣನಿಗೆ ರಕ್ತಗತವಾಗಿದೆ. ಯಡ್ಡಿಯನ್ನೂ ಬಿಡದೆ ಬುಟ್ಟಿಗೆ ಬೀಳಿಸಿಕೊಂಡಿದ್ದ ರೆಡ್ಡಿ ವೀರಣ್ಣ ತನ್ನ ಪಾರ್ಟ್‌ನರ್ ಡೀಕೆಯ ಕಂಪೆನಿಯನ್ನು 'ಬಿ' ಕ್ಯಾಟಗರಿಗೆ ತರಲು ಗಣಿ ನಿರ್ದೇಶಕ ಶ್ರೀನಿವಾಸ್‌ನ ಬಾಯಿಗೆ ಹಾಕಿದ್ದು ಬರೋಬ್ಬರಿ 14 ಕೋಟಿ ರೂಪಾಯಿಗಳು!

ಅಕ್ರಮ ಗಣಿಗಾರಿಕೆ ಪತ್ತೆಗೆಂದು ಸ್ಥಾಪನೆಗೊಂಡ ಸಿಇಸಿಯನ್ನೇ ಯಾಮಾರಿಸಿದ ಶ್ರೀನಿವಾಸ್ ಕೈಚಳಕಕ್ಕೆ ಇದಕ್ಕಿಂತ ಬೇಕೆ?

ಆದರೆ ಇದೆಲ್ಲಕ್ಕೂ ಮೊದಲೇ ಗಣಿ ಇಲಾಖೆ ಕರ್ನಾಟಕದ ಅತಿ ದೊಡ್ಡ ಅದಿರು ಕಳ್ಳ ಸಂಸ್ಥೆಯಾದ ಜಿಂದಾಲ್ ಸ್ಟೀಲ್‌ವರ್ಕ್ಸ್ ಅಂದರೆ JSW ಕಂಪೆನಿಯ ಪಾಲಾಗಿದೆ!

ಹೆಚ್.ಆರ್. ಶ್ರೀನಿವಾಸ್ ಖನಿಜ ಮತ್ತು ಭೂವಿಜ್ಞಾನ ಇಲಾಖೆಯ ನಿರ್ದೇಶಕನಾಗಿ ಕಾಲಿಟ್ಟ ಗಳಿಗೆಯಿಂದಲೇ ಹೆಡೆಯೆತ್ತಿದ ಅನಾಚಾರ ಈಗ ಕನ್ನಡ ತಾಯಿಯ ಗರ್ಭದ ಕ್ಯಾನ್ಸರ್ ರೂಪಕ್ಕೆ ತಿರುಗಿದೆ. ಬೇಕಾಬಿಟ್ಟಿ ಮರ ಲೂಟಿ, ಕಂಡಕಂಡ ಬೆಟ್ಟಗುಡ್ಡಗಳಲ್ಲೆಲ್ಲ ಜಲ್ಲಿ ಕ್ರಷರ್‌ಗಳ ಅಟ್ಟಹಾಸ, ಸುಣ್ಣದ ಕಲ್ಲು, ಬಾಕ್ಸೈಟ್ ನಿಕ್ಷೇಪಗಳ ಬಿಕರಿ, ಗ್ರಾನೈಟ್ ಲೂಟಿಕೋರರಿಗೆ ರತ್ನ ಗಂಬಳಿ- ಹೀಗೆ ನಾಡಿನ ನೈಸರ್ಗಿಕ ಸಂಪತ್ತಿಗೆ ಮಹಾ ಕಂಟಕನಾಗಿ ಅವತರಿಸಿದ ಶ್ರೀನಿವಾಸ್ ವಿರುದ್ಧ ಗಣಿ ಇಲಾಖೆಯ ನಿಷ್ಠಾವಂತ ಅಧಿಕಾರಿಗಳೆಲ್ಲ ಸಾರಾಸಗಟಾಗಿ ತಿರುಗಿ ಬಿದ್ದಿದ್ದಾರೆ.

ಐನೂರು ಕೋಟಿಯ ಡೀಲ್

ಅಕ್ರಮ ಗಣಿಗಾರಿಕೆಯ ಆರೋಪ ಹೊತ್ತ 'ಸಿ' ಕ್ಯಾಟಗರಿ ಕಂಪೆನಿಗಳಲ್ಲದೆ 'ಎ' ಮತ್ತು 'ಬಿ' ಕ್ಯಾಟಗರಿಯ ಅದಿರು ಕಂಪೆನಿಗಳು ಅಂದರೆ ಕಾನೂನು ಬದ್ಧವಾಗಿ ಪರವಾನಗಿ ಪಡೆದವರು ಮತ್ತೆ ಗಣಿಗಾರಿಕೆ ಆರಂಭಿಸಲು ಮೊನ್ನೆ ಏಪ್ರಿಲ್‌ನಲ್ಲಿ ಸುಪ್ರೀಂಕೋರ್ಟ್ ಸಮ್ಮತಿಸಿದೆ. ಇಂಥ ನೂರಕ್ಕೂ ಅಧಿಕವಿರುವ ವಿವರ ಬಿ ಕ್ಯಾಟಗರಿ ಲೈಸನ್ಸಿಗಳ ಪೈಕಿ ಜಿಂದಾಲ್, ಬಲ್ಡೋಟಾ, ಅನಿಲ್ ಲಾಡ್, ಡೆಕ್ಕನ್ ಮೈನಿಂಗ್ ಕಂಪೆನಿ, ಎಸ್. ರತ್ನಯ್ಯ, ಜಂತಕಲ್ ಎಂಟರ್‌ಪ್ರೈಸಸ್, ಶೇಕ್ ಮೆಹಬೂಬ್ ಟ್ರಾನ್ಸ್‌ಪೋರ್ಟ್, ಹಿಂದ್ ಟ್ರೇಡರ್ಸ್ ಇತ್ಯಾದಿ ಕುಖ್ಯಾತ ಅದಿರು ಕಳ್ಳರಿದ್ದಾರೆ. ಇಂಥ ಪ್ರತಿ ಮೈನಿಂಗ್ ಕಂಪೆನಿಗಳೂ ಅವರವರ ಗಣಿ ಪ್ರದೇಶದಲ್ಲಿ ನಿಯಮಾನುಸಾರವಾಗಿ ಕನಿಷ್ಠ ಐವತ್ತು ಕೋಟಿಯಿಂದ ನೂರು ಕೋಟಿಯ ತನಕ ಕಪ್ಪ ಸಲ್ಲಿಸಲೇಬೇಕೆಂದು ಶ್ರೀನಿವಾಸ್ ಫರ್ಮಾನು ಹೊರಡಿಸಿದ್ದಾನೆ.

ಕಮ್ಮಿಯೆಂದರೂ ಇದೊಂದೇ ಡೀಲಿನಿಂದ ಶ್ರೀನಿವಾಸ್ ಕೈ ಸೇರುವ ಮೊತ್ತ ಐನೂರು ಕೋಟಿ!

ಕರ್ನಾಟಕದ ಅದಿರು ಸಂಪತ್ತಿನ ಲೂಟಿಗೆ ಸಂಬಂಧಪಟ್ಟಂತೆ ಸದ್ಯ ಶ್ರೀನಿವಾಸ್ ಪರವಾಗಿ ಪ್ರತಿ ಅದಿರು ಕಂಪೆನಿಯಿಂದ ಈ ಪಾಟಿ ಮೊತ್ತದ ಸಂಗ್ರಹಣೆಯ ನೇತೃತ್ವ ವಹಿಸಿರುವವನು ತಮಿಳುನಾಡು ಮೂಲದ ಕುಖ್ಯಾತ ಅದಿರುಕಳ್ಳ ಪೂ ಬಾಲನ್!

ಈ ಹಿಂದೆ ಅನಿಲ್ ಲಾಡ್ ಪರ ಡೀಲ್ ಮಾಸ್ಟರಿಕೆ ಮಾಡಿಕೊಂಡಿದ್ದ ಪೂ ಬಾಲನ್ ಸದ್ಯ ಜಿಂದಾಲ್ ಸ್ಟೀಲ್ ಧಣಿ ಸಜ್ಜನ್ ಜಿಂದಾಲ್‌ನ ಪಕ್ಕಾ ಛೇಲಾ ಮತ್ತು JSW ಕಂಪೆನಿಯ ಫ್ರಂಟ್‌ಮನ್. ಈತನ ಜೊತೆ ರಾಮಚಂದ್ರರೆಡ್ಡಿ ಎಂಬ ಜ್ಯೋತಿಷಿ ಕೋಟಿ ಕಲೆಕ್ಷನ್ನಿಗೆ ಕೈ ಜೋಡಿಸಿದ್ದಾನೆ. ಈ ರಾಮಚಂದ್ರರೆಡ್ಡಿ ಗಣಿ ನಿರ್ದೇಶಕ ಶ್ರೀನಿವಾಸ್‌ನ ಬ್ಲಾಕ್‌ಮನಿ ಮೇಂಟೇನರ್!

ಇಲ್ಲಿಗೆ ತಿಂಗಳ ಹಿಂದಷ್ಟೇ 3 ಕೋಟಿ 20 ಲಕ್ಷ ಟನ್ನುಗಳಷ್ಟು ಕಬ್ಬಿಣದ ಅದಿರನ್ನು ಇಲಾಖೆವತಿಯಿಂದಲೇ ಹರಾಜು ಹಾಕಲಾಯ್ತು. ಅದು ಈ ಹಿಂದೆ ಅಕ್ರಮ ಗಣಿಗಾರಿಕೆಯ ಆರೋಪದ ಮೇಲೆ ವಿವಿಧ ಗಣಿಕಳ್ಳರಿಂದ ಸರ್ಕಾರ ಮುಟ್ಟುಗೋಲು ಹಾಕಿಕೊಂಡಿದ್ದ ಅದಿರಾಗಿತ್ತು. ಸುಪ್ರೀಂಕೋರ್ಟ್ ಆದೇಶ ಪ್ರಕಾರವೇ ಹರಾಜಾದ 3.20 ಕೋಟಿ ಟನ್ನುಗಳಷ್ಟು ಅದಿರಿನ ಶೇ. 80ರಷ್ಟನ್ನು ಜಿಂದಾಲ್ ಸ್ಟೀಲ್ಸ್ ಧಣಿ ಸಜ್ಜನ್ ಜಿಂದಾಲ್‌ನ ಪಾಲಾಗುವಂತೆ ಗಣಿ ನಿರ್ದೇಶಕ ಶ್ರೀನಿವಾಸನೇ ನೋಡಿಕೊಂಡಿದ್ದ. ಅದಕ್ಕೆಂದು ಮಿಕ್ಕೆಲ್ಲಾ ಬಿಡ್ದುದಾರರನ್ನು ದಿಕ್ಕು ತಪ್ಪಿಸಲಾಯ್ತು. ಕಂಪ್ಯೂಟರ್‌ನ ಸಾಫ್ಟ್‌ವೇರ್‌ಅನ್ನೇ ಹಾಳುಗೆಡವಲಾಯ್ತು. ಹರಾಜಿನಲ್ಲಿದ್ದ ಬೇರೆಲ್ಲರನ್ನೂ ಬೆದರಿಸಲಾಯ್ತು.

ಜಿಂದಾಲ್ ಖದೀಮರಿಗೆ ಒತ್ತೆ

ಏಕೆಂದರೆ ಪ್ರತಿ ಟನ್ ಅದಿರಿಗೆ ಜಿಂದಾಲ್ ಖದೀಮರಿಂದ ಶ್ರೀನಿವಾಸ್ ಐವತ್ತು ರೂಪಾಯಿಯಂತೆ ವಸೂಲಿ ಮಾಡಿಕೊಂಡಿದ್ದ. ಆದರೆ ಇದೆಲ್ಲಕ್ಕಿಂತಲೂ ರಾಜ್ಯ ಬೊಕ್ಕಸಕ್ಕೆ ಶ್ರೀನಿವಾಸ್ ಇನ್ನೊಂದು ದ್ರೋಹವೆಸಗಿದ್ದ. ಅದು ಅಪ್ಪಟ 60 ಗ್ರೇಡ್ ಗುಣಮಟ್ಟವಿದ್ದ ಅದಿರನ್ನು ಕಳಪೆ ಗುಣಮಟ್ಟದ ಅದಿರೆಂದು ಕತೆ ಕಟ್ಟಿದ್ದು.

ಅದಿರು ಮಾರುಕಟ್ಟೆಯಲ್ಲಿ ಟನ್ ಅಂಗ್ರೇಡ್‌ನ ಮಾರುಕಟ್ಟೆ ಮೌಲ್ಯವೇ ಏಳರಿಂದ ಒಂಬತ್ತು ಸಾವಿರದಷ್ಟಿದೆ.

ಅದಕ್ಕಿಂತ ಕಮ್ಮಿ ಗ್ರೇಡಿನದಾದರೆ ನಾಲ್ಕೂವರೆ ಸಾವಿರದಿಂದ ಐದು ಸಾವಿರ ರೂಪಾಯಿಗಳ ತನಕ ಬೆಲೆ ಬಾಳುತ್ತದೆ. ಆದರೆ ಗಣಿ ನಿರ್ದೇಶಕ ಶ್ರೀನಿವಾಸ್ ಮತ್ತು ಜಿಂದಾಲ್ ಖದೀಮರ ಷಡ್ಯಂತ್ರದ ಫಲವಾಗಿ ಬೇರೆಲ್ಲ ಬಿಡ್ದುದಾರರನ್ನು ಬೆದರಿಸಿ ಟನ್ನಿಗೆ 2400 ರೂಪಾಯಿಯಂತೆ 3 ಕೋಟಿ ಟನ್ನುಗಳಷ್ಟು ಅದಿರನ್ನು ಜಿಂದಾಲ್ ಪಾಲು ಮಾಡಲಾಯ್ತು.


ಇದೊಂದೇ ಹಗರಣದಿಂದಾಗಿ ಸರಿಸುಮಾರು 1500 ಕೋಟಿ ರೂಪಾಯಿಗಳಷ್ಟು ಹಣ ರಾಜ್ಯ ಬೊಕ್ಕಸದ ಕೈ ತಪ್ಪಿತಾದರೂ ಇದಕ್ಕೆಂದು ಶ್ರೀನಿವಾಸ್ ಹೊಡೆದ ಲಂಚದ ಮೊತ್ತವೇ 150 ಕೋಟಿಯಷ್ಟಾಗಿತ್ತು!


ಗಣಿ ಇಲಾಖೆಯ ಸಣ್ಣದೊಂದು ಹರಾಜು ಕೂಡ ಹೇಗೆ ಸಾವಿರ, ನೂರಾರು ಕೋಟಿಯ ಕರ್ಮಕಾಂಡವಾಗುತ್ತದೆ ಎಂಬುದಕ್ಕೆ ಜಿಂದಾಲ್- ಶ್ರೀನಿವಾಸ್ ಜಂಟಿ ದಕಾಯಿತಿಯ ಈ ಒಂದೇ ಪ್ರಕರಣ ಸಾಕು.

ಹೆಚ್ಚೂಕಮ್ಮಿ ಐದು ವರ್ಷಗಳ ಕಾಲ ಗಣಿ ಇಲಾಖೆಯನ್ನಾಳುತ್ತಿರುವ ಹೆಚ್.ಆರ್. ಶ್ರೀನಿವಾಸ್‌ನ ಅನಾಚಾರಗಳ ವಿರುದ್ಧ ಮುಖ್ಯಮಂತ್ರಿ ತನಕ ದೂರುಗಳ ಮೇಲೆ ದೂರು ಹೋದರೂ ಆತನಿಗೆ ಶಿಕ್ಷೆಯಾಗುತ್ತಿಲ್ಲವೆಂದರೆ ಜಿಂದಾಲ್ ದೊರೆಗಳ ಕೈ ಇನ್ನೆಷ್ಟು ಉದ್ದವಿರಬೇಕು? ಕರ್ನಾಟಕದ ನೈಸರ್ಗಿಕ ಸಂಪತ್ತನ್ನು ಕಾಪಾಡಲು ಮುಖ್ಯಮಂತ್ರಿ ಸಿದ್ದು ಕೈಯಲ್ಲೂ ಸಾಧ್ಯವಿಲ್ಲವೇ?

● ರಾ.ಸೋಮನಾಥ್


ಯೋಗೀಶ್ ಪೂಜಾರಿ


ಆನಂದ ಪಾಣಾರ


ಹರಿಪ್ರಸಾದ್ ಪೂಜಾರಿ


ಗೃಹಸಚಿವ ಜಾರ್ಜ್


ಮಣಿಪಾಲ: ರೇಪ್ ಮುಚ್ಚಿಹಾಕಲು 'ಮಾಹೆ' ಮಸಲತ್ತು!!

ಮಣಿಪಾಲ ಪೈ ಮಾಮಾಗಳ ಶಿಕ್ಷಣೋದ್ಯಮ ಸಾಮ್ರಾಜ್ಯದಲ್ಲಾದ ಮಾನಿನಿ ಮಾನಭಂಗ ದೃಢಪಟ್ಟಿದೆ! ಇದೊಂದು ಪಕ್ಕಾ ಸಾಮೂಹಿಕ ಅತ್ಯಾಚಾರವೆಂದು ವೈದ್ಯಕೀಯ ವರದಿ ನಿಸ್ಸಂಶಯವಾಗಿ ಶರಾ ಬರೆದಿದೆ. ಆದರೆ 'ಮಾಹೆ' (ಮಣಿಪಾಲ ಯುನಿವರ್ಸಿಟಿ) ಮಹಾಮಹಿಮರು ಇಡೀ ಪ್ರಕರಣದ ದಾರಿ ತಪ್ಪಿಸಲು ಸ್ಕೆಚ್ ಹಾಕಿಕೊಂಡು ಕಾರ್ಯಾಚರಣೆಗೆ ಇಳಿದಿದ್ದಾರೆ. ಸಂತ್ರಸ್ತ ವಿದ್ಯಾರ್ಥಿನಿಯನ್ನು ಪೈ ಮಾಮಾಗಳ ಪಾರುಪತ್ಯದ ಕೆಎಂಸಿ ಆಸ್ಪತ್ರೆಗೆ ಅಡ್ಮಿಟ್ ಮಾಡಿರುವುದು ಮಾಹೆ ಬಳಗದ ಖಳರ ಕಳ್ಳಾಟಕ್ಕೆ ಅನುಕೂಲ ಕಲ್ಪಿಸಿಬಿಟ್ಟಿದೆ!!

ಈಗ ಸಿಕ್ಕಿ ಬಿದ್ದಿರುವ ರೇಪಿಸ್ಟ್ ಕಿರಾತಕತ್ರಯರು ಮಣಿಪಾಲ ಪರಿಸರದ ಆಚೀಚೆಯವರು. ಯೋಗೀಶ್ ಪೂಜಾರಿ, ಹರಿಪ್ರಸಾದ್ ಪೂಜಾರಿ ಮತ್ತು ಆನಂದ ಪಾಣಾರ ಅಂದು ರಾತ್ರಿ ಕಂಠಪೂರ್ತಿ ಹೆಂಡ ಕುಡಿದು ಮಾಹೆ ಕ್ಯಾಂಪಸ್‌ಗೊಂದು ಜಾಲಿ ರೌಂಡ್ ಹಾಕಲೆಂದು ತಮ್ಮ ರಿಕ್ಷಾದಲ್ಲಿ ಹೋಗಿದ್ದರು. ಅರೆಬರೆ ಬಟ್ಟೆಯ ಮದನಾರಿಯರು ಕ್ಯಾಂಪಸ್‌ನಲ್ಲಿ ಕಾಣುತ್ತಾರೆಂಬ ಸೆಳೆತ ಅತ್ತ ಅವರನ್ನು ಎಳೆದೊಯ್ದಿತ್ತು, ಆದರೆ ಮರುದಿನದ ಪರೀಕ್ಷೆಗೆಂದು ಕಾಲೇಜು ಲೈಬ್ರರಿಯಲ್ಲಿ ಕುಳಿತು ನಡುರಾತ್ರಿವರೆಗೆ ತಯಾರಿ ನಡೆಸಿ ಹಾಸ್ಟೆಲ್ ಕಡೆ ಹೋಗುತ್ತಿದ್ದ ಆ ಒಂಟಿ ಹುಡುಗಿ ಈ ಮದೋನ್ಮತ್ತರ ಕಣ್ಣಿಗೆ ಬಿದ್ದಿದ್ದಾಳೆ. ತಕ್ಷಣ ರಿಕ್ಷಾ ನಿಲ್ಲಿಸಿ ಆಕೆಯನ್ನು ಒಳಕ್ಕೆಳೆದುಕೊಂಡು ಸೀದಾ ಈಶ್ವರನಗರದ ಪಾಳು ಬಿದ್ದ ಮನೆ ಕಾಂಪೌಂಡ್ ಒಳಗೆ ಕರೆದೊಯ್ದು ಅತ್ಯಾಚಾರ ಮಾಡಿದ್ದಾರೆ. ಅಲ್ಲಿಂದ ಅರ್ತಾಡಿ-ಮದಗ ಕಾಡಿಗೆ ಕರೆದೊಯ್ದು ಹಿಂಸಾರತಿ ನಡೆಸಿದ್ದಾರೆ.

ತುಳುವಿನಲ್ಲಿ ಮಾತಾಡುತ್ತಿದ್ದ ಪಾತಕಿಗಳು ಒಂದು ಹಂತದಲ್ಲಿ ಆಕೆಯನ್ನು ಕೊಲೆ ಮಾಡುವ ಯೋಚನೆಯೂ ಮಾಡಿದ್ದರು. 'ಮರ್ಡರ್' ಎಂಬ ಶಬ್ದ ಆಕೆಗೆ ಅರ್ಥವಾಗಿದೆ. ಇನ್ನೇನು ತನ್ನನ್ನು ಕೊಂದು ಹಾಕುತ್ತಾರೆಂದು ಆಕೆ ವಿಧಿಯಿಲ್ಲದೆ ಅತ್ಯಾಚಾರ ಸಹಿಸಿಕೊಂಡಿದ್ದಾಳೆ. ಆಕೆ 'ತಣ್ಣಗೆ' ಆದದ್ದು ಕಂಡು ಈಕೆಯಿಂದ ತಮಗೆ ಡೇಂಜರ್ ಇಲ್ಲವೆಂದು ರೇಪಿಸ್ಟ್‌ಗಳು ಭಾವಿಸಿದ್ದಾರೆ. ಹಾಗಾಗಿ ಆಕೆಯನ್ನು ಪುನಃ ಹಾಸ್ಟೆಲ್ ಬಳಿಯ ಕ್ಯಾಂಪಸ್‌ಗೆ ತಂದುಬಿಟ್ಟಿದ್ದಾರೆ. ಅತ್ಯಾಚಾರಿಗಳು ಭಜರಂಗದಳದಲ್ಲಿ ಪಳಗಿದ ಪಾಪಿಗಳು. ಯೋಗೀಶ್ ಪೂಜಾರಿ ಪಕ್ಕಾ ಭಜರಂಗಿ. ಆದರೆ ಅಲ್ಲಿ ಏನೂ ಗಿಟ್ಟದಿದ್ದಾಗ ಚೆಡ್ಡಿ ಗ್ಯಾಂಗ್ ಬಿಟ್ಟು ಕಾಂಗ್ರೆಸ್ ಪಡೆ ಸೇರಿಕೊಂಡಿದ್ದ. ಈ ರೌಡಿ ಶೀಟರ್ ಮೇಲೆ ಆರೆಂಟು ಕೇಸ್‌ಗಳಿವೆ. ಆಮ್ಲೆಟ್ ಯೋಗೀಶನಂತೆ ಆತನ ಸಹಚರರೂ ಘಟಿಂಗರೇ.

ಯಾವಾಗ ಆ ಹುಡುಗಿ ಜೀವಂತ ಶವವಾಗಿ ಕೆಎಂಸಿ ಆಸ್ಪತ್ರೆ ಸೇರಿಕೊಂಡಳೋ ಆ ಕ್ಷಣದಲ್ಲೇ ಮಾಹೆಯ ದೊರೆ ಡಾ. ರಾಮದಾಸ್ ಪೈ, ಉಪ ಕುಲಪತಿ ಬಳ್ಳಾಲ್ ಆದಿಯಾಗಿ ಸಮಸ್ತ ಪೈ ಪರಿವಾರ ಕೇಸ್ ಮುಚ್ಚಿಹಾಕಲು ಹವಣಿಸಲಾರಂಭಿಸಿದೆ! ಪೈ ರಿಪಬ್ಲಿಕ್‌ನ ಎಲ್ಲ ಅಡೆ-ತಡೆ ನುಸುಳಿ ಅಚಾನಕ್ ಈ ರೇಪ್ ಜಗಜ್ಜಾಹೀರಾಗಿತ್ತು.



ದೇಶ-ವಿದೇಶದ ಸುಮಾರು 20 ಸಾವಿರ ವಿದ್ಯಾರ್ಥಿಗಳಿರುವ ಮಾಹೆ ಮಹಿಮೆ ಇಡೀ ಜಗತ್ತಿಗೆ ಜಗಜ್ಜಾಹೀರಾಗುತ್ತಿದ್ದಂತೆಯೇ ಪೈ ಬಳಗ ಬೆಚ್ಚಿಬಿತ್ತು! ಡ್ಯಾಮೇಜ್ ಕಂಟ್ರೋಲ್‌ಗೆ ತಂತ್ರ ಹೆಣೆಯಿತು. ಮೊದಲು ಮಾಡಿದ್ದು, ಸಂತ್ರಸ್ತ ಹುಡುಗಿಯಿಂದ ಅಧಿಕೃತ ಪೊಲೀಸ್ ಕಂಪ್ಲೆಂಟು ಆಗದಂತೆ ನೋಡಿಕೊಂಡಿದ್ದು! ಆಕೆಯ ಪಾಲಕರು ಹೊರಗೆಲ್ಲೂ ಕಾಣಿಸಿಕೊಳ್ಳದಂತೆ-ಪೊಲೀಸರಿಗೆ ಸಹಕರಿಸುವಂತೆ ಮಾಡಿದರು ಮಾಹೆ ಆಡಳಿತಗಾರರು. ಸಂತ್ರಸ್ತೆಯನ್ನು ರಾಜ್ಯದ ಗೃಹ ಮಂತ್ರಿ ಜಾರ್ಜ್ ಒಬ್ಬರ ಬಿಟ್ಟು ಇನ್ಯಾರೂ ಭೇಟಿಯಾಗದಂತೆ ಯಶಸ್ವಿಯಾಗಿ ತಡೆಯೊಡ್ಡಿದರು. "ದೈಹಿಕ- ಮಾನಸಿಕವಾಗಿ ಜರ್ಜರಿತವಾದ ಹುಡುಗಿ ಯಾರನ್ನೂ ನೋಡುವ- ಮಾತಾಡಿಸುವ ಮನಸ್ಥಿತಿಯಲ್ಲಿಲ್ಲ" ಎಂಬ ಸ್ಲೋಗನ್ ಪೈ ಫ್ಯಾಮಿಲಿ ಒಡೆತನದ ಕೆಎಂಸಿ ಆಸ್ಪತ್ರೆಯ ವೈದ್ಯರು ಹೇಳುತ್ತ ಬಂದರು.

ರೇಪ್ ಎಕ್ಸ್‌ಪೋಸ್ ಆದಾಗ ಮೊದಲು ಪೈ ಪರಿವಾರಕ್ಕೆ ಸಿಟ್ಟು ಬಂದಿದ್ದು ಪೊಲೀಸರಿಗೆ ಹುಡುಗಿ ಅಪಹರಣದ ಮಾಹಿತಿ ನೀಡಿದ ಲೈಬ್ರರಿ ವಾಚ್‌ಮನ್ ಮೇಲೆ. ಆತ ತನ್ನ ಸೆಕ್ಯೂರಿಟಿ ವಿಭಾಗದ ಮೇಲಧಿಕಾರಿಗೆ ಕಂಪ್ಲೇಂಟು ಮಾಡೋದು ಬಿಟ್ಟು ಪೊಲೀಸರಿಗೆ ಏಕೆ ಸುದ್ದಿ ನೀಡಿದ?! ಎಂಬ ಆಕ್ರೋಶದಲ್ಲಿ ಮಾಹೆ ಭದ್ರತಾ ದಳದ ಮುಖ್ಯಸ್ಥ ಪ್ರವೀಣ ಶೆಟ್ಟಿ ಮೇಲೆ 'ಆಕ್ಷನ್' ನಡೆಯಿತು. ಆತನನ್ನು ಕೆಲಸದಿಂದ ರಾತ್ರೋರಾತ್ರಿ ಒದ್ದು ಓಡಿಸಿದ ಮಾಹೆ ಆಡಳಿತ ನಂತರ ಅದಕ್ಕೊಂದು ಕತೆ ಕಟ್ಟಿತು. 'ನೈತಿಕ ಹೊಣೆ ಹೊತ್ತು ಸೆಕ್ಯೂರಿಟಿ ಹೆಡ್' ರಾಜಿನಾಮೆ ಕೊಟ್ಟಿದ್ದಾರೆಂದು ಮಾಹೆ ಬುಲೆಟಿನ್ ಹೊರಡಿಸಿತು!!

ಲಾಗಾಯ್ತಿನಿಂದ ಮಣಿಪಾಲ ಪೈ ಮಾಮಾಗಳ ಮರ್ಜಿ-ಮುಲಾಜಿನಲ್ಲಿ ಡ್ಯೂಟಿ ಮಾಡುತ್ತ ಬಂದಿರುವ ಮಣಿಪಾಲ ಮತ್ತು ಉಡುಪಿ ಜಿಲ್ಲಾ ಪೊಲೀಸರಿಗೆ ಈ ರೇಪ್‌ನ ಸಿಕ್ಕುಗಳನ್ನು ಬಿಡಿಸುವುದು 'ಅನಿವಾರ್ಯ ಕರ್ಮ'ದಂತಾಗಿತ್ತು, ಪೊಲೀಸರು ಮುಖ ಉಳಿಸಿಕೊಳ್ಳಲು ಸಂತ್ರಸ್ತ ಹುಡುಗಿಯಿಂದ ಸ್ಟೇಟ್‌ಮೆಂಟ್ ಪಡೆಯಲು ತಿಣುಕಾಡಬೇಕಾಯಿತು.

ಅತ್ಯಾಚಾರ ಕೇಸ್ ಹಳಿ ಮೇಲೆ ಬರಬೇಕೆಂದಿದ್ದರೆ, ರೇಪಿಸ್ಟ್‌ಗಳಿಗೆ ತಕ್ಕ ಶಾಸ್ತಿಯಾಗಬೇಕೆಂದಿದ್ದರೆ ಸಂತ್ರಸ್ತೆಯ ಹೇಳಿಕೆ- ದೂರು ಅತೀ ಅವಶ್ಯ-ಅನಿವಾರ್ಯ. ಆದರೆ ಆ ಹುಡುಗಿ ಅಥವಾ ಆಕೆಯ ಪಾಲಕರು ಏನು ಮಾಡಿದರೂ ದೂರು ನೀಡಲು ಸಿದ್ಧರಾಗಲೇ ಇಲ್ಲ, ಪೈ ಮಾಫಿಯಾದವರು ತಮ್ಮ ಕ್ಯಾಪಿಟೇಷನ್ ಬಿಸಿನೆಸ್ ಮತ್ತು ಒಣ ಪ್ರತಿಷ್ಠೆಗೆ ಡ್ಯಾಮೇಜ್ ಆಗದಂತೆ ಹುಡುಗಿ ಮತ್ತವಳ ಪಾಲಕರು ಹೇಳಿಕೆ ಕೊಡುತ್ತಾರೆಂದು ಖಾತ್ರಿಯಾದ ಬಳಿಕವೇ ಪೊಲೀಸ್ ತನಿಖೆಗೆ ಸಣ್ಣದೊಂದು ಅವಕಾಶ ಕಲ್ಪಿಸಿದ್ದಾರೆ ಬೇರೆ ದಾರಿಯಿಲ್ಲದೆ.

ಆದರೆ ನೇರವಾಗಿ ಪೊಲೀಸರು ಹುಡುಗಿ ಜತೆ ಮಾತಾಡುವ ಸನ್ನಿವೇಶ ನಿರ್ಮಾಣವೇನೂ ಮಾಡಿಲ್ಲ ಮಾಹೆ ಬಾಸ್‌ಗಳು. 'ಹುಡುಗಿ ಕೇಸ್‌ಗೆ ಸಹಕರಿಸಲು ಸಿದ್ಧಳಾಗಿದ್ದಾಳೆ' ಎಂಬ ಹೇಳಿಕೆ ಪೊಲೀಸರು ಈಗ ಕೊಟ್ಟಿದ್ದಾರೆ. ಆದರೆ ಒಂಥರಾ ಒತ್ತೆಯಾಳಂತಾಗಿರುವ ಆಕೆ ಕೊಡುವ ಹೇಳಿಕೆ ಮಾಹೆ 'ಖ್ಯಾತಿ'ಗೆ ಕಳಂಕ ಬರದಂತೆಯೇ ಇರುತ್ತದೆಂದು ಯಾರು ಬೇಕಿದ್ದರೂ ಊಹಿಸಬಹುದು. ಆಕೆ ಕೇರಳದ ತ್ರಿಶ್ಯೂರ್‌ನ ಮರ್ಯಾದಸ್ಥ-ಸಂಪ್ರದಾಯಸ್ಥ ಮನೆತನದ ಹುಡುಗಿ. ಆಕೆಗಿನ್ನೂ ಒಂದು ವರ್ಷ ಮಾಹೆಯಲ್ಲಿ ಕಲಿತರಷ್ಟೇ ಎಂಬಿಬಿಎಸ್ ಡಿಗ್ರಿ ಸಿಗುತ್ತದೆ. ಹೀಗಾಗಿ ಆಕೆ ತನ್ನ ಶೈಕ್ಷಣಿಕ ಭವಿಷ್ಯಕ್ಕೆ ಮಾರಕವಾಗುವಂಥ ನಿರ್ಭಿಡೆಯ ನಿಲುವು ತೋರಿಸುವುದು ಅನುಮಾನ. ಅದಕ್ಕೆ ಪೈ ಮಾಫಿಯಾ ಅವಕಾಶ ಕೊಡುವುದೂ ಇಲ್ಲ ಬಿಡಿ! ಈಗ ಮಣಿಪಾಲದಲ್ಲಿ ಹರಡಿರುವ ಸುದ್ದಿಗಳ ಪ್ರಕಾರ ಪೈ ಮಾಮಾ ಬಳಗ ಸಂತ್ರಸ್ತೆ ಮತ್ತವಳ ಪಾಲಕರ ಬ್ರೈನ್‌ವಾಶ್ ಮಾಡಿಬಿಟ್ಟಿದೆ. ಅಲ್ಲಿಗೆ ಪೈಗಳ ಶಿಕ್ಷಣ ಮಹಿವಾಟಿಗೆ ಹೊಡೆತ ಬೀಳದಂತೆ ಕೇಸ್ ತಿರುಚಲಾಗುತ್ತಿದೆ!!

ಕೇಸ್ 'ಹಗುರ' ಮಾಡುವ ನೀಚತನ ಬಿಟ್ಟು ಪೊಲೀಸರು ನಿಷ್ಠುರ ತನಿಖೆ ನಡೆಸುವಂತೆ ಪೈ ಮಾಮಾಗಳು ಮಾಡಬೇಕಿದೆ. ಹಾಗೆಯೇ ಪೊಲೀಸರು ಮಾಹೆಯ ಪಕ್ಕಾರರಂತೆ, ಪೈಗಳ ಸೆಕ್ಯುರಿಟಿಗಳಂತೆ ವರ್ತಿಸುವುದು ಬಿಡಬೇಕಿದೆ. ಪೇಜಾವರ ಸ್ವಾಮೀಜಿ ಪೆದ್ದು-ಪೆದ್ದಾಗಿ ಮಾತಾಡೋದು ನಿಲ್ಲಿಸಿ ಮನಿ ಮೈಂಡೆಡ್ ಪೈಗಳ ಮನಃ ಪರಿವರ್ತಿಸಲು ಪ್ರಯತ್ನಿಸಬೇಕಿದೆ. ಪೈಗಳು ಇಷ್ಟು ದಿನ ಮಾಡಿದ ಅಪರಾಧ ತಿದ್ದಿಕೊಳ್ಳದಿದ್ದರೆ 'ಮಾಹೆ'ಯೇ ನಂಬರ್ ಒನ್ ಆರೋಪಿಯಾಗುತ್ತದೆ ಸದರಿ ಕಿಡ್‌ನ್ಯಾಪ್ ಅಂಡ್ ರೇಪ್‌ಕೇಸ್‌ನಲ್ಲಿ!!

ಹಾಗೆಂಬುದು ಜನತಾ ನ್ಯಾಯಾಲಯದ ತೀರ್ಪು!!

● ನಹುಷ

ಕೇರಳ ಸಿಎಂಗೂ ಪೈ ಮಾಟ!!

ಮಣಿಪಾಲದ ಪೈಗಳ ಡೀಮ್ಡ್ ವಿವಿಯಲ್ಲಿ ರೇಪ್‌ಗೆ ತುತ್ತಾದ ಹುಡುಗಿ ಕೇರಳದ ತ್ರಿಶ್ಯೂರ್‌ನವಳು. ಕೇರಳದ ಸಿಎಂ ಉಮನ್ ಚಾಂಡಿಯ ಕುಲಬಾಂಧವಳು. ಹೀಗಾಗಿ ಚಾಂಡಿಗೆ ಒಮ್ಮೆ ಮಣಿಪಾಲದ ಕೆಎಂಸಿಯಲ್ಲಿ ಯಾತನೆ ಅನುಭವಿಸುತ್ತ ಮಲಗಿದ್ದ ಸಂತ್ರಸ್ತ ಹುಡುಗಿಯನ್ನು ಭೇಟಿಯಾಗಿ ಪಬ್ಲಿಸಿಟಿ ಪಡೆಯುವ ಹುಕಿ ಬಂದಿತ್ತು, ತಕ್ಷಣ ಕೇರಳ ಸಿಎಂ ಆಫೀಸಿನಿಂದ ಮಣಿಪಾಲದ ವಾರ್ಸಿಟಿಗೆ "ಸಿಎಂ ರೇಪ್‌ಗೆ ಒಳಗಾದ ಹುಡುಗಿ ನೋಡಲು ಬರುತ್ತಾರೆ" ಎಂಬ ಸಂದೇಶ ಬಂತು.

ಇದನ್ನು ನೋಡಿದ್ದೇ ಮಾಹೆ ಮಾಮಾಗಳು ಕಂಗಾಲಾಗಿ ಹೋದರು. ಕೇರಳ ಸಿಎಂ ಬಂದರೆ ತಮ್ಮ ಶಿಕ್ಷಣ ಅಡ್ಡೆಯಲ್ಲಾದ ರೇಪ್‌ಗೆ ದೊಡ್ಡ ಪ್ರಚಾರ ಸಿಗುತ್ತದೆ. ಮಾನ ಹರಾಜಾಗುತ್ತದೆ. ಶಿಕ್ಷಣ ವ್ಯಾಪಾರಕ್ಕೆ ಹಿನ್ನಡೆ ಆಗುತ್ತದೆ ಎಂಬ ಚಿಂತನೆಗೆ ಪೈ ಮಾಮಾ ಬಳಗ ಬಿತ್ತು, ಹೇಗಾದರೂ ಮಾಡಿ ಕೇರಳ ಸಿಎಂ ಬರದಂತೆ ತಡೆಯಲು ಸನ್ನದ್ಧರಾದರು. ವಾರ್ಸಿಟಿಯ ಸಾಕ್ಷಾತ್ ಉಪಕುಲಪತಿ ಡಾ. ಬಲ್ಲಾಳರೇ ಸೀದ ಕೇರಳಕ್ಕೆ ಓಡಿದರು. ಸಿಎಂ ಚಾಂಡಿ ಕಾಲಿಗೆ ಬಿದ್ದು ಪರಿಪರಿಯಾಗಿ ಬರದಂತೆ ಬೇಡಿಕೊಂಡರು.

ಇತ್ತ ಕರ್ನಾಟಕದ ಸಿಎಂ ಸಿದ್ದುವಾಗಲಿ, ಆರೋಗ್ಯ ಮಂತ್ರಿ ಖಾದರ್ ಆಗಲಿ ಅಥವಾ ಕೇಂದ್ರ ಸರ್ಕಾರ ಮತ್ತು ಆಡಳಿತಾರೂಢ ಕಾಂಗ್ರೆಸ್‌ನಲ್ಲಿ ಪವರ್‌ಫುಲ್ ಆಗಿರುವ ಉಡುಪಿ ಮೂಲದ ಕೇಂದ್ರ ಮಂತ್ರಿ ಆಸ್ಕರ್ ಫರ್ನಾಂಡಿಸ್ ಆಗಲಿ ಸಂತ್ರಸ್ತ ಹುಡುಗಿ ನೋಡಲು ಬರಲಿಲ್ಲ, ಆಸ್ಕರಣ್ಣನಂತೂ ಮೊನ್ನೆ ಉಡುಪಿಯಲ್ಲೇ ಇದ್ದರು. ಆದರೆ ಈ ನತದೃಷ್ಟ ಹುಡುಗಿಯನ್ನು ಕಂಡು ಸಾಂತ್ವನ, ಧೈರ್ಯ ಹೇಳಬೇಕು-ಪಾಪಿ ಪೈಗಳಿಗೆ ಕಿವಿ ಹಿಂಡಬೇಕು ಎಂದು ಅನ್ನಿಸಲಿಲ್ಲ, ಲಂಡನ್‌ನಲ್ಲಿ ರೇಡಿಯೋ ಜಾಕಿಗಳ ಕುಚೋದ್ಯದಿಂದ ಆತ್ಮಹತ್ಯೆ ಮಾಡಿಕೊಂಡಿದ್ದ ಜೆಸಿಂತಾಳ ಪಾರ್ಥಿವ ಶರೀರ ಉಡುಪಿ (ಶಿರ್ವ)ಗೆ ತಂದಾಗ ಓಡೋಡಿ ಬಂದು ಕಂಬನಿ ಮಿಡಿದಿದ್ದ ಆಸ್ಕರ್ ಅಣ್ಣನಿಗೆ ಈ ಕ್ರಿಶ್ಚಿಯನ್ ಹುಡುಗಿ ಮತ್ತವಳ ಕುಟುಂಬಸ್ಥರ ನೋವು ಅರ್ಥವಾಗುತ್ತಿಲ್ಲ, ಏಕೆಂದರೆ ಪೈಗಳ ಋಣಭಾರದಲ್ಲಿರುವ ಆಸ್ಕರಣ್ಣನ ಇಂಥ ಜೋಭದ್ರಗೇಡಿ ತನದಿಂದಾಗಿಯೇ ಪದ್ಮಪ್ರಿಯಾ ಪ್ರಕರಣ ಹಳ್ಳ ಹಿಡಿದಿತ್ತು, ಅಂದು ದಿಲ್ಲಿಯಲ್ಲಿ ಆಸ್ಕರ್ ನಿಷ್ಠೂರವಾಗಿ ವರ್ತಿಸಿದ್ದರೆ ಇಂದು ಹೆಂಡತಿ ಹಂತಕ ರಘುಪತಿ ಭಟ್ಟ ಶ್ರೀಕೃಷ್ಣ ಜನ್ಮಸ್ಥಾನದಲ್ಲಿರುತ್ತಿದ್ದ!

'ಮಾಹೆ' ಮಾನವಿಲ್ಲದ ವಾರ್ಸಿಟಿ!!

ಮಣಿಪಾಲ ಅಕಾಡೆಮಿ ಆಫ್ ಹೈರ್ ಎಜುಕೇಷನ್-ಮಾಹೆಗೆ ಡೀಮ್ಡ್ ಯುನಿವರ್ಸಿಟಿಗೆ ಬೇಕಾದ ಯಾವ ಅರ್ಹತೆ ಯೋಗ್ಯತೆ ಇಲ್ಲ, ಇದೊಂದು ಪೈಗಳ ಹೈಟೆಕ್ ಶಿಕ್ಷಣ ವ್ಯಾಪಾರಿ ಅಡ್ಡೆ, ಇಡೀ ಮಣಿಪಾಲ ಸಿಟಿ ಇದೆಯಲ್ಲ, ಅದೇ ಮಾಹೆಯ ಕ್ಯಾಂಪಸ್. ಅದಕ್ಕೊಂದು ಪ್ರತ್ಯೇಕ ಕಾಂಪೌಂಡ್ ಗೋಡೆ ಇಲ್ಲ, ಯಾರು ಬೇಕಿದ್ದರೂ ಮಾಹೆ ಸುತ್ತಮುತ್ತ ಬಿಂದಾಸಾಗಿ ಓಡಾಡಬಹುದು. ಹುಡುಗಿಯರ ಎತ್ತಿ ಒಯ್ಯಬಹುದು.

ಕೆಎಂಸಿಗೆ ಬರುವ ತರಹೇವಾರಿ ರೋಗಿಗಳು- ಅವರ ಸಂಬಂಧಿಗಳು, ತರತರದ ಬಿಸಿನೆಸ್ ಮಂದಿ, ಪಿಂಪ್, ಡ್ರಗ್ಸ್ ಡೀಲರ್ಸ್, ಮಾದಕ ಪಾರ್ಟಿ ಸೇಲ್ಸ್‌ಮನ್‌ಗಳು... ಹೀಗೆ ಕಾನೂನುಬಾಹಿರ- ಅನಧಿಕೃತ ಮಂದಿಯೆಲ್ಲ ಮಾಹೆ ಆವರಣದಲ್ಲಿ ಓಡಾಡಿಕೊಂಡಿರುತ್ತಾರೆ. ಇಂಥಲ್ಲಿ ಅಸಹಾಯಕ ಹುಡುಗಿಯರಿಗೆ ಭದ್ರತೆ ಇರಲು ಸಾಧ್ಯವಾ? ಅವರ ಮಾನ-ಪ್ರಾಣಕ್ಕೆ ಸದಾ ಸಂಕಟವೇ!

ಮಣಿಪಾಲದಲ್ಲಿ ಒಂದು ಮಹಿಳಾ ಪೊಲೀಸ್ ಠಾಣೆಯೂ ಇಲ್ಲ, ಇರುವ ಪೊಲೀಸ್ ಠಾಣೆ ಪೈಗಳ ಹಿಡಿತದಲ್ಲಿದೆ. 50 ದೇಶಗಳ ಕಾಲು ಕೋಟಿ ವಿದ್ಯಾರ್ಥಿಗಳು ಇಲ್ಲಿದ್ದಾರೆ. ಅಕಾಡೆಮಿಕ್ ವಾತಾವರಣ ಮಾಹೆ ಕ್ಯಾಂಪಸ್‌ನಲ್ಲಿ ಇಲ್ಲ,

ಎತ್ತಿಂದೆತ್ತ ನೋಡಿದರೂ ಮಾಹೆ ಡೀಮ್ಡ್ ಯುನಿವರ್ಸಿಟಿಯ ರೀತಿ-ರಿವಾಜು, ಕಾನೂನು-ಕಟ್ಟಳೆಯಂತೆ ನಡೆಯುವುದು ಕಾಣಿಸದು. ಸಕಲ ಪಕ್ಷದ ಆಡಳಿತಗಾರರ ಪಳಗಿಸುವ ಚಾಕಚಕ್ಯತೆಯ ಪೈಗಳಿಗೆ ಎಸ್ಪಿ-ಡೀಸಿಗಳು ಯಾವ ಲೆಕ್ಕವೂ ಇಲ್ಲ, ಕೆಎಂಸಿ ಆಸ್ಪತ್ರೆಯಲ್ಲಿ ನಡೆಯುವ ಧನಾಧಾರಿತ ಆರೋಗ್ಯ ರಕ್ಷಗೆ-ಬಡವರ ಪ್ರಾಣ ಭಕ್ಷಣೆಯದೇ ಪ್ರತ್ಯೇಕ ಪುರಾಣದಷ್ಟಿದೆ! ನ್ಯಾಯಾಧೀಶರು ಹೇಳಿದವರಿಗೆ ಎಂಬಿಬಿಎಸ್, ಎಂಎಸ್, ಇಂಜಿನಿಯರಿಂಗ್, ಎಂ.ಟೆಕ್ ಸೀಟುಗಳು ಸಲೀಸಾಗಿ ಸಿಗುತ್ತದೆ. ಮಂತ್ರಿ ಮಾಂಡಲೀಕರ ಅನರ್ಹ ಸಂತಾನಕ್ಕಂತೂ ಇಲ್ಲಿ ಸೀಟು ಸಿಗುವುದಕ್ಕೆ ಕಷ್ಟವೇನಲ್ಲ,

ಒಟ್ಟಿನಲ್ಲಿ ಮಾಹೆಯ ಡೀಮ್ಡ್ ಯುನಿವರ್ಸಿಟಿ ಮಾನ್ಯತೆ ಎಷ್ಟು ಬೇಗ ರದ್ದಾಗುತ್ತದೋ ಅಷ್ಟು ಒಳ್ಳೆಯದು ಭಾರತದ ಶಿಕ್ಷಣ ಕ್ಷೇತ್ರಕ್ಕೆ, ಇತ್ತ ಸಂಬಂಧಿಸಿದವರು ಗಮನ ಹರಿಸಿ ಪುಣ್ಯ ಕಟ್ಟಿಕೊಳ್ಳುವರಾ?


ಕಾಗೋಡು ತಿಮ್ಮಪ್ಪ ಮಂತ್ರಿಯಾಗಬೇಕಿತ್ತು

ಕಾಗೋಡು ತಿಮ್ಮಪ್ಪನವರು ಹಿಂದೆಂದೂ ಕಂಡರಿಯ ಷ್ಟು ಮತಗಳನ್ನು ಈ ಬಾರಿ ಪಡೆದು ಗೆದ್ದ ಕೂಡಲೇ ವರ ಅಭಿಮಾನಿಗಳಲ್ಲದವರು ಕೂಡ ಅವರು ಮಂತ್ರಿಯಾಗುತ್ತಾರೆಂದು ನಿರೀಕ್ಷಿಸಿದ್ದರು. ಅದರಲ್ಲೂ ಗ್ರಾಮೀಣಾಭಿವೃದ್ಧಿ ಅಥವಾ ಕಂದಾಯ ಇಲಾಖೆಯಂತಹ ಮಹತ್ವದ ಖಾತೆಯ ಮಂತ್ರಿಗಳಾಗುತ್ತಾರೆಂದು ಭಾವಿಸಿದ್ದರು. ದಕ್ಕೆ ಕಾರಣ ತಿಮ್ಮಪ್ಪನವರು ವಹಿಸಿಕೊಂಡ ಜವಾಬ್ದಾರಿಯನ್ನು ನಿರ್ವಹಿಸುವ ರೀತಿ, ಬಡ ನಿರ್ಗತಿಕರಿಗೆ ಏನಾದರೂ ಮಾಡಲೇಬೇಕೆಂಬ ಅವರ ಕಾಳಜಿ.

ತಿಮ್ಮಪ್ಪನವರು ಗೋಪಾಲಗೌಡರು ಮತ್ತು ದೇವರಾಜ ಅರಸು ಮೆಚ್ಚಿದ ರಾಜಕಾರಣಿ. ಗೋಪಾಲಗೌಡರ ನಂತರ ಯಾರು ಎಂಬ ಪ್ರಶ್ನೆಗೆ ತಿಮ್ಮಪ್ಪನವರೆಂದು ಹೇಳುವ ಕಾಲವೊಂದಿತ್ತು. ಅದಕ್ಕಾಗಿಯೇ ಅರಸು ತಿಮ್ಮಪ್ಪನವರನ್ನು ತಮ್ಮೊಡನೆ ಸೇರಿಸಿಕೊಳ್ಳಲು ಮನಸ್ಸು ಮಾಡಿದರು. ಆದರೆ ತಿಮ್ಮಪ್ಪನವರು ಕಾಂಗ್ರೆಸ್ ಸೇರಲಿಲ್ಲ. ಬದಲಿಗೆ ಬಂಗಾರಪ್ಪನ ಪಕ್ಷ ಸೇರಿದರು. ಆದ್ದರಿಂದ ಮುಂದೆ ತಿಮ್ಮಪ್ಪನವರು ಹಲವು ಬಾರಿ 'ಬಂ' ಹಾವಳಿಗೆ ತುತ್ತಾದದ್ದು ಈಗ ಇತಿಹಾಸ. 'ಬಂ' ಹಾವಳಿಯಿಂದಲೇ ಅವರು ಸಾಗರದಲ್ಲಿ ಎರಡು ಬಾರಿ ಸೋಲುವಂತಾಯ್ತು. ಇನ್ನೇನು ಅವರ ರಾಜಕಾರಣದ ಯುಗ ಮುಗಿಯಿತೆನ್ನುವಷ್ಟರಲ್ಲಿ 2013 ರಲ್ಲಿ ಸಾಗರದ ಜನ ಹಿಂದಿನ ಸೋಲನ್ನು ಮರೆಸುವಂತಹ ಗೆಲುವು ತಂದುಕೊಟ್ಟರು. ಈಗ ಅವರ ವಯಸ್ಸು ಮತ್ತು ಅನುಭವಕ್ಕೆ ತಕ್ಕಂತೆ ವಿಧಾನಸಭೆಯ ಸ್ಪೀಕರ್ ಸ್ಥಾನ ದೊರಕಿದೆ.

ಸ್ಪೀಕರ್ ಅಂದ ಕೂಡಲೆ ವೈಕುಂಠ ಬಾಳಿಗ ಅನ್ನುವ ಹೆಸರು ಎಲ್ಲರ ನೆನಪಿಗೆ ಬರುವುದು ಇಂದಿಗೂ ಅಚ್ಚರಿಯ ಸಂಗತಿಯಾಗಿದೆ. ಆದರೆ ಮುಂದೆ ಆ ಹೆಸರಿಗೆ ವಿರುದ್ಧವಾಗಿ ಬೋಪಯ್ಯ ಎಂಬ ಹೆಸರೂ ಚಾಲ್ತಿಗೆ ಬರಬಹುದು. ಬೋಪಯ್ಯನಿಗಿಂತಲೂ ಹಿಂದೆ ಹೋಗಿ ನೋಡಿದರೆ ಡಾ. ಪೇಟೆ ಕೃಷ್ಣ ಎಂಬ ಸಜ್ಜನ ರಾಜಕಾರಣಿ ಕಾಣಿಸುತ್ತಾರೆ. ರಾಜಕಾರಣದ ದುರುಪಯೋಗಕ್ಕೆ ಗುರಿಯಾಗಿ ಈಗ ವನವಾಸಕ್ಕೆ ತುತ್ತಾದ ಅಮಾಯಕರಂತೆ ಕೃಷ್ಣ ಕಾಣುತ್ತಾರೆ. ತಾವು ಸಹಾಯ ಮಾಡಿದ ಪಕ್ಷದ ಟಿಕೆಟ್‌ನಿಂದಲೇ ವಂಚಿತರಾಗಿ, ಸ್ವತಂತ್ರ ಅಭ್ಯರ್ಥಿಯಾಗಿ ನಿಂತರೂ ಅವರು ಸೋತು ಹೋದರು. ಕೃಷ್ಣನಂತವರು ಸೋಲುವುದು, ಬೋಪಯ್ಯ ಗೆದ್ದುಬರುವುದು ಒಂದು ವಿಪರ್ಯಾಸ. ಈ ಇಬ್ಬರೂ ಸ್ಪೀಕರ್ ಸ್ಥಾನದ ಘನತೆಯನ್ನು ಮುಕ್ಕು ಮಾಡಿರುವ ಈ ಸಮಯದಲ್ಲಿ ತಿಮ್ಮಪ್ಪನಂತಹ ಅನುಭವಿ ರಾಜಕಾರಣಿ ಆ ಸ್ಥಾನವನ್ನಲಂಕರಿಸಿರುವುದು ಸರಿಯಾದ ಕ್ರಮ. ಆದರೆ ಅವರು ಮಂತ್ರಿಯಾಗಿ ದ್ದರೆ ಏನು ಮಾಡುತ್ತಿದ್ದರೆಂಬುದಕ್ಕೆ ಒಂದು ಉದಾಹರಣೆ ಇಲ್ಲಿದೆ.

ಎಸ್ಸೆಂ ಕೃಷ್ಣರ ಸರ್ಕಾರದಲ್ಲಿ ಅವರು ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಯಾಗಿದ್ದರು. ಆಗ ಒಂದು ದಿನ ಅವರು ಕಡೂರು ತಾಲ್ಲೂಕಿನ ಮತಿಘಟ್ಟದ ಬಳಿ ಹಾದುಹೋದರು.



ತಿಮ್ಮಪ್ಪನವರ ಜೊತೆ ಅಂದು ಸಮಾಜ ಕಲ್ಯಾಣಾಧಿಕಾರಿ ದೇವರಾಜ್, ಚಿಕ್ಕಮಗಳೂರು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ರುದ್ರಸ್ವಾಮಿ ಮತ್ತಿತರ ಅಧಿಕಾರಿಗಳೆಲ್ಲಾ ಇದ್ದರು. ಕಡೂರಿನ ಐಬಿಗೆ ಹೋದ ನಂತರ ಅಧಿಕಾರಿಗಳನ್ನು ಉದ್ದೇಶಿಸಿ ತಿಮ್ಮಪ್ಪನವರು "ಈಗ ನಾವು ಬಂದ ರಸ್ತೇಲಿ ಮತಿಘಟ್ಟದ ಹತ್ತಿರ ಏನು ನೋಡಿದ್ರಿ?" ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು. ಒಬ್ಬ "ರಸ್ತೆ ನೋಡಿದೆ, ಚೆನ್ನಾಗಿಲ್ಲ" ಅಂದ. ಮತ್ತೊಬ್ಬ "ರಸ್ತೆಬದಿ ಮರ ನೋಡಿದೆ" ಅಂದ. ಅಧಿಕಾರಿಗಳ ದೃಷ್ಟಿಕೋನ ಗಮನಿಸಿದ ತಿಮ್ಮಪ್ಪನವರು "ಅಲ್ಲಿ ರಸ್ತೆಬದೀಲಿ ಛತ್ರಿ ಹಿಡಕೊಂಡು ಬಿಸಿಲಲ್ಲೇ ಮುಖ ಚೌರ ಮಾಡ್ತಾಯಿದ್ದ ಕ್ಷೌರಿಕನ್ನ ನೋಡಿದ್ರ? ಪಾಪ ಆತನಿಗೆ ಒಂದು ಸೂರಿಲ್ಲ, ಬಹುಶಃ ಆತ ಒಂದು ರೂಪಾಯಿಗೆ ಶೇವಿಂಗು, ಎರಡು ರೂಪಾಯಿಂಗೆ ಕಟಿಂಗ್ ಮಾಡ್ತಾಯಿರಬಹುದು. ಇನ್ನು ಒಂದು ವಿಶೇಷ, ಅತಿಹೆಚ್ಚು ಬಡವರು ಮಾತ್ರ ಹೋಗ್ತಾಯಿರಬಹುದು. ನೀವು ಅಧಿಕಾರಿಗಳು. ನಾನು ಇನ್ನೊಂದು ಸಾರಿ ಬರೋದರಲ್ಲಿ ಆತನಿಗೆ ಒಂದು ಶೆಡ್ ಮಾಡಿ. ಆತನ ವೃತ್ತಿಪರಿಕರಗಳ ಜೊತೆಗೆ ಬಟ್ಟೆನೂ ಹೊಲಿಸಿ ಕೊಟ್ಟಿರಬೇಕು" ಎಂದರು.

ಮುಖಮುಖ ನೋಡಿಕೊಂಡ ಅಧಿಕಾರಿಗಳು "ಅವು ನಮ್ಮ ವ್ಯಾಪ್ತಿಗೆ ಬರುವುದಿಲ್ಲ" ಎಂಬ ಸಬೂಬು ಹೇಳತೊಡಗಿದರು. ಆಗ ತಿಮ್ಮಪ್ಪ "ಆ ತರ ಹೇಳಂಗೇಯಿಲ್ಲ ನೀವು. ನಾನೇಳಿದ ಕೆಲಸ ಮಾಡಬೇಕು" ಅಂದ್ರು. ಪೀಕಲಾಟಕ್ಕೆ ಬಿದ್ದ ಅಧಿಕಾರಿಗಳು ಆ ಕ್ಷೌರಿಕನಿಗೆ ಎಲ್ಲ ಅನುಕೂಲಗಳನ್ನು ಮಾಡಿಕೊಟ್ರು. ಮತ್ತೊಮ್ಮೆ ತಿಮ್ಮಪ್ಪನವರು ಆ ಕಡೆ ಬಂದಾಗ ಆತನನ್ನು ಕರೆಯಲು ಹೋದರು. ಆ ಕ್ಷೌರದವನು ಮಂತ್ರಿಗಳನ್ನು ನೋಡುವ ಅಗತ್ಯವೇ ಇಲ್ಲ ಎಂದು ತನ್ನ ಕೆಲಸದಲ್ಲಿ ನಿರತನಾದ. ಎಲಾ ಇವನ ಎಂದುಕೊಂಡು ಬಂದ ಅಧಿಕಾರಿಗಳಿಗೆ ಹೊಸ ಕಣ್ಣು ಬಂದಿದ್ದವು.

ಈ ಘಟನೆ ನೆನೆಸಿಕೊಂಡ ರುದ್ರಸ್ವಾಮಿಗಳು "ಇಂತಹ ಕಾರಣಗಳಿಗೆ ತಿಮ್ಮಪ್ಪ ಮಂತ್ರಿಯಾಗಬೇಕಿತ್ತು" ಎಂದರು. ಆದರೇನು ಸ್ಪೀಕರ್ ಹುದ್ದೆಯನ್ನು ತಿಮ್ಮಪ್ಪ ಸುಲಭಕ್ಕೆ ಒಪ್ಪಿಲ್ಲ. ತಾವು ಹೇಳಿದ ಕೆಲಸವನ್ನು ಸರ್ಕಾರ ಚಾಚೂ ತಪ್ಪದೆ ಮಾಡಬೇಕೆಂಬ ಷರತ್ತಿನಿಂದಲೇ ಅವರೀಗ ಸಭಾಪತಿಯಾಗಿ ಕುಳಿತಿರುವುದು. ಅಧಿಕಾರಿಗಳು ಎಷ್ಟೇ ಓದಿಕೊಂಡು, ಟೈ ಕಟ್ಟಿಕೊಂಡು ಬಂದರೂ ತಿಮ್ಮಪ್ಪನ ಎದುರು ಅಬ್ಬೇಪಾರಿಗಳಾಗಿಬಿಡುತ್ತಿದ್ದರು. ಕೊಟ್ಟ ಅರ್ಜಿಯನ್ನು ಸರಿಯಾಗಿ ಓದದ ಅಧಿಕಾರಿಗಳಿಗೆ ಓದಿಸಿ "ಇದರ ಅಬ್ಜೆಕ್ಟೇನು (object)" ಎಂದು ಕೇಳುತ್ತಿದ್ದರು. ಕೆ. ಶಿವರಾಂಗೆ ಒಂದು ಬಾರಿ "ಇದು ಸಿನಿಮಾ ತರ ಅಲ್ಲ ಕಣಯ್ಯ" ಎಂದಿದ್ದರು!!

● ಬಿ.ಚಂದ್ರೇಗೌಡ

ಬಾಗಲಕೋಟೆ ಆರೋಗ್ಯ ಇಲಾಖೆಗೆ 'ಬಳ್ಳಾರಿ'ಯೆಂಬ ವೈರಸ್!

ಬಾಗಲಕೋಟೆ ಆರೋಗ್ಯ ಇಲಾಖೆ ಅದೆಷ್ಟು ರೋಗಿಗಳ ನೋವು ತೊಲಗಿಸುತ್ತದೋ ಗೊತ್ತಿಲ್ಲ, ಆದರೆ ಸ್ವತಃ ಇಲಾಖೆಯೇ ಮಲ್ಲಿಕಾರ್ಜುನ ಬಳ್ಳಾರಿ'ಯೆಂಬ ವೈರಸ್‌ನಿಂದ ಇನ್‌ಫೆಕ್ಟ್ ಆಗಿ ಒದ್ದಾಡುತ್ತಿರುವುದು ಮಾತ್ರ ಸತ್ಯ!

ಅಷ್ಟಕ್ಕೂ ಈ ಮಲ್ಲಿಕಾರ್ಜುನ ಬಳ್ಳಾರಿ ಎಂಬುದೇನು ಶಬ್ದಕೋಶ ಜೀವಿ ಹೆಸರಲ್ಲ, ಇಲಾಖೆಯನ್ನೆ ನುಣ್ಣಗೆ ಬೋಳಿಸಿದ 'ಬಾಗಲಕೋಟೆ'ಯ ಸಹಾಯಕ ಆಡಳಿತಾಧಿಕಾರಿ. ಮೂಲತಃ ಹುನಗುಂದದವನಾದ ಇವನ ಹೆಸರಿಗೆ 'ಬಳ್ಳಾರಿ' ಎಂಬ ಬಾಲ ಯಾವ್ದೇಗೆ ಜೋತುಬಿದ್ದಿತೋ ಏನೊ, ಥೇಟು 'ಬಳ್ಳಾರಿ ಗಣಿ ಮಾಫಿಯಾ'ದ ಸ್ಟೈಲ್‌ನಲ್ಲೆ ಆರೋಗ್ಯ ಇಲಾಖೆಯ ಮೇಲೆ ಸವಾರಿ ಹೊರಟಿದ್ದಾನೆ. ತನ್ನ ಕೈಕೆಳಗಿನ ಸಿಬ್ಬಂದಿಯಿಂದ ಹಿಡಿದು ಉನ್ನತಾಧಿಕಾರಿಗಳು, ರಾಜಕಾರಣಿಗಳನ್ನೂ ಮುಷ್ಟಿಗೆ ಕೆಡವಿಕೊಂಡಿರುವ ಇವನು ಸತತ ಹದಿನಾಲ್ಕು ವರ್ಷಗಳಿಂದ ಬಾಗಲಕೋಟೆ ಆರೋಗ್ಯ ಇಲಾಖೆಗೆ ಫೆವಿಕಾಲ್ ಹಚ್ಚಿಕೊಂಡು ಮೆರೆಯುತ್ತಿರುವುದು ಅವನ ಪಾಳೇಗಾರಿಕೆಯನ್ನು ಪ್ರತ್ಯಕ್ಷೀಕರಿಸುತ್ತದೆ.

ಎಸ್.ಡಿ.ಸಿ ಯಂತಹ ಯಃಕಶ್ಚಿತ್ ಹುದ್ದೆಯಿಂದ ಸರ್ಕಾರಿ ಸೇವನಕ್ಕೆ ಕಾಲಿಟ್ಟ ಮಲ್ಲಿಕಾರ್ಜುನ ಇವತ್ತು ಏನಿಲ್ಲವೆಂದರೂ 25 ರಿಂದ 30 ಕೋಟಿ ಆಸ್ತಿಗೆ ಒಡೆಯ. ಬೇನಾಮಿ ಆಸ್ತಿಗಂತೂ ಲೆಕ್ಕವೇ ಇಲ್ಲ. ಬಾಗಲಕೋಟೆ ಮಾತ್ರವಲ್ಲದೆ ಬೆಂಗಳೂರು, ಹುನಗುಂದಗಳಲ್ಲೂ ಸೈಟು-ಫ್ಲಾಟುಗಳು ಇಟ್ಟಿದ್ದಾನೆ. ಇವನ ಸ್ವಂತ ಊರು ಗಂಜಾಳದಲ್ಲೇ 15 ಎಕರೆ ತೋಟ, ಮನೆಗಳು ರಾರಾಜಿಸುತ್ತಿವೆ. ಇನ್ನು ಬೈಕು ಕಾರುಗಳಂತಹ ವಾಹನಗಳಿಗೆ ಲೆಕ್ಕವೇ ಇಲ್ಲ. ಸುಮಾರಷ್ಟು ಸ್ವಂತ ವಾಹನಗಳನ್ನೇ ಆರೋಗ್ಯ ಇಲಾಖೆಗೆ ಬಾಡಿಗೆ ಬಿಟ್ಟು ಆ ಮೂಲಕವೂ ಭರ್ಜರಿಯಾಗಿ ಸುಲಿಯುತ್ತಿದ್ದಾನೆ.

ಹುನಗುಂದ ಶಾಸಕ ವಿಜಯಾನಂದ ಕಾಶಪ್ಪನವರ್ ತನ್ನ ಸಂಬಂಧಿಯೆನ್ನುವುದೇ ಇವನ ಇತ್ತೀಚಿನ ಟ್ರಂಪ್‌ಕಾರ್ಡ್. ಅಲ್ಲದೆ ಜಾತಿಯಿಂದ ಪಂಚಮಸಾಲಿ ಲಿಂಗಾಯತನಾದ ಮಲ್ಲಿಕಾರ್ಜುನ, ಆ ಜನಾಂಗದ ಗುರು ಜಯಮೃತ್ಯುಂಜಯ ಸ್ವಾಮಿಯ ಸಂಪೂರ್ಣವಾದ ಕೃಪಾಕಟಾಕ್ಷವಿದೆ ಎಂದೇ ಫೋಸು ಹಾಕಿಕೊಳ್ಳುತ್ತಾನೆ. ಇವನ ಮೇಲೆ ಲೋಕಾಯುಕ್ತವಾಗಲಿ, ಸರ್ಕಾರವಾಗಲಿ ಅಥವಾ ಅಲ್ಲಿನ ಜನಪ್ರತಿನಿಧಿಗಳಾಗಲಿ ಮುರಕೊಂಡು ಬೀಳದಿರುವುದೇ ಅಚ್ಚರಿ!


ಈತನ ತಂದೆ ಸೇವೆಯಲ್ಲಿದ್ದಾಗಲೇ ಸಾವನ್ನಪ್ಪಿದ್ದರಿಂದ ಅನುಕಂಪದ ಆಧಾರದಲ್ಲಿ ಮಲ್ಲಿಕಾರ್ಜುನನಿಗೆ ಸರ್ಕಾರಿ ನೌಕರಿ ಒಲಿದುಬಂದಿತ್ತು. 1991ರಲ್ಲಿ ಮೊದಲ ಬಾರಿಗೆ ಬಿಜಾಪುರದ ಬಸವನ ಬಾಗೇವಾಡಿ ಎಂಬಲ್ಲಿ ಕ್ಲರ್ಕ್ ಆಗಿ ಹಾಜರಾಗಿ ಮಾಡಿದ್ದ ದಿನಗಳಲ್ಲಿ ಇಲಾಖೆಯಲ್ಲಿ 'ಲಿಂಕ್' ಸೃಷ್ಟಿಸಿಕೊಂಡ ಮಲ್ಲಿಕಾರ್ಜುನನಿಗೆ ಒಂದರಮೇಲೊಂದು ಪ್ರಮೋಷನ್‌ಗಳು ಒಲಿಯುತ್ತಲೇ ಬಂದವು. 1998ರಲ್ಲಿ ಬಾಗಲಕೋಟೆಗೆ ಒಕ್ಕರಿಸಿದ ಈತ ಆರೋಗ್ಯ ಇಲಾಖೆಯ ಸಹಾಯಕ ಆಡಳಿತಾಧಿಕಾರಿಯಂತ 'ಜಬರ್‌ದಸ್ತ್' ಜಾಗಕ್ಕೇ ಬಂದು ಕೂತಿದ್ದಾನೆ. ಇಲಾಖೆಯ ಪ್ರಮುಖ ಖಾತೆಗಳಾದ ಲೆಕ್ಕಪತ್ರ ವಿಭಾಗ, ಪೂರೈಕೆ ವಿಭಾಗ, ಸಿಬ್ಬಂದಿ ವಿಭಾಗ, ಕುಂದುಕೊರತೆ ವಿಭಾಗ, ಅಮಾನತು ವಿಭಾಗ ಮತ್ತು ವೈದ್ಯಾಧಿಕಾರಿಗಳ ನೇಮಕಾತಿ ವಿಭಾಗಗಳಲ್ಲಿ ಇವನ ಹುಕುಂ ಇಲ್ಲದೆ ಒಂದೂ ಫೈಲ್ ಕದಲಾಡುವುದಿಲ್ಲ.


ಕಚೇರಿ ಬಿಟ್ಟು ಕೊಂಚವೂ ಮಿಸುಕಾಡದ ಮಲ್ಲಿಕಾರ್ಜುನ ಪ್ರವಾಸಭತ್ಯೆಯ ನೆಪದಲ್ಲಿ ಇಲಾಖಾ ಬೊಕ್ಕಸದಿಂದ ಪ್ರತಿವರ್ಷ ಒಂದೂವರೆ ಲಕ್ಷ ರೂಪಾಯಿ ತಪ್ಪದೇ ಮುಂಡಾಯಿಸುತ್ತಾನೆ. ಟ್ರಾನ್ಸ್‌ಫರ್, ಸಸ್ಪೆಂಡ್ ಅಂತೆಲ್ಲಾ ಬೆದರಿಸಿ ಸಿಬ್ಬಂದಿಗಳಿಂದಲೂ ಸುಖತ್ತಾಗಿ ಕಿತ್ತು ತಿನ್ನುವ ಈತನಿಗೆ ದುಡ್ಡನ್ನು ಹೊರಗಡೆ ಬಡ್ಡಿಗೆ ಬಿಡುವುದು ಮತ್ತೊಂದು ಉಪಕಸುಬು.

ಮಲ್ಲಿಕಾರ್ಜುನನ ಆರ್ಭಟ, ಅನಾಚಾರಗಳನ್ನು ಸಹಿಸದ ಕೆಲವರು ಹಿಂದೊಮ್ಮೆ ಆಗಿನ ಆರೋಗ್ಯ ಮಂತ್ರಿ ಅರವಿಂದ ಲಿಂಬಾವಳಿಗೆ ದೂರು ನೀಡಿದ್ದರು. ಲೆಕ್ಕಪತ್ರಗಳ ಪರಿಶೀಲನೆ ನಡೆಸಿದಾಗ ಫಾಗಿಂಗ್ ಮಷಿನ್, ಕಂಪ್ಯೂಟರ್, ಜನರೇಟರ್, ಜೆರಾಕ್ಸ್ ಮಷಿನ್ ಖರೀದಿಗಳಲ್ಲಿ ಮಲ್ಲಿಕಾರ್ಜುನ ಅವ್ಯವಹಾರ ನಡೆಸಿರುವುದು ಸಾಬೀತಾಗಿತ್ತು. ಇದನ್ನೇ ಆಧರಿಸಿದ ಸರ್ಕಾರ 1.2.2013ರಂದು ಪತ್ರವೊಂದನ್ನು ಬರೆದು ಮಲ್ಲಿಕಾರ್ಜುನನ ಅಕ್ರಮಗಳ ಕುರಿತು ತನಿಖೆ ನಡೆಸುವಂತೆ ಆರೋಗ್ಯ ಇಲಾಖೆ ನಿರ್ದೇಶಕರಿಗೆ ಆದೇಶಿಸಿತ್ತು. ಅಲ್ಲದೆ ಈತ ಅಧಿಕಾರದಲ್ಲಿದ್ದರೆ ದಾಖಲೆಗಳನ್ನು ತಿದ್ದುವ ಸಂಭವ ಇರುತ್ತದೆಂದು ಅಮಾನತ್ತು ಮಾಡುವಂತೆಯೂ ಸರ್ಕಾರ ಸೂಚಿಸಿತ್ತು.

ಮಲ್ಲಿಕಾರ್ಜುನ ಅದೆಂತಹ ಖತರ್ನಾಕ್ ಆಸಾಮಿಯೆಂದರೆ, ತನ್ನ ಬಗ್ಗೆ ನಡೆಯುತ್ತಿರುವ ತನಿಖೆಯ ಇಂಚಿಂಚೂ ಮಾಹಿತಿಯನ್ನು ಗೌಪ್ಯವಾಗಿ ಕಲೆಹಾಕುತ್ತಿದ್ದ. ಅಲ್ಲಿ ಸಸ್ಪೆಂಡ್ ಮಾಡುವಂತೆ ಲೆಟರ್ ತಯಾರಾಗುತ್ತಿರುವ ಸೂಚನೆ ಸಿಕ್ಕ ತಕ್ಷಣವೇ ಕೆಎಟಿ ಮೊರೆಹೋಗಿ ತನಗೆ ಬರಬಹುದಾಗಿದ್ದ ಸಸ್ಪೆನ್ಷನ್ ಆರ್ಡರ್‌ಗೆ ತಡೆಯಾಜ್ಞೆ ಪಡೆದುಕೊಂಡಿದ್ದ. ಇವನ ಅಮಾನತು ಆದೇಶ ಬೆಂಗಳೂರಿನ ಕಮೀಷನರ್ ಕಚೇರಿಯಿಂದ ಜಿಲ್ಲಾ ಆರೋಗ್ಯ ಇಲಾಖೆಗೆ ಫ್ಯಾಕ್ಸ್ ಮೂಲಕ 04.02.2013ರಂದು ತಲುಪುವ ಮೊದಲೇ ಅದಕ್ಕೆ ಕೆಎಟಿ ನೀಡಿದ ತಡೆಯಾಜ್ಞೆ ಮಲ್ಲಿಕಾರ್ಜುನ ಬಳ್ಳಾರಿಯ ಕೈಯಲ್ಲಿತ್ತು. ಅಕ್ಷರಮಟ್ಟಿಗೆ ಆತ ಜಗತ್ ಕಿಲಾಡಿಯೇ ಸರಿ.

ಈ ನಡುವೆ ಸ್ಥಳೀಯ ಸಂಸ್ಥೆಗಳ ಚುನಾವಣೆ, ವಿಧಾನಸಭಾ ಎಲೆಕ್ಷನ್‌ಗಳು ಸುಳಿದಾಡಿದ್ದರಿಂದ ಮಲ್ಲಿಕಾರ್ಜುನ ಬಳ್ಳಾರಿ ಮೇಲಿನ ತನಿಖಾ ಆದೇಶ ತುಕ್ಕು ಹಿಡಿದಂತೆ ಬಿದ್ದಿತ್ತು. ಆದರೆ ಇತ್ತೀಚೆಗೆ ದಿಢೀರ್ ಜೀವ ಪಡೆಕೊಂಡ ತನಿಖೆ ಎಲ್ಲರಲ್ಲೂ ಅಚ್ಚರಿ ಮೂಡಿಸಿದೆ. ದಕ್ಷ ಅಧಿಕಾರಿ ಅಂತಲೇ ಗುರುತಿಸಿಕೊಂಡಿರುವ ಆರೋಗ್ಯ ಇಲಾಖಾ ನಿರ್ದೇಶಕ ಮದನಗೋಪಾಲ್‌ರ ಹೆಸರನ್ನೂ ಎಳೆದಾಡುತ್ತಿರುವ ಮಲ್ಲಿ ತನಗೆ ಅವರ ಸಂಪರ್ಕವೂ ಇದ್ದು ತನಿಖೆಯಿಂದ ಬಚಾವಾಗುತ್ತೇನೆ ಎಂದುಕೊಂಡು ತಿರುಗಾಡುತ್ತಿದ್ದಾನೆ. ಮದನಗೋಪಾಲರು ಈ 'ವೈರಸ್' ಮಲ್ಲಿಯನ್ನು ಗಂಭೀರವಾಗಿ ಪರಿಗಣಿಸಿ ತನಿಖೆಗೆ ಪ್ರಾಮಾಣಿಕತೆಯ ಬಿಸಿ ಮುಟ್ಟಿಸದಿದ್ದರೆ ಬಾಗಲಕೋಟೆಯ ಆರೋಗ್ಯವೇ ಹದಗೆಡುವುದರಲ್ಲಿ ಎರಡು ಮಾತಿಲ್ಲ. ಈ ನಿಟ್ಟಿನಲ್ಲಿ ಹುನಗುಂದ ಶಾಸಕ ವಿಜಯಾನಂದ ಕಾಶಪ್ಪನವರ್ ಸಂಬಂಧಿಯೆಂಬ ಕಾರಣಕ್ಕೆ ಭ್ರಷ್ಟ ಮಲ್ಲಿಕಾರ್ಜುನ ಬಳ್ಳಾರಿ ಪರ ವಕಾಲತ್ತು ವಹಿಸದಿರುವುದು ಅವರಿಗೂ ಆರೋಗ್ಯಕರ! ●





ಮದನ್‌ಗೋಪಾಲ್



ವಿಜಯ್ ಕಾಶಪ್ಪನವರ್

ಹೆಲ್ತ್ ಮಲ್ಲಿಗೆ ಜಿ.ಪಂ ಪಾಟೀಲನೇ ರಕ್ಷೆ!


ಆರೋಗ್ಯ ಇಲಾಖೆಯಲ್ಲಿ ಮಲ್ಲಿಕಾರ್ಜುನ ಬಳ್ಳಾರಿ ಈ ಪರಿ ಮೆರೆದಾಡಲು ಜಿಲ್ಲಾ ಪಂಚಾಯ್ತಿ ಸಿಇಒ ಎಸ್.ಜಿ. ಪಾಟೀಲ್‌ನೇ ಬೆನ್ನೆಲುಬು. ತನ್ನ ಆಪ್ತ ಸಹಾಯಕ ವೆಂಕಟೇಶ್ ತಿಮ್ಮನಾಯ್ಕನ ಜೊತೆ ಸೇರಿ ಬಳ್ಳಾರಿಯನ್ನು ರಕ್ಷಿಸಲು ಎಸ್.ಜಿ. ಪಾಟೀಲ್ ಕಸರತ್ತು ನಡೆಸುತ್ತಿರುವುದು ರಹಸ್ಯವಾಗೇನೂ ಉಳಿದಿಲ್ಲ. ಮಲ್ಲಿ ಮತ್ತು ಪಾಟೀಲನ ಹೊಂದಾಣಿಕೆ ಇಂದು-ನಿನ್ನೆಯದಲ್ಲ. ಈ ಮೊದಲು ಮಲ್ಲಿಕಾರ್ಜುನನಿಗೆ ಅನುಕೂಲ ಮಾಡಿಕೊಡಬೇಕೆಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕಿತ್ತೂರರ ಬಗ್ಗೆ ಅಂದಿನ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಆರ್ ಪಾಟೀಲ್‌ಗೆ ತಪ್ಪು ಮಾಹಿತಿ ರವಾನಿಸಿ ಅಲ್ಲಿಂದ ಎತ್ತಂಗಡಿ ಮಾಡಿಸಲು ಸ್ಕೆಚ್ ಹಾಕಿದ್ದು ಇದೇ ಎಸ್.ಜಿ.ಪಾಟೀಲ್. ನಂತರ ಆ ಸ್ಥಾನಕ್ಕೆ ತನಗೆ ಅನುಕೂಲವಾಗುವ ಗುಂಡಪ್ಪ ಎಂಬಾತನನ್ನು ಪ್ರತಿಷ್ಠಾಪನೆ ಮಾಡಲು ಎಲ್ಲಾ ತಯಾರಿಗಳೂ ನಡೆದಿದ್ದವು. ಆದರೆ ಕಿತ್ತೂರರ ಪರವಾಗಿ ದಲಿತ ಎಡಗೈ ಗುಂಪಿನವರು ಪ್ರತಿಭಟಿಸಿ ಉಸ್ತುವಾರಿ ಸಚಿವರ ಮೇಲೆ ಒತ್ತಡ ತಂದಿದ್ದರಿಂದ ಅಂತಹ ಅನಾಹುತ ಸಂಭವಿಸಿರಲಿಲ್ಲ.

ಇಂತಹ ಪಾಟೀಲ್‌ನ ಬೆಂಬಲದಿಂದಲೇ ಮಲ್ಲಿಕಾರ್ಜುನ ತನ್ನ ಸಂಬಂಧಿ ಸುನಂದಾ ಗುಂಜಾಳಳನ್ನು ಆರೋಗ್ಯ ಇಲಾಖೆಯ ಕಂಪ್ಯೂಟರ್ ಸೆಕ್ಷನ್‌ಗೆ, ಅಳಿಯ ಮಹಾಂತೇಶ ಗೊಳಪ್ಪಗೋಳನನ್ನು ರೆಫ್ರಿಜರೇಟರ್ ಮೆಕ್ಯಾನಿಕಲ್ ಆಗಿ, ತನ್ನ ಹೆಂಡತಿಯ ತಂಗಿ ಗಂಡ ಅಶೋಕ ಯರನಾಳನನ್ನು ಜಿಲ್ಲಾ ಪಂಚಾಯ್ತಿ ಆಯಕಟ್ಟಿನ ಜಾಗದಲ್ಲಿ ತಂದು ಕೂರಿಸಿಕೊಂಡಿದ್ದಾನೆ. ಅಷ್ಟೇ ಏಕೆ ಇಂತಹುದೇ ಬೆಂಬಲದಿಂದಾಗಿ ಇತ್ತೀಚೆಗೆ ನಡೆದ ಜಿ.ಪಂ ಚುನಾವಣೆಯಲ್ಲಿ ತನ್ನ ತಾಯಿಯನ್ನೂ ನಿಲ್ಲಿಸಿದ್ದ. ಆದರೆ ಮಲ್ಲಿಯ ಮಸಲತ್ತುಗಳ ಬಗ್ಗೆ ತಿಳಿದಿದ್ದ ಜನ ಠೇವಣಿಯನ್ನೂ ಉಳಿಸದಂತೆ ಆಕೆಯನ್ನು ಮನೆಗಟ್ಟಿದ್ದರು. ಆದರೂ ಮಲ್ಲಿಕಾರ್ಜುನ ಬಳ್ಳಾರಿ ಮುಂಬರುವ ಚುನಾವಣೆಯಲ್ಲಿ ತಾನೇ ಸ್ಪರ್ಧಿಸಿ ತನ್ನ ವಿರುದ್ಧ ಪಿತೂರಿ ನಡೆಸುತ್ತಿರುವವರಿಗೆ ತಕ್ಕ ಪಾಠ ಕಲಿಸುತ್ತೇನೆಂದು ಗುಟುರು ಹಾಕುತ್ತಿದ್ದಾನೆ.

ಹಾಸನ: ಪಶು ವೈದ್ಯಕೀಯ ಕಾಲೇಜಿನಲ್ಲಿ ಜಾತಿ ರಾಜಕೀಯ



ರಾಜ್ಯದಲ್ಲಿರುವ ಎಲ್ಲಾ ರೀತಿಯ ಕೋರ್ಸ್‌ಗಳು ತಮ್ಮ ಜಿಲ್ಲೆಗೆ ಬೇಕು, ಅದರಲ್ಲೂ ತಮ್ಮೂರು ಹೊಳೆನರಸೀಪುರಕ್ಕೆ ಬೇಕು. ಹೊಳೆನರಸೀಪುರಕ್ಕೆ ಕೊಡದಿದ್ದರೆ ತಮ್ಮ ಜಿಲ್ಲೆಯ ಹೆಡ್ ಕ್ವಾರ್ಟರ್ಸ್ ಹಾಸನಕ್ಕಾದ್ರೂ ಬೇಕೇಬೇಕು ಎಂದು ತನ್ನೆಲ್ಲಾ ಅಶ್ವ ಶಕ್ತಿ ಉಪಯೋಗಿಸಿ ಹಾಸನಕ್ಕೆ ಹಲವಾರು ಕಾಲೇಜುಗಳನ್ನು ತಂದ ಕೀರ್ತಿ ಜೆಡಿಎಸ್ ನಾಯಕ ಎಚ್.ಡಿ.ರೇವಣ್ಣನವರಿಗೆ ಸಲ್ಲುತ್ತದೆ. ಇವರ ಇಂತಹ ಶ್ರಮದಿಂದಾಗಿಯೇ ಇವತ್ತು ಹಾಸನ ಜಿಲ್ಲೆಯಲ್ಲಿ ಸರ್ಕಾರಿ ವೈದ್ಯಕೀಯ ಕಾಲೇಜು, ಇಂಜಿನಿಯರಿಂಗ್ ಕಾಲೇಜು, ಪಶುವೈದ್ಯಕೀಯ ಕಾಲೇಜು, ಸರ್ಕಾರಿ ಲಾ ಕಾಲೇಜು ಮಾತ್ರವಲ್ಲ ಹೊಳೆನರಸೀಪುರದಲ್ಲೂ ಒಂದು ಸರ್ಕಾರಿ ಲಾ ಕಾಲೇಜು ತಲೆ ಎತ್ತಿವೆ. ಅಷ್ಟು ಸಾಲದೆಂಬಂತೆ ರೇವಣ್ಣನ ಸ್ವಗ್ರಾಮವಾದ ಪಡುವಲಹಿಪ್ಪೆಯಲ್ಲೂ ಒಂದು ಲಾ ಕಾಲೇಜು, ಒಂದು ಬಿ.ಬಿ.ಎಂ. ಕಾಲೇಜು ಒಂದು ಸರ್ಕಾರಿ ಡಿಪ್ಲೊಮಾ ಕಾಲೇಜು ಇವೆ.


ವಸಂತ ಶೆಟ್ಟಿ

ಹೀಗೆ ರೇವಣ್ಣನ ಪರಿಶ್ರಮದ ಫಲವಾಗಿ ಜಿಲ್ಲೆಗೆ ಮಂಜೂರಾದ ಹಾಸನದ ಪಶು ವೈದ್ಯಕೀಯ ಕಾಲೇಜು ಈಗ ಒಂದಿಲ್ಲೊಂದು ಕಾರಣಕ್ಕೆ ಸುದ್ದಿಯಲ್ಲಿದೆ. ಈ ಕಾಲೇಜು ಪ್ರಾರಂಭವಾಗಿ ಆರು ವರ್ಷ ಕಳೆದಿದೆ. ಈ ಕಾಲೇಜಿನಿಂದ ಈತನಕ ಬರೋಬರಿ 60 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪದವಿ ಮುಗಿಸಿ ಹೊರಬಂದಿದ್ದಾರೆ. ಆದರೆ ಈ ಕಾಲೇಜಿಗೆ ಇಲ್ಲಿಯತನಕ ರಾಷ್ಟ್ರೀಯ ಮಾನ್ಯತಾ ಸಮಿತಿಯು ಮಾನ್ಯತೆ ನೀಡಿಲ್ಲವಾದ್ದರಿಂದ ಆ ಎಲ್ಲಾ ವಿದ್ಯಾರ್ಥಿಗಳ ಬದುಕು ಅತಂತ್ರವಾಗಿದೆ. ಇಂತಹ ಸಮಸ್ಯೆಗಳ ಆಗರವಾಗಿರುವ ಈ ಕಾಲೇಜಿನಲ್ಲಿ ಈಗೊಂದು ಹೊಸ ಅವಾಂತರ ನಡೆದಿದೆ.

ಇತ್ತೀಚೆಗೆ, ಅಂದರೆ ಜೂನ್ 14 ರಂದು, ಹಾಸನದ ಪಶು ವೈದ್ಯಕೀಯ ಕಾಲೇಜಿನ ಡೀನ್ ವಸಂತ ಶೆಟ್ಟಿ ಅವರನ್ನು ಜಾತಿನಿಂದನೆ ಆರೋಪದ ಮೇರೆಗೆ ಹಾಸನದ ಜಿಲ್ಲಾ ಪೊಲೀಸ್ ವರಿಷ್ಠ ಅಮಿತ್ ಸಿಂಗ್ ಅವರ ಕಡಕ್ ಸೂಚನೆಯಂತೆ ಪೊಲೀಸರು ಬಂಧಿಸಿದರು.

ಆರು ವರ್ಷಗಳ ಹಿಂದೆ ಈ ಕಾಲೇಜು ಪ್ರಾರಂಭವಾದಾಗ ಸರ್ಕಾರ ಇಲ್ಲಿಗೆ ಇಬ್ಬರನ್ನು ಡೆಪ್ಯೂಟ್ ಮಾಡಿತ್ತು. ಅವರಲ್ಲಿ ಒಬ್ಬರು ಕಾಲೇಜಿನ ಡೀನ್ ವಸಂತ್ ಶೆಟ್ಟಿ, ಮತ್ತೊಬ್ಬರು ಕಾಲೇಜಿನ ಸಹಪ್ರಾಧ್ಯಾಪಕ ದೇವರಾಜ್ ನಾಯಕ್.

ಈ ಹಿಂದೆ ಇವರಿಬ್ಬರೂ ಅನ್ಯೋನ್ಯವಾಗಿದ್ದಾಗ ಕಾಲೇಜಿಗೆ ಬೇಕಾದ 'ಡಿ' ದರ್ಜೆಯ ಸುಮಾರು 50ಕ್ಕೂ ಹೆಚ್ಚು ನೌಕರರನ್ನು ನೇಮಕಾತಿ ಮಾಡಿಕೊಂಡಿದ್ದರು. ಆದರೆ ಆನಂತರ ಅವರಿಬ್ಬರ ನಡುವೆ ಅದೇನಾಯಿತೋ, ಇಬ್ಬರೂ ಹಾವು ಮುಂಗೂಸಿಗಳಂತಾದರು. ಆಗ ಒಂದು ಹಂತದಲ್ಲಿ ದೇವರಾಜ್ ನಾಯಕ್ ಅವರನ್ನು ಹಾಸನದಿಂದ ಬೀದರ್‌ಗೆ ವರ್ಗಾವಣೆ ಮಾಡಲಾಯಿತು. ತನ್ನ ವರ್ಗಾವಣೆಯ ಹಿಂದೆ ವಸಂತ ಶೆಟ್ಟಿ ಕೈಗಳು ಕೆಲಸ ಮಾಡಿವೆ ಎಂದು ನಾಯಕ್ ಮನಸ್ಸಲ್ಲಿ ಅದು ಹೇಗೆ ತಲೆದೋರಿತೋ ಗೊತ್ತಿಲ್ಲ. ಆದರೆ ಅದನ್ನೇ ಪ್ರತಿಷ್ಠೆಯ ಸವಾಲಾಗಿ ತೆಗೆದುಕೊಂಡ ನಾಯಕ್ ಎಂಟು ತಿಂಗಳೊಳಗೆ ಪುನಃ ಬೀದರ್‌ನಿಂದ ಹಾಸನಕ್ಕೆ ವರ್ಗ ಮಾಡಿಸಿಕೊಂಡು ಬಂದರು.

ಅಷ್ಟಕ್ಕೆ ತೃಪ್ತರಾಗದ ನಾಯಕ್ ಇತರ ಸಿಬ್ಬಂದಿಗಳೊಂದಿಗೆ ಸೇರಿಕೊಂಡು ಡೀನ್ ವಸಂತ ಶೆಟ್ಟಿ ವಿರುದ್ಧ ಯುನಿವರ್ಸಿಟಿಗೆ ದೂರು ನೀಡಿದರು. ಮಾತ್ರವಲ್ಲದೆ ತಮಗೆ ಜಾತಿನಿಂದನೆ ಕಿರುಕುಳ ನೀಡಲಾಗಿದೆ ಎಂದು ದೂರಿ ವಿವಿಧ ಮಾನವ ಆಯೋಗಗಳಿಗೂ ದೂರುಗಳನ್ನು ಸಲ್ಲಿಸಿದರು. ಅವರು ನೀಡಿದ್ದ ಎಲ್ಲಾ ದೂರುಗಳ ಪರಿಶೀಲನೆ ಮುಗಿದು ವಸಂತ್ ಶೆಟ್ಟಿ ದೋಷಮುಕ್ತರಾಗಿ ಹೊರ ಬಂದಿದ್ದರು.


ಅಮಿತ್ ಸಿಂಗ್

ಇದೆಲ್ಲದರ ಮಧ್ಯೆ ಡೀನ್ ಶೆಟ್ಟಿಗೆ ಸಮಾನವಾಗಿ ತಾನು ಪಿಎಚ್.ಡಿ. ಪದವಿ ಮಾಡಲು ಅನುಮತಿ ನೀಡುವಂತೆ ನಾಯಕ್ ಡೀನ್‌ಗೆ ಪತ್ರ ಬರೆದಿದ್ದರು. ಅದಕ್ಕೆ ಶೆಟ್ಟಿ ಕ್ಯಾರೆ ಎನ್ನದಿದ್ದಾಗ ಯುನಿವರ್ಸಿಟಿ ಮೂಲಕ ನಾಯಕ್ ರೆಕಮೆಂಡೇಷನ್ ಪತ್ರ ತಂದರು. ಆದರೆ ಡೀನ್ ಶೆಟ್ಟಿ ಆ ರೆಕಮೆಂಡೇಷನ್ ಪತ್ರದ ಮೇಲೆ "ಇವರಿಗೆ ಪಿಎಚ್.ಡಿ. ಮಾಡುವ ಅರ್ಹತೆಯೇ ಇಲ್ಲ ಹಾಗೂ ಅವರ ಅಗತ್ಯವೂ ಕಾಲೇಜಿಗೆ ಇಲ್ಲ" ಎಂದು ವರದಿ ಬರೆದರು. ಆದರೂ ಕುಲಪತಿಗಳ ಸೂಚನೆಯಂತೆ ನಾಯಕ್ ಪಿಎಚ್.ಡಿ ಬರೆಯಲು ಬೆಂಗಳೂರಿಗೆ ತೆರಳಿದರು. ಇದೆಲ್ಲ ನಡೆದು ಈ ಎಂಟು ತಿಂಗಳುಗಳೇ ಕಳೆದುಹೋಗಿದೆ.

ಹೇಗಾದರೂ ಮಾಡಿ ಡೀನ್ ಶೆಟ್ಟಿಯನ್ನು ಹಣಿಯಲು ಹೊಂಚು ಹಾಕುತ್ತಿದ್ದ ಕಾಲೇಜಿನ ಕೆಲ ಪ್ರಾಧ್ಯಾಪಕರು ಹಾಗು ದೇವರಾಜ್ ನಾಯಕ್ ಸೇರಿಕೊಂಡು ಎಂಟು ತಿಂಗಳ ಹಿಂದೆ ತಮಗೆ ಡೀನ್ ವಸಂತ ಶೆಟ್ಟಿ ಜಾತಿನಿಂದನೆ ಮಾಡಿದ್ದಾರೆಂದು ಆರೋಪಿಸಿ ಹಾಸನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅಮಿತ್‌ಸಿಂಗ್‌ಗೆ ದೂರು ಕೊಟ್ಟರಲ್ಲದೆ ಡೀನ್ ಶೆಟ್ಟಿಯವರನ್ನು ಬಂಧಿಸುವಂತೆ ಸಚಿವರೊಬ್ಬರಿಂದ ಶಿಫಾರಸ್ಸನ್ನೂ ಮಾಡಿಸಿದರು.

ತಾನೊಬ್ಬ ಜಿಲ್ಲಾ ಎಸ್.ಪಿ ಎಂಬುದನ್ನು ಅಕ್ಷರಶಃ ಮರೆತು ಅವರಿವರಿಂದ ಬರುವ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತರುವುದೇ ತನ್ನ ಕರ್ತವ್ಯ ಎಂದು ಭಾವಿಸಿರುವ ಜಿಲ್ಲಾ ಎಸ್.ಪಿ ಅಮಿತ್‌ಸಿಂಗ್ ಹಿಂದೆಮುಂದೆ ನೋಡದೆ ಡೀನ್ ಶೆಟ್ಟಿ ವಿರುದ್ಧ ಜಾತಿನಿಂದನೆ ಪ್ರಕರಣವನ್ನೇ ದಾಖಲಿಸಿಕೊಂಡು ಬಿಟ್ಟರು. ಇದೇ ವೇಳೆ ಡೀನ್ ಶೆಟ್ಟಿ ಅವರು ಜಾತಿನಿಂದನೆ ಮಾಡಿಲ್ಲವೆಂದು ಅದೇ ಕಾಲೇಜಿನ ಸುಮಾರು 40 ಹೆಚ್ಚು ದಲಿತ ನೌಕರರು ಜಿಲ್ಲಾ ಎಸ್.ಪಿ.ಗೆ ಮನವಿ ನೀಡಿದರು.

ಆದರೇನಂತೆ ಡೀನ್ ಶೆಟ್ಟಿಯ ವಿರುದ್ಧ ದೂರು ದಾಖಲಿಸಿಕೊಂಡ ಪೊಲೀಸರು ತಾವೊಬ್ಬ ಖತರ್‌ನಾಕ್ ಕಳ್ಳನನ್ನು ಹಿಡಿಯುತ್ತಿದ್ದೇವೆ ಎಂಬಂತೆ ಅವರನ್ನು ಹಿಡಿದು ತಂದು ಜೈಲಿಗಟ್ಟಿದರು. ಒಂದು ದಿನ ಜೈಲು ವಾಸ ಅನುಭವಿಸಿದ ಡೀನ್ ಶೆಟ್ಟಿಗೆ ಮರುದಿನವೇ ಜಿಲ್ಲಾ ನ್ಯಾಯಾಲಯ ಜಾಮೀನು ನೀಡಿ ಹೊರಕಳುಹಿಸಿದೆ.

ಈ ಪ್ರಕರಣದಿಂದಾಗಿ ಕಾಲೇಜಿಗೆ ಅವಮಾನವಾಗಿದೆ ಎಂದು ಇತ್ತೀಚೆಗೆ ಡೀನ್ ಶೆಟ್ಟಿಯನ್ನು ಉಡುಪಿಗೆ ವರ್ಗಾವಣೆ ಮಾಡಲಾಗಿದೆ. ಆ ಮೂಲಕ ಹಾಸನ ಪಶು ವೈದ್ಯ ಕಾಲೇಜಿನಲ್ಲಿ ನಡೆಯುತ್ತಿದ್ದ ಜಾತಿಜಗಳ ತಾತ್ಕಾಲಿಕ ವಿರಾಮ ನೀಡಲಾಗಿದೆ.

ಒಟ್ಟಾರೆಯಾಗಿ ಈ ಪ್ರಕರಣದಿಂದ ಓರ್ವ ಅಸಮರ್ಥ ವ್ಯಕ್ತಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯಾಗಿದ್ದರೆ ಏನೆಲ್ಲಾ ಎಡವಟ್ಟುಗಳಾಗುತ್ತದೆ ಎಂಬುದಕ್ಕೆ ಒಂದು ಸ್ಪಷ್ಟ ಉದಾಹರಣೆ ಆಗಿದೆ. ಮಾತ್ರವಲ್ಲ ಜಾತಿನಿಂದನೆ ಕಾನೂನು ಹೇಗೆಲ್ಲಾ ದುರ್ಬಳಕೆಯಾಗುತ್ತಿದೆ ಎಂಬುದಕ್ಕೂ ಸಾಕ್ಷಿಯಾಗಿದೆ.

● ವರದಿಗಾ

ಕೆಜಿಎಫ್ ಶಾಸಕಿ ರಾಮಕ್ಕನ ಭೂಹಗರಣ


ರಾಮಕ್ಕ


ಮಗ ಸಂಪಂಗಿ ಮಾಡಿದ ಯಡವಟ್ಟಿನಿಂದಾಗಿ ಕೆಜಿಎಫ್‌ನ ಹಾಲಿ ಬಿಜೆಪಿ ಶಾಸಕಿ ರಾಮಕ್ಕ ಜೈಲು ಹಾದಿಯತ್ತ ಮುಖ ಮಾಡಿ ಕೂರುವಂತಾಗಿದೆ. ತಾನು ಶಾಸಕಿಯಾಗುವುದಕ್ಕೂ ಮುಂಚೆಯೇ ಅಂದರೆ ಆಕೆಯ ಮಗ ವೈ.ಸಂಪಂಗಿ ಶಾಸಕನಾಗಿದ್ದಾಗ ಅಧಿಕಾರ ದುರುಪಯೋಗಪಡಿಸಿಕೊಂಡು ನಡೆಸಿದ ಭೂಹಗರಣವೊಂದು ರಾಮಕ್ಕನ ಕುತ್ತಿಗೆಗೆ ಸುತ್ತಿಕೊಂಡಿದೆ. ಕೇವಲ ಭೂಹಗರಣ ಮಾತ್ರವಲ್ಲದೆ ಈ ಪ್ರಕರಣದಲ್ಲಿ ಫೋರ್ಜರಿ ಆರೋಪಕ್ಕೂ ತಾಯಿ, ಮಗ ಈಡಾಗಿದ್ದಾರೆ.

ಬರೋಬ್ಬರಿ 65 ಎಕರೆಯಷ್ಟು ಗೋಮಾಳ ಜಮೀನನ್ನು ಲಪಟಾಯಿಸುವ ಸಲುವಾಗಿ ಕೆಜಿಎಫ್‌ನ ಮಾಜಿ ಶಾಸಕ ಸಂಪಂಗಿ 2010ರಲ್ಲಿ 1.23 ಎಕರೆ ಜಮೀನನ್ನು ತಾಯಿ ರಾಮಕ್ಕನ ಹೆಸರಲ್ಲಿ ಖರೀದಿಸಿದ್ದ. ಆದರೆ ಇಡೀ ಖರೀದಿಯೇ ಬೋಗಸ್ ಎಂಬುದೀಗ ರುಜುವಾತಾಗಿದೆ. ಯಾಕೆಂದರೆ ಅಸಲಿ ಮಾಲೀಕನ ಹೊರತಾಗಿ ಮೂರನೇ ವ್ಯಕ್ತಿ ಫೋರ್ಜರಿ ಮಾಡಿ ಜಮೀನನ್ನು ಮಾರಾಟ ಮಾಡಿದ್ದಾನೆ. ಆ ಮೂರನೇ ವ್ಯಕ್ತಿಯನ್ನು ಸಂಪಂಗಿಯೇ ಅಣಿ ಮಾಡಿಕೊಂಡಿರಬಹುದಾದ ಸಾಧ್ಯತೆಯೂ ಇದೆ.

ಇದಕ್ಕೆ ಸಂಬಂಧಿಸಿದಂತೆ ಈ ಮೊದಲೇ ದೂರು ದಾಖಲಾಗಿತ್ತಾದರೂ ಪೊಲೀಸರು ಯಾವುದೇ ಕ್ರಮಕ್ಕೆ ಮುಂದಾಗಿರಲಿಲ್ಲ, ಇತ್ತೀಚೆಗೆ ಕೆಜಿಎಫ್‌ನ ಪ್ರಥಮ ದರ್ಜೆ ನ್ಯಾಯಾಧೀಶರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುವಂತೆ ಪೊಲೀಸರಿಗೆ ಶಿಫಾರಸ್ಸು ಮಾಡಿದನಂತರ ರಾಮಕ್ಕನೂ ಸೇರಿದಂತೆ ಒಟ್ಟು ಆರು ಜನರ ಮೇಲೆ ವಂಚನೆಯ ಕೇಸು ದಾಖಲಿಸಿಕೊಂಡು ತನಿಖೆ ಶುರು ಮಾಡಿಕೊಂಡಿದ್ದಾರೆ. ರಾಮಕ್ಕನಲ್ಲದೆ ಶ್ರೀರಾಮಪ್ಪ, ಶ್ರೀರಾಮರೆಡ್ಡಿ, ಎ.ರವಿಕುಮಾರ್, ವೆಂಕಟಮ್ಮ ಮತ್ತು ಕೊಟ್ಟೂರು ನಾರಾಯಣಪ್ಪ ಎಂಬುವವರೂ ಈ ಪ್ರಕರಣದಲ್ಲಿ ಆರೋಪಿಗಳಾಗಿ ತಗುಲಿಕೊಂಡಿದ್ದಾರೆ.

ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದಾಗ ಇಡೀ ರಾಜ್ಯದಲ್ಲಿ ನಡೆದ ಭೂದರೋಡೆ ದಂಧೆ ಕೋಲಾರದಲ್ಲೂ ಚುರುಕು ಪಡೆದುಕೊಂಡಿತ್ತು, ಅದರ ಲಾಭ ಮಾಡಿಕೊಳ್ಳಲು ಆಗಿನ ಶಾಸಕ ಸಂಪಂಗಿ, ಕಗ್ಗೀಹಳ್ಳಿ ಸಮೀಪದ 65 ಎಕರೆ ಗೋಮಾಳ ಭೂಮಿಯನ್ನು ಲಪಟಾಯಿಸುವ ಯೋಜನೆ ರೂಪಿಸಿದ್ದ. ಅದಕ್ಕೆ ಸರಿಯಾಗಿ ದಾಕ್ಷಾಯಿಣಿ ಎಂಬ ಭ್ರಷ್ಟೆಯೊಬ್ಬಳು ಬಂಗಾರಪೇಟೆಯ ತಹಸೀಲ್ದಾರಳಾಗಿ ಬಂದದ್ದು ಸಂಪಂಗಿಗೆ ಅನುಕೂಲವೇ ಆಗಿತ್ತು. ಈಕೆಯ ಅವಧಿಯಲ್ಲಿ ತಾಲ್ಲೂಕಿನ ಬೇತಮಂಗಲ ಮತ್ತು ರಾಬರ್ಟ್ಸ್‌ನ್‌ಪೇಟೆ ಹೋಬಳಿ ವ್ಯಾಪ್ತಿಯ ಸರಿಸುಮಾರು 2000 ಎಕರೆ ಗೋಮಾಳ ಜಮೀನು ಲಂಗುಲಗಾಮಿಲ್ಲದೆ ಪರಭಾರೆಯಾಗಿದೆ. ಇದೇ ಸಮಯದಲ್ಲಿ 65 ಎಕರೆ ಗೋಮಾಳಕ್ಕೆ ದೃಷ್ಟಿನೆಟ್ಟ ಸಂಪಂಗಿ ಅದನ್ನು ಒತ್ತುವರಿ ಮಾಡಿಕೊಳ್ಳಲು ಅನುಕೂಲವಾಗುವಂತೆ ಗೋಮಾಳದ ಸುತ್ತಮುತ್ತಲಿನ 12 ಎಕರೆ ಕೃಷಿ ಜಮೀನನ್ನು ಬಡ ರೈತರಿಂದ ಯಾಮಾರಿಸಿ ಖರೀದಿ ಮಾಡಿದ್ದ. ಅದರ ಮುಂದುವರೆದ ಭಾಗವಾಗಿಯೇ ಅಲ್ಲೇ ಇದ್ದ 1.23 ಎಕರೆ ಜಮೀನನ್ನೂ ಶ್ರೀರಾಮಪ್ಪ ಎಂಬಾತನಿಂದ ಖರೀದಿಸುವ ವ್ಯವಹಾರ ಸೃಷ್ಟಿಸಿದ್ದ.

ಅಸಲಿಗೆ ಶ್ರೀರಾಮಪ್ಪ ಆ ಜಮೀನಿಗೆ ಒಡೆಯನೇ ಆಗಿರಲಿಲ್ಲ, ಆದಂಪಲ್ಲಿಯ ಭೀರಪ್ಪ ಎಂಬಾತ ಈ ಜಮೀನಿನ ನಿಜವಾದ ವಾರಸುದಾರ. ಆದರೆ ಭೀರಪ್ಪ 2009ರಲ್ಲಿ ಶ್ರೀರಾಮಪ್ಪನಿಗೆ ಜಿಪಿಎ (ಜನರಲ್ ಪವರ್ ಆಫ್ ಅಟಾರ್ನಿ) ಬರೆದುಕೊಟ್ಟಿದ್ದ ಎನ್ನಲಾಗಿದೆ. ಇದನ್ನೇ ಬಂಡವಾಳ ಮಾಡಿಕೊಂಡ ಶ್ರೀರಾಮಪ್ಪ ಇನ್ನಿತರೆ ನಾಲ್ಕು ಆರೋಪಿಗಳೊಂದಿಗೆ ಸೇರಿ ರಾಮಕ್ಕನಿಗೆ ಆ ಜಮೀನನ್ನು ಮಾರ್ಚ್ 10, 2010ರಂದು ಮಾರಾಟ ಮಾಡಿದ್ದ. ಈ ರೀತಿಯಾಗಿ ಗೋಮಾಳದ ಆಕ್ಕಪಕ್ಕದಲ್ಲಿದ್ದ ಹದಿನೈದು ಎಕರೆ ಜಮೀನನ್ನು ಖರೀದಿಸಿದ ವೈ.ಸಂಪಂಗಿ ಅಧಿಕಾರ ದುರುಪಯೋಗಪಡಿಸಿಕೊಂಡು 65 ಎಕರೆ ಗೋಮಾಳವನ್ನು ಲಪಟಾಯಿಸಿದ್ದ.



ಸಂಪಂಗಿ

ಆದರೆ 2011ರಲ್ಲಿ ತನ್ನ ಅರಿವೇ ಬಾರದಂತೆ ತನ್ನ 1.23 ಎಕರೆ ಜಮೀನು ಮಾರಾಟವಾಗಿರುವುದು ತಿಳಿಯುತ್ತಿದ್ದಂತೆ ಭೀರಪ್ಪ ಕೋರ್ಟ್‌ನ ಮೆಟ್ಟಿಲೇರಿದ್ದ. ದಾಖಲೆಗಳನ್ನು ತಿರುಚಿ ವ್ಯವಹಾರ ನಡೆಸಲಾಗಿದೆ, ಅಲ್ಲದೆ ತಾನು ಶ್ರೀರಾಮಪ್ಪನಿಗೆ ಜಿಪಿಎಯನ್ನು ನೀಡಿಯೇ ಇಲ್ಲವೆನ್ನುವುದಾಗಿ ಭೀರಪ್ಪ ಆರೋಪಿಸಿದ್ದ. ದಾಖಲೆಗಳನ್ನು ಪರಿಶೀಲಿಸಿದ ಜೆ.ಎಂ.ಎಫ್.ಸಿ.ಯ ಹಿರಿಯ ನ್ಯಾಯಮೂರ್ತಿಗಳು ಜೂನ್ 26ರಂದು 'ದಾಖಲೆಗಳನ್ನು ತಿರುಚಿರುವ ಸಾಧ್ಯತೆ ಸ್ಪಷ್ಟವಾಗಿರುವುದರಿಂದ ಸಂಪೂರ್ಣ ವ್ಯವಹಾರವನ್ನು ಅಕ್ರಮ ಎಂದು ಪರಿಗಣಿಸಿ ಮಾರಾಟ ಮಾಡಿದವರು ಹಾಗೂ ಖರೀದಿಸಿದವರ ವಿರುದ್ಧ ವಂಚನೆಯ ದೂರು ದಾಖಲಿಸಿಕೊಂಡು ತನಿಖೆ ನಡೆಸಿ' ಎಂಬುದಾಗಿ ಪೊಲೀಸರಿಗೆ ಸೂಚನೆ ನೀಡಿದ್ದರು.

ಈ ನಡುವೆ ಸಂಪಂಗಿ ಅಧಿಕಾರದ ಪ್ರಭಾವ ಬಳಸಿ ತನಿಖೆಯನ್ನು ಮಂದಗೊಳಿಸುವ ಪ್ರಯತ್ನ ಮಾಡುತ್ತಿರುವ ಸೂಚನೆಯೂ ಕಂಡು ಬಂದಿತ್ತು, ಅದನ್ನು ಪ್ರತಿಭಟಿಸಿ ಇತ್ತೀಚೆಗಷ್ಟೆ ಇತರೆ ರಾಜಕೀಯ ಪಕ್ಷಗಳು ಕೆಜಿಎಫ್ ಬಂದ್ ನಡೆಸಿದ ತರುವಾಯ ತನಿಖೆ ಕೊಂಚ ವೇಗ ಪಡೆದುಕೊಂಡಿದೆ. ಹಾಗೇನಾದರೂ ಬೋಗಸ್ ಜಿಪಿಎ ಸೃಷ್ಟಿಸಿಕೊಂಡು ಖರೀದಿ ನಡೆಸಿದ್ದೇ ನಿಜವಾದರೆ ರಾಮಕ್ಕ ಕಂಬಿ ಎಣಿಸಬೇಕಾದ ಅವಕಾಶವೇ ಹೆಚ್ಚು, ಯಾರೋ ಮೂರನೆಯವರು ಫೋರ್ಜ[...] ಮಾಡಿ ತಂದಿಟ್ಟ ದಾಖ[...] ನೋಡಿ ದುಡ್ಡು ಸುರಿಯುವ[...] ಸಂಪಂಗಿ, ಕಮಂಗಿಯಂ[...] ವೆನ್ನುವುದು ಎಲ್ಲರಿಗ[...] ಗೊತ್ತಿರುವ ವಿಚಾರ. ಅಲ್ಲ[...] ಸಂಪಂಗಿಯ ಪ್ರಳಯಾಂತಕತ[...] ಮತ್ತು ಅಧಿಕಾರ ಪ್ರಭಾ[...] ಅರಿವಿದ್ದ ಎಂತಹ ವಂಚಕ[...] ಆದರೂ ಅವನಿಗೆ ಫೋರ್ಜ[...] ಜಮೀನು ಮಾರಾಟ ಮಾ[...] ನಿಭಾಯಿಸಿಕೊಳ್ಳಲು ಸಾಧ್ಯವಿ[...] ವೆನ್ನುವುದೂ ಸುಸ್ಪಷ್ಟ. ಹಾಗಾ[...] ದಾಖಲೆಗಳಲ್ಲಿ ಫೋರ್ಜ[...] ನಡೆದದ್ದೇ ಆದರೆ ಅದರ[...] ಸಂಪಂಗಿಯ ಕರಾಮತ್ತೇ ಪ್ರಧಾನ ವಾಗಿರುತ್ತೆ. ಸಮಗ್ರ ಖರೀದಿಯೆಲ್ಲವೂ ರಾಮಕ್ಕ[...] ಹೆಸರಿನಲ್ಲೇ ನಡೆದಿರೋದರಿಂದ ಆಕೆ ಜೈಲ[...] ಪಾಲಾಗುವುದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿ[...]

ವೈ.ಸಂಪಂಗಿ ಅದೆಂತಹ ನಾಜೂಕಯ್ಯನೆಂದರೆ ಹಿ[...] ಲಪಟಾಯಿಸಿದ ಸರ್ಕಾರಿ ಗೋಮಾಳ ಮತ್ತು ಫೋರ್ಜ[...] ದಾಖಲೆ ಜಮೀನುಗಳ ಮೇಲೆಯೇ ಕೆಜಿಎಫ್ ಕಾರ್ಪೋರೇಷನ್ ಬ್ಯಾಂಕ್‌ನಿಂದ 1.6 ಕೋಟಿ ಸಾಲವನ್ನು ಎತ್ತಿಕೊಂಡಿದ್ದಾನೆ. ಈ ಹಿಂದೆ ಲಂಚ ತೆಗೆದುಕೊಳ್ಳುವಾಗ ರೆಡ್ ಹ್ಯಾಂಡಾಗಿ ತಗುಲಿಕೊಂಡು ಜೈಲು ದರ್ಶನ ಮಾ[...] ಬಂದಿರುವ ಸಂಪಂಗಿ ಇನ್ನೂ ಬುದ್ಧಿ ಕಲಿತಿಲ್ಲವೆನ್ನುವದಂತೂ ಸತ್ಯ! ಹಾಗಾಗಿಯೇ ಕಳೆದ ಚುನಾವಣೆಯಲ್ಲಿ ಕಳಂಕಿತನಾ[...] ತನಗೆ ಟಿಕೆಟ್ ಕೈತಪ್ಪಲಿದೆ ಎನ್ನುವ ಸೂಚನೆ ಸಿಗುತ್ತಿದ್ದ[...] ತಾಯಿ ರಾಮಕ್ಕನಿಗೆ ಬಿಜೆಪಿ ಟಿಕೆಟ್ ಗಿಟ್ಟಿಸಿಕೊಂ[...] ಹಣದ ಹೊಳೆಹರಿಸಿ ಗೆಲುವನ್ನೂ ದಕ್ಕಿಸಿಕೊಂಡಿದ್ದ. ಅಂತ[...] ಭ್ರಷ್ಟ ಮಗನಿಗೆ ಸಾಥ್ ನೀಡಲು ರಾಜಕಾರಣಕ್ಕೆ ಧುಮು[...] ರಾಮಕ್ಕನಿಗೆ ಭರ್ಜರಿ ಸ್ವಾಗತವೇ ಸಿಕ್ಕಂತಾಗಿದೆ.

● ವರದಿಗಾ



ಶಿವರಾಜ್ ತಂಗಡಗಿ

ತುಳಸಿ ಮದ್ದಿನೇನಿಯ ವರ್ಗಾವಣೆ ಪತ್ರ

GOVERNMENT OF KARNATAKA

No: DPAR 496 SAS 2013

Karnataka Government Secretariat,
Vidhana Soudha,
Bangalore, dated 27th June, 2013.

NOTIFICATION


Smt. Thulasi Maddineni, IAS (KN:2005), is transferred from the post of *Deputy Commissioner, Koppal District* with immediate effect and *Sri Govinda Reddy, KAS, Additional Deputy Commissioner, Koppal District* is placed in additional charge of the post of *Deputy Commissioner, Koppal District* until further orders.

BY ORDER AND IN THE NAME OF THE
GOVERNOR OF KARNATAKA

27.06.13


(U.H.Narayanaswamy)
Under Secretary to Government
DP & AR (Services – I)

ರಾಮಮೋಹನ್ ಹೆಸರಿನಲ್ಲಿರುವ ದಾಖಲೆ



ಭಂಡ ತಂಗಡಗಿ ಬ್ರದರ್ಸ್

ಸದಾ ಒಂದಿಲ್ಲೊಂದು ಕ್ಯಾತೆ ತೆಗೆಯುತ್ತಲೇ ಸುದ್ದಿಯಲ್ಲಿರುವ ಸಣ್ಣ ನೀರಾವರಿ ಮಂತ್ರಿ ಶಿವರಾಜ್ ತಂಗಡಗಿ ಮತ್ತು ಆತನ ತಮ್ಮ ನಾಗರಾಜ್ ತಂಗಡಗಿ ಈಗ ಅಮಾಯಕನ ಜಮೀನಿಗೆ ಕೈಹಾಕಿ ಮೈಕೈ ಹೊಲಸು ಮಾಡಿಕೊಂಡಿದ್ದಾರೆ. ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಕಾರಟಗಿ ಹಳ್ಳಿಯ ಸರ್ವೇ ನಂಬರ್ 322/1/2 ರಲ್ಲಿರುವ ರಾಮಮೋಹನ್ ಎಂಬುವವರಿಗೆ ಸೇರಿದ 21 ಗುಂಟೆ ಜಾಗವನ್ನು ಸದ್ದಿಲ್ಲದೇ ಗುಳುಂ ಮಾಡಿ ಭವ್ಯಬಂಗಲೆ ಕಟ್ಟಿಸಲು ಹೊರಟಿದ್ದ ನಾಗರಾಜ್ ತಂಗಡಗಿಗೆ ಕೊಪ್ಪಳ ಜಿಲ್ಲಾಧಿಕಾರಿ ತುಳಸಿ ಮದ್ದಿನೇನಿ ಅಡ್ಡಗಾಲು ಹಾಕಿದ್ದೇ ದೊಡ್ಡ ಗದ್ದಲಕ್ಕೆ ಕಾರಣವಾಯಿತು. ತನ್ನ ಗುಳುಂ ಕಾರ್ಯಕ್ರಮಕ್ಕೆ ಅಡ್ಡಿಪಡಿಸಿದ ಜಿಲ್ಲಾಧಿಕಾರಿ ಮದ್ದಿನೇನಿಯವರನ್ನು ಕೊಪ್ಪಳದಿಂದಲೇ ವರ್ಗಾವಣೆ ಮಾಡಿಸುವುದಾಗಿ ತಂಗಡಗಿ ಸಹೋದರರಿಬ್ಬರೂ ಕಂಡಕಂಡಲ್ಲಿ ಗುಟುರು ಹಾಕಿಕೊಂಡು ತಿರುಗಾಡುತ್ತಿದ್ದರು. ಕೊನೆಗೆ ಅದರಲ್ಲಿ ಯಶಸ್ವಿಯೂ ಆದರೆನ್ನಿ. ಮೊನ್ನೆ ಜೂನ್ 27ರಂದು ಕೊನೆಗೂ ತುಳಸಿ ಮದ್ದಿನೇನಿಗೆ ತಮ್ಮ ವರ್ಗಾವಣೆಯ ಆದೇಶ ತಲುಪಿತು. ಆ ಜಾಗಕ್ಕೆ ಮುಂದಿನ ಆದೇಶ ಬರುವವರೆಗೆ ಹೆಚ್ಚುವರಿ ಜಿಲ್ಲಾಧಿಕಾರಿ ಗೋವಿಂದ ರೆಡ್ಡಿ ಅವರನ್ನು ಸರ್ಕಾರ ಕೂರಿಸಿದೆ.



ರಾಮಮೋಹನ್

ಈ ತುಳಸಿ ಮದ್ದಿನೇನಿ ಸೋಲನ್ನು ಸುಲಭವಾಗಿ ಒಪ್ಪಿಕೊಳ್ಳುವ ಜಾಯಮಾನದವರಲ್ಲ ಅನ್ನಿಸುತ್ತೆ. ಆದ್ದರಿಂದಲೇ ತಂಗಡಿಗಳು ಚಾಪೆ ಕೆಳಗೆ ನುಸಿಯುವ ಪ್ರಯತ್ನ ಮಾಡುತ್ತಿದ್ದರೆ ಮದ್ದಿನೇನಿ ರಂಗೋಲಿ ಕೆಳಗೆ ನುಸಿದಿದ್ದಾರೆ. ತಮ್ಮನ್ನು ವರ್ಗಾವಣೆ ಮಾಡಿಸುವಂತಹ ಕಿತಾಪತಿಯನ್ನು ತಂಗಡಿಗಳು ಮಾಡೇ ಮಾಡುತ್ತಾರೆ ಅಂತ ಮದ್ದಿನೇನಿ ನಿರೀಕ್ಷಿಸಿದ್ದರು ಅನ್ನಿಸುತ್ತೆ. ಹಾಗಾಗಿಯೇ ಆ ತಂಗಡಿಗಳಿಗೆ ಮರ್ಮಾಂಗಕ್ಕೆ ಆಘಾತ ಉಂಟುಮಾಡುವಂತಹ ಆದೇಶವನ್ನು ಅವರು ರೆಡಿ ಮಾಡಿಟ್ಟುಕೊಂಡಿದ್ದರು. ತಮ್ಮ ವರ್ಗಾವಣೆಯ ಆದೇಶ ಬಂದ ದಿನದಂದೇ, ಅಂದರೆ ಜೂನ್ 27ರಂದೇ ಕಾರಟಗಿ ಹಳ್ಳಿಯ ಸರ್ವೇ ನಂಬರ್ 322/1/2 ರಲ್ಲಿರುವ 21 ಗುಂಟೆ ಜಾಗ ನಾಗರಾಜ್ ತಂಗಡಗಿಗೆ ಸೇರಿದ್ದಲ್ಲ ಎಂಬ ಮಹತ್ವಪೂರ್ಣ ತೀರ್ಪನ್ನು ಹೊರಡಿಸಿ ಆ ನಂತರ ತಮ್ಮ ವರ್ಗಾವಣೆಯ ಆದೇಶವನ್ನು ಸ್ವೀಕರಿಸಿದರು! ಆ ಜಾಗದಲ್ಲಿ ಆಗಲೇ ಕೋಟ್ಯಾಂತರ ರೂಪಾಯಿ ಸುರಿದು ಮುಕ್ಕಾಲು ಭಾಗ ಭವ್ಯ ಬಂಗಲೆಯನ್ನು ಕಟ್ಟಿ ಮುಗಿಸಿರುವ ನಾಗರಾಜ ತಂಗಡಗಿಗೆ ಮದ್ದಿನೇನಿಯ ಈ ತೀರ್ಪು ಅದೆಂತಹ ಏಟು ಕೊಟ್ಟಿತೆಂಬುದನ್ನು ಆತ ಮಾತ್ರ ಬಲ್ಲ.

ಅದು ಶುರುವಾದದ್ದು ಹೀಗೆ.

ಗಂಗಾವತಿ ತಾಲೂಕಿನ ಕಾರಟಗಿ ಗ್ರಾಮದ ಸರ್ವೇ ನಂಬರ್ 322/1/2 ರ 36 ಗುಂಟೆ ಜಾಗದಲ್ಲಿ ನಾಗರಾಜ ತಂಗಡಗಿ ಒಂದು ವರ್ಷದ ಹಿಂದೆ ಭವ್ಯವಾದ ಬಂಗಲೆಯನ್ನು ನಿರ್ಮಿಸಲು ಪ್ರಾರಂಭಿಸಿದ. ಆ ಮೂವತ್ತಾರು ಗುಂಟೆ ಜಾಗದಲ್ಲಿ 21 ಗುಂಟೆ ಜಾಗ ವಾಸ್ತವದಲ್ಲಿ ಅದೇ ಊರಿನ ರಾಮಮೋಹನ್ ಅವರಿಗೆ ಸೇರಿದ್ದು. ಅಸಲಿಗೆ ನಾಗರಾಜ್ ತಂಗಡಗಿ ಕಳೆದ ನಾಲ್ಕೈದು ವರ್ಷಗಳ ಹಿಂದಿನಿಂದಲೇ ಆ ಜಾಗಕ್ಕೆ ನಕಲಿ ದಾಖಲೆ ಸೃಷ್ಟಿಸಿ ತಾನೇ ಜಾಗದ ಒಡೆಯ ಎಂಬಂತೆ ಮಾಡಿಕೊಂಡಿದ್ದ. ಅದಕ್ಕೆ ಗಂಗಾವತಿ ತಾಲೂಕು ಆಫೀಸಿನ ಅಧಿಕಾರಿಗಳೂ ನೆರವಾಗಿದ್ದರು. ತಮ್ಮ ಜಾಗದಲ್ಲೊಂದು ಬಂಗಲೆ ತಲೆ ಎತ್ತಲಾರಂಭಿಸಿದ ನಂತರವಷ್ಟೇ ನಾಗರಾಜ ತಂಗಡಗಿ ತಮ್ಮ ಜಾಗವನ್ನು ನಕಲಿ ದಾಖಲೆ ಸೃಷ್ಟಿಸಿ ಗುಳುಂ ಮಾಡಿರುವುದು ರಾಮಮೋಹನ್ ಅವರಿಗೆ ಗೊತ್ತಾಗಿದ್ದು.

ರಾಮಮೋಹನ್ ಅವರು ಕೂಡಲೇ ಜಿಲ್ಲಾಧಿಕಾರಿಗಳಿಗೆ ದೂರು ಕೊಟ್ಟರು. ಆ ದೂರನ್ನು ಆಧರಿಸಿ ವಿಚಾರಣೆ ನಡೆಸಿದ ಜಿಲ್ಲಾಧಿಕಾರಿಗಳ ನ್ಯಾಯಾಲಯ ತಂಗಡಗಿ ಕಟ್ಟಡ ನಿರ್ಮಾಣವನ್ನು ನಿಲ್ಲಿಸಬೇಕು ಎಂಬ ತಡೆಯಾಜ್ಞೆ ನೀಡಿತು. ಇದನ್ನು ಪ್ರಶ್ನಿಸಿ ನಾಗರಾಜ ತಂಗಡಗಿ ಹೈಕೋರ್ಟ್ ಮೆಟ್ಟಿಲೇರಿದ. ಜಿಲ್ಲಾಧಿಕಾರಿ ನ್ಯಾಯಾಲಯ ನೀಡಿದ ತಡೆಯಾಜ್ಞೆಯನ್ನು ಹೈಕೋರ್ಟು ಆರಂಭದಲ್ಲಿ ತೆರವುಗೊಳಿಸಿತಾದರೂ ನಂತರದಲ್ಲಿ ಪ್ರಕರಣವನ್ನು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲೇ ಇತ್ಯರ್ಥಪಡಿಸಿಕೊಳ್ಳಿ ಎಂದು ವಾಪಾಸ್ಸು ಕಳಿಸಿತು.



ತಂಗಡಗಿ ಸಹೋದರರು ಕಟ್ಟಿಸುತ್ತಿರುವ ಬಂಗಲೆ



ತುಳಸಿ ಮದ್ದಿನೇನಿ

ಯಾವಾಗ ಕೇಸು ಮತ್ತೆ ಜಿಲ್ಲಾಧಿಕಾರಿ ತುಳಸಿ ಮದ್ದಿನೇನಿ ಅವರ ಅಂಗಳಕ್ಕೆ ಬಿತ್ತೋ, ಕೋಟ್ಯಾಂತರ ರೂಪಾಯಿ ಬಾಳುವ ಜಾಗ ಮತ್ತು ಅದರ ಮೇಲೆ ಕಟ್ಟಿರುವ ಭವ್ಯ ಬಂಗಲೆ ತಮ್ಮ ಕೈತಪ್ಪಿ ಹೋಗುವುದು ತಂಗಡಿ ಬ್ರದರ್ಸ್‌ಗೆ ಗ್ಯಾರಂಟಿಯಾಗಿ ಹೋಯಿತು. ಆದ್ದರಿಂದ ಅವರು ಮದ್ದಿನೇನಿಯನ್ನು ಹೇಗಾದರೂ ಮಾಡಿ ಕೊಪ್ಪಳದಿಂದ ಎತ್ತಂಗಡಿ ಮಾಡಿಸಿ ಆ ಜಾಗಕ್ಕೆ ತಮ್ಮ ಆಣತಿಯಂತೆ ನಡೆಯುವ ವ್ಯಕ್ತಿಯನ್ನು ತಂದು ಕೂರಿಸಲು ಸಂಚು ರೂಪಿಸಿದ್ದರು. ಅದರ ಸುಳಿವು ಅರಿತ ಮದ್ದಿನೇನಿ ಕೊಪ್ಪಳದಿಂದ ಕಾಲ್ತೆಗೆಯುವ ಮುನ್ನ ಅವರಿಗೊಂದು ಬಲವಾದ ಪೆಟ್ಟು ಕೊಡಲು ನಿರ್ಧರಿಸಿದ್ದರು. ತಂಗಡಗಿಗಳು ಮತ್ತು ಮದ್ದಿನೇನಿ - ಇಬ್ಬರೂ ತಮ್ಮ ತಮ್ಮ ಉದ್ದೇಶದಲ್ಲಿ ಸಫಲರಾಗಿಯೇ ಬಿಟ್ಟರು. ತಂಗಡಗಿಗಳು ಮದ್ದಿನೇನಿಯನ್ನು ಎತ್ತಂಗಡಿ ಮಾಡಿಸುವಲ್ಲಿ ಯಶಸ್ವಿಯಾದರೆ, ಮದ್ದಿನೇನಿ ತಂಗಡಿಗಳ ವಿರುದ್ಧ ತೀರ್ಪು ನೀಡಿ ಸೇಡು ತೀರಿಸಿಕೊಳ್ಳುವಲ್ಲಿ ಯಶಸ್ವಿಯಾದರು.

ಹಾಗಂತ ಮದ್ದಿನೇನಿ ಈ ತೀರ್ಪನ್ನು ಅವಸರದಲ್ಲಿ ನೀಡಿಲ್ಲ. ಎಲ್ಲಾ ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಸುಪ್ರೀಂ ಕೋರ್ಟಿನ ತೀರ್ಪುಗಳನ್ನು ಅಧ್ಯಯನ ಮಾಡಿ ತಮ್ಮ ತೀರ್ಪನ್ನು ನೀಡಿದ್ದಾರೆ.

ಅಸಲಿಗೆ ನಾಗರಾಜ ತಂಗಡಗಿ ಆ ಜಾಗವನ್ನು ಶ್ರೀಮತಿ ನೀಲವ್ವ ಎಂಬುವವರಿಂದ ಕೊಂಡುಕೊಂಡಿದ್ದೇನೆ, ಹಾಗಾಗಿ ತಾನೇ ಅದಕ್ಕೆ ಅಧಿಕೃತ ಮಾಲಿಕ ಎಂದು ನ್ಯಾಯಾಲಯದಲ್ಲಿ ವಾದಿಸಿದ್ದ ಬಹಳ ಹಿಂದಿನಿಂದಲೂ ದಾಖಲೆಗಳನ್ನು ಪರಿಶೀಲಿಸಿ, ಆ ನಿರ್ದಿಷ್ಟ ಜಾಗ ಯಾರಿಂದ ಯಾರಿಗೆ ಹಸ್ತಾಂತರವಾಗುತ್ತಾ ಬಂದಿದೆ ಎಂಬುದನ್ನು ಗಮನಿಸಿದ ಮದ್ದಿನೇನಿ ಆ ಜಾಗಕ್ಕೆ ಶ್ರೀಮತಿ ನೀಲವ್ವ ಎಂದೂ ಒಡೆಯರೇ ಆಗಿರಲಿಲ್ಲ, ಹಾಗಾಗಿ ಅದನ್ನು ನಾಗರಾಜ ತಂಗಡಗಿಗೆ ಮಾರುವ ಪ್ರಶ್ನೆಯೂ ಏಳುವುದಿಲ್ಲ ಎಂದು ತೀರ್ಪು ನೀಡಿದ್ದಾರೆ.

ಈ ಹಿನ್ನೆಲೆಯಲ್ಲಿ ಭೂದಾಖಲೆಗಳ ಉಪನಿರ್ದೇಶಕರು (ಡಿಡಿಎಲ್‌ಆರ್) 10.06.2009ರಲ್ಲಿ ನೀಡಿದ ಆದೇಶವನ್ನು ಮದ್ದಿನೇನಿ ಎತ್ತಿಹಿಡಿದಿದ್ದಾರೆ. ಈ ಆದೇಶದ ಪ್ರಕಾರ ನಾಗರಾಜ ತಂಗಡಗಿ ಆ ಜಾಗದ ಮಾಲೀಕ ಅಲ್ಲ. ಆದರೂ ನಾಗರಾಜ ತಂಗಡಗಿ ಭೂದಾಖಲೆಗಳ ಉಪನಿರ್ದೇಶಕರಿಂದ 28.06.2011 ರಂದು ಇನ್ನೊಂದು ಆದೇಶ ಹೊರಡಿಸುವಂತೆ ಮಾಡಿ ಅದರಲ್ಲಿ ಆ ಜಾಗಕ್ಕೆ ತಾನೇ ನಿಜವಾದ ಮಾಲಿಕ ಎಂಬಂತೆ ಮಾಡಿಕೊಂಡಿದ್ದ. ಮದ್ದಿನೇನಿ ತಮ್ಮ ಅಂತಿಮ ತೀರ್ಪಿನಲ್ಲಿ ಅದನ್ನು ತಿರಸ್ಕರಿಸಿದ್ದು ಮಾತ್ರವಲ್ಲದೇ ಅಂತಹ ಸುಳ್ಳು ಆದೇಶಕ್ಕೆ ನಿಜಕ್ಕೂ ಭೂದಾಖಲೆಗಳ ಉಪನಿರ್ದೇಶಕರು ಸಹಿ ಮಾಡಿದ್ದಾರೆಯೇ ಎಂಬ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದಾರೆ. ಅಷ್ಟೇ ಅಲ್ಲ, ಸುಳ್ಳು ದಾಖಲೆಗಳನ್ನು ಸೃಷ್ಟಿಸುವುದಕ್ಕೆ ನಾಗರಾಜ ತಂಗಡಗಿಗೆ ನೆರವಾಗಿರುವ ಗಂಗಾವತಿ ತಾಲ್ಲೂಕು ಕಚೇರಿಯ ಸಿಬ್ಬಂದಿ ಇಲಾಖಾ ವಿಚಾರಣೆಗೆ ಅರ್ಹರು ಎಂದೂ ತಮ್ಮ ತೀರ್ಪಿನಲ್ಲಿ ಹೇಳಿದ್ದಾರೆ. ಸುಭಾಗ ? ಇತರರು ಹಾಗೂ ಶೋಭಾ? ಇತರರು ನಡುವಿನ ಪ್ರಕರಣದಲ್ಲಿ (**Appeal -civil-no. 2836 of 2006**) ಸುಪ್ರೀಂ ಕೋರ್ಟು ನೀಡಿದ ತೀರ್ಪನ್ನೂ ಮದ್ದಿನೇನಿ ತಮ್ಮ ತೀರ್ಪಿನಲ್ಲಿ ಉಲ್ಲೇಖಿಸಿದ್ದಾರೆ.

ಪಾಪಿ ಸಮುದ್ರಕ್ಕೆ ಹೋದರೂ ಮೊಣಕಾಲು ನೀರು ಅನ್ನುವ ಹಾಗೆ ತಮಗೆ ಅಡ್ಡಿಯಾಗಿದ್ದ ಮದ್ದಿನೇನಿಯನ್ನು ವರ್ಗಾವಣೆ ಮಾಡಿಸಿದರೂ ಈಗ ಈ ತೀರ್ಪು ಮದ್ದಿನೇನಿಯ ಭೂತದಂತೆ ಅವರನ್ನು ಕಾಡುತ್ತಿದೆ. ನಾಗರಾಜ ತಂಗಡಗಿ ಜಿಲ್ಲಾಧಿಕಾರಿಯ ತೀರ್ಪನ್ನು ಪ್ರಶ್ನಿಸಿ ಹೈಕೋರ್ಟ್ ಮೆಟ್ಟಿಲೇರಿದ್ದು ಧಾರವಾಡದ ಸಂಚಾರಿ ಪೀಠದಲ್ಲಿ ಪ್ರಕರಣ ಬಾಕಿಯಿದೆ.

ಜಾಗದ ನೈಜ ಮಾಲಿಕ ರಾಮಮೋಹನ್ ಲಂಕೇಶ್ ಜೊತೆ ಮಾತಾಡುತ್ತಾ "ನನಗೆ ಮೊದಲಿನಿಂದಲೂ ನ್ಯಾಯ ಸಿಗುತ್ತದೆಂಬ ಭರವಸೆಯಿತ್ತು. ಈಗ ಜಿಲ್ಲಾಧಿಕಾರಿಗಳ ಆದೇಶ ಖುಷಿ ಕೊಟ್ಟಿದೆ. ಸತ್ಯಕ್ಕೆ, ನ್ಯಾಯಕ್ಕೆ ಜಯ ಸಿಕ್ಕಿದೆ" ಎಂದು ಹರ್ಷ ವ್ಯಕ್ತಪಡಿಸಿದರು.

ಒಟ್ಟಿನಲ್ಲಿ, ರಾಜಕಾರಣಿಗಳ, ಮಂತ್ರಿಮಹೋದಯರ ಆಣತಿಗೆ ಕೋಲು ಬಸವನಂತೆ ತಲೆಯಲ್ಲಾಡಿಸುವ ಐಎಎಸ್ ಅಧಿಕಾರಿಗಳೇ ತುಂಬಿರುವ ನಮ್ಮ ದೇಶದಲ್ಲಿ ಒಬ್ಬ ಮಹಿಳಾ ಐಎಎಸ್ ಅಧಿಕಾರಿ ಹಾಲಿ ಮಂತ್ರಿಯೊಬ್ಬರನ್ನು ಮಂಡಿಯೂರಿ ಮಣಿಸಿದ್ದು ನಿಜಕ್ಕೂ ಪ್ರಶಂಸನೀಯ.

● ದೊಡ್ಡಿಪಾಳ್ಯ ನರಸಿಂಹಮೂರ್ತಿ

ಫೋಟೋ: *ಸಂತೋಷ್ ಸಾಗರ್*, ರಾಯಚೂರು

ಕರ್ನಾಟಕದೊಳಗೊಂದು ಖಾಸಗಿ...

<<<3ನೇ ಪುಟದಿಂದ

ಹತ್ತು ಲೇನ್‌ಗಳನ್ನು ಹೊಂದಿರುವ ದುಬಾರಿ ಫ್ಲೈ ಓವರ್ ಅನ್ನು ಕೋಟ್ಯಾಂತರ ರೂಪಾಯಿಗಳ ವೆಚ್ಚದಲ್ಲಿ ಬಿಡಿಎ ನಿರ್ಮಿಸಿದೆ. ಇದೆಲ್ಲದರ ಪ್ರಯೋಜನವನ್ನು ಪಡೆದೇ ಇನ್ಫೋಸಿಸ್ ಸೇರಿದಂತೆ ಇತರೆ ಐಟಿ ಕಂಪನಿಗಳು ಬೆಳೆದು ಕೋಟ್ಯಾಂತರ ರೂಪಾಯಿಗಳ ಲಾಭ ಕಂಡವು.

ರಾಜ್ಯದ ಜನರ ತೆರಿಗೆಯಿಂದ ಇಷ್ಟೆಲ್ಲ ಸೌಲಭ್ಯಗಳನ್ನು ಪಡೆದ ಐಟಿ ಕಂಪನಿಗಳಿಂದ ರಾಜ್ಯ ಬೊಕ್ಕಸಕ್ಕೆ ಬಂದದ್ದು ಎಷ್ಟು? ಚಿಕ್ಕಾಸು ಎಂದರೆ ತಪ್ಪಾಗಲಾರದು. ಯಾಕೆಂದರೆ ಈ ಎಲ್ಲ ಸವಲತ್ತುಗಳ ಉಪಯೋಗಿಸಿಕೊಂಡು ಕಂಪನಿಗಳು ಲಾಭ ಮಾಡಿಕೊಂಡವಲ್ಲದೆ ತಮ್ಮ ನೌಕರರಿಗೆ ಲಕ್ಷಾಂತರ ಸಂಬಳ ನೀಡಿದ್ದರಿಂದ ಅವರೆಲ್ಲ ಬೆಂಗಳೂರನ್ನು ಸಾಮಾನ್ಯರ ಕೈಗೆಟುಕದಂತಹ ದುಬಾರಿ ನಗರವಾಗಿಸಿದರು.

ಇದೆಲ್ಲದರ ಜೊತೆಗೆ ಎಲೆಕ್ಟ್ರಾನಿಕ್ ಸಿಟಿ ಬಿಬಿಎಂಪಿ ವ್ಯಾಪ್ತಿಗೆ ಬಂದರೆ ಒಂದೆಡೆ ಹೆಚ್ಚು ತೆರಿಗೆ ಕೊಡಬೇಕೆಂದೂ, ಇನ್ನೊಂದೆಡೆ ಕಾರ್ಪೊರೇಟರ್‌ಗಳನ್ನು ಸಹಿಸಬೇಕೆಂದೂ ಬೆದರಿದ ಐಟಿ ಕಂಪನಿಗಳು ಹಲವಾರು ತರ್ಕಗಳನ್ನು ಹೂಡಿ ಅದು ಬೇರೆಯಾಗಿಯೇ ಉಳಿಯುವಂತೆ ನೋಡಿಕೊಂಡಿದ್ದರು. ಆ ಕಾರಣಕ್ಕೆ ಇಲ್ಲಿಯವರೆಗೆ ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಐಟಿ ಕಂಪನಿಗಳು ತೆರಿಗೆಯನ್ನು ಹತ್ತಿರದ ದೊಡ್ಡತೋಗೂರು ಮತ್ತು ಕೋನಪ್ಪನ ಅಗ್ರಹಾರ ಗ್ರಾಮ ಪಂಚಾಯತಿಗಳಿಗೆ ಸಲ್ಲಿಸುತ್ತಿದ್ದವು. ಗ್ರಾಮ ಪಂಚಾಯತ್ ವ್ಯಾಪ್ತಿಗೆ ಬರುತ್ತಿದ್ದರಿಂದ ಅದು ಹೆಚ್ಚಿನ ಮೊತ್ತವೇನಾಗಿರಲಿಲ್ಲ, ಒಂದು ಅಂದಾಜಿನ ಪ್ರಕಾರ ಎಲೆಕ್ಟ್ರಾನಿಕ್ ಸಿಟಿಯಲ್ಲಿರುವ ಎಲ್ಲಾ ಕಂಪನಿಗಳು ಪ್ರತಿ ವರ್ಷ ಕಟ್ಟುತ್ತಿದ್ದ ತೆರಿಗೆಯ ಬಾಬ್ತು ಮೂರು ಕೋಟಿಗಿಂತ ಕಡಿಮೆ. ಈಗ ನೋಡಿದರೆ ಎಲೆಕ್ಟ್ರಾನಿಕ್ ಸಿಟಿಗೆ ಪಟ್ಟಣ ಪ್ರಾಧಿಕಾರ ಎಂಬ ಸ್ಥಾನಮಾನ ಸಿಕ್ಕಿರುವುದರಿಂದ ಇನ್ನು ಮುಂದೆ ಆ ಕಂಪನಿಗಳು ತಮಗೆ ತಾವೇ ತೆರಿಗೆಯನ್ನು ಕಟ್ಟಿಕೊಳ್ಳಲಿವೆ. ಅದರಲ್ಲಿ ಶೇ. 30 ಮಾತ್ರ ಗ್ರಾಮ ಪಂಚಾಯತಿಗಳಿಗೆ ಸಲ್ಲಿಸಲಿವೆ.

ಕರ್ನಾಟಕ ರಾಜ್ಯದಲ್ಲಿ ಪ್ರಥಮ ಬಾರಿಗೆ 900 ಎಕರೆಗಳನ್ನು ಹೀಗೆ ಉದ್ಯಮಿಗಳಿಗೆ ಬಿಟ್ಟುಕೊಟ್ಟಿರುವಾಗ ಪಕ್ಕದ ತಮಿಳುನಾಡಿನಲ್ಲಿ ಏನಾಗುತ್ತಿದೆ ಎಂದು ನೋಡುವುದು ಸೂಕ್ತ ಎನಿಸುತ್ತದೆ. ಆ ರಾಜ್ಯದಲ್ಲಿ ಈಗ ಇಂಡಸ್ಟ್ರಿಯಲ್ ಏರಿಯಾಗಳಿಂದಲೇ ಪ್ರತಿವರ್ಷ ಬೊಕ್ಕಸಕ್ಕೆ ಬರುತ್ತಿರುವ ಆದಾಯ ಅಂದಾಜು 21,700 ಕೋಟಿ ರೂಪಾಯಿಗಳು. ಬೆಂಗಳೂರಿಗೆ ತಾಗಿಕೊಂಡಂತಿರುವ ಹೊಸೂರು ಇಂಡಸ್ಟ್ರಿಯಲ್ ಏರಿಯಾ ಒಂದರಿಂದಲೇ ತಮಿಳುನಾಡು ಸರ್ಕಾರಕ್ಕೆ ಬರುತ್ತಿರುವ ಆದಾಯ 7,000 ಕೋಟಿ ರೂಪಾಯಿಗಳು. ಆದರೆ ನಮ್ಮ ರಾಜ್ಯದ ನೇತಾರರು ಎಷ್ಟು ಧಾರಾಳಿಗಳೆಂದರೆ ಉದ್ಯಮಿಗಳ ಮೇಲೆ ಸೂಕ್ತ ತೆರಿಗೆ ಹಾಕಿ ಅದನ್ನು ವಸೂಲಿ ಮಾಡುವ ಬದಲಾಗಿ ಆ ಪ್ರದೇಶವನ್ನೇ ಇಡೀಯಾಗಿ ಅವರಿಗೆ ಹಸ್ತಾಂತರಿಸಿದ್ದಾರೆ!! ಇದನ್ನು ಕಂಡು ಈಗ ರಾಜಾಜಿನಗರ ಇಂಡಸ್ಟ್ರಿಯಲ್ ಏರಿಯಾ, ಪೀಣ್ಯ ಇಂಡಸ್ಟ್ರಿಯಲ್ ಏರಿಯಾ ಮತ್ತು ವೈಟ್‌ಫೀಲ್ಡ್ ಹಾಗು ಬೊಮ್ಮಸಂದ್ರ ಇಂಡಸ್ಟ್ರಿಯ ಏರಿಯಾಗಳಲ್ಲಿರುವ ಉದ್ಯಮಿಗಳು ತಮಗೂ ಪ್ರತ್ಯೇಕ ಪಟ್ಟಣ ಪ್ರಾಧಿಕಾರಗಳನ್ನು ಘೋಷಿಸಬೇಕೆಂದು ಒತ್ತಾಯಿಸಲಾರಂಭಿಸಿದ್ದಾರೆ. ಹೀಗೆ ಪ್ರತಿ ಕ್ಷೇತ್ರವನ್ನು ಅಲ್ಲಿನ ಉದ್ಯಮಿಗಳಿಗೆ ನೀಡುತ್ತಾ ಹೋದರೆ ಇಲ್ಲಿ ಬಿಬಿಎಂಪಿ ಆಗಲಿ, ಸರ್ಕಾರ ಎಂಬುದಾಗಲಿ ಯಾರಿಗೆ ಇರಬೇಕು. ಇದು ಮುಠಾಳತನವಲ್ಲದೆ ಇನ್ನೇನು?

ಹೀಗೆ ಎಲೆಕ್ಟ್ರಾನಿಕ್ ಸಿಟಿಯನ್ನು ತಮ್ಮ ಸುಪರ್ದಿಗೆ ಪಡೆದ ನಂತರ ಇನ್ಫಿಯ ನಾಣಿ ಎಂದು 'ಪುಟ್ಟ' ಬೇಡಿಕೆಯನ್ನು ರಾಜ್ಯ ಸರ್ಕಾರದ ಮುಂದೆ ಇಟ್ಟಿದ್ದಾನೆ. ಅದೇನೆಂದರೆ "ನಾವು ವಿಶೇಷವಾದದ್ದೇನನ್ನೂ ಕೇಳುತ್ತಿಲ್ಲ, ಆದರೆ ಬೆಂಗಳೂರಿನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಇಲ್ಲಿಂದ ದೂರ ಇರುವುದರಿಂದ ನಮ್ಮ ಉಪಯೋಗಕ್ಕೆ ಇಲ್ಲೊಂದು ಚಿಕ್ಕ ವಿಮಾನ ನಿಲ್ದಾಣವನ್ನು ಕಟ್ಟಿಸಿಕೊಡಿ" ಎಂದಿದ್ದಾನೆ ನಾಣಿ.

ಚಿಕ್ಕ ವಿಮಾನ ನಿಲ್ದಾಣಕ್ಕೂ ನೂರಾರು ಎಕರೆ ಜಮೀನು ಮತ್ತು ಕೋಟ್ಯಾಂತರ ರೂಪಾಯಿ ಬಂಡವಾಳ ಬೇಕಾಗುತ್ತದೆ. ಅದನ್ನು ನಾಣಿ ತನ್ನ ಜೇಬಿನಿಂದ ತೆಗೆದುಕೊಡುವುದಿಲ್ಲ, ಬದಲಾಗಿ ಅದು ಕೂಡ ರಾಜ್ಯದ ಜನರ ಜೇಬಿನ ದುಡ್ಡಿನಿಂದಲೇ ತನ್ನಂತಹವರಿಗೆ ಸಿಗಬೇಕೆಂಬ ಮರಾತ ಆತನದ್ದು.

ಈ ವಕ್ರ ಬುದ್ಧಿಯ ನಾಣಿಯ ಸ್ವಾಟೆಯನ್ನು ಸರಿಯಾಗಿ ತಿವಿಯುವರೇ ಸಿದ್ದರಾಮಯ್ಯನವರು... ●

ಬಿಗ್‌ಬಾಸ್ ಗೋಲ್‌ಮಾಲ್
ಸೋತು ಗೆದ್ದ ಅರುಣ್ ಸಾಗರ್

ಅರುಣ್‌ಸಾಗರ್ ಗೆಲ್ಲಬೇಕಿತ್ತು ಅಂತ ಹೇಳಿ ಪ್ರತಿಯೊಬ್ಬರೂ ಮರುಕ ವ್ಯಕ್ತಪಡಿಸುತ್ತಿದ್ದಾರೋ ಅದೇ ಆತನ ನಿಜವಾದ ಗೆಲುವು...!

ಹೀಗೆಂದು ಬಿಗ್‌ಬಾಸ್ ಫೈನಲಿಸ್ಟ್ ಅರುಣ್ ಪರ ಅದೇ ಕಾರ್ಯಕ್ರಮದ ಮತ್ತೊಬ್ಬ ಸ್ಪರ್ಧಿ ಶ್ವೇತಾ ವಕಾಲತ್ತು ವಹಿಸಿದ್ದಕ್ಕೂ ಕಾರಣವಿತ್ತು. ಫೈನಲ್ ತಲುಪಿದ್ದವರ ಪೈಕಿ ಬ್ರಹ್ಮಾಂಡ ಗುರೂಜಿ, ನಿಖಿತಾ ಮಾತ್ರವಲ್ಲದೆ ಚಂದ್ರಿಕಾ, ಅನುಶ್ರೀ ಇತ್ಯಾದಿ ಬಿಗ್‌ಬಾಸ್‌ನ ಬಹುತೇಕರೆಲ್ಲರ ಆಯ್ಕೆಯಾಗಿದ್ದದ್ದು ಅರುಣ್‌ಸಾಗರ್. ನಡೆದ ವೋಟಿಂಗ್, ಈ ಟೀವಿ ವೀಕ್ಷಕರ ಅಭಿಪ್ರಾಯ, ನಾಡಿನಾದ್ಯಂತ ವ್ಯಕ್ತವಾದ ಬೆಂಬಲ ಮತ್ತು ಸ್ಪರ್ಧೆಯ ಪ್ರತಿ ಹಂತದಲ್ಲೂ ಆತ ತೋರಿದ ಸಾಮರ್ಥ್ಯ; ಇತ್ಯಾದಿ ಎತ್ತಿಂದೆತ್ತ ಲೆಕ್ಕ ಹಾಕಿದರೂ ಬಿಗ್‌ಬಾಸ್ ಕನ್ನಡದ ವಿಜಯಿಯಾಗಿ ಆಯ್ಕೆಯಾಗಬೇಕಿದ್ದದ್ದು ಅರುಣ್‌ಸಾಗರ್!

ಆದರೆ ನಡೆದದ್ದೇ ಬೇರೆ. ಪ್ರತಿಭೆಯಲ್ಲಾಗಲಿ, ಸಾಮರ್ಥ್ಯದಲ್ಲಾಗಲಿ, ಪ್ರೇಕ್ಷಕರ ಬೆಂಬಲದ ದೃಷ್ಟಿಯಿಂದಾಗಲಿ ಅರುಣ್ ಸರಿಸಮಕ್ಕೆ ತೂಗಲಾರದ ವಿಜಯ್ ರಾಘವೇಂದ್ರನನ್ನು 'ವಿನ್ನರ್' ಎಂದು ಘೋಷಿಸಲಾಯ್ತು. ಪ್ರೇಕ್ಷಕರ ನಿರೀಕ್ಷೆಯೇ ಒಂದಾದರೆ ನಡೆದದ್ದು ಮತ್ತೊಂದು!

ಈ ಕಾರಣಕ್ಕೇ ಇರಬೇಕು ಅರುಣ್‌ಸಾಗರ್ ಪರ ವಹಿಸಿ ಮಿಕ್ಕೆಲ್ಲರಿಗಿಂತಲೂ ಮೊದಲು ದನಿಯೆತ್ತಿದ್ದು ಕ್ರೇಜಿಸ್ಟಾರ್ ರವಿಚಂದ್ರನ್. 'ವಿನ್ನರ್ ಎನಿಸಿಕೊಳ್ಳುವ ಎಲ್ಲಾ ಯೋಗ್ಯತೆಯಿದ್ದೂ ಯಾವ ಕಾರಣಕ್ಕೆ ಅರುಣ್ ವಂಚಿತನಾದನೋ ನನಗಂತೂ ಅರ್ಥವಾಗುತ್ತಿಲ್ಲ...' ಎಂಬ ರವಿಚಂದ್ರನ್ ಮಾತುಗಳಲ್ಲೇ ಬಿಗ್‌ಬಾಸ್ ಕಾರ್ಯಕ್ರಮದ ಮೋಸ, ವ್ಯಾಪಾರೀ ತಂತ್ರ ಮತ್ತು ಅದರ ಟಿಆರ್‌ಪಿ ದಾಹ ವ್ಯಕ್ತವಾಗುತ್ತಿತ್ತು.

ಇದರಲ್ಲಿ ಗೆದ್ದ ವಿಜಯರಾಘವೇಂದ್ರನದಾಗಲಿ ಸೋತ ಅರುಣ್‌ಸಾಗರ್‌ದಾಗಲಿ ಯಾವ ತಪ್ಪೂ ಇರಲಿಲ್ಲ. ಏಕೆಂದರೆ ಬಿಗ್‌ಬಾಸ್ ಎಂಬ ಪರಿಕಲ್ಪನೆಯೇ ಒಂದು ವ್ಯಾಪಾರೀ ತಂತ್ರ. ಅದಕ್ಕೆ ಟಿಆರ್‌ಪಿಯೊಂದೇ ಮಾನದಂಡ. ಹೆಸರಿಗದು ಸ್ಪರ್ಧೆಯಾದರೂ ಅಲ್ಲಿ ನಡೆಯುವುದು ಸ್ಪರ್ಧೆ ಎಂಬ ನಾಟಕ ಮಾತ್ರ. ಒಬ್ಬಳು ಸೆಕ್ಸೀ ಹೀರೋಯಿನ್, ಜೊತೆಗೊಬ್ಬ ಹೀರೋ, ಒಂದಿಬ್ಬರು ಜೋಕರ್‌ಗಳು, ಮತ್ತೊಬ್ಬಳು ಖಳನಾಯಕಿ, ಇನ್ನೊಬ್ಬಳು ಮಾಟಗಾತಿ, ಮಿಕ್ಕವರೆಲ್ಲ ಗ್ಲಾಮರ್ ಗೊಂಬೆಗಳು. ಇವರ ಮಧ್ಯೆ ನಡೆಯುವ ಸ್ಪರ್ಧಾ ನಾಟಕ ಅಂತಿಮವಾಗಿ ಹೇಗೆ ಕೊನೆಗೊಳ್ಳಬೇಕೋ ಅದೇ ರೀತಿ ಕನ್ನಡದ ಬಿಗ್‌ಬಾಸ್ ಅಂತ್ಯಗೊಂಡಿದೆ. ಸಹಜವಾಗೇ ವಿಜಯರಾಘವೇಂದ್ರ ವಿಜಯಿಯಾಗಿದ್ದಾನೆ. ಆದರೆ ನಂಬಿ ಮುಠ್ಠಾಳರಾಗಿದ್ದು ಮಾತ್ರ ಈ ಟೀವಿ ಪ್ರೇಕ್ಷಕರು.

ಬಿಗ್‌ಬಾಸ್ ಕುರಿತಂತೆ ಸದ್ಯ ಕರ್ನಾಟಕದ ಬೇರೆ ಬೇರೆ ವಲಯಗಳಲ್ಲಿ ತಲೆಗೊಂಡು ವಿಮರ್ಶೆ, ಆಕ್ರೋಶ, ಅಸಹನೆ, ಟೀಕೆ ಕೇಳಿಬರುತ್ತಿದೆಯೆಂದರೆ ಅದು ಆ ಕಾರ್ಯಕ್ರಮದ 'ಸಕ್ಸಸ್' ಮತ್ತು ಕಳೆದ 99 ದಿನಗಳಿಂದ ಟೀವಿ ಪ್ರೇಕ್ಷಕ ವರ್ಗಕ್ಕೆ ಅದರ ಮೇಲಿದ್ದ ಕುತೂಹಲ. ಕಿಚ್ಚ ಸುದೀಪ್ ನಿರೂಪಕನಾಗಿದ್ದಕ್ಕೋ, ನಿಖಿತಾಳಂಥ ಚೆಂದುಳ್ಳಿ ಚೆಲುವೆಗೋ, ಚಂದ್ರಿಕಾ ಮೈಮಾಟಕ್ಕೋ, ಬ್ರಹ್ಮಾಂಡ ಗುರೂಜಿಯ ಹುಚ್ಚಾಟಕ್ಕೋ ಗೊತ್ತಿಲ್ಲ. ರಿಷಿಕುಮಾರ ಸ್ವಾಮಿಯಂಥ ಪಕ್ಕಾ ಕಮಂಗಿಯನ್ನು, ನರ್ಸ್ ಜಯಲಕ್ಷ್ಮಿಯಂಥ ತಾಪತ್ರಯದವಳನ್ನು, ಆ್ಯಂಕರ ಅನುಶ್ರೀ, ನಟಿ ಶ್ವೇತಾ, ರೇಡಿಯೋ ಜಾಕಿ ವಿನಾಯಕ್ ಜೋಷಿ, ನಟಿ ಸಂಜನಾ, ಹೀರೋ ತಿಲಕ್, ಲೂಸ್ ಮಾದನ ರಗಳೆ, ರಿಷಿಕಾ ಇತ್ಯಾದಿ ಸ್ಪರ್ಧಿಗಳೆಲ್ಲರೂ ಹೆಚ್ಚೂ ಕಮ್ಮಿ ಗ್ಲಾಮರ್ ಅಥವಾ ಪ್ರಚಾರದಲ್ಲಿದ್ದವರೆ.

ಇದರರ್ಥ ಯಾರು ಪ್ರಚಾರದಲ್ಲಿಲ್ಲವೋ ಅವರಿಗೆ ಬಿಗ್‌ಬಾಸ್ ಪ್ರವೇಶವಿಲ್ಲ. ಒಳಿತುಕೆಡುಕಿಗಿಂತಲೂ ಇಲ್ಲಿ ಪ್ರಚಾರ ಮತ್ತು ಗ್ಲಾಮರ್ ಮುಖ್ಯ. ಇಂಥ ಸೆಲಿಬ್ರಿಟಿಗಳನ್ನು ವಿವಿಧ ಸವಾಲುಗಳಿಗೊಡ್ಡಿ ಅವರ ಕೋಪ, ತಾಪ, ದುಃಖ, ಭಾವನೆಗಳನ್ನು ಹಿಂಡಿ ಅದನ್ನು ಪ್ರೇಕ್ಷಕರಿಗೆ ಉಣಬಡಿಸುವುದೇ ಬಿಗ್‌ಬಾಸ್ ಕಾರ್ಯಕ್ರಮದ ಮೂಲೋದ್ದೇಶ. ನೆದರ್‌ಲ್ಯಾಂಡ್‌ನ ಎಂಡೆಮೋಲ್ ಎಂಬಾತ ಮೊದಲು ಈ ಥರದ ಕಾರ್ಯಕ್ರಮವೊಂದನ್ನು ರೂಪಿಸಿ ಸಿಕ್ಕಾಪಟ್ಟೆ ಪ್ರಚಾರಗಿಟ್ಟಿಸಿದ. ಮೂಲತಃ ಬಿಗ್‌ಬ್ರದರ್ ಎಂಬ ಈ ಕಾರ್ಯಕ್ರಮದ ಪರಿಕಲ್ಪನೆ ಎಂಡೆಮೋಲ್‌ನದ್ದೇ ಆಗಿರುವುದರಿಂದ ಇದರ ಹಕ್ಕು ಸಾಮ್ಯ ಕೂಡ ಆತನ ಹೆಸರಲ್ಲೇ ಇದೆ. ಇದನ್ನು ಬಿಗ್‌ಬಾಸ್ ಹೆಸರಲ್ಲಿ ಭಾರತಕ್ಕೆ ಖರೀದಿಸಿ ತಂದವನು ಎಂಡೆಮೋಲ್ ಇಂಡಿಯಾದ ಸಿಇಓ ದೀಪಕ್ ಧರ್.

ಮೊದಲು ಹಿಂದಿಯಲ್ಲಿ ಸಲ್ಮಾನ್‌ಖಾನ್ ನೇತೃತ್ವದಲ್ಲಿ ಕಲರ್ಸ್ ಟೀವಿಯಲ್ಲಿ ಸಾಕಷ್ಟು ಹುಚ್ಚೆಬ್ಬಿಸಿದ ಬಿಗ್‌ಬಾಸ್‌ನಲ್ಲಿ ಪಾಕಿಸ್ತಾನದ ಬೆಡಗಿ ವೀಣಾಮಲಿಕ್, ಹಿಂದಿ ನಟ ಅಷ್ಮಿತ್ ಪಟೇಲ್, ಶಕ್ತಿಕಪೂರ್, ರಾಖಿ ಸಾವಂತ್‌ರಂಥ ಪ್ರಚಾರದಲ್ಲಿದ್ದ ಸೆಲಿಬ್ರಿಟಿಗಳಿದ್ದರು. ಬಹುಮಾನದ ಮೊತ್ತ ಒಂದು ಕೋಟಿಯಾಗಿತ್ತು. ಅಂತಿಮವಾಗಿ ದಾರಾಸಿಂಗ್ ಮಗ ವಿಂದೂ ದಾರಾಸಿಂಗ್ ಗೆದ್ದು ಒಂದು ಕೋಟಿ ಗಿಟ್ಟಿಸಿದ್ದ. ಕಾರ್ಯಕ್ರಮದ ಉದ್ದಕ್ಕೂ ಗ್ಲಾಮರ್ ಗೊಂಬೆಗಳಿದ್ದರಾದರೂ ವಿಂದೂ ದಾರಾಸಿಂಗ್ ಗೆದ್ದದ್ದು ಆತನ ಪ್ರತಿಭೆಯ ಕಾರಣಕ್ಕೆಂಬ ಹೆಗ್ಗಳಿಕೆ ಹಿಂದಿಯ ಬಿಗ್‌ಬಾಸ್‌ಗಿತ್ತು.

ಆ ಪ್ರಕಾರವೇ ಆಗಿದ್ದರೆ ಕನ್ನಡದ ಬಿಗ್ ಬಾಸ್‌ನ ವಿಜಯಿಯಾಗಿ ಅರುಣ್ ಸಾಗರ್ ಗೆಲ್ಲಬೇಕಿತ್ತು. ಆದರೆ ಈ ಟೀವಿಯ ಮೂಲ ಮಾಲೀಕರಾದ ವಯಾಕಾಮ್ ಕಂಪೆನಿಯ ವ್ಯಾಪಾರೀ ತಂತ್ರವೇ ಬೇರೆಯಾಗಿತ್ತು. ಅದು ಜಾಹಿರಾತಿಗಾಗಿ ಏರ್ಪಾಟಾಗಿದ್ದ ಟಿಆರ್‌ಪಿ ದಾಹವಷ್ಟೆ. ಸರಿಸುಮಾರು 30 ಕೋಟಿ ರೂಪಾಯಿಗಳನ್ನು ಸುರಿದು ಕನ್ನಡದ ಬಿಗ್‌ಬಾಸ್ ನಿರ್ಮಾಣಕ್ಕೆ ಕೈಯಿಟ್ಟಿದ್ದ ಈ ಟೀವಿಗೆ ಹಾಕಿದ ಬಂಡವಾಳದ ದುಪ್ಪಟ್ಟು ದುಡಿಯುವ ದುರಾಶೆ. ಪ್ರೇಕ್ಷಕರ ಕುತೂಹಲವನ್ನು ಕೊನೆತನಕ ಹಿಡಿದಿಟ್ಟುಕೊಳ್ಳಬೇಕೆಂದರೆ ಪ್ರತಿನಿತ್ಯ ಒಂದಲ್ಲ ಒಂದು ಗಿಮ್ಮಿಕ್ ಮಾಡಲೇಬೇಕು. ಅದಕ್ಕೆ ಸಾಕಷ್ಟು ಮಸಾಲೆಯನ್ನೂ ಬೆರೆಸಬೇಕು. ಇಲ್ಲಿ ಮಸಾಲೆಗೆಂದು ಬಳಕೆಯಾಗಿದ್ದು ಬ್ರಹ್ಮಾಂಡ ಗುರೂಜಿ, ರಿಷಿಕುಮಾರ ಸ್ವಾಮಿ, ನರ್ಸ್ ಜಯಲಕ್ಷ್ಮಿ, ಚಂದ್ರಿಕಾ, ಅನುಶ್ರೀ, ರಿಷಿಕಾ, ಲೂಸ್ ಮಾದನಂಥವರು.

ಬಿಗ್‌ಬಾಸ್ ಮನೆ ಎಂಬ ಕೋಟೆಯೊಳಗೆ 99 ದಿನಗಳ ಕಾಲ ಸ್ಪರ್ಧಿಗಳು ವಿವಿಧ ಸವಾಲುಗಳನ್ನು ಎದುರಿಸಬೇಕು. ಇದು ಸ್ಪರ್ಧೆಯ ಮೂಲ ತಿರುಳು. ನೋಡಿ ಪ್ರೇಕ್ಷಕರಿಗೆ ಬಿಗ್‌ಬಾಸ್ ಮನೆ ಬೆಂಗಳೂರಿನ ಸುತ್ತಮುತ್ತ ಎಲ್ಲೋ ಇರಬೇಕೆಂಬ ಭಾವನೆ ಹುಟ್ಟುತ್ತದೆಯಾದರೂ ಅದು ಇದ್ದದ್ದು ಮಹಾರಾಷ್ಟ್ರದ ಪುಣೆ ಜಿಲ್ಲೆಯ ಲೋನಾವಾಲಾ ಎಂಬ ಪ್ರವಾಸಿಕೇಂದ್ರದಲ್ಲಿ. ಕರ್ನಾಟಕದ ಹೊರಗಿನ ಹೊರ ಪ್ರಪಂಚದ ಯಾವುದೇ ಸಂಪರ್ಕವಿಲ್ಲ. ಹೊರಕ್ಕೆ ಬರಲು ಸಾಧ್ಯವಿಲ್ಲದ ಫೋನು, ಟೀವಿ, ಇಂಟರ್ನೆಟ್ ಯಾವ ಸೌಲಭ್ಯಗಳೂ ಇಲ್ಲದ ಕೂಡುದೊಡ್ಡಿಯೊಂದರಲ್ಲಿ ವಿವಿಧ ಸೆಲಿಬ್ರಿಟಿಗಳ ಮುಖ ಎಂಥವರಿಗೂ ಕುತೂಹಲಕರವೇ. ಮೇಲುನೋಟಕ್ಕೆ ಪ್ರತಿ ಸ್ಪರ್ಧಿಯು ಬಹುಮಾನದ ಮೊತ್ತವಾದ ಐವತ್ತು ಲಕ್ಷದ ಮೇಲೆ ಕಣ್ಣಿಟ್ಟು ಭಾಗವಹಿಸುತ್ತಾರೆಂದು ಪ್ರೇಕ್ಷಕ ನಂಬುತ್ತಾನೆ.

ಆದರೆ ಸ್ಪರ್ಧಿಗಳ್ಯಾರು ಸುಮ್ಮನೆ ಭಾಗವಹಿಸಿರುವುದಿಲ್ಲ, ಕೆಲವರಿಗೆ ದಿನಕ್ಕೆ 15 ಸಾವಿರ. ಇನ್ನೂ ಕೆಲವರಿಗೆ 25 ಸಾವಿರ ಹೀಗೆ 10 ರಿಂದ 1 ಲಕ್ಷ ತನಕ ಆಯಾ ಸೆಲಿಬ್ರಿಟಿಗಳ ವರ್ಚಸ್ಸು, ಬೇಡಿಕೆಗನುಗುಣವಾಗಿ ದಿನ ಭತ್ಯೆಯನ್ನು ನಿಗದಿ ಮಾಡಲಾಗುತ್ತದೆ. ಲೂಸ್ ಮಾದ ಯೋಗೇಶ್‌ಗೆ ದಿನವೊಂದಕ್ಕೆ ನಾಲ್ಕು ಲಕ್ಷದ ಸಂಭಾವನೆ ನಿಗದಿಯಾಗಿತ್ತಂತೆ. ಸ್ಪರ್ಧಿಗಳು ಪರಿಸ್ಥಿತಿಗೆ ಸಹಜವಾಗಿ ವರ್ತಿಸುತ್ತಿದ್ದಾರೆ ಎನ್ನಿಸುತ್ತದೆಯಾದರೂ ಆಯಾ ಸ್ಪರ್ಧಿಯ ಉಡುಪು, ವರ್ತನೆ, ಪಾತ್ರವನ್ನು ಮೊದಲೇ ನಿರ್ಧರಿಸಿರುತ್ತಾರೆ. ಇದರರ್ಥ ಕೊಟ್ಟ ಸಂಭಾವನೆಗನುಗುಣವಾಗಿ ಪ್ರತಿಯೊಬ್ಬರೂ ನಟಿಸಬೇಕು!

ಇದೆಲ್ಲದರ ಹೊರತಾಗಿಯೂ ಆಯಾ ಸ್ಪರ್ಧಿಗಳು ತಮ್ಮ ನೈಜತೆಯ ಪ್ರತಿಭೆಯನ್ನು ಮೆರೆದರೂ ಕೂಡ ಅದಿಲ್ಲಿ ಮುಖ್ಯವಾಗುವುದಿಲ್ಲ, ಹಾಗಿಲ್ಲದಿದ್ದರೆ ವ್ಯಕ್ತಿತ್ವ ಮತ್ತು ಪ್ರತಿಭೆಯಿಂದ ಮಿಕ್ಕೆಲ್ಲರಿಗಿಂತಲೂ ಸಾಕಷ್ಟು ಪ್ರಾಮಾಣಿಕರೂ ಸರಳರೂ ಆಗಿದ್ದ ನಟ ಅಪರ್ಣಾರನ್ನು ಹೊರದಬ್ಬುತ್ತಿರಲಿಲ್ಲ. ಅಪರ್ಣಾ ನಡೆನುಡಿಯಲ್ಲಿ ಬೇರೆಲ್ಲರಿಗಿಂತಲೂ ಉತ್ತಮರಾಗಿದ್ದಾಗಲೂ ಗ್ಲಾಮರ್ ಇಲ್ಲ ಎಂಬ ಒಂದೇ ಕಾರಣಕ್ಕೆ ಎಲಿಮಿನೇಟ್ ಮಾಡಲಾಯ್ತು. ರಿಷಿಕಾ ಸಾಕಷ್ಟು ಬೋಲ್ಡ್ ಮತ್ತು ನೇರ ನಡೆನುಡಿಯವಳಾಗಿದ್ದರೂ ಸೆಕ್ಸಿಯಾಗಿಲ್ಲ ಎಂಬ ಒಂದೇ ಉದ್ದೇಶದಿಂದ ಕಿತ್ತೆಸೆಯಲಾಯ್ತು. ಶ್ವೇತಾ ಎಂಬ ನಟಿ ಕೂಡ ರಸ ಹೀರಿದ ನಂತರ ಉಗಿಯುವ ಜಲ್ಲೆಯಂತೆ ಮೂರೇ ವಾರಕ್ಕೆ ಹೊರಬೀಳುವಂತಾಯ್ತು. ಸಂಜನಾಳದ್ದೂ ಇದೇ ಪಾಡು. ಏಕೆಂದರೆ ಅನುಶ್ರೀ ಮತ್ತು ನಿಖಿತಾಳಂಥ ಫಲವತ್ತು ಪ್ರತಿಭೆ (!) ಮುಂದೆ ಸಂಜನಾ ಬೋರ್ ಎನಿಸತೊಡಗಿದಳು.

ಇದ್ದುದರಲ್ಲಿ ಅದೃಷ್ಟವಂತೆಯೆಂದರೆ ಚಂದ್ರಿಕಾ. ಏಕೆಂದರೆ ನಡುವಯಸ್ಸಿನ ಅರುಣ್‌ಸಾಗರ್‌ಗೆ ಜೋಡಿಯಂತಿರುವ ಪಾತ್ರವೊಂದು ಟಿಆರ್‌ಪಿ ಉದ್ದೇಶದಿಂದ ಅನಿವಾರ್ಯವಾಗಿತ್ತು. ಚಂದ್ರಿಕಾಳ ಪ್ರತಿಭೆಗಿಂತಲೂ ಆಕೆ ಮೈಮಾಟದ ಮೇಲೆಯೇ ಕ್ಯಾಮೆರಾ ದೃಷ್ಟಿ ನೆಟ್ಟಿತ್ತು. ಇದರರ್ಥ ಆಕೆ ಸೆಕ್ಸಿ ಇಮೇಜನ್ನು ಕಾರ್ಯಕ್ರಮದ ಜನಪ್ರಿಯತೆಗೆ ಬಳಸಿಕೊಳ್ಳುವುದು. ಇದೇ ಅತಿರೇಕವೋ ಎಂಬಂತೆ ಅರುಣ್‌ಸಾಗರ್ ಮತ್ತು ಚಂದ್ರಿಕಾ ಮಧ್ಯೆ ಪ್ರೀತಿ ಶುರುವಾದಂತೆ ಚಿತ್ರಿಸಲಾಯ್ತು. ವಯೋಸಹಜವಾಗಿ ಉದ್ಭವಿಸುವ ಆತ್ಮೀಯತೆಯನ್ನೇ ಗಂಡು ಹೆಣ್ಣಿನ ನಡುವಿನ ಸಂಬಂಧವೆಂಬಂತೆ ಬಿಂಬಿಸಲಾಯ್ತು. ಅದೇ ರೀತಿ ಸಂಜನಾ ಮತ್ತು ತಿಲಕ್ ಮಧ್ಯೆ ಅಫೇರ್ ಇದೆಯೆಂಬಂತೆ ಮತ್ತೊಂದು ಪ್ರಸಂಗವನ್ನು ಸೃಷ್ಟಿಸಲಾಯ್ತು.

ಇದೆಲ್ಲಕ್ಕಿಂತಲೂ ವಿಚಿತ್ರವೆನಿಸಿದ್ದು ನರ್ಸ್ ಜಯಲಕ್ಷ್ಮಿ ಮತ್ತು ಬ್ರಹ್ಮಾಂಡ ಗುರೂಜಿ ನಡುವಿನ ಕೆಮಿಸ್ಟ್ರಿ. ಬ್ರಹ್ಮಾಂಡ ಧೂರ್ತ ನರೇಂದ್ರಬಾಬು ಶರ್ಮ ನರ್ಸ್ ಜಯಲಕ್ಷ್ಮಿಗೆ ಆಕರ್ಷಿತನಾದಂತೆ, ಅವರಿಬ್ಬರ ಮಧ್ಯೆ ಅದೆಂಥದೋ ಆಕರ್ಷಣೆಯಿರುವಂತೆ ಬಿಗ್‌ಬಾಸ್ ಬಿಂಬಿಸುವುದಕ್ಕೂ ಟಿಆರ್‌ಪಿ ದಾಹವೇ ಕಾರಣವಾಗಿತ್ತು. ಏಕೆಂದರೆ ಪ್ರೇಕ್ಷಕ ಕುತೂಹಲ ದಿನೇದಿನೇ ಹೆಚ್ಚಬೇಕೆಂದರೆ ಈ ಥರದ ಗಿಮ್ಮಿಕ್ ಮಾಡಲೇಬೇಕು. ಚಂದ್ರಿಕಾ ಕೇವಲ ಅರುಣ್‌ಸಾಗರ್ ಜೊತೆಯಷ್ಟೇ ಅಲ್ಲ ರೋಹನ್, ನರೇಂದ್ರಬಾಬು ಶರ್ಮ, ತಿಲಕ್ ಜೊತೆಯೂ ಅಷ್ಟೇ ಸಲುಗೆಯಿಂದಿದ್ದರೂ ಅದೆಲ್ಲವನ್ನೂ ಬದಿಗಿಟ್ಟು ಅರುಣ್ ಮತ್ತು ಚಂದ್ರಿಕಾ ಒಡನಾಟದ ದೃಶ್ಯಗಳನ್ನಷ್ಟೇ ತೋರಿಸಲಾಯ್ತು. ಚಂದ್ರಿಕಾ ಹೊರಬಿದ್ದಾಗ ಸಹಜವಾಗೇ ಅರುಣ್ ವ್ಯಕ್ತಪಡಿಸಿದ ವಿಷಾದವನ್ನು ವಿರಹವೇದನೆಯೆಂಬಂತೆ ಬಣ್ಣ ಕಟ್ಟಲಾಯ್ತು.

ವಾಸ್ತವವಾಗಿ ಅರುಣ್ ಮತ್ತು ಚಂದ್ರಿಕಾ ಮಧ್ಯೆ ಅಂಥಾದ್ದೇನೂ ಇರಲೇ ಇಲ್ಲ, ಹಾಗೆ ಬ್ರಹ್ಮಾಂಡ ಮತ್ತು ನರ್ಸ್‌ಜಯಲಕ್ಷ್ಮೀ ಮಧ್ಯೆಯಲ್ಲಿ ಅಫೇರ್ ಆಗಲಿ ಆತ್ಮೀಯತೆಯಾಗಲಿ ಇರಲೇ ಇಲ್ಲ, ಅನುಶ್ರೀಯನ್ನು ರೋಹನ್ ಅನಾಮತ್ತಾಗಿ ಎತ್ತಿಕೊಂಡು ಓಡಾಡಿದ್ದು ಕೂಡ ಸಾಂದರ್ಭಿಕ ಅಥವಾ ಹೇಳಿ ಮಾಡಿಸಿದ್ದ ಪ್ರಸಂಗವಾಗಿತ್ತೇ ಹೊರತು ಬಿಗ್‌ಬಾಸ್‌ನಲ್ಲದು ಚಿತ್ರಿಸಿದ ಮಟ್ಟಕ್ಕಿರಲೇ ಇಲ್ಲ!

ಇದರರ್ಥ ದಿನದ 24 ಗಂಟೆಗಳಲ್ಲಿ ಬೇರೆ ಬೇರೆ ಸ್ಪರ್ಧಿಗಳ ಮಧ್ಯೆ ನಡೆದ ವಿವಿಧ ಘಟನಾವಳಿಗಳ ಪೈಕಿ ಕೆಲವನ್ನೇ ಆಯ್ದು ಅದರಲ್ಲೂ ಯಾರಿಗೆ ಯಾರನ್ನು ಜೋಡಿ ಎಂಬಂತೆ ಬಿಂಬಿಸಬೇಕೆಂಬ ಉದ್ದೇಶವಿತ್ತೋ ಅಂಥದ್ದೇ ದೃಶ್ಯಾವಳಿಗಳನ್ನು ಹೆಕ್ಕಿ ಹೆಕ್ಕಿ ಬಿತ್ತರಿಸಲಾಗುತ್ತಿತ್ತು!

ದಿನವಿಡೀ ನಡೆದ ಘಟನಾವಳಿಗಳ ಪೈಕಿ ಕಾರ್ಯಕ್ರಮದ ಆಯೋಜಕರ ಮೂಗಿನ ನೇರಕ್ಕೆ ತಕ್ಕಂತೆ ಬಿತ್ತರಿಸಿದ ದೃಶ್ಯಾವಳಿಗಳ ಆಧಾರದ ಮೇಲೆಯೇ ಪ್ರೇಕ್ಷಕನ ಅಭಿಪ್ರಾಯ ರೂಪುಗೊಳ್ಳುತ್ತದೆ. ತಿಲಕ್-ಶ್ವೇತಾ ರೋಮಾನ್ಸ್ ದೃಶ್ಯ ಬ್ರಹ್ಮಾಂಡ ಬಾಬು ಜೊತೆ ನರ್ಸ್ ಜಯಲಕ್ಷ್ಮಿಯ ಜಗಳ, ಅರುಣ್-ಚಂದ್ರಿಕಾ ಆತ್ಮೀಯತೆಯ ಪ್ರಸಂಗಗಳು, ಅನುಶ್ರೀ-ರೋಹನ್ ಹುಡುಗಾಟಿಕೆಯ ಪ್ರಸಂಗಗಳನ್ನೇ ಮತ್ತೆ ಮತ್ತೆ ಬಿತ್ತರಿಸಿದ್ದರಿಂದಾಗಿ ಯಾರಿಗೇನಾಗದೇ ಹೋದರೂ ಬಿಗ್‌ಬಾಸ್ ಟಿಆರ್‌ಪಿ ಮಾತ್ರ ಏರುತ್ತಲೇ ಇತ್ತು. ಅದೂ ಯಾವ ಮಟ್ಟಕ್ಕೆಂದರೆ ಪುನೀತ್ ರಾಜ್‌ಕುಮಾರ್ ನಡೆಸಿಕೊಡುತ್ತಿದ್ದ ಕನ್ನಡದ ಕೋಟ್ಯಾಧಿಪತಿಯನ್ನು ಎರಡೇ ವಾರದಲ್ಲಿ ಬಿಗ್‌ಬಾಸ್ ಹಿಂದಿಕ್ಕಿತ್ತು. ಈತನಕ ಕನ್ನಡದ ಯಾವೊಂದು ಟೀವಿ ಕಾರ್ಯಕ್ರಮವೂ ತಲುಪದಷ್ಟು ಟಿಆರ್‌ಪಿ ಅಂದರೆ ವಾರವೊಂದಕ್ಕೆ 4.7ರ ಗರಿಷ್ಠ ಅಂಕ ತಲುಪಿತ್ತು. ಜಾಹೀರಾತು ಕಂಪೆನಿಗಳಂತೂ ಈ ಟೀವಿಯೆದುರು ಸಾಲುಗಟ್ಟಿ ನಿಲ್ಲುವಂತಾಯ್ತು. ಒಂದು ಹಂತದಲ್ಲಿ 6.76 ರವರೆಗೂ ಟಿಆರ್‌ಪಿಯಿತ್ತು. ಹಿಂದಿಯಲ್ಲಿ ಸಲ್ಮಾನ್‌ಖಾನ್ ನಡೆಸಿಕೊಟ್ಟ ಬಿಗ್ ಬಾಸ್‌ನಲ್ಲಿ ಸ್ಪರ್ಧಿಯೊಬ್ಬನ ಪರ ಬಿದ್ದ ಗರಿಷ್ಠ ಮತಗಳ ಸಂಖ್ಯೆ ಮೂವತ್ತು ಸಾವಿರವಾದರೆ ಕನ್ನಡದ ಬಿಗ್ ಬಾಸ್‌ನಲ್ಲದು 47,000 ಮುಟ್ಟಿತ್ತು.

ಇದರರ್ಥ ಜನರನ್ನು ಯಾಮಾರಿಸುವಲ್ಲಿ ಬಿಗ್ ಬಾಸ್ ಯಶಸ್ವಿಯಾಗಿತ್ತು. ವ್ಯಾಪಾರವೇ ಉದ್ದೇಶವಾಗಿರುವಾಗ, ಜಾಹೀರಾತೇ ಜೀವಾಳವಾಗಿರುವಾಗ, ಟಿಆರ್‌ಪಿಯನ್ನು ಗುರಿಯಾಗಿಟ್ಟುಕೊಂಡೇ ಕಾರ್ಯಕ್ರಮ ರೂಪಿಸಿರುವಾಗ ಸ್ಟಾರ್ ಅಲ್ಲದ, ಗ್ಲಾಮರ್ ಇಲ್ಲದ, ಇಮೇಜಿಗೆ ಒಗ್ಗದ ಅರುಣ್ ಸಾಗರ್ ಹೇಗೆ ತಾನೇ ಗೆಲ್ಲಲು ಸಾಧ್ಯ? ಅರುಣ್ ಸಾಗರ್ ಸದ್ಯ ಬಿಗ್‌ಬಾಸ್ ಎಂಬ ಕಪಟ ನಾಟಕದ ದುರಂತ ನಾಯಕ ಮಾತ್ರ !







● ರಾ. ಸೋಮನಾಥ್

ಪೊಲೀಸರೇ ಬಲಿಪಶು ವಂಚಕ ರಿಪ್ಸನ್ ಮಲ್ಹೋತ್ರಾ...!



...ಪ್ಸನ್ ಮಲ್ಹೋತ್ರಾ ಎಂಬ ಷೇರು ದಲ್ಲಾಳಿ ...ದ ಪ್ರಜೆಗಳಿಗೆ 210 ಕೋಟಿ ರೂಪಾಯಿ ... ಅಲ್ಲದೆ ಬೆಂಗಳೂರು ನಗರ ಪೊಲೀಸರಿಗೆ ...ಂದು ತಲೆನೋವನ್ನು ತಂದಿಟ್ಟು...

...ಹತ್ಯೆ ಮಾಡಿಕೊಂಡಿದ್ದಾನೆ!

...ಳ ವಾರ ಬೆಂಗಳೂರಿನ ತನ್ನ ಮನೆಯಲ್ಲಿ ...ಬಕ್ಕೇರುವ ಮುನ್ನ ಈ ಮಲ್ಹೋತ್ರಾ ಅದ್ಯಾವ ...ಬಲ್ಲಿದ್ದನೋ ಏನೋ "ಷೇರು ವ್ಯವಹಾರದಲ್ಲಿ ...ರಾರು ಕೋಟಿ ನಷ್ಟ ಅನುಭವಿಸಿದೆ. ಅಲ್ಲದೆ ...ಲೀಸರೂ ಬೆದರಿಸಿ ಏಳು ಕೋಟಿ ರೂಪಾಯಿ ...ತೆ ಒತ್ತಾಯಿಸುತ್ತಿದ್ದಾರೆ, ಇಲ್ಲದಿದ್ದರೆ ಅರೆಸ್ಟ್ ...ದಾಗಿ ಧಮಕಿ ಹಾಕುತ್ತಿದ್ದಾರೆ" ಎಂದು ಒಂದು ...ಟ್ ಬರೆದಿಟ್ಟು ಪರಲೋಕದ ವಿಮಾನ ಹತ್ತಿಬಿಟ್ಟ... ...ತ್‌ನೋಟ್‌ನಲ್ಲಿದ್ದ ಮೊದಲನೆ ಅಂಶ ನಿಜವಾದ ...ಾಗಿತ್ತು. ಆದರೆ ಪೊಲೀಸರು ಬೆದರಿಸಿದರೆಂಬುದು ...ಜವಿರಲಿಲ್ಲ. ಆದರೆ ಡೆತ್‌ನೋಟ್ ಯಾವಾಗ ...ಂತ್ರಿ ಸಿದ್ದರಾಮಯ್ಯನವರ ಕೈ ಸೇರಿತೋ ಅವರು ... ಸಹನೆಯಿಂದ ಪರಿಶೀಲಿಸಬೇಕಿತ್ತಾದರೂ ...ಾಗಿ ಸಿಐಡಿ ತನಿಖೆಗೆ ಆದೇಶಿಬಿಟ್ಟರು.

...ಾಗಿ ಮಲ್ಹೋತ್ರಾ ಸೂಸೈಡ್ ಪ್ರಕರಣ ದೊಡ್ಡ ...ಗಿದೆ.

...ಪ್ಸನ್ ಎಂಬ ರಿಂಗ್‌ಮಾಸ್ಟರ್

...ಾ ಮೂಲದ ಮಾರ್ವಾಡಿ ರಿಪ್ಸನ್ ಮಲ್ಹೋತ್ರಾ ...ಮ ವರ್ಷಗಳ ಹಿಂದೆ ಬೆಂಗಳೂರಿಗೆ ಬಂದವನು. ... ಮುನ್ನ ಗುಜರಾತ್, ಮುಂಬೈ ಹಾಗೂ ...ಲ್ಲಿ ಷೇರು ವ್ಯವಹಾರಗಳಲ್ಲಿ ಅನೇಕರನ್ನು ವಂಚಿಸಿ ಜೈಲು ಕಂಡುಬಂದಿದ್ದ ನಯವಂಚಕ. ಅವನ ಹೆಂಡತಿ ಅಫ್ರೋಣ್ಣಾ ಕೂಡಾ ಕಿಲಾಡಿ ಹೆಂಗಸೇ. ಆಕೆ ಈಗಲೂ ಮಕ್ಕಳೊಂದಿಗೆ ಪೂನಾದಲ್ಲೇ ಇದ್ದಾಳೆ. ಈ ರಿಪ್ಸನ್ ಇಲ್ಲಿಗೆ ಬಂದವನೇ ಬೆಂಗಳೂರಿನ ಮಲ್ಲೇಶ್ವರ, ಯಲಹಂಕ ಹಾಗೂ ಈಜಿಪುರ ಮತ್ತು ದಾವಣಗೆರೆ, ಬಿಜಾಪೂರಗಳಲ್ಲಿ ರಿಪ್ಸನ್ಸ್ ಸನ್ ಗ್ರೂಪ್ ಆಫ್ ಕಂಪನಿಯ ಶಾಖೆಗಳನ್ನು ತೆರೆದ. ರಿಪ್ಸನ್ ಕರ್ನಾಟಕವನ್ನೇ ಆರಿಸಿಕೊಳ್ಳಲು ಒಂದು ಆಕರ್ಷಣೆಯೂ ಇಲ್ಲಿತ್ತು, ಅದು ಕರ್ನಾಟಕದ ಜನರ ಪ್ರತಿಭೆ ಹಾಗೂ ಕಾಮನ್ ಸೆನ್ಸ್ ವಿಚಾರ.

ಬಾಗಲಕೋಟೆಯ ಭಜಂತ್ರಿ, ವಿನಿವಿಂಕ್ ಶಾಸ್ತ್ರಿ ಗುರುಟೀಕ್, ಸ್ವಯಂಕೃಷಿಯ ವೀರೇಂದ್ರ ಬಾಬು... ಇನ್ನು ಮುಂತಾದವರು ನಯವಾಗಿ ಮಾತಾಡುತ್ತಲೇ, ಲಾಭದ ಆಸೆ ತೋರಿಸಿ ಕರ್ನಾಟಕದ ಜನರಿಂದ ಸಾವಿರಾರು ಕೋಟಿ ರೂಪಾಯಿ ಎತ್ತಿ ಉಂಡೆ ನಾಮ ತಿಕ್ಕಿದ್ದು ರಿಪ್ಸನ್ ಗಮನದಲ್ಲಿತ್ತು. ವಂಚನೆಗೊಳಗಾಗಲು ಸದಾ ರೆಡಿಯಿರುವ ಕನ್ನಡಿಗರೇ ತನ್ನ ಮುಂದಿನ 'ಹರಕೆಯ ಕುರಿ'ಗಳೆಂದು ನಿರ್ಧರಿಸಿಕೊಂಡ ರಿಪ್ಸನ್ ಬೆಂಗಳೂರಿನಲ್ಲಿ ಸೂಟುಬೂಟು ಧರಿಸಿ ಅವತರಿಸಿದ.

2009 ರಲ್ಲಿ ರಿಪ್ಸನ್ಸ್ ಗ್ರೂಪ್ ಆಫ್ ಕಂಪನೀಸ್ ಎಂಬ ಬೋರ್ಡ್ ನೆಟ್ಟು, ಐಷರಾಮಿ ಆಫೀಸುಗಳನ್ನು ತೆರೆದು ಕುಳಿತ.

ಈ ರಿಪ್ಸನ್ಸ್‌ನ ಗ್ರೂಪ್‌ನ ಹಿನ್ನೆಲೆಯೂ ಅನುಮಾನಾಸ್ಪದವಾಗಿದೆ.

`FIN ways' ಎಂಬ ಷೇರ್ ಟ್ರೇಡಿಂಗ್‌ನಲ್ಲಿದ್ದ ಖಾಸಗಿ ಕಂಪನಿಯೇ ರಿಪ್ಸನ್ಸ್ ಕಂಪನಿ ಎಂಬುದಾಗಿ ಬದಲಾಗಿತ್ತು! ಇಸವಿ 2000 ದಲ್ಲಿ ಸ್ಥಾಪನೆಯಾಗಿದ್ದ ಈ ಫಿನ್‌ವೇಸ್ ಶೇರ್ ವ್ಯವಹಾರದಲ್ಲಿ ತನಗೆ ಸಾವಿರದೈನೂರು ಹೂಡಿಕೆದಾರರಿದ್ದಾರೆಂದು (clients) ಹೇಳಿಕೊಳ್ಳುತ್ತಿತ್ತು.

ಈ ರಿಪ್ಸನ್ ತಾನು 2009 ರಲ್ಲಿ ಫಿನ್‌ವೇಸ್ ಅನ್ನು ಖರೀದಿಸಿ ರಿಪ್ಸನ್ಸ್‌ನ ಗ್ರೂಪ್ ಆಫ್ ಕಂಪನೀಸ್ ಆಗಿ ಪರಿವರ್ತಿಸಿದೆ ಎಂದು ಪ್ರಚಾರ ಮಾಡಿದ. ತನ್ನ ಕೈಗೆ ಬಂದ ಮೇಲೆ ಶೇರು ವ್ಯವಹಾರದಲ್ಲಿ ಪ್ರತಿದಿನದ ಟರ್ನ್ ಓವರ್ ಒಂದೂವರೆ ಕೋಟಿ ಇದ್ದದ್ದು ಈಗ ನಲವತ್ತೈದು ಕೋಟಿಗೆ ಏರಿದೆ ಎಂದು ಕೊಚ್ಚಿಕೊಳ್ಳುತ್ತಿದ್ದ.

ಆಗ ಶುರುವಾಯಿತು ನೋಡಿ ಹಣ ಹಾಕುವವರ ಧಾವಂತ!

ನೋಡನೋಡುತ್ತಿದ್ದಂತೆ ಕೇವಲ ಮೂರು ವರ್ಷದಲ್ಲಿ ಕರ್ನಾಟಕದ ಅವಿವೇಕಿ ಜನ 210 ಕೋಟಿ ರೂಪಾಯಿಗಳನ್ನು ತಿರುಪತಿ ಹುಂಡಿಗೆ ಹಾಕುವಷ್ಟೇ ಶ್ರದ್ಧೆ ಭಕ್ತಿಯಿಂದ ಈ ರಿಪ್ಸನ್ ಕೈಗಿಟ್ಟು ಲಾಭದ ಹಣಕ್ಕಾಗಿ ಕಾಯತೊಡಗಿದರು. ಲಾಭ ಬರಲಿಲ್ಲ ಅಂತೇನಿಲ್ಲ... ಬಂತು, ಬರುತ್ತಲೂ ಇತ್ತು! ಆದರೆ ಆ ಲಾಭವನ್ನು ರಿಪ್ಸನ್ ಹೇಗೆ ಗಳಿಸಿದ ಎಂದು ಯಾವ ಹೂಡಿಕೆದಾರರೂ ಚೆಕ್ ಮಾಡಲಿಲ್ಲ!


ವಂಚನೆಗೆ ನೂರು ದಾರಿ

ಸೆಬಿ (Securities And Exchange Board of India) ಹಾಗೂ ರಿಸರ್ವ್ ಬ್ಯಾಂಕ್ ನಿಯಮಗಳ ಪ್ರಕಾರ ಶೇರು ವ್ಯವಹಾರದಲ್ಲಿ ತೊಡಗುವ ಯಾವುದೇ ಸಂಸ್ಥೆಯು ತನ್ನ ಬಳಿ ಹಣ ಹೂಡುವವರ ವೈಯಕ್ತಿಕ ಅಕೌಂಟ್‌ಗಳನ್ನು ತೆರೆದು ಪ್ರತಿಯೊಬ್ಬರ ಹಣಕಾಸು ವ್ಯವಹಾರಗಳನ್ನು ಪ್ರತ್ಯೇಕವಾಗಿ ನಿರ್ವಹಿಸಬೇಕು ಎಂದಿದೆ. ಅಂದರೆ ಯಾವುದೇ ಕಂಪನಿ ನೂರಾರು ಜನರಿಂದ ಹಣ ಸಂಗ್ರಹಿಸಿ-ಇದನ್ನು money pooling ಎನ್ನುತ್ತಾರೆ- ನೇರವಾಗಿ ಶೇರ್ ಟ್ರೇಡಿಂಗ್ ಮಾಡುವಂತಿಲ್ಲ, ಈ ನಿಯಮದ ಬಗ್ಗೆ ರಿಪ್ಸನ್‌ಗೂ ಗೊತ್ತಿತ್ತು, ಹೂಡಿಕೆದಾರರಿಗೂ ತಿಳಿದಿತ್ತು, ಆದರೂ ಇವರೆಲ್ಲರೂ ಆ ಕಾಯ್ದೆ ಉಲ್ಲಂಘಿಸಿದ್ದಾರೆ.

ಹೂಡಿಕೆದಾರದಿಂದ ಲಕ್ಷಾಂತರ ರೂಪಾಯಿ ಹಣ ಪಡೆಯುತ್ತಿದ್ದ ರಿಪ್ಸನ್ ಅಂತವರ ಪ್ರತ್ಯೇಕ ಟ್ರೇಡಿಂಗ್ ಅಕೌಂಟ್ ತೆರೆಯುವ ಬದಲಾಗಿ ತನ್ನ ಕಂಪನಿ ಹಾಗೂ ಹೂಡಿಕೆದಾರರ ನಡುವೆ ಒಂದು ಅಗ್ರಿಮೆಂಟ್ ಮಾಡಿಕೊಳ್ಳುತ್ತಿದ್ದ. ಇಂತಿಂತವರಿಂದ ಇಂತಿಷ್ಟು ಹಣ ಪಡೆದಿದ್ದೇವೆ, ತಿಂಗಳಿಗೆ ಇಷ್ಟು ಪರ್ಸೆಂಟ್ ಲಾಭ ನೀಡುತ್ತೇನೆ ಎಂಬ ಒಕ್ಕಣೆ ಅಗ್ರಿಮೆಂಟ್‌ನಲ್ಲಿರುತ್ತಿತ್ತು. ಒಪ್ಪಂದದಂತೆ ರಿಪ್ಸನ್ ಹೂಡಿಕೆದಾರರಿಗೆ ಲಾಭದ ಮೊತ್ತದ ಚೆಕ್‌ಗಳನ್ನು (Post Dated Cheques) ಮೊದಲೇ ನೀಡುತ್ತಿದ್ದ. ಹಣ ಕೊಟ್ಟವರು ನಿರಾಳವಾಗಿ ತಿಂಗಳಿಗೊಮ್ಮೆ ಬ್ಯಾಂಕ್‌ಗೆ ಚೆಕ್ ನೀಡಿ ಲಾಭ ಜೇಬಿಗಿಳಿಸುತ್ತಿದ್ದರು. ಇದು ಅನೇಕ ತಿಂಗಳ ಕಾಲ ಹೀಗೆ ನಡೆಯುತ್ತಿತ್ತು. ಇದನ್ನು ಗಮನಿಸಿದ ಇನ್ನು ಹಲವರು ಬುದ್ಧಿವಂತರು ತಾವೂ ಏಕೆ ಸಲೀಸಾಗಿ ಲಾಭ ಮಾಡಬಾರದೆಂದು ಯೋಚಿಸಿ ತಮ್ಮ ಇದ್ದ, ಬದ್ದ, ಕದ್ದ ಹಣವನ್ನೆಲ್ಲಾ ತಂದು ರಿಪ್ಸನ್ ಕೈಗಿಡತೊಡಗಿದರು.

ನೋಡನೋಡುತ್ತಿದ್ದಂತೆ ಮಾರ್ವಾಡಿ ರಿಪ್ಸನ್‌ನ ವಹಿವಾಟು ಲಕ್ಷಗಳಿಂದ ಕೋಟಿಗಳಿಗೇರಿ, ಕೊನೆಗೆ ಎರಡು ನೂರು ಕೋಟಿ ದಾಟಿತು.

ಈ ರಿಪ್ಸನ್ ಏನು ಮಾಡುತ್ತಿದ್ದನೆಂದರೆ ಹೂಡಿಕೆದಾರರು ಕೊಟ್ಟ ಹಣದಿಂದ ಶೇರ್ ಟ್ರೇಡಿಂಗ್ ಮಾಡುತ್ತಿದ್ದನಾದರೂ ಆ ವ್ಯವಹಾರದಲ್ಲಿ ಲಾಭ ಬರಲಿ ಅಥವಾ ನಷ್ಟವೇ ಆಗಲಿ ಒಟ್ಟಿನಲ್ಲಿ ಲಾಭವೇ ಬರುತ್ತಿದೆ ಎನ್ನುವಂತೆ ಪ್ರತಿ ತಿಂಗಳು ಲಾಭಾಂಶ ವಿತರಿಸುತ್ತಿದ್ದ. ಆದರೆ ಆ ಹಣ ಹೂಡಿಕೆದಾರರು ನೀಡುತ್ತಿದ್ದ ಹಣದ ಒಂದು ಭಾಗ ಆಗಿರುತ್ತಿತ್ತೇ ವಿನಃ ನಿಜವಾದ ಲಾಭ ಆಗಿರಲಿಲ್ಲ.



ಹಣ ಕೊಟ್ಟವರು ಇದನ್ನು ಅರ್ಥಮಾಡಿಕೊಳ್ಳದೆ ಹೋದರು. ರಿಪ್ಸನ್ ತಮ್ಮ ಹಣವನ್ನು ಎಲ್ಲಿ ಹೂಡಿದ, ಯಾವ ಟ್ರೇಡಿಂಗ್ ಮಾಡುತ್ತಿದ್ದಾನೆ ಎಂತಲೂ ಕ್ರಾಸ್‌ಚೆಕ್ ಮಾಡಲೇ ಇಲ್ಲ.

ಮತ್ತೊಂದೆಡೆ ರಿಪ್ಸನ್‌ನ ಶೇರ್ ಟ್ರೇಡಿಂಗ್ ದಂಧೆಗೆ ಮಾರ್ಕೆಟ್‌ನಲ್ಲಿ ಏಟಿನ ಮೇಲೇಟು ಬೀಳುತ್ತಾ ಅವನು ಸಂಗ್ರಹಿಸಿದ್ದ ನೂರಾರು ಕೋಟಿ ರೂಪಾಯಿ ಕರಗಲು ಶುರುವಾಯಿತು. ಆ ಬಿಕ್ಕಟ್ಟಿನಿಂದ ಪಾರಾಗಲು ರಿಪ್ಸನ್ ಡಜನ್‌ಗಟ್ಟಲೆ ಹೊಸ ಕಂಪನಿಗಳನ್ನು ತೆರೆದು ಕೂತ. ಜನರಿಂದ ಇನ್ನಷ್ಟು ಹಣ ಎತ್ತುವುದು ಹಾಗೂ ಶೇರ್ ಟ್ರೇಡಿಂಗ್ ಅಲ್ಲದೆ ಬೇರೆ ಹೊಸ ತರದ ದಂಧೆ ನಡೆಸಿ ಲಾಭ ಮಾಡಬೇಕೆಂಬ ಯೋಚನೆ ಅವನಿಗಿತ್ತು.

ನಾನಾ ಬೋರ್ಡು-ಹಲವು ಕಾರ್ಡು

ರಿಪ್ಸನ್ ಹೀಗೆ ಶುರು ಮಾಡಿದ ಹೊಸ ದಂಧೆಯ ಲಿಸ್ಟ್ ಹೇಗಿದೆ ಗೊತ್ತೆ?

ಅಸೆಟ್ ಮ್ಯಾನೇಜ್‌ಮೆಂಟ್, ಕಮಾಡಿಟಿ ಟ್ರೇಡಿಂಗ್, ಇಂಪೋರ್ಟ್ ಎಕ್ಸ್‌ಪೋರ್ಟ್, ಮೀಡಿಯಾ ಎಂಟರ್‌ಟೈನ್‌ಮೆಂಟ್... ಹೀಗೆ.

ಇದರಲ್ಲಿ ಅಸೆಟ್ ಮ್ಯಾನೇಜ್‌ಮೆಂಟ್ ಎಂಬುದು ರಿಯಲ್ ಎಸ್ಟೇಟ್ ದಂಧೆಯಾದರೆ ಕಮಾಡಿಟಿ ಟ್ರೇಡಿಂಗ್ ಹೆಸರಲ್ಲಿ ಪೇಂಟ್, ವಾಚು, ಕಾರ್ಪೆಟ್ ಬ್ಯುಸಿನೆಸ್ ಮಾಡುತ್ತೇನೆ ಎಂದು ಪ್ರಚಾರ ಮಾಡಿದ. ಯಾವುದೋ ಉದ್ಯಮಿಗಳ ಗುಂಡು ಪಾರ್ಟಿಯಲ್ಲಿ ತಲೆ ಕೆಟ್ಟವನ್ಯಾರೋ ಕರೆದನೆಂದು ಸಿನಿಮಾ ಕ್ಷೇತ್ರಕ್ಕೂ ಕಾಲಿಟ್ಟ. ರಾತ್ರೋರಾತ್ರಿ List Media Pvt. Ltd. ಎಂಬ ಸಿನಿಮಾ ಕಂಪನಿ ತೇಲಿಬಿಟ್ಟು, ಶ್ರೀನಿವಾಸ್ ಎಂಬಾತನನ್ನು ಅದರ ಮ್ಯಾನೇಜಿಂಗ್ ಡೈರೆಕ್ಟರ್ ಎಂದು ತಂದು ಕೂರಿಸಿದ. ಮೊದಲಿಗೆ 'ವರ್ಷಧಾರೆ' ಎಂಬ ಸಿನಿಮಾಗೆ ಸಹ ನಿರ್ಮಾಪಕನಾದ. ನಂತರ ಈಗ ಬಿಡುಗಡೆಯಾಗಿರುವ 'ಚಂದ್ರ' ಸಿನಿಮಾಗೂ ಹಣ ಹಾಕಿದ. ಇವೆಲ್ಲ ಲಾಭವಿರಲಿ, ಅಸಲೂ ತಂದುಕೊಡಲಿಲ್ಲ, ಆದರೆ ಕೈಬಿಟ್ಟ ಹಣ ಮಾತ್ರ ಕೋಟಿಗಳ ಲೆಕ್ಕದಲ್ಲಿತ್ತು.

ಕೈಯಿಟ್ಟಿದ್ದ ಪೇಂಟು ವ್ಯಾಪಾರ ರಿಪ್ಸನ್‌ನ ಮುಖಕ್ಕೇ ಮಸಿ ಹಚ್ಚಿದರೆ ವಾಚು ವ್ಯಾಪಾರ ಅವನ ಕಂಪನಿಯ ಓಟಕ್ಕೇ ಕುತ್ತು ತಂದಿತ್ತು, ಉಳಿದಿದ್ದ ಕಾರ್ಪೆಟ್ ಬ್ಯುಸಿನೆಸ್ಸೂ ಲಾಸಾಗಿ ಕೊನೆಗೆ ರಿಪ್ಸನ್ ಅದೇ ಕಾರ್ಪೆಟ್ ಮೇಲೆ ಹೆಣವಾಗಿ ಮಲಗುವ ಸ್ಥಿತಿ ಬಂತು.

16ನೇ ಪುಟ ನೋಡಿ>>>

ಪೊಲೀಸರು ತಪ್ಪು ಮಾಡಿದರೆ?

...ಪ್ಸನ್‌ನ ಹಿನ್ನೆಲೆ ಹಾಗೂ ಸಾವಿನ ಸಂದರ್ಭವನ್ನು ... ಪರಿಶೀಲಿಸಿದರೆ ಅವನ ಆತ್ಮಹತ್ಯೆಗೆ ಬೆಂಗಳೂರು ...ಮ ಕಾರಣವಲ್ಲ ಎಂಬುದು ಸ್ಪಷ್ಟವಾಗಿದೆ.

... ಆಗಿನ ಕಮೀಷನರ್ ಮಿರ್ಜಿ ಹಾಗೂ ಸಿಸಿಬಿಯ ...ವರಾಜ್‌ರು ರಿಪ್ಸನ್‌ನನ್ನು ಬೆದರಿಸಿ ಏಳು ಕೋಟಿ ... ಒತ್ತಾಯಿಸಿದರೆಂಬ ಸುದ್ದಿಯೂ ಕೊಂಚ ...ಕವಾಗಿ ಬಿಂಬಿತವಾಗಿದೆ.

...ವದ್ದೇನೆಂದರೆ...

...3ರ ಜನವರಿಯಲ್ಲೇ ಬೆಂಗಳೂರಿನ ಅನಿಲ್ ...ಗೂ ದಾವಣಗೆರೆಯ ಕೆಲ ಹೂಡಿಕೆದಾರರು ... ವಂಚನೆಯ ವಿರುದ್ಧ ನಗರದ ವೈಟ್‌ಫೀಲ್ಡ್ ... ದೂರು ನೀಡಿದ್ದರು. ರಿಪ್ಸನ್‌ನ ಕಚೇರಿ ಅದೇ ...ಪ್ಟಿಯಲ್ಲಿತ್ತು. ನಂತರ ಆ ಪ್ರಕರಣ ಏಪ್ರಿಲ್ ...ಖೆಗಾಗಿ ಸಿಟಿ ಕ್ರೈಂ ಬ್ರಾಂಚ್ ಪೊಲೀಸರಿಗೆ ...ವಾಯಿತು. ಸಿಸಿಬಿಯ ಇನ್ಸ್‌ಪೆಕ್ಟರ್ ಪ್ರಶಾಂತ್ ...ಕ ಇನ್‌ವೆಸ್ಟಿಗೇಟಿಂಗ್ ಆಫೀಸರ್ ಆಗಿದ್ದರು. ... ಈ ರಿಪ್ಸನ್‌ನನ್ನು ಪತ್ತೆ ಹಚ್ಚಲು ಬೆಂಗಳೂರಿನೆಲ್ಲೆಡೆ ...ದೂ ಅವನು ಸಿಗದಿದ್ದಾಗ ಮುಂಬೈತನಕ ಹೋಗಿ ... ಪತ್ತೆ ಹಚ್ಚಿ ವಿಚಾರಣೆಗೆ ಬರುವಂತೆ ನೋಟಿಸ್ ...ಿದ್ದರು. ಆಯಿತೆಂದು ಒಂದು ದಿನ ರಿಪ್ಸನ್ ...ಿಗೆ ಬಂದು ಹೇಳಿಕೆ ನೀಡಿದ. ತಾನು ನೂರಾರು ... ಹಣ ಹೇಗೆ ಕಳೆದುಕೊಂಡೆ ಅಂತ ವಿವರಿಸಿ ...ದ. ರಿಪ್ಸನ್‌ನನ್ನು ವಾಪಸ್ ಕಳಿಸುವಾಗ ಅವನಿಗೆ ...ರ್ಜ್ ಅನ್ನೂ ತಾವೇ ಕೊಡಬೇಕಾಗುತ್ತದೇನೂ ...ಪೊಲೀಸರಿಗೂ ಅನಿಸುವಷ್ಟರ ಮಟ್ಟಿಗೆ ರಿಪ್ಸನ್ ...ಿಡು ಮಾಡಿದ್ದ. ಹೀಗಿದ್ದಾಗ ಹೂಡಿಕೆದಾರರ ... ಹೊತ್ತಾಗ ಕಮೀಷನರ್ ಮಿರ್ಜಿಯವರೊಮ್ಮೆ ... ಇನ್ಸ್‌ಪೆಕ್ಟರ್ ಮಂಜುನಾಥರಿಗೆ 'ರಿಪ್ಸನ್‌ನನ್ನು ... ಅಂದರೆ ಜನರ ದೂರು ಕೇಳುವ' ...ಗೆ ಕರೆತರುವಂತೆ ಹೇಳಿ ಕಳಿಸಿದರು. ಅದರಂತೆ ... 9480801615 ಎಂದ ... ಕಮೀಷನರ್ ಕಚೇರಿಗೆ ಬರುವಂತೆ ...

... ಜೂನ್ 28ನೇ ತಾರೀಖು. ಯಾವಾಗ ... ಕಂಗಾಲಾದ ರಿಪ್ಸನ್ ಸಿಸಿಬಿಯ ... ಫೋನ್ ಮಾಡಿದ್ದಾನೆ. ರಿಪ್ಸನ್ ಸಿಸಿಬಿಗೆ ಹೋಗಿದ್ದಾಗ ಅಲ್ಲಿ ಪೊಲೀಸರು ಸೌಜನ್ಯದಿಂದಲೇ ವರ್ತಿಸಿದ್ದರು. ಆ ನಂಬಿಕೆ ಇದ್ದ ಕಾರಣಕ್ಕೆ ಡಿಸಿಪಿ ದೇವರಾಜ್‌ರ ಜೊತೆ ರಿಪ್ಸನ್ 'ಕಮಿಷನರ್ ಕಚೇರಿ ಕರೆ'ಯ ಬಗ್ಗೆ ವಿಚಾರಿಸಿ ತಿಳಿದುಕೊಂಡಿದ್ದಾನೆ. ಕೊನೆಗೆ ಹೋಗಲೇಬೇಕಾಗ ಬಂದ ಕಾರಣ ತನ್ನ ಕೆಲ ಕಚೇರಿ ಸಿಬ್ಬಂದಿಯ ಜೊತೆ ಮಿರ್ಜಿಯವರ ಆಫೀಸಿಗೆ ಬಂದ. ಅವತ್ತು ಡಿಸಿಪಿ ದೇವರಾಜ್, ಇನ್ಸ್‌ಪೆಕ್ಟರ್ ಮಂಜುನಾಥ್ ಸೇರಿದಂತೆ ಇನ್ನೂ ಅನೇಕರ ಎದುರಿಗೇ ರಿಪ್ಸನ್‌ನ ವಿಚಾರಣೆಯಾಗಿದೆ. ಸ್ಥಳದಲ್ಲಿ ರಿಪ್ಸನ್‌ನ ಸಹಾಯಕರಲ್ಲದೆ, ಕೆಲ ದೂರುದಾರರೂ ಇದ್ದರು. ಅಲ್ಲಿ ಜನ ರಿಪ್ಸನ್‌ನ ವಂಚನೆಗಳ ಬಗ್ಗೆ ಹೇಳತೊಡಗಿದಾಗ ರಿಪ್ಸನ್ ಮತ್ತವನ ಸಿಬ್ಬಂದಿ ಉಡಾಫೆಯ ಉತ್ತರ ನೀಡಿದ್ದಾರೆ. ಒಮ್ಮೆ "ನಮಗೆ ಕನ್ನಡ ಬರಲ್ಲ, ಹೇಳೋದೇನಿದ್ದರೂ ಇಂಗ್ಲಿಷ್‌ನಲ್ಲಿ ಹೇಳಿ" ಅಂತಾ ರೋಫ್ ಕೂಡಾ ಹಾಕಿದ್ದಾರೆ. ಬೇರೆಲ್ಲೋ ತುರ್ತಾಗಿ ಹಿರಿಯ ಅಧಿಕಾರಿ ಕಮಲ್ ಪಂತರೊಂದಿಗೆ ಹೊರಡಬೇಕಿದ್ದ ಮಿರ್ಜಿಯವರು ರಿಪ್ಸನ್‌ನ ಅಹಂ ಹಾಗೂ ಭಂಡತನ ಗಮನಿಸಿ ಇನ್ಸ್‌ಪೆಕ್ಟರ್ ಮಂಜುನಾಥರಿಗೆ "ನೀವು ರಿಪ್ಸನ್ ಮೇಲೆ ಕಾನೂನಿನ ಪ್ರಕಾರ ಕ್ರಮ ತಗೊಳ್ಳಿ. ವಿಚಾರಣೆಗೆ ಸಹಕರಿಸದಿದ್ದರೆ ದೂರಿನ ಆಧಾರದಲ್ಲಿ ಅರೆಸ್ಟ್ ಮಾಡಿ" ಎಂದು ಹೇಳಿಹೋಗಿದ್ದಾರೆ.

ಆದರೆ ಮಂಜುನಾಥ್ ಅವತ್ತು ರಿಪ್ಸನ್‌ನನ್ನು ಬಂಧಿಸದೆ "ನಾಳೆ ಬನ್ನಿ" ಎಂದು ಬಿಟ್ಟು ಕಳಿಸಿದ್ದಾರೆ. ರಿಪ್ಸನ್ ಅವತ್ತೇ ಅರೆಸ್ಟಾಗಿದಿದ್ದರೆ ಅವನಿಗೆ ಆತ್ಮಹತ್ಯೆ ಮಾಡಿಕೊಳ್ಳಲು ಅವಕಾಶ ಸಿಗುತ್ತಿರಲಿಲ್ಲವೇನೋ!

ಅವತ್ತು ರಾತ್ರಿ ಮನೆಗೆ ಹೋದ ರಿಪ್ಸನ್‌ಗೆ ಬದುಕಿರುವಷ್ಟು ದಿನ ಜೈಲು ಕಂಬಿ ಎಣಿಸಬೇಕಾದ ವಾಸ್ತವ ಗೊತ್ತಾಗಿತ್ತು, ಕಳೆದುಕೊಂಡಿದ್ದ ನೂರಾರು ಕೋಟಿ ರೂ.ಗಳನ್ನು ಮರಳಿ ಪಡೆಯುವ ಛಾನ್ಸೇ ಇರಲಿಲ್ಲ, ಹೊರಗಿದ್ದರೆ ಹಣ ಕೊಟ್ಟವರು ಬಿಡುತ್ತಿರಲಿಲ್ಲ, ಇದಲ್ಲದೆ ... ಲಾಂಡರಿಂಗ್ (ಕಪ್ಪು ಹಣವನ್ನು ವೈಟ್ ಮನಿ ಮಾಡುವ ದಂಧೆ)ಯಲ್ಲೂ ರಿಪ್ಸನ್ ಕೈ ಜೋಡಿಸಿದ್ದ ಸಂಗತಿ ಪೊಲೀಸರಿಗೆ ಗೊತ್ತಾಗಿತ್ತು, ಹಾಗಾಗಿ ಮಾರನೇ ದಿನ ಸ್ಟೇಷನ್‌ಗೆ ಹೋದರೆ ಜೀವನ ಅಲ್ಲಿಗೆ ಕೊನೆಯಾಗುವುದಿತ್ತು.

ಹತಾಶನಾದ ರಿಪ್ಸನ್ ಕೊನೆಯ ದಾರಿ ಆರಿಸಿಕೊಂಡು ಎಲ್ಲದರಿಂದ ಬಿಡುಗಡೆ ಪಡೆದಿದ್ದಾನೆ.

ರಿಪ್ಸನ್ ಸಾವಿನಲ್ಲಿ ಪೊಲೀಸರ ತಪ್ಪು ಏನೂ ಇಲ್ಲ...

ಹಣ ಕಳೆದುಕೊಂಡ ಬುದ್ಧಿವಂತರು!

ಈಗ 210 ಕೋಟಿಯ ವಂಚನೆಯ ಲೆಕ್ಕವಷ್ಟೇ ಸಿಗುತ್ತಿದೆಯಾದರೂ ಇನ್ನು ಕೆಲವರು ಬಾಯಿ ಬಿಟ್ಟರೆ ಈ ಮೊತ್ತ ತ್ರಿಶತಕ ಕೋಟಿ ತಲುಪಲೂಬಹುದು.

ಅದಿರಲಿ ಬಿಡಿ.

ಈ ರಿಪ್ಸನ್‌ನನ್ನು ನಂಬಿ ಹಣ ಕಳೆದುಕೊಂಡ ಕೆಲವರ ವಿವರಗಳು ಇಲ್ಲಿವೆ.

1. ಬೆಂಗಳೂರಿನ ಚಿಕ್ಕಪೇಟೆಯ ಮಾರ್ವಾಡಿಗಳು - ಅಂದಾಜು 90 ಕೋಟಿ.

ಇವರ ಪೈಕಿ ರಿತೇಶ್ ಎಂಬುವನೊಬ್ಬನದೆ 4.5 ಕೋಟಿ ರೂ. ಇದೆ.


2. ದಾವಣಗೆರೆ, ಚಿತ್ರದುರ್ಗ ಇತ್ಯಾದಿ - 40 ಕೋಟಿ - ಇವರ ಪೈಕಿ ಪ್ರಖ್ಯಾತ ಬಟ್ಟೆ ವ್ಯಾಪಾರಿಗಳಾದ ಚನ್ನಬಸಪ್ಪ ಅಂಡ್ ಸನ್ಸ್‌ನವರ 9 ಕೋಟಿ ರೂ. ಮತ್ತು ಶಾಮನೂರು ಧಣಿಯ ಮಗ ಗಣೇಶ್‌ದೇ 8 ಕೋಟಿ ಇತ್ತೆನ್ನಲಾಗಿದೆ.

ಇನ್ನುಳಿದಂತೆ ಬಿಜಾಪೂರ ಬ್ರಾಂಚ್ ಆಫೀಸ್ ಮೂಲಕ ಈ ರಿಪ್ಸನ್ ಮುಂಬೈ - ಕರ್ನಾಟಕದ ಜಿಲ್ಲೆಗಳಲ್ಲಿ ಇಲ್ಲಿತನಕ ಯಾರೂ ಮಾಡಿರದಷ್ಟು ವಂಚನೆಯ ಫಸಲು ತೆಗೆದಿದ್ದ. ಈ ಹಣ ಹೂಡಿಕೆದಾರರ ಪೈಕಿ ಸ್ವಲ್ಪ ಗಮನ ಸೆಳೆಯುವಂತಿರುವುದು ಸರ್ಕಾರಿ ನೌಕರರು. ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿ ನಿವೃತ್ತ ಸರ್ಕಾರಿ ಆಫೀಸರ್‌ಗಳ ಒಂದು ಸಂಘದ ಕಚೇರಿಯಿದೆ. ದುಡಿದಿದ್ದು, ಕದ್ದಿದ್ದು ಎಲ್ಲವನ್ನೂ ಎಲ್ಲಿ ಬಿತ್ತಿ ಲಾಭದ ಬೆಳೆ ತೆಗೆಯಬೇಕೆಂದು ಪ್ಲಾನ್ ಮಾಡುತ್ತಿದ್ದ ಇವರಿಗೆ ರಿಪ್ಸನ್ ಒಬ್ಬ ಜೀನಿಯಸ್‌ನಂತೆ ಕಂಡ.

ಒಟ್ಟು 40 ಕೋಟಿ ರೂಪಾಯಿಯಷ್ಟು ಹಣ ಈ ಸರ್ಕಾರಿ ಅಧಿಕಾರಿಗಳಿಂದಲೇ ರಿಪ್ಸನ್ ಕೈ ಸೇರಿತು. ಕರಗಿಯೂ ಹೋಯಿತು.

ಆ ನಿವೃತ್ತರಿಗೆ ಹಣ ಕೊಡಬೇಕಿದ್ದ ರಿಪ್ಸನ್ ಈಗ ಸಿಗುತ್ತಾನಾ!

ರಂಜನೆ | ಬೋಧನೆ | ಪ್ರಚೋದನೆ ಲಂಕೇಶ್



ಲ್ಲಿರುವ ವೈದ್ಯರುಗಳಿಗೆ ಅಂತಹದೊಂದು ದಿನ ಬೇಕಿರಲಿಲ್ಲ ಹಾಗಾಗಿ ಈ ದಿನವನ್ನು ವೈದ್ಯ ಸಮುದಾಯ ಶುಭಾಶಯಗಳು, ಹೂಗುಚ್ಛ ಸ್ವೀಕರಿಸುವುದಕ್ಕಿಂತ ತನ್ನ ಆತ್ಮಾವಲೋಕನಕ್ಕೆ ಬಳಸುವುದೇ ಸೂಕ್ತ.

ಒಬ್ಬ ಡಾಕ್ಟರ್ ಬೆಳಗ್ಗೆ ಎದ್ದಾಗ ತನಗೆ ಈ ದಿನ ಹೆಚ್ಚು ಸಂಪಾದನೆಯಾಗದಿರಲಿ ಎಂದು ಬಯಸಬೇಕು ಅಲ್ಲವೇ? ಏಕೆಂದರೆ ಬೇರೊಬ್ಬ ವ್ಯಕ್ತಿಯ ನೋವಿನಲ್ಲಿ ವೈದ್ಯರ ಸಂಪಾದನೆ ನಿಂತಿದೆ. ಆ ರೋಗಿಯ ರೋಗ ಎಷ್ಟು ಭಯಾನಕವಾಗಿದೆ ಎಂಬುದರ ಮೇಲೆ ಅಥವಾ ರೋಗಿ ಆ ವಿಚಾರದಲ್ಲಿ ಎಷ್ಟು ಆತಂಕಕ್ಕೊಳಗಾಗಿದ್ದಾರೆ ಎಂಬುದರ ಮೇಲೆ ವೈದ್ಯರ ಸಂಪಾದನೆ ನಿಂತಿರುತ್ತದೆ. ಬೇಡ, ಇಂದು ಎಲ್ಲರೂ ಚೆನ್ನಾಗಿರಲಿ ನನಗೆ ಹೆಚ್ಚು

30-40 ವರ್ಷಗಳ ಹಿಂದೆ ಇಷ್ಟೊಂದು ಮೆಡಿಕಲ್ ಕಾಲೇಜುಗಳೂ ಇರಲಿಲ್ಲ ಡಾಕ್ಟರುಗಳೂ ಇರಲಿಲ್ಲ, ಆದರೂ ಅಲ್ಲೊಬ್ಬರು, ಇಲ್ಲೊಬ್ಬರು ಎಂ.ಬಿ.ಬಿ.ಎಸ್ ಡಾಕ್ಟರುಗಳು ದೊಡ್ಡ ಹಳ್ಳಿಗಳಲ್ಲಿ ನೆಲೆಯೂರಿದ್ದು ಕಾಣಸಿಗುತ್ತಿತ್ತು, ಈಗ ಎಷ್ಟೊಂದು ಸಂಖ್ಯೆಯಲ್ಲಿ ಕಾಲೇಜುಗಳೂ, ಪದವೀಧರರೂ ಹೆಚ್ಚಾಗಿದ್ದರೂ ಅಷ್ಟು ಸಂಖ್ಯೆಯಲ್ಲಿ ಹಳ್ಳಿಗಳು ಅಥವಾ ಸಣ್ಣ ಪಟ್ಟಣಗಳಲ್ಲಿ ಎಂ.ಬಿ.ಬಿ.ಎಸ್‌ಗಳು ಕಾಣುವುದಿಲ್ಲ, ಇವತ್ತಿಗೂ ದೊಡ್ಡ ಪ್ರಮಾಣದಲ್ಲಿ ಗ್ರಾಮೀಣ ಭಾಗದ ಜನರಿಗೆ ವೈದ್ಯಕೀಯ ಸೇವೆ ಸಲ್ಲಿಸುತ್ತಿರುವವರು ಇಂತಹ ಪದವಿಗಳಿಲ್ಲದ 'ಡಾಕ್ಟರ್‌ಗಳೇ'. ಅಂತಹವರನ್ನು 'ಕ್ವಾಕ್'ಗಳೆಂದು ಈ ಪದವೀಧರ ಸಮುದಾಯ ಮೂದಲಿಸುತ್ತದೆ.

ಸವಲತ್ತುಗಳು ಈಗ ಹಲವು ರೀತಿಯ ಆಯಾಮಗಳ... ವಿಸ್ತರಿಸಿಕೊಂಡಿದೆ. ಏಮ್ ಇಡೆ ಎನ್ನುವ ... ಸುಮ್ಮಸುಮ್ಮನೆ ಟೆಸ್ಟ್‌ಗಳು, ಸುಮ್ಮಸು... ಆಪರೇಷನ್‌ಗಳನ್ನು ಮಾಡುವುದು ಅಪರೂಪವಲ್ಲ ... ಎಂಬಂತಾಗಿದೆ. ಇಷ್ಟೆಲ್ಲಾ ಸಂಪಾದಿಸುವ ಸಮುದಾಯವು ಹಣವಿಲ್ಲ ಎನ್ನುವ ಕಾರಣಕ್ಕೆ ... ಸಾಯುತ್ತಿದ್ದಾನೆ/ಳೆ ಎಂದು ಗೊತ್ತಿದ್ದೂ ಅವರನ್ನು ಸಾ... ಬಿಡುತ್ತದೆ. ವೈದ್ಯ ವಿದ್ಯಾರ್ಥಿಗಳೆಲ್ಲರೂ ಪದವಿ ... ಕಡ್ಡಾಯವಾಗಿ ತೆಗೆದುಕೊಳ್ಳಬೇಕಾದ 'ಹಿಪ್ಪೋ... ಓಥ್'ಗಾಗಲೀ, ಸಾಮಾನ್ಯವಾಗಿ ಸಮಾಜದಲ್ಲಿ ಚಾಲ್ತಿ... ರುವ ವೈದ್ಯಕೀಯ ವೃತ್ತಿಯ ಕುರಿತ ಗೌರವಕ್ಕಾ... ಯಾವ ಅರ್ಥವೂ ಇಲ್ಲ.

ದೇವಲೋಕದಿಂದ ವಿಶೇಷ ವಿಮಾನದಲ್ಲಿ ಆಗಮಿಸಿದ ವೈದ್ಯರುಗಳ

ಮೊನ್ನೆ (ಜುಲೈ 1) ವೈದ್ಯರ ದಿನ ಆಚರಿಸಲಾಯಿತು. ರೋಗಿಗಳು, ನರ್ಸ್‌ಗಳು, ಸ್ನೇಹಿತರುಗಳಿಂದ ಎಸ್ಸೆಮ್ಮೆಸ್‌ಗಳಲ್ಲಿ 'ಹ್ಯಾಪಿ ಡಾಕ್ಟರ್ಸ್ ಡೇ' ಸಂದೇಶಗಳ ಸುರಿಮಳೆ. ಭುವಿಯ ಮೇಲೆ ದೇವರ ಪ್ರತಿರೂಪವಾಗಿ ಸಾಕ್ಷಾತ್ಕರಿಸಿಕೊಂಡಿರುವ ವಿಶಿಷ್ಟ ಜೀವ ಪ್ರಬೇಧ ಈ ವೈದ್ಯರುಗಳದ್ದು ಎಂಬಂತೆ ಅಲ್ಲಲ್ಲಿ ಹೊಗಳಿಕೆ. ಗ್ರೀಟಿಂಗ್ ಕಾರ್ಡ್ ಉದ್ದಿಮೆಯು ಈ 'ವಿಶೇಷ ದಿನ'ಗಳಿಂದ ಸಾಕಷ್ಟು ಲಾಭ ಮಾಡಿಕೊಂಡಿದೆ. ಹಾಗಾಗಿ ಹೆಚ್ಚು ಕಡಿಮೆ ವರ್ಷದಲ್ಲಿ ಸುಮಾರು 50 ದಿನಗಳು ಯಾವ್ಯಾವುದೋ ದಿನಗಳಾಗಿ ಆಚರಿಸಲ್ಪಡುತ್ತದೆ. ಭಾರತದಲ್ಲಿ ವೈದ್ಯರ ದಿನವು 1991ರಿಂದ ಶುರುವಾಯಿತು. 20ನೇ ಶತಮಾನದ ಆರಂಭ ಕಾಲದ ಪ್ರಸಿದ್ಧ ವೈದ್ಯರಾದ ಡಾ.ಬಿಧಾನ್ ಚಂದ್ರ ರಾಯ್‌ರ ಹುಟ್ಟಿದ ದಿನ ಜುಲೈ 1ನ್ನು ವೈದ್ಯರ ದಿನವನ್ನಾಗಿ ಆಚರಿಸಲು ಆಯ್ಕೆ ಮಾಡಿಕೊಂಡಿದ್ದಾರೆ. ನಮ್ಮ ದೇಶಕ್ಕೆ ತಕ್ಕನಾಗಿ!

ಅಮೆರಿಕ ಮತ್ತು ಇನ್ನಿತರ ದೇಶಗಳಲ್ಲಿ ಡಾ.ಕ್ರಾಫರ್ಡ್ ಡಬ್ಲ್ಯು ಲಾಂಗ್ ಎಂಬ ವೈದ್ಯರು, ರೋಗಿಯೊಬ್ಬರ ಕತ್ತಿನ ಗಡ್ಡೆಯನ್ನು ತೆಗೆಯಲು 'ಈಥರ್' ಅನಸ್ತೇಷಿಯಾವನ್ನು ಮೊಟ್ಟ ಮೊದಲು ಬಳಸಿದ ದಿನ, ಮಾರ್ಚ್ 30ನ್ನು ವೈದ್ಯರ ದಿನವೆಂದು ಕರೆದುಕೊಳ್ಳುತ್ತಾರೆ.

ಯಾವ ಕಾರಣಕ್ಕೇ ಆಚರಿಸುತ್ತಿರಲಿ, ಈ 'ವೈದ್ಯರ ದಿನ'ದ ಅಗತ್ಯವಿರಲಿಲ್ಲ. ಯಾರನ್ನು ವರ್ಷಪೂರ್ತಿ ನೆನೆದುಕೊಳ್ಳುವುದಿಲ್ಲವ್ರೋ, ಅವರಿಗೆಂದು ಒಂದು ದಿನವಿಟ್ಟರೆ ಆಗಲಾದರೂ ಆ ಸಮುದಾಯದ ಕುರಿತು ಚರ್ಚೆ, ಚಿಂತನೆ, ಕಾರ್ಯಕ್ರಮಗಳು ನಡೆದು ಒಂದಷ್ಟು ಅನುಕೂಲವಾಗಬಹುದು. ಚಿಕಾಗೋ ಪಟ್ಟಣದಲ್ಲಿ 1886ರ ಮೇ 1ರಂದು ನಡೆದ ವೀರೋಚಿತ ಹೋರಾಟದ ನೆನಪಿನಲ್ಲಿ ಆಚರಿಸಲಾಗುವ 'ಕಾರ್ಮಿಕ ದಿನಾಚರಣೆ' ಅಂತಹದೊಂದು ಉದಾಹರಣೆ. 1886ರಲ್ಲಿ ಚಿಕಾಗೋದಲ್ಲಿ ಇದ್ದ ಪರಿಸ್ಥಿತಿಯಲ್ಲೇ ಇಂದು ಬೆಂಗಳೂರಿನಂತಹ ಊರುಗಳಲ್ಲಿನ ಗುತ್ತಿಗೆ ಕಾರ್ಮಿಕರಿದ್ದಾರೆ. ಹಾಗಾಗಿ ಈ ಸಮಾಜವು ಒಂದು ದಿನದ ಸಾಂಕೇತಿಕ ಆಚರಣೆಯಿಂದ ವರ್ಷದ ಪಾಪವನ್ನು ಕಳೆದುಕೊಳ್ಳಲು ಅದನ್ನು ಆಚರಿಸಬೇಕೆಂದು ಬಯಸಬಹುದು. ಆದರೆ ನಿತ್ಯವೂ ವಿಶೇಷವೆಂದು ಪರಿಗಣಿಸ



ಸಂಪಾದನೆ ಆಗದಿದ್ದರೂ ಚಿಂತೆಯಿಲ್ಲ ಎಂದು ವೈದ್ಯ ಸಮುದಾಯ ಆಶಿಸುತ್ತದೆಯೇ? ಒಂದು ಸಮುದಾಯವಾಗಿ ಆ ರೀತಿ ಅದು ಆಲೋಚಿಸುವುದಿಲ್ಲ, ಬದಲಿಗೆ ಈ 'ಸೀಸನ್' ಚೆನ್ನಾಗಿತ್ತು ಎಂದು ಭಾವಿಸುತ್ತದೆ. ರಾಜ್ಯದೆಲ್ಲೆಡೆ ಡೆಂಗೆ ಹಾಗೂ ಇನ್ನಿತರ ಜ್ವರಗಳು ವ್ಯಾಪಕವಾಗಿ ಹಬ್ಬುತ್ತಿರುವ ಸಂದರ್ಭದಲ್ಲಿ ಈ ಬಾರಿಯ ಡಾಕ್ಟರ್ಸ್ ಡೇ ಬಂದಿದೆ. 'ಒಳ್ಳೇ ಸೀಸನ್'.

ಬೆಂಗಳೂರಿನಲ್ಲಿ ಕಾರ್ಪೊರೇಟ್ ಆಸ್ಪತ್ರೆಗಳು ದಿಕ್ಕು ದಿಕ್ಕಿಗೂ ದಿಕ್ಷಾಪಾಲಾಗಿ ತಲೆಯೆತ್ತುತ್ತಿವೆ. ಅದರಲ್ಲಿ ಕೆಲವು ಪ್ರಮುಖ ವೈದ್ಯರುಗಳಿಗೆ ನೀವು ಈ ವರ್ಷದಲ್ಲಿ ಇಂತಿಷ್ಟು ಆಪರೇಷನ್‌ಗಳನ್ನು ಮಾಡಬೇಕೆಂದು 'ಟಾರ್ಗೆಟ್' ನಿಗದಿ ಮಾಡಿರಲಾಗುತ್ತದೆ. ಅದಕ್ಕೆ ತಕ್ಕಂತೆ ಅವರ ವಾರ್ಷಿಕ ಸಂಪಾದನೆಯೂ ನಿಗದಿಯಾಗಿರುತ್ತದೆ. ಕೃತಕ ಕೀಲು ಜೋಡಣೆ, ಆಂಜಿಯೋಪ್ಲಾಸ್ಟಿ, ಬೈಪಾಸ್ ಸರ್ಜರಿಗಳು ಇಷ್ಟು ಸಂಖ್ಯೆಯಲ್ಲಿ ಆಗಲೇಬೇಕೆಂದು ಅಂತಹ ವೈದ್ಯರು ತಹತಹಿಸುತ್ತಿರುತ್ತಾರೆ. ಅಂತಹ ಆಸ್ಪತ್ರೆಗಳು, ವೈದ್ಯರುಗಳು, ಅವರಿಗೆ ನಿಗದಿಯಾಗಿದ್ದ ಟಾರ್ಗೆಟ್ ಮತ್ತು ಯಶಸ್ವೀ ವೈದ್ಯರುಗಳ ಪಟ್ಟಿಯನ್ನೇ ಕೊಡಬಹುಧು. ಏಕೆಂದರೆ ಅವೆಲ್ಲವೂ ಓಪನ್ ಸೀಕ್ರೆಟ್ ಆಗಿರುವಷ್ಟು ಲಜ್ಜೆಗೆಟ್ಟು ಹೋಗಿದೆ ಕಾರ್ಪೊರೇಟ್ ವೈದ್ಯ ಸಮುದಾಯ.

ಹಾಗಾದರೆ ಎಂ.ಬಿ.ಬಿ.ಎಸ್ ಮಾಡಿದವರೇನು ಮಾಡುತ್ತಿದ್ದಾರೆ? ಎಂ.ಬಿ.ಬಿ.ಎಸ್ ಎನ್ನುವುದು ಪಿಯುಸಿ ರೀತಿಯಲ್ಲಿ ಆಗಿದೆ. ಅಂದರೆ ಎಂ.ಡಿ., ಎಂ.ಎಸ್ ಇತ್ಯಾದಿ ಸ್ಪೆಷಲಿಸ್ಟ್ ಕೋರ್ಸ್‌ಗಳನ್ನು ಓದಲು ಪೂರ್ವ ವಿದ್ಯಾರ್ಹತೆಯಾಗಿ ಎಂ.ಬಿ.ಬಿ.ಎಸ್ ಪದವಿ ಆಗಿಬಿಟ್ಟಿದೆ. ಎಲ್ಲರೂ ಸ್ಪೆಷಲಿಸ್ಟ್‌ಗಳಾಗಬೇಕು; ಏಕೆಂದರೆ ಎಲ್ಲರೂ ದುಡ್ಡು ದುಡಿಯಬೇಕು. ಜನರು ಆ ರೀತಿ ಸ್ಪೆಷಲಿಸ್ಟ್‌ಗಳನ್ನೇ ಹುಡುಕಿ ಹೋಗುವುದರಿಂದ ತಾವು ಈ ರೀತಿ ಮಾಡಬೇಕಿದೆ ಎಂಬ ಸಮಜಾಯಿಷಿಯೂ ಅವರಲ್ಲಿದೆ. ಈ ರೀತಿ ಸ್ಪೆಷಲಿಸ್ಟ್‌ಗಳ ಹತ್ತಿರವೇ ಹೋಗುವ ಹಾಗೆ ಇದೇ ವೈದ್ಯಕೀಯ ವ್ಯವಸ್ಥೆಯೇ ಬದಲಾಗಿದೆ ಎಂಬುದನ್ನು ಮರೆಮಾಚಿ, ಜನರನ್ನು ದೂರುವುದರಲ್ಲಿ ಅರ್ಥವಿಲ್ಲ; ಮತ್ತು ಇಂತಹ ಸಮಜಾಯಿಷಿಯಲ್ಲಿ ಕಾಣುವ 'ಜನ'ರೆಂದರೆ ಅವರು ಸಾವಿರಗಟ್ಟಲೆ ಹಣ ತೆರುವ ಸಾಮರ್ಥ್ಯವುಳ್ಳ ಮೇಲ್ಮಧ್ಯಮ ವರ್ಗವೇ ಹೊರತು ಬಹುಸಂಖ್ಯಾತ ಕೆಳ ಹಾಗೂ ಕೆಳ ಮಧ್ಯಮ ವರ್ಗದವರಲ್ಲ. ಅವರಿನ್ನೂ ಸರ್ಕಾರೀ ಆಸ್ಪತ್ರೆ ಅಥವಾ ಪದವಿರಹಿತ ಡಾಕ್ಟರ್‌ಗಳ ಬಳಿಯೇ ಹೋಗುತ್ತಿದ್ದಾರೆ.

ಇನ್ನು ಒಂದು ಗಣನೀಯ ಪ್ರಮಾಣದ ವೈದ್ಯ ಪದವೀಧರರು ಅಮೆರಿಕ, ಇಂಗ್ಲೆಂಡ್, ಅರಬ್ ದೇಶಗಳು ಮತ್ತಿತರ ದೇಶಗಳಿಗೆ ಹಾರುತ್ತಾರೆ. ಎಷ್ಟು ಗಣನೀಯ ಎಂಬುದನ್ನು ಆಯಾ ದೇಶಗಳ ಮಾರುಕಟ್ಟೆ ನಿರ್ಧರಿಸುತ್ತದೆ. ಈ ಅಂಕಣಕಾರನ 194 ಸಹಪಾಠಿಗಳಲ್ಲಿ 50 ಜನ ಈ ರೀತಿ ವಿದೇಶಗಳಲ್ಲಿದ್ದಾರೆ ಎಂಬುದು ಈ ವಿದ್ಯಮಾನದ ಪ್ರಮಾಣವನ್ನು ಸೂಚಿಸುತ್ತದೆ. ಇವೆಲ್ಲವೂ ಯಾತಕ್ಕಾಗಿ? ಹಣ ಸಂಪಾದಿಸುವುದಕ್ಕಾಗಿ. ಮನುಷ್ಯರ ನೋವಿನಲ್ಲಿ ಹೆಚ್ಚೆಚ್ಚು ಹಣ ದುಡಿಯುವುದಕ್ಕಾಗಿ. ಅದಕ್ಕೆ ಸ್ಪೆಷಾಲಿಟಿ, ಸೂಪರ್ ಸ್ಪೆಷಾಲಿಟಿ, ವರ್ಲ್ಡ್‌ಕ್ಲಾಸ್, ಕಾರ್ಪೊರೇಟ್ ಇತ್ಯಾದಿ ನೂರೆಂಟು ಹೆಸರುಗಳು ಅಷ್ಟೇ.

ನೇರವಾಗಿ ರೋಗಿಗಳನ್ನು ಸುಲಿಯುವುದಲ್ಲದೇ, ವಿಮಾ ಕಂಪೆನಿಗಳಿಂದ ಕಿತ್ತುಕೊಳ್ಳುವುದಕ್ಕೆ ವೈದ್ಯ ಸಮುದಾಯ ಸೀಮಿತವಾಗಿಲ್ಲ, ಔಷಧ ಕಂಪೆನಿಗಳು, ಲ್ಯಾಬೋರೇಟರಿಗಳಿಂದ ಪಡೆಯುವ ಕಮೀಷನ್ ಹಾಗೂ ಇನ್ನಿತರ

ಇವು ಖಾಸಗಿ ಮತ್ತು ಸರ್ಕಾರೀ ಎರಡೂ... ಇರುವ ಸ್ಥಿತಿಯಾಗಿದೆ. ಹಣ ಪಡೆದಾಕ್ಷಣ ನಿ... ಪ್ರಕರಣಗಳು ಕಡಿಮೆ ಎಂದೇನೂ ಅಲ್ಲ, ... ಕ್ಷೇತ್ರಗಳಿಗಿಂತ ಇಲ್ಲಿ ತುಸು ಹೆಚ್ಚೇ ನಿರ್ಲಕ್ಷ್ಯ ನಡೆ... ಸಾಮಾನ್ಯ ಜನರಿಗೆ ವೈದ್ಯಕೀಯ ಕ್ಷೇತ್ರದ ಕುರಿತು ... ಅಜ್ಞಾನದ ಕಾರಣದಿಂದ ಅವು ಬೆಳಕಿಗೆ ಬರು... ಬೆಳಕಿಗೆ ಬಂದರೂ, ನ್ಯಾಯಾಲಯಗಳಲ್ಲಿ ವೈದ್ಯರ... ವೃತ್ತಿ ಬಾಂಧವರ ವಿರುದ್ಧ ಸಾಕ್ಷಿ ನುಡಿಯುವುದಿಲ್ಲವಾ... ಶಿಕ್ಷೆಯಾಗುವ ಸಾಧ್ಯತೆಗಳು ಕಡಿಮೆ.


ಬೆಂಗಳೂರಿನಂತಹ ಊರುಗಳಲ್ಲಿ ಆಗು... ಕಾರ್ಪೊರೇಟೀಕರಣವು ವೈದ್ಯಕೀಯ ಕ್ಷೇತ್ರವನ್ನು ... ಹಾಳುಮಾಡುತ್ತಿದೆ. ಆದರೆ ಮಿಕ್ಕೆಲ್ಲಾ ಕ್ಷೇತ್ರಗಳೂ ... ಆಗಿರುವಾಗ, ಇದೊಂದು ಪ್ರತ್ಯೇಕ ಉಳಿಯಲು ... ಎಂಬ ಪ್ರಶ್ನೆ ಏಳುತ್ತದೆ. ಹೌದು, ಇದೊಂದು ಪ್ರತ್ಯೇ... ಉಳಿಯುವುದು ಸಾಧ್ಯವಿಲ್ಲ, ಸಾಧ್ಯವಿಲ್ಲ ಎನ್ನುವುದ... ಇವರನ್ನೂ ವ್ಯಾಪಾರಿಗಳು ಎಂದಷ್ಟೇ ನೋಡಬೇಕೇ ಹೊ... ಬೇರೇನಲ್ಲ, ಆದರೂ ದೇವಲೋಕದಿಂದ ಇಳಿದುಬ... ರೀತಿ ಯಾಕೆ ನೋಡಲಾಗುತ್ತಿದೆ? ಆ ರೀತಿ ... ನೋಡಬೇಕೆಂದು ವೈದ್ಯ ಸಮುದಾಯ ಯಾಕೆ ಅಪೇಕ್ಷೆ ಪ...

ಪ್ರತೀ ವ್ಯಕ್ತಿಗೆ ತನ್ನ ದೇಹದ ಬಗ್ಗೆ ತನಗಿಂತ ... ವ್ಯಕ್ತಿಗೆ ಹೆಚ್ಚು ಗೊತ್ತಿದೆ ಮತ್ತು ಅದಕ್ಕೆ ಪರಿಹಾ... ಸೂಚಿಸಬಲ್ಲ ವ್ಯಕ್ತಿಯ ಬಗ್ಗೆ ವಿಶೇಷವಾದ ... ಗೌರವ ಮತ್ತು ಭಯ ಇರುತ್ತದೆ. ದೇಶವನ್ನೇ ... ದೊರೆಯೂ, ಕಾರ್ಪೊರೇಟ್ ಆಸ್ಪತ್ರೆಗಳ ಸಮು... ಒಡೆಯ ಉದ್ದಿಮೆದಾರನೂ ತನ್ನ ದೈಹಿಕ ... ವೈದ್ಯನಲ್ಲಿಗೇ ಹೋಗಬೇಕಾಗುತ್ತದೆ. ಇದು ವೈ... ವಿಶಿಷ್ಟ ಸ್ಥಾನದಲ್ಲಿ ನಿಲ್ಲಿಸಿದೆ. ಅದನ್ನು ಅರಿತು ... ಹೆಚ್ಚಿನ ಜವಾಬ್ದಾರಿ, ಮಾನವೀಯತೆ, ನಿಸ್ವಾರ್ಥತೆ... ಕೆಲಸ ಮಾಡಬೇಕಾಗಿತ್ತು, ಅದರ ಬದಲಿಗೆ ... ದುರುಪಯೋಗ ಮಾಡಿಕೊಳ್ಳಲಾಗುತ್ತಿದೆ.

ಇದರರ್ಥ ಇಡೀ ವೈದ್ಯಕೀಯ ವ್ಯವಸ್ಥೆಯೇ ... ಎಂದೇನೂ ಅಲ್ಲ, ಮಾನವೀಯತೆ ಹೊಂದಿರುವ ಅ... ವೈದ್ಯರುಗಳು, ನಿಜವಾದ ಅರ್ಥದಲ್ಲಿ ಸೇವೆ ಸಲ್ಲಿ... ವವರು ಇದ್ದಾರೆ. ಹಿಂದೊಮ್ಮೆ ಇದೇ ಅಂಕಣದಲ್ಲಿ ... ಒಂದೇ ಅವಧಿಯಲ್ಲಿ ತೀರಿಕೊಂಡಿದ್ದ ಇಬ್ಬರು ವೈದ್ಯ... ಡಾ.ಸಿ.ಬಂದೀಗೌಡ ಮತ್ತು ಡಾ.ವೆಂಕ... ಅಂಥವರಾಗಿದ್ದರು. ಅಂಥವರ ಸಂಖ್ಯೆ ಕಡಿಮೆಯಾ... ವೈದ್ಯಕೀಯ ಶಿಕ್ಷಣ ಮತ್ತು ಮಾಧ್ಯಮ ಕ್ಷೇತ್ರದ ... ಮಿಕ್ಕವರಿಗಿಲ್ಲದ ಸಾಮಾಜಿಕ ಜವಾಬ್ದಾರಿಯ ... ಇರುತ್ತದೆ. ಅದನ್ನು ಸದರಿ ಕ್ಷೇತ್ರಗಳು ನಿಭಾಯಿ... ಹೋಗಿರುವುದರಿಂದ ಸಮಾಜವು ಸೂಕ್ತ ರೀತಿಯಲ್ಲಿ ... ತಹಬಂದಿಗೆ ತರುವ ಜವಾಬ್ದಾರಿ ತೆಗೆದುಕೊಳ್ಳಬೇಕಾ...

ಭಾರತದ ಗ್ರಾಮೀಣ ಭಾಗದ ವೈದ್ಯಕೀಯ ವ್ಯವಸ್ಥೆಯ ಸ್ಥಿತಿ

- ರೋಗಿಗಳಿಗೂ ವೈದ್ಯರಿಗೂ ಇರುವ ಅನುಪಾತವು ಗ್ರಾಮೀಣ ಭಾಗದಲ್ಲಿ ನಗರಗಳಿಗಿಂತ ಆರು ಪಟ್ಟು ಕಡಿಮೆಯಿದೆ.
- ಗ್ರಾಮೀಣ ಜನಸಂಖ್ಯೆಯ 66% ಜನರಿಗೆ ಅಗತ್ಯ ಔಷಧಗಳು ಸಿಗುತ್ತಿಲ್ಲ.
- ವೈದ್ಯಕೀಯ ಚಿಕಿತ್ಸೆಯನ್ನು ಪಡೆಯಲು ಭಾರತದ ಗ್ರಾಮೀಣ ಜನಸಂಖ್ಯೆಯಲ್ಲಿ 31% ಜನರು ಕನಿಷ್ಠ 30 ಕಿ.ಮೀ ದೂರ ಪ್ರಯಾಣ ಮಾಡಬೇಕು.
- ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರಗಳಲ್ಲಿನ ಸ್ತ್ರೀರೋಗ ತಜ್ಞರು ಮತ್ತು ಮಕ್ಕಳ ತಜ್ಞರ ಹುದ್ದೆಗಳಲ್ಲಿ ಶೇ.50ರಷ್ಟು ಖಾಲಿ ಇವೆ. (ಒಂದು ವೇಳೆ ಅವು ಭರ್ತಿಯಾಗಿದ್ದರೂ, ಅವರು ಪೂರ್ಣ ಪ್ರಮಾಣದಲ್ಲಿ ಕೆಲಸ ನಿರ್ವಹಿಸುವ ಸಾಧ್ಯತೆ ಕಡಿಮೆ).
- ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಪರಿಣಿತ ವೈದ್ಯರುಗಳ ಹುದ್ದೆಗಳಲ್ಲಿ ಶೇ.70.2 ಖಾಲಿ ಇವೆ.



ಮುಂದಿನ ದಿನಗಳಲ್ಲಿ ಡಿ.ಕೆ. ಶಿವಕುಮಾರ್‌ಗೆ ಆಂಧ್ರದ ಜಗಮೋಹನ್ ರೆಡ್ಡಿ ಸ್ಥಿತಿ ಬರಬಹುದೇ?

- ಪಿ. ಅಣ್ಣಪ್ಪಪ್ರಭು, ಬೆಂಗಳೂರು

ರೆಡ್ಡಿ ತಪ್ಪೇ ಮಾಡಿರಬಹುದು. ಆದರೆ ಡಿಕೆ ತರ ಪೇಪರ್ ಟೈಗರ್ ಆಗಿರಲಿಲ್ಲ.

ದೇಶಿ ಚಿಂತನೆ-ಆಧುನಿಕ ಉಡುಪು, ಜನಪರ ಕಾಳಜಿ-ಜಾತ್ಯತೀತ ನಿಲುವುಗಳ ಗೌರಿ ಲಂಕೇಶರು ಇಂದಿನ ಹುಡುಗಿಯರಿಗೆ ಮಾದರಿ ಆಗುತ್ತಾರೆಯೇ?

- ಶ್ರೀಧರ್ ಡಿ ರಾಮಚಂದ್ರಪ್ಪ ತುರುವನೂರು

ಸೋದರಿಯಾಗಂತೂ ಇರುತ್ತೇನೆ ಅನ್ನುತ್ತಿದ್ದಾರೆ.

ತಮ್ಮ ಚಡ್ಡಿಯನ್ನು ಬಿಸಾಡಿ ಹೋದ ಯಡಿಯೂರಪ್ಪ ಮತ್ತೆ ಚಡ್ಡಿಯನ್ನು ಹಾಕಿಕೊಳ್ಳಬಹುದೇ?

- ಎನ್.ಜಿ.ವಸುಂಧರ, ಕೋಲಾರ



ಅಲ್ಲಿದ್ದದ್ದು ಒಂದೇ ಚಡ್ಡಿ ಒಬ್ಬ ಬಿಚ್ಚಿಕೊಟ್ಟರೆ ಇನ್ನೊಬ್ಬ ಬೆತ್ತಲೆ...!

ನಾನು ಪತ್ರಕರ್ತ ಆಗಬೇಕೆಂದುಕೊಂಡಿದ್ದೇನೆ. ಅದಕ್ಕೆಂದು ಗಡ್ಡ ಬಿಟ್ಟಿದ್ದೀನಿ. ಜೊತೆಗೆ ಪೆನ್ನು, ಜುಬ್ಬ ಜೋಳಿಗೆ ಚೀಲವನ್ನೂ ಖರೀದಿಸಿದ್ದೀನಿ. ಇನ್ನು ಏನು ಬೇಕು?

- ಕೀಟಲೆ

ಏನೂ ಬೇಡ, ಅನ್‌ಫಿಟ್ ಸರ್ಟಿಫಿಕೇಟ್ ಪಡೆಯಲು ಇಷ್ಟು ಸಾಕು.

ಬಿಗ್ ಬಾಸ್ ಅಂತಾರಲ್ಲ, ಏನದು ಬಾಸು?

- ವಾಸು, ಕೋಲಾರ

ಕಾಸು ಅಷ್ಟೇ ಮಿಸ್ಟರ್ ವಾಸು.

ಗಂಡು-ಹೆಣ್ಣು ಇಬ್ಬರೂ ಹೆರುವಂತಿದಿದ್ದರೆ

- ರಮೇಶ್ ಹೂಗಾರ, ಬಾಗಲಕೋಟೆ



ಮೆಟರ್ನಿಟಿ ಬದಲು ಎಟರ್ನಿಟಿ ಆಸ್ಪತ್ರೆಗಳಿರುತ್ತಿದ್ದವು.

ಹೆಣ್ಣಿಗಿರುವಷ್ಟು ಸೌಂದರ್ಯ ಪ್ರದರ್ಶಿಸುವ ಅವಕಾಶ ಗಂಡಿಗಿಲ್ಲವಲ್ಲ,

- ಸುಮಿತ್ರಾ ದೊಡ್ಡಮನಿ, ಬಾದಾಮಿ

ನನಗೊಂದು ಛಾನ್ಸ್ ಕೊಟ್ಟು ನೋಡಿ ಅನ್ನುತ್ತಿದ್ದಾನೆ ಬಿಗ್ ಬಾಸ್ ವಿಜೇತ ವಿಜಯ ರಾಘವೇಂದ್ರ.

ಪ್ರೀತಿ ಮಾಡೋಣ ಅಂತಾ ಹೋದ್ರೆ, ಮದುವೆ ಆಗ್ತೀಯಾ ಅಂತಾಳಲ್ಲ,

- ಡೌಟ್ ರವಿ, ಮಂಡ್ಯ

ಎಲ್ಲಾ ರಂಜನೆಗೂ ಟ್ಯಾಕ್ಸ್ ಇದ್ದೇ ಇರುತ್ತೆ.

ಕರ್ನಾಟಕ ಕ್ಯಾಬರೆ ಅಕಾಡೆಮಿ ಅಂತಾನು ರಚನೆಯಾಗುತ್ತಂತೆ?

- ಸಂದೇಶ್, ಹಾಸನ

ನಟಿ ರಮ್ಯಾ, ರಾಗಿಣಿ, ಹರ್ಷಿಕಾ ಅದರ ... ಯಾಗಲು ಹೊಸ ಕಾಸ್ಟ್ಯೂಂ ಹೊಲಿಸುತ್ತಿದ್ದಾರೆ ... ಸುದ್ದಿ ಇದೆ.

ಮಣ್ಣಿನ ಮಗನ ವಿರುದ್ಧ ಪದ ಏನು?

- ಚಂದ್ರಕಲಾ, ಚಿತ್ರ...

ಯಡ್ಡೀನ ನೋಡಿದರೆ ಅದು 'ಹುಣ್ಣಿನ ... ಇರಬಹುದು ಅನಿಸುತ್ತೆ.



ಇನ್ನೇನು ಸ್ವಾತಂತ್ರ್ಯ ದಿನಾಚರಣೆ ... ಬರ್ತಾ ಇದೆ...!

- ಚೇತನ್, ತುರು...

ಸಮಸ್ತರಿಗೂ ಕೊಲೆ, ಅತ್ಯಾಚಾರಕ್ಕೆ ಮುಕ್ತ ಅವಕಾಶ ನೀಡ... ಇನ್ನು ನಿಂದೇನು ಹೊಸ ಬೇಡಿಕೆ?

ಬಿಜೆಪಿ-ಕೆಜೆಪಿ ಮಿಲನ ಅ...

- ಚಂದ್ರು, ವ...

ಆಗುವುದಾದರೆ ಆ ಮಿಲಾಕತ್‌ಗೆ ಮುನ್ನವೇ ಅನಾಥಶಿಶುಗಳು ಹುಟ್ಟಿರುತ್ತವೆ.

'ಚಳವಳಿಗಳಿಂದ ವಿಮುಖನಾಗಿ ಬರೆಯುವ ಲೇಖಕ ಪಲಾಯನವಾದಿ'

ಡಾ. ಶ್ರೀಕಂಠ ಕೂಡಿಗೆ

ನುಡಿಗನ್ನಡಿ

ಸಾಹಿತಿ-ಕಲಾವಿದ-ಚಿಂತಕರ ಸಂದರ್ಶನ

● ಸಂದರ್ಶಕ: ಸರ್ಜಾಶಂಕರ ಹರಳಿಮಠ



ವಿಶಿಷ್ಟ ಕತೆಗಳನ್ನು ಬರೆದಿರುವ ತೀರ್ಥಹಳ್ಳಿ ತಾಲ್ಲೂಕು ಕೂಡಿಗೆ ಗ್ರಾಮದ ಡಾ.ಶ್ರೀಕಂಠ ಕೂಡಿಗೆ ಆಗಾಗ ಜನಪರ ವಿಚಾರಗಳ ಕುರಿತು ಧ್ವನಿ ಎತ್ತುತ್ತ ಚಳವಳಿಗಳಲ್ಲೂ ಗುರುತಿಸಿಕೊಂಡವರು. ಕುವೆಂಪು ವಿಶ್ವವಿದ್ಯಾನಿಲಯದಲ್ಲಿ ಪಾಠ ಮಾಡುತ್ತ ಸಾವಿರಾರು ವಿದ್ಯಾರ್ಥಿಗಳನ್ನು ವೈಚಾರಿಕವಾಗಿ ರೂಪಿಸಿದವರು. ತಮ್ಮ ಜಾತ್ಯತೀತ ಮತ್ತು ಭ್ರಷ್ಟಾಚಾರಿ ವಿರೋಧಿ ನಿಲುವಿನಿಂದ ಭಿನ್ನವಾಗಿ ನಿಂತವರು.

ಸರ್ಜಾಶಂಕರ ಹರಳಿಮಠ: ಸರ್, ನೀವು ವಿಶ್ವವಿದ್ಯಾನಿಲಯದಲ್ಲಿ ಸಾವಿರಾರು ವಿದ್ಯಾರ್ಥಿಗಳನ್ನು ವೈಚಾರಿಕವಾಗಿ ರೂಪಿಸಿದವರು. ಇಡೀ ರಾಜ್ಯದಲ್ಲಿ ನೀವೊಬ್ಬ ಉತ್ತಮ ಭಾಷಣಕಾರ ಎಂದು ಹೆಸರಾಗಿದ್ದೀರಿ. ಆದರೆ ಈ ತಲೆಮಾರಿಗೆ ಗೊತ್ತಿಲ್ಲದ ಒಂದು ಸಂಗತಿ ಎಂದರೆ ನೀವೊಬ್ಬ ಒಳ್ಳೆ ಕತೆಗಾರ ಕೂಡ ಎಂಬುದು. ಈ ಕತೆಗಳು ಬದುಕಿನ ಗಾಢ ಅನುಭವಗಳಿಂದ ಮೈದಳೆದಂತಹವು. ಈ ಕತೆಗಳಿಗೆ ಪ್ರೇರಕವಾದ ನಿಮ್ಮ ಬಾಲ್ಯ ಮತ್ತು ಪ್ರೇರಕವಾದ ಸಂಗತಿಗಳ ಬಗ್ಗೆ ಕುತೂಹಲವಿದೆ.


ಉತ್ತರ: ನಿಮಗೆಲ್ಲ ಗೊತ್ತಿರುವ ಹಾಗೆ ನಾವೆಲ್ಲ ಮಲೆನಾಡಿನ ಅನುಭವ ಲೋಕದಲ್ಲಿ ಬೆಳೆದು ಬಂದವರು. ಹಾಗಾಗಿ ಮಲೆನಾಡಿನ ಕತೆಗಾರರಿಗೆ ಸೃಜನಶೀಲ ಬರಹಗಾರರಿಗೆ ಆದ ಅನುಭವಗಳು ನನಗೂ ಆಗಿವೆ. ಬಾಲ್ಯದಿಂದಲೂ ನನಗೆ ಕಲ್ಪನೆಯ ಬಗ್ಗೆ ಒಂದು ಕುತೂಹಲ ಇತ್ತು. ವಿದ್ಯಾರ್ಥಿಯಾಗಿದ್ದಾಗ ನನ್ನದೇ ಆದ ರೀತಿಯಲ್ಲಿ ಕತೆಗಳನ್ನು ಕಟ್ಟಿಕೊಳ್ಳುತ್ತಿದ್ದೆ. ಅದು ಪ್ರೇಮಕ್ಕೆ ಸಂಬಂಧಿಸಿರಬಹುದು. ಸಾಹಸಕ್ಕೆ ಸಂಬಂಧಿಸಿರಬಹುದು. ಹೀಗೆ ನನ್ನದೇ ಆದ ಕಥಾಲೋಕ ನನ್ನ ಮನಸ್ಸಿನೊಳಗೆ ಬೆಳೀತಾ ಇತ್ತು.

ಬಹುಶಃ ನಾನು ಬಾಲ್ಯದಲ್ಲಿ ಕಂಡ ಅನೇಕ ವ್ಯಕ್ತಿಗಳು ಮತ್ತು ಬದುಕಿನ ವಿವರಗಳು ನನ್ನ ಬರವಣಿಗೆಯನ್ನು ಪ್ರಭಾವಿಸಿವೆ. ಆರಂಭದ ದಿನಗಳಲ್ಲಿ ಅನೇಕ ಪದ್ಯಗಳನ್ನು ಬರೆದೆ. ಅಲ್ಲಿ ಶೋಷಣೆಯ ರೂಪಗಳು ಅಂದರೆ ಜಮಾಮಾಲೀಕರ ಮೂಲಕ ಗೇಣಿದಾರರು ಮತ್ತು ಕೂಲಿದಾಳುಗಳ ಮೇಲೆ ಆಗುವ ಕ್ರೌರ್ಯಗಳಿಗೆ ಸಂಬಂಧಪಟ್ಟ ಅನೇಕ ವಿವರಗಳನ್ನು ನನ್ನ ಪದ್ಯಗಳಲ್ಲಿ ಮತ್ತು ಸಣ್ಣ ಕತೆಗಳಲ್ಲಿ ದಾಖಲು ಮಾಡಿದ್ದೇನೆ. ಇವುಗಳಲ್ಲಿ 'ಬಂಧನ' ಎನ್ನುವ ಕತೆಯಂತೂ ನಾನು ತುಂಬಾ ಎಚ್ಚರದಿಂದ ನೋಡುತ್ತ ಅನುಭವಿಸಿ ಬರೆದ ವಾಸ್ತವವಾದಿ ಕತೆ. ಈ ಕತೆಯಲ್ಲಿ ಕಾಲ್ಪನಿಕತೆಯನ್ನು ಸೇರಿಸಿಲ್ಲ. ತಮಾಷೆ ಸಂಗತಿಯೆಂದರೆ ತನ್ನ ಹಿಂಬಾಲಕರ ಕಾಡುತ್ತಿದ್ದ ದುಷ್ಟನೊಬ್ಬನನ್ನು ಆ ಕತೆಯಲ್ಲಿ ಆತನ ನಿಜದ ಹೆಸರನ್ನು ಆತನ ಇನಿಷಿಯಲ್ ಸಮೇತ ಬರೆದಿದ್ದೆ! ಆಗಿನ ನನ್ನ ಮುಗ್ಧತೆಯಲ್ಲಿ ಹುಟ್ಟಿಕೊಂಡ ಈ ಕತೆ ನನಗೆ ಗೊತ್ತಿಲ್ಲದಂತೆ ಒಂದು ಒಳ್ಳೆಯ ಕತೆಯಾಗಿ ರೂಪು ತಳೆಯಿತು ಎಂದೆನಿಸುತ್ತದೆ.

ಪ್ರಶ್ನೆ: ನಿಮ್ಮ ಬಾಲ್ಯದ ಕಾಲವೆಂದರೆ ಕುವೆಂಪು ತಮ್ಮ ಸಾಹಿತ್ಯ ರಚನೆಯ ಉತ್ತುಂಗದಲ್ಲಿದ್ದ ಮತ್ತು ಮಲೆನಾಡಿನಲ್ಲಿ ಶಾಂತವೇರಿ ಗೋಪಾಲಗೌಡರ ಸಮಾಜವಾದಿ ಚಳವಳಿಯು ಬೆಳೆಯುತ್ತಿದ್ದ ಕಾಲ. ಕುವೆಂಪು ಸಾಹಿತ್ಯ ಮತ್ತು ಗೋಪಾಲಗೌಡರ ಚಳವಳಿ ನಿಮ್ಮ ಸಾಹಿತ್ಯಕ್ಕೆ ಪ್ರೇರಣೆ ಒದಗಿಸಿದೆಯ?

ಉತ್ತರ: ನನಗೆ ಮೊದಲಿನಿಂದಲೂ ಓದುವ ಅಭ್ಯಾಸ ಇತ್ತು. ಹೈಸ್ಕೂಲಿನಲ್ಲಿರುವಾಗಲೇ ಕುವೆಂಪುರವರ ಕೃತಿಗಳನ್ನು ಓದುತ್ತಿದ್ದೆ. ನಮ್ಮ ತಂದೆಗೂ ಓದುವ ಅಭ್ಯಾಸ ಇತ್ತು. ಅವರು ಎಷ್ಟೋ ಸಲ ನನ್ನನ್ನು ಕರೆಸಿಕೊಂಡು 'ನೋಡು ಕುವೆಂಪು ಹೀಗೆ ಹೇಳ್ತಾರೆ' ಎಂದು ಓದಿ ಹೇಳುತ್ತಿದ್ದರು. ಬಹುಶಃ ಇದು ನನಗೆ ವೈಚಾರಿಕವಾಗಿ ಆಲೋಚನೆ ಮಾಡಲಿಕ್ಕೆ ಪ್ರೇರಣೆ ಒದಗಿಸಿರಬಹುದು. ಎರಡನೆಯದು ನಮ್ಮ ಚಿಕಪ್ಪ, ಅವರು ಕ್ರಾಂತಿಕಾರಿಯಾಗಿದ್ರು. ಊರಿನಲ್ಲಿ ದೇವರ ಹರಕೆ ಕೊಡುವಾಗ ವಂತಿಗೆ ಕೊಡಬೇಕು ಅಂದ್ರೆ ಅವರು 'ನಂಗೆ ದೇವರಲ್ಲಿ ನಂಬಿಕೆ ಇಲ್ಲ, ಕುರಿ ಕೋಳಿ ಬಲಿ ಕೊಡೋದರಲ್ಲಿ ನನಗೆ ನಂಬಿಕೆಯಿಲ್ಲ, ನಾನು ವಂತಿಗೆ ಕೊಡಲ್ಲ' ಅಂತ ಊರಿನವರ ನಿಷ್ಠೂರ ಕಟ್ಟಿಕೊಂಡಿದ್ದರು. ಹಾಗೆಯೇ ನಡೆದು ಬಂದ, ಬಹುಶಃ ಹೀಗೆ ದೇವರು ಎನ್ನುವ ಪ್ರತಿಮೆಯನ್ನು ಒಡೆಯಲಿಕ್ಕೆ ನಾನು ಭಾಗ್ಯಶಾಲಿಯಾದ್ದಕ್ಕೆ, ನನ್ನ ಚಿಕಪ್ಪನ ಪ್ರೇರಣೆ ಇರಬಹುದು ಅಂತ ಭಾವಿಸ್ತೇನೆ...

ಈ ನಡುವೆ ಕುವೆಂಪುರವರ ಸಾಹಿತ್ಯ ಮತ್ತು ಶಾಂತವೇರಿ ಗೋಪಾಲಗೌಡರ ಸಮಾಜವಾದಿ ಚಳವಳಿ ಒಬ್ಬರಿಂದ ಒಬ್ಬರಿಗೆ ಕಥಾಕಥಿತವಾಗಿ ಕೇಳಿಸ್ತಾಯಿತ್ತು. ಗೋಪಾಲಗೌಡರ ಬಗ್ಗೆ, ಅವರ ದೈಹಿಕ ರೂಪದ ಕುರಿತು ಹರಡಿರುತ್ತಿದ್ದ ದಂತಕಥೆಗಳು ನೂರಾರು. ಉದಾಹರಣೆಗೆ ಅವರ ಕೈಗಳು ಮೊಳಕಾಲುದ್ದದವರೆಗೆ ಇವೆ, ಹೀಗಾಗಿ ಅವರಿಗೆ ರಾಜಕಳೆ ಇದೆ ಎನ್ನುವಂತ ಚಿತ್ರಗಳು. ಇವೆಲ್ಲ ಬಹಳ ಖಚಿತವಾಗಿ ಪ್ರಭಾವ ಬೀರಿದವು ಎನ್ನುವುದಕ್ಕಿಂತ ಸೂಕ್ಷ್ಮ ನೆಲೆಯಲ್ಲಿ ಸಮಾಜವಾದಿ ಆಲೋಚನೆಯನ್ನು ಬಾಲ್ಯದಿಂದಲೇ ನನ್ನ ಮನಸ್ಸು ರೂಪಿಸಿಕೊಂಡಿತು ಅಂತ ಹೇಳಬಹುದು. ಹಾಗಾಗಿ ನಾನು ಹೈಸ್ಕೂಲಿಗೆ ಬರುವಷ್ಟರಲ್ಲಿ ಸಾಮಾನ್ಯವಾಗಿ ಮನುಷ್ಯ ನಂಬಲೇಬೇಕಿದ್ದ ದೇವರು ಎಂಬ ಪರಿಕಲ್ಪನೆಯನ್ನು ಮತ್ತು ನಂಬಿಕೆಗಳನ್ನು ಆಗಲೇ ಕೈಬಿಟ್ಟಿದ್ದೆ. ನನಗೀಗಲೂ ನೆನಪಿದೆ. ಮಲೆನಾಡಿನಲ್ಲಿ ಹಿರಿಯಡ್ಕ ಪೆರ್ಡೂರು ಇಂತಹ ಸ್ಥಳಗಳ ದೇವರುಗಳಿಗೆ ಯುಗಾದಿಯ ಸಂದರ್ಭದಲ್ಲಿ ಕಾಣಿಕೆ ಕಟ್ಟುವ ಪದ್ಧತಿಯಿದೆ. ಎಷ್ಟೋ ಸಂದರ್ಭಗಳಲ್ಲಿ ನಾನು ಇಂತಹ ಕಾಣಿಕೆ ಡಬ್ಬಗಳಿಂದ ದುಡ್ಡನ್ನು ಕದ್ದು ತಿಂಡಿ ತಿನ್ನುವುದೊ ಮತ್ತೊಂದೇನೋ ಮಾಡಿದ್ದೇನೆ. ಹೀಗಾಗಿ ನನಗೆ ಬುದ್ಧಿ ಬರುವ ಕಾಲದಲ್ಲೇ ದೇವರು ಎನ್ನುವ ಪ್ರತಿಮೆಯನ್ನೇ ನಾನು ವಿಗ್ರಹಭಂಜನ ಮಾಡಿದ್ದೇನೆ. ಇದು ನನಗೆ ಸಂತೋಷವನ್ನೂ ಕೊಟ್ಟಿದೆ. ಈ ಕ್ರಮ ಮುಂದೆ ಬೆಳೆಯುತ್ತ ದೇವರಿದ್ದಾನೋ ಇಲ್ಲವೋ ಎನ್ನುವ ಪ್ರಶ್ನೆಗೆ ಬಂದು, ಕೊನೆಗೆ ದೇವರು ಇರಬಹುದು, ಆದರೆ ಇವರೆಲ್ಲ ಹೇಳುವ ರೂಪದಲ್ಲಿ ಇಲ್ಲ ಎಂಬ ತೀರ್ಮಾನದಲ್ಲಿ ನಾಸ್ತಿಕನೂ ಆಗದೇ ಆಸ್ತಿಕನೂ ಆಗದೇ ಇರಬಹುದು. ಒಂದು ರೀತಿಯ ಅಜ್ಞೇಯತಾವಾದದ ಮನಸ್ಥಿತಿಯಲ್ಲಿ ಬದುಕುತ್ತಾ ಬಂದಿದ್ದೇನೆ.



ಪ್ರಶ್ನೆ: ಕಥಾ ಪ್ರಕಾರಕ್ಕೆ ಬಂದರೆ, ಈ ಕಥೆಗಳನ್ನು ಬರೆಯದೇ ಹೋದರೆ ಬಿಡುಗಡೆಯೇ ಇಲ್ಲವೆಂಬ ಉತ್ಕಟತೆಯಲ್ಲಿ ನೀವು ಕಥೆಗಳನ್ನು ಬರೆದಿರಿ. ಇದರಲ್ಲಿ 'ಬಂಧನ' ಇರಬಹುದು 'ನಮ್ಮಿಬ್ಬರ ನಡುವೆ', 'ಗೌರಿಹಬ್ಬ' ಇರಬಹುದು. ಇಷ್ಟು ಉತ್ಕಟತೆಯಲ್ಲಿ ಸಾಹಿತ್ಯ ರಚನೆ ಮಾಡುತ್ತಿದ್ದ ನೀವು ಹನ್ನೆರಡು ಹದಿಮೂರು ಕಥೆಗಳಿಗೆ ಈ ಪ್ರಕಾರದಲ್ಲಿ ಬರವಣಿಗೆ ನಿಲ್ಲಿಸಿಬಿಟ್ಟಿರಿ. ನಿಮ್ಮ ಅಧ್ಯಾಪನ ಮತ್ತು ಭಾಷಣ ನಿಮ್ಮ ಸಾಹಿತ್ಯಸೃಷ್ಟಿಗೆ ಎರವಾಯಿತೆ?

ಉತ್ತರ: ಹೌದು. ಸಂಶೋಧನೆಗೆ ತೊಡಗುವ ಮನುಷ್ಯನ ಏಕಾಗ್ರತೆಯ ಸ್ವರೂಪವೇ ಬೇರೆ, ಸೃಜನಶೀಲ ಬರಹಗಾರನ ಏಕಾಗ್ರತೆಯ ಸ್ವರೂಪವೇ ಬೇರೆ. ನಿರಂತರವಾಗಿ ಒಂದು ಪ್ರಕಾರದಲ್ಲಿ ಕೆಲಸ ಮಾಡುವವರು ಆ ಪ್ರಕಾರದಲ್ಲಿ ಗುರುತಿಸಿಕೊಳ್ಳುತ್ತಾರೆ. ಬಹುಶಃ ನನ್ನ ಸೃಜನಶೀಲ ಕಥೆಗಳ ಬಳಿಕ ಕ್ರಮಾಂತರ ಜಾನಪದದ ಸಂಗ್ರಹ ಮತ್ತು ವಿಶ್ಲೇಷಣೆಗೆ ಹೋಯಿತು, ಆನಂತರ ಸಂಶೋಧನೆಗೆ ಹೋಯಿತು. ಅದೊಂದು ಶೈಕ್ಷಣಿಕ ಅನಿವಾರ್ಯತೆಯಾಗಿತ್ತು. ಇದರ ನಡುವೆಯೂ ನಾನು ರಾಜಕೀಯವಾಗಿ ತುಂಬಾ ವಿಚಲಿತನಾದಾಗ, ಸಾಮಾಜಿಕ ವ್ಯವಸ್ಥೆಯ ಕುರಿತು ತಲ್ಲಣಗಳುಂಟಾದಾಗ, ದೇವರು ಧರ್ಮಗಳ ಜಿಜ್ಞಾಸೆಯ ಕುರಿತು ಆಗಾಗ ಹಲವು ಕಥೆಗಳನ್ನು ಬರೆದಿದ್ದೇನೆ. ಅವು ಪುಸ್ತಕವಾಗಿ ಪ್ರಕಟಗೊಂಡಿಲ್ಲ. ಆದರೆ ನನ್ನ ಸಾಮರ್ಥ್ಯಕ್ಕೆ ತಕ್ಕ ಸಂಖ್ಯೆಯಲ್ಲಿ ಕಥೆಗಳನ್ನು ಬರೆಯಲಿಕ್ಕಾಗಲಿಲ್ಲ ಎಂಬುದಕ್ಕೆ ಇತರರಿಗೆ ಎಷ್ಟು ಬೇಸರವಿದೆಯೋ ನನಗೂ ಅಷ್ಟೇ ಇದೆ. ನನ್ನ ಮುಂದಿನ ಕಾಲಾವಧಿಯಲ್ಲಿ ಈ ಅತೃಪ್ತಿಯನ್ನು ನೀಗಿಕೊಳ್ಳುವ ಪ್ರಯತ್ನ ಮಾಡುತ್ತೇನೆ.

ಪ್ರಶ್ನೆ: ನೀವು ಪ್ರಾಧ್ಯಾಪಕರಾಗಿ ಕೊಟ್ಟ ಕೊಡುಗೆ ದೊಡ್ಡದಿರುವುದರಿಂದ ಕಥೆಗಾರನಾಗಿ ಹೆಚ್ಚು ಬರೆಯಲಿಲ್ಲ ಎನ್ನುವುದು ಸಮಾಜದ ದೃಷ್ಟಿಯಿಂದ ದೊಡ್ಡ ಕೊರತೆ ಎಂದು ನಾನು ಭಾವಿಸಲಾರೆ. ಆದರೆ ನಿಮ್ಮೊಳಗಿನ ಕಥೆಗಾರನಿಗೆ ಅನ್ಯಾಯವಾಗಿದೆ ಎನ್ನಿಸುತ್ತದೆ.

ಉತ್ತರ: ನೋಡಿ ಶಂಕರ್, ಸಾಹಿತಿಗಳು ಮತ್ತು ಕಲಾವಿದರಿಗೆ ಸದ್ಯ ಮತ್ತು ಶಾಶ್ವತದ ಪ್ರಶ್ನೆ ಯಾವಾಗಲೂ ಎದುರಿಗೆ ಇರುತ್ತವೆ. ಅನೇಕರು ಸದ್ಯದ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಶಾಶ್ವತದ ಬಗ್ಗೆ ಯೋಚಿಸುತ್ತಾರೆ. ತಾನೊಂದು ಬೃಹತ್ತಾದ ಕೃತಿಯೊಂದನ್ನು ಬರೆದು ರಾಷ್ಟ್ರೀಯ ಅಥವಾ ಅಂತಾರಾಷ್ಟ್ರೀಯ ಪ್ರಶಸ್ತಿ ಪಡೆದು ಶಾಶ್ವತವಾಗಿ ನೆಲೆಗೊಳ್ಳಬೇಕು ಎಂದುಕೊಳ್ಳುತ್ತಾರೆ. ಆದರೆ ನನಗೆ ಒಬ್ಬ ಲೇಖಕನಿಗೆ ಸದ್ಯವೇ ತುಂಬಾ ಮುಖ್ಯವಾಗಬೇಕು ಅಂತ ಅನಿಸುತ್ತದೆ. ನಮ್ಮ ನಡುವಿನ ಅನೇಕ ವಿಪತ್ತುಗಳಿಗೆ ಲೇಖಕ ಉತ್ತರ ಕೊಡದೇ ಹೋದರೆ ಆತ ಪಲಾಯನವಾದಿಯಾಗುತ್ತಾನೆ. ಹೀಗಾಗಿ ನಾನು ಈ ರೀತಿಯ ಅತೃಪ್ತಿಯನ್ನು, ಚಳವಳಿಗಳನ್ನು ಬೆಂಬಲಿಸುವುದರ ಮೂಲಕ ನೀಗಿಕೊಂಡೆ. ಎರಡನೆಯದಾಗಿ ಪ್ರಾಧ್ಯಾಪಕನಾಗಿ ನಾನು ಮಹಾಕೃತಿಗಳನ್ನು ಬರೆಯಲಾಗಲಿಲ್ಲ ಎಂಬ ಬೇಸರಕ್ಕಿಂತ ಸ್ವಸ್ಥ ಸಮ ಸಮಾಜಕ್ಕಾಗಿ ಯಾವ ಮೌಲ್ಯಗಳು ಉಳಿಯಬೇಕೋ ಅದಕ್ಕಾಗಿ ಒಂದು ಪೀಳಿಗೆಯನ್ನು ತಯಾರುಮಾಡಿದ ಸಂತೋಷ ನನಗಿದೆ. ನನ್ನ ನಂತರದ ಪೀಳಿಗೆ ಇವತ್ತು ಆ ಕೆಲಸವನ್ನು ಮಾಡ್ತಾಯಿದೆ. ಆರೋಗ್ಯಕರ ಚಿಂತನೆಯನ್ನು ಶಿಕ್ಷಣದಲ್ಲಿ ಮತ್ತು ಸಾಮಾಜಿಕ ವ್ಯವಸ್ಥೆಯಲ್ಲಿ ಉಳಿಯುವಂತೆ ಮಾಡಲು ಯುವಕರ ಒಂದು ದಂಡೇ ಕಾರ್ಯನಿರ್ವಹಿಸುತ್ತಾ ಇರುವುದು ನನಗೆ ತೃಪ್ತಿ ಕೊಟ್ಟಿರುವ ಸಂಗತಿ. ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಇರಬಹುದು, ತುಂಗಾ ಮೂಲ ಉಳಿಸಿ ಹೋರಾಟ ಇರಬಹುದು, ಗಂಗಡಿಕಲ್ಲು ಹೋರಾಟ ಇರಬಹುದು, ತುಂಬಾ ಮನಸ್ಸುಗಳು ಇಲ್ಲಿ ಕೆಲಸ ಮಾಡುತ್ತಲೇ ಬಂದಿವೆ. ನಾವು ಎಲ್ಲಿ ಇದನ್ನು ಕೈಬಿಟ್ಟಿದ್ದೇವೊ ಅಲ್ಲಿಂದ ನಮ್ಮ ವಿದ್ಯಾರ್ಥಿಗಳು ಸಾರ್ಥಕವಾಗಿ ಮುಂದುವರೆಸಿಕೊಂಡು ಹೋಗುತ್ತಿದ್ದಾರೆ. ಮುಂದಿನ ಅಧ್ಯಾಪಕರು ಕೂಡ ಸಮಕಾಲೀನ ಸಾಮಾಜಿಕ ವಿಷಮತೆಗಳಿಗೆ ಪರಿಹಾರವನ್ನು, ತಮ್ಮ ಉತ್ತರಾಧಿಕಾರಿಗಳನ್ನು ತಯಾರು ಮಾಡುವುದರ ಮೂಲಕ ನಿರ್ವಹಿಸಬೇಕು. ಇಲ್ಲವಾದಲ್ಲಿ ಭ್ರಷ್ಟರು, ಜಾತಿವಾದಿಗಳು, ಕೋಮುವಾದಿಗಳು ಸೇರಿದಂತೆ ಸಮಾಜಕಂಟಕರೇ ದೊಡ್ಡದಾಗಿ ತಯಾರಾಗುತ್ತಾರೆ. ಹೀಗೆ ಸಮಾಜ ಕಂಟಕರಾಗುವುದಕ್ಕೆ ದೊಡ್ಡ ಪದವಿಗಳನ್ನು ಶಿಕ್ಷಣ ಸೃಷ್ಟಿಸುವುದಾದರೆ ಶಿಕ್ಷಣದ ಸಾರ್ಥಕತೆ ಏನು ಎಂಬ ಪ್ರಶ್ನೆ ಮೂಡುತ್ತದೆ. ಈ ಕಾರಣದಿಂದ ಶಿಕ್ಷಣದ ಮೂಲಕ ಒಂದು ಮೌಲ್ಯವಂತ ಸಮಾಜವನ್ನು ನಿರ್ಮಾಣ ಮಾಡುವುದು ಬಹುಮುಖ್ಯವಾದ ಕೆಲಸ.

ಪ್ರಶ್ನೆ: ಒಬ್ಬ ಲೇಖಕ ಸಾಮಾಜಿಕ ಚಳವಳಿಗಳಲ್ಲಿ ಭಾಗವಹಿಸುವುದು ಅಗತ್ಯ ಎನ್ನುವುದು ನಿಮ್ಮ ಮಾತುಗಳ ಅರ್ಥವೇ?

ಉತ್ತರ: ಖಂಡಿತವಾಗಿ. ಯಾಕೆಂದರೆ ಜಗತ್ತಿನ ಬಹುದೊಡ್ಡ ಲೇಖಕರೆಲ್ಲಾ ಬಹುತೇಕ ಸಮಾಜದೊಂದಿಗೆ ನೇರ ಒಡನಾಟ ಇಟ್ಟುಕೊಂಡವರೆ. ಕೆಲವರು ಸಮಾಜದೊಂದಿಗೆ ಭಿನ್ನಾಭಿಪ್ರಾಯ ಇಟ್ಟುಕೊಂಡು ಬದುಕಿದರು ಮತ್ತೆ ಕೆಲವರು ದೇಶಭ್ರಷ್ಟರಾದರು. ವ್ಯವಸ್ಥೆ ಪರವಾಗಿರುವುದು ಸುಲಭ. ಆದರೆ ವ್ಯವಸ್ಥೆ ವಿರುದ್ಧವಾಗಿ ಹೋರಾಟ ಮಾಡುವ ಲೇಖಕರೇ ಹೆಚ್ಚು ಕಾಲ ಉಳಿಯುತ್ತಾರೆ. ಈ ದೃಷ್ಟಿಯಿಂದ ಲೇಖಕ ದಂತಗೋಪುರದಲ್ಲಿ ಕುಳಿತು ಮಹಾಕಾವ್ಯ ಬರೆದರೆ ಆತ ದೊಡ್ಡ ಲೇಖಕ ಅಂತ ನನಗನಿಸುವುದಿಲ್ಲ.

ಪ್ರಶ್ನೆ: ಬಹಳ ಜನ ಲೇಖಕರು ನಾವು ಚಳವಳಿಯಲ್ಲಿ ಭಾಗವಹಿಸುವ ಅಗತ್ಯವಿಲ್ಲ, ನಮ್ಮ ಸಾಹಿತ್ಯವೇ ಒಂದು ಚಳವಳಿ ಎಂದು ಹೇಳುತ್ತಾರಲ್ಲ?

ಉತ್ತರ: ಸಾಹಿತ್ಯದ್ದು ನಿಧಾನವಾಗಿ ಮಾಡಬಹುದಾದ ಕೆಲಸ. ಕುವೆಂಪುರವರ ತುಂಬಾ ವೈಚಾರಿಕವಾದ ಕೃತಿಯನ್ನು ಬಹಳ ಜನ ಓದುವುದಿಲ್ಲ. ಕರ್ನಾಟಕದ ಚಳವಳಿ ಇತಿಹಾಸದಲ್ಲಿ ಕೆಲವರು ಬಹಳಷ್ಟು ಬರೆಯದೆಯೇ ಒಂದು ಎಚ್ಚರದ ಸಮುದಾಯವನ್ನು ಸೃಷ್ಟಿಸಿದರು. ಕಿ.ರಂ.ನಾಗರಾಜ ಅವರಲ್ಲಿ ಪ್ರಮುಖರು. ಕೆ.ರಾಮದಾಸ್, ನಂಜುಂಡಸ್ವಾಮಿ, ಸುಂದರೇಶ್, ಕಡಿದಾಳ್ ಶ್ಯಾಮಣ್ಣನಂತವರು ಬರೆಯಲೇ ಇಲ್ಲ. ಆದರೆ ಅವರು ಮಹಾನ್ ಕಲಾಕೃತಿಗಳಿಂದ ಸಾಧ್ಯವಾಗುವುದನ್ನು ತಮ್ಮ ಸಾಮಾಜಿಕ ಕ್ರಿಯೆಗಳಿಂದಲೇ ಸಾಧಿಸಿದರು. ಕಲಾಕೃತಿಗಳ ಮೂಲಕವೇ ಮನುಷ್ಯ ಶಾಶ್ವತನಾಗುತ್ತಾನೆ ಎನ್ನುವುದು ಒಂದು ಕಡೆಯಾದರೆ, ತತ್ಕಾಲೀನ ಸಮಸ್ಯೆಗಳಿಗೂ ಲೇಖಕ ಸಾಮಾಜಿಕ ಬದ್ಧತೆಯೊಂದಿಗೆ ಕೆಲಸ ಮಾಡಬೇಕಾದದ್ದು ಬಹಳ ಅಗತ್ಯ. ಅದರ ಜೊತೆಗೆ ಅವನು ಶ್ರೇಷ್ಠ ಕೃತಿಗಳನ್ನು ಬರೆದರೆ ಇನ್ನೂ ಒಳ್ಳೆಯದು. ಚಳವಳಿಗಳಿಂದ ವಿಮುಖನಾಗಿ ಬರೆಯುವ ಲೇಖಕ ಬಹುಶಃ ಪಲಾಯನವಾದಿ ಇರಬಹುದು.

ಪ್ರಶ್ನೆ: ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ವಿದ್ವತ್‌ರಾಹಿತ್ಯ ಸ್ಥಿತಿಯಿದೆ ಎಂಬುದು ಹಲವು ವಿದ್ವಾಂಸರ ಅಭಿಪ್ರಾಯ. ಈ ಕುರಿತು ನಿಮ್ಮ ರೀಡಿಂಗ್ ಏನು?

ಉತ್ತರ: ಸಾರಾಸಗಟಾಗಿ ಎಲ್ಲಾ ಪ್ರಾಧ್ಯಾಪಕರು ಹೊಸ ಓದನ್ನು ಮಾಡದೇ ನಿಷ್ಪ್ರಯೋಜಕರಾಗಿದ್ದಾರೆ ಎಂದು ಹೇಳಲಾಗದು. ಆದರೆ ಒಟ್ಟು ಪ್ರಮಾಣವನ್ನು ಪರಿಗಣಿಸಿದರೆ ಶೇ.60 ರಿಂದ 70 ರಷ್ಟು ಮಂದಿ ಅಂಥವರೇ ಇದ್ದಾರೆ. ಇವರು ಲಕ್ಷಾಂತರ ಪಗಾರ ಪಡೆಯುತ್ತಾರೆ. ಆದರೂ ಅದಕ್ಕೆ ತಕ್ಕಂತಹ ಜವಾಬ್ದಾರಿ ನಿರ್ವಹಿಸುತ್ತಿಲ್ಲ. ಸದ್ಯದ ಸಾಮಾಜಿಕ ಸ್ಥಿತಿಗಳಿಗೆ ತಮ್ಮ ವಿದ್ಯಾರ್ಥಿಗಳನ್ನು ಸಜ್ಜುಮಾಡುವ ಹಾಗೂ ತಾವು ಬೋಧಿಸುವ ವಿಷಯಗಳ ಕುರಿತು ಅಪ್‌ಡೇಟ್ ರೀಡಿಂಗ್ ಇಲ್ಲದೇಹೋದರೆ ಅಧ್ಯಾಪಕನೂ ಬೆಳೆಯುವುದಿಲ್ಲ, ವಿದ್ಯಾರ್ಥಿಯೂ ಬೆಳೆಯುವುದಿಲ್ಲ. ಅಧ್ಯಾಪಕರು ತಾವು ಓದಿದ ಹೊಸ ಕೃತಿಯನ್ನು ಸಾಂಕ್ರಾಮಿಕವಾಗಿ ತನ್ನ ವಿದ್ಯಾರ್ಥಿಗಳಿಗೆ ವರ್ಗಾಯಿಸಬೇಕು. ಆದರೆ ಬಹಳಷ್ಟು ಪ್ರಾಧ್ಯಾಪಕರಿಗೆ ಕನ್ನಡದಲ್ಲಿ ಹಾಗೂ ಭಾರತೀಯ ಭಾಷೆಗಳಲ್ಲಿ ಆಗುತ್ತಿರುವ ಸ್ಥಿತ್ಯಂತರಗಳ ಪರಿಚಯವೇ ಇಲ್ಲ. ಕೆಲವರಂತೂ ದಿನನಿತ್ಯದ ಪತ್ರಿಕೆಗಳನ್ನು ಸಹ ಓದುವುದಿಲ್ಲ. ಸಮಕಾಲೀನ ಸಂದರ್ಭದ ಜ್ವಲಂತ ಸಮಸ್ಯೆಗಳ ಕುರಿತು ಅರಿವಿಲ್ಲದವರು ಶಿಕ್ಷಣ ಕ್ಷೇತ್ರದಲ್ಲಿರುವುದು ತುಂಬಾ ಅಪಾಯಕಾರಿ. ಸರ್ಕಾರ ಕೂಡ ಶಿಕ್ಷಕರನ್ನು ಇತರೆ ಸರ್ಕಾರಿ ಯೋಜನೆಗಳ ಜಾರಿಗೆ ಬಳಸಿಕೊಳ್ಳುವುದನ್ನು ನಿಲ್ಲಿಸಬೇಕು. ಸರ್ಕಾರ ಅವರನ್ನು ಶೈಕ್ಷಣಿಕವಾಗಿ ಹೆಚ್ಚು ತೊಡಗಿಸಿಕೊಳ್ಳುವ ನಿಟ್ಟಿನಲ್ಲಿ ಯೋಚಿಸಬೇಕು.

ಪ್ರಶ್ನೆ: ಹೊಸ ಸರ್ಕಾರದ ಕುರಿತು ನಿಮ್ಮ ಅಭಿಪ್ರಾಯಗಳೇನು? ಏನಾದರೂ ಬದಲಾವಣೆ ಸಾಧ್ಯವೆಂದು ನಿಮಗೆ ಭರವಸೆಯಿದೆಯೆ?

ಉತ್ತರ: ರಾಜಕೀಯ ತನ್ನ ಗತಿಸಿಹೋದ ದಿನಮಾನಗಳಿಂದ ಪಾಠ ಕಲಿಯಬೇಕು. ಈಗ ಬಂದಿರುವ ಸರ್ಕಾರ ಕೂಡ ಸ್ವರ್ಗವನ್ನು ಭೂಮಿಗೆ ತರುತ್ತದೆನ್ನುವ ಭರವಸೆ ಇಲ್ಲ. ಏಕೆಂದರೆ ಹಿಂದಿನ ಸರ್ಕಾರ ಮಾಡಿರುವ ಘನಘೋರ ತಪ್ಪುಗಳ ನಡುವೆ ಇವರು ಮಾಡುವ ತಪ್ಪುಗಳು ಸಣ್ಣವಾಗಿ ಕಾಣಬಹುದು. ಹಿಂದಿನ ಸರ್ಕಾರ ಮಾಡಿರುವ ತಪ್ಪುಗಳನ್ನು ಸರಿಪಡಿಸಿಕೊಂಡು ಹೊಸ ಸರ್ಕಾರ ಮುನ್ನಡೆಯಬೇಕು.


ಪ್ರಶ್ನೆ: ಮತ್ತೆ ಸಾಹಿತ್ಯದ ಕುರಿತು ಬಂದರೆ, ಈ ಹೊಸ ತಲೆಮಾರಿನ ಸಾಹಿತ್ಯದ ಬಗ್ಗೆ ನಿಮ್ಮ ನೋಟವೇನು?

ಉತ್ತರ: ನವೋದಯದಿಂದ ಬಂಡಾಯದವರೆಗೂ ಕನ್ನಡ ಸಾಹಿತ್ಯ ಚಳವಳಿ ಹಲವು ಘಟ್ಟಗಳನ್ನು ಕಂಡಿತು. ಆದರೆ ಅದರ ನಂತರ ಪಲ್ಲಟವನ್ನೇ ಪಡೆಯಲಿಲ್ಲ ಎಂದು ಮಾತನಾಡುತ್ತಾರೆ. ಈಗ ನಿರ್ದಿಷ್ಟವಾಗಿ ಗುರುತಿಸುವಂತಹ ಸಾಹಿತ್ಯ ಕಾಲಘಟ್ಟವೇನೂ ಇಲ್ಲದೇ ಹೋದರೂ ಕನ್ನಡ ಸಾಹಿತ್ಯ ಜಗತ್ತು ವಿಶೇಷವಾಗಿ ಕಥಾ ಜಗತ್ತು ಬಹಳ ಜೀವಂತವಾಗಿಯೇ ಇದೆ ಎಂದು ನನ್ನ ಅನಿಸಿಕೆ

(ಛಾಯಾಚಿತ್ರ: ಕಿರಣ್ ಮಾರಶೆಟ್ಟಿಹಳ್ಳಿ)



ಇಶ್ರತ್ ಜಹಾನ್ ಮತ್ತು ಇತರ ಮೂವರ ಕೊಲೆಗೆ 'ಬಿಳಿ ದಾಡಿ' ಮತ್ತು 'ಕರಿ ದಾಡಿ' ಅನುಮತಿ ನೀಡಿದ್ದಾರೆ ಎಂದು ವಂಜಾರ ರಾಜೇಂದ್ರ ಕುಮಾರ್‌ಗೆ ಹೇಳಿದ್ದನ್ನು ತಾನು ಕೇಳಿಸಿಕೊಂಡಿದ್ದೆನೆಂದು ಆ ಪೊಲೀಸ್ ಅಧಿಕಾರಿ ತಿಳಿಸಿದ್ದಾನೆ. 'ಬಿಳಿ ದಾಡಿ' ಅಂದರೆ ನರೇಂದ್ರ ಮೋದಿ; 'ಕರಿ ದಾಡಿ' ಅಂದರೆ ಅಮಿತ್ ಶಾ.


ಬಿಳಿದಾಡಿ ... ಕರಿದಾಡಿ

ಇಶ್ರತ್ ಎನ್‌ಕೌಂಟರ್ ಇಂಟಲಿಜೆನ್ಸ್ ಬ್ಯೂರೊದೊಳಗೆ ಹಿಂದೂತ್ವವಾದಿಗಳು

"ಇದು ದೈವಿಕ ನ್ಯಾಯ... ಇದು ನಿರಪರಾಧಿಗಳನ್ನು ಕೊಂದಿದ್ದಕ್ಕಾಗಿ ನನಗೆ ಸಿಕ್ಕ ಶಿಕ್ಷೆ."

ಪಾಪಪ್ರಜ್ಞೆಯ ಈ ವಾಕ್ಯಗಳು ಹೊರಬಿದ್ದುದು ಗಿರೀಶ್ ಲಕ್ಷ್ಮಣ್ ಸಿಂಘಾಲ್ ಎಂಬ ಪೊಲೀಸ್ ಅಧಿಕಾರಿಯ ಬಾಯಿಯಿಂದ. 'ಇಶ್ರತ್ ಜಹಾನ್ ಎನ್‌ಕೌಂಟರ್' ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ಅಧಿಕಾರಿಗಳಿಂದ ವಿಚಾರಣೆಗೊಳಪಟ್ಟಿದ್ದ ಸಂದರ್ಭದಲ್ಲಿ ಸಿಂಘಾಲ್ ಹೇಳಿದ ಮಾತುಗಳಿವು. ಆ ಪ್ರಕರಣದಲ್ಲಿ ನರೇಂದ್ರ ಮೋದಿಯನ್ನು ಹತ್ಯೆ ಮಾಡಲು ಬಂದಿದ್ದರೆನ್ನಲಾದ ನಾಲ್ವರು ಶಂಕಿತ ಉಗ್ರರನ್ನು ಗುಂಡಿಕ್ಕಿ ಕೊಂದಿದ್ದ ಸಿಂಘಾಲ್ ನಂತರ ತನ್ನ 17ರ ಹರೆಯದ ಒಬ್ಬನೇ ಮಗ ಇತ್ತೀಚೆಗಷ್ಟೆ ಆತ್ಮಹತ್ಯೆ ಮಾಡಿಕೊಂಡು ಸತ್ತ ಬಳಿಕ ತೀವ್ರ ಚಿತ್ತಕ್ಷೋಭೆಗೊಳಗಾಗಿ ತಪ್ಪೊಪ್ಪಿಕೊಳ್ಳಲು ನಿರ್ಧರಿಸಿದ.

ಏನಿದು 'ಇಶ್ರತ್ ಜಹಾನ್ ಎನ್‌ಕೌಂಟರ್' ಪ್ರಕರಣ?

ಜೂನ್ 15, 2004. ಅಹಮದಾಬಾದಿನ ಕ್ರೈಮ್ ಬ್ರಾಂಚ್ ಪೊಲೀಸರು ಮತ್ತು ನಾಲ್ವರು ಶಂಕಿತ ಉಗ್ರರ ನಡುವೆ ನಡೆಯಿತೆನ್ನಲಾದ ಗುಂಡಿನ ಕಾಳಗವೊಂದರಲ್ಲಿ ನಾಲ್ವರೂ ಸಾವನ್ನಪ್ಪಿದರು. ಅವರ ಹೆಸರುಗಳು ಇಂತಿವೆ: ಇಶ್ರತ್ ಜಹಾನ್ (ತಾಯಿಯ ಹೆಸರು ಶಮೀಮಾ ಕೌಸರ್); ಜಾವೇದ್ ಗುಲಾಂ ಶೇಕ್ ಉರುಫ್ ಪ್ರಾಣೇಶ್ ಕುಮಾರ್ ಪಿಳ್ಳೆ, ಅಬ್ದುಲ್ ಗನಿ ಉರುಫ್ ಜೀಷಂತ್ ಜೋಹರ್ ಉರುಫ್ ಜನ್‌ಬಾಜ್ ಮತ್ತು ಅಮ್ಜದ್ ಅಲಿ ರಾಣಾ ಉರುಫ್ ಸಲೀಂ ಉರುಫ್ ಚಂದು ಉರುಫ್ ರಾಜ್ ಕುಮಾರ್ (ಇವರಿಬ್ಬರೂ ಪಾಕಿಸ್ತಾನಿಗಳು ಎನ್ನಲಾಗಿದೆ). ಪೊಲೀಸರ ಪ್ರಕಾರ ಇವರು ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿಯನ್ನು ಕೊಲ್ಲುವ ಸಂಚು ರೂಪಿಸಿದ್ದರು. ಕೇಂದ್ರ ಸರಕಾರದ ಗೃಹಸಚಿವಾಲಯ ಗುಜರಾತ್ ಉಚ್ಚನ್ಯಾಯಾಲಯಕ್ಕೆ ಸಲ್ಲಿಸಿರುವ ಅಫಿಡವಿತ್ ಕೂಡ ಪಾಕಿಸ್ತಾನದ ಲಷ್ಕರ್-ಎ-ತೋಯ್ಬಾ ಇವರನ್ನು ಗುಜರಾತ್‌ನಲ್ಲಿ ಭಯೋತ್ಪಾದಕ ಕೃತ್ಯಗಳನ್ನು ನಡೆಸುವುದಕ್ಕಾಗಿ ಕಳುಹಿಸಿತ್ತು ಎನ್ನುತ್ತದೆ. ಈ ನಾಲ್ವರ ತಂಡಕ್ಕೆ ಸೋಮನಾಥ, ಅಕ್ಷರಧಾಮ, ಸಿದ್ಧಿವಿನಾಯಕ ಮಂದಿರಗಳನ್ನು ಸ್ಫೋಟಿಸುವ ಕಾರ್ಯವನ್ನು ವಹಿಸಲಾಗಿತ್ತಂತೆ. ಆದರೆ ರಾಷ್ಟ್ರೀಯ ತನಿಖಾ ಸಂಸ್ಥೆಯ (NIA) ವರದಿಯಲ್ಲೆಲ್ಲೂ ಇಶ್ರತ್ ಹೆಸರು ಕಂಡುಬರುತ್ತಿಲ್ಲ.

ಅಂದು ಈ ಎನ್‌ಕೌಂಟರ್‌ನ ತನಿಖೆ ನಡೆಸಿದ ಮ್ಯಾಜಿಸ್ಟ್ರೇಟ್ ತಮಾಂಗ್ ಸೆಪ್ಟೆಂಬರ್ 7, 2009ರಂದು ಕೊಟ್ಟ ವರದಿ ಸ್ಪಷ್ಟವಾಗಿ ಹೇಳುವುದೇನೆಂದರೆ ಇದೊಂದು ನಕಲಿ ಎನ್‌ಕೌಂಟರ್ ಎಂದು. ನ್ಯಾ. ತಮಾಂಗ್ ವರದಿಯಲ್ಲಿ ಈ ಪಿತೂರಿ ನಡೆಸಿದ ಪೊಲೀಸ್ ಅಧಿಕಾರಿಗಳನ್ನೂ ಹೆಸರಿಸಲಾಗಿದೆ: ಅಹಮದಾಬಾದ್ ಪೊಲೀಸ್ ಕಮಿಷನರ್ ಕೆ.ಆರ್.ಕೌಶಿಕ್, ಜಂಟಿ ಕಮೀಷನರ್ ಪಿ.ಪಿ.ಪಾಂಡೆ, ಡಿ.ಜಿ.ವಂಜಾರ, ಜೆ.ಎಲ್.ಸಿಂಘಾಲ್, ಎನ್.ಕೆ.ಅಮೀನ್, ಕೆ.ಎಂ.ವಘೇಲ, ಜೆ.ಜಿ.ಪರ್ಮಾರ್, ವಿ.ಡಿ.ವನಾರ್, ಎಸ್.ಪಿ. ಅಗ್ರಾವತ್, ಡಿ.ಎಚ್.ಗೋಸ್ವಾಮಿ, ಆರ್.ಐ.ಪಟೇಲ್, ಬಿ.ಎ.ಚಾವ್ಡಾ, ತರುಣ್ ಬಾರೋತ್, ಕೆ.ಎಸ್. ದೇಸಾಯಿ, ಐ.ಕೆ.ಚೌಹಾಣ್, ಎಂ.ಎಲ್.ಕಲಾಸವ, ಎಂ.ಎಸ್.ವ್ಯಾಸ್, ಎನ್.ಬಿ.ಮಿಯಾ, ಎ.ಜೆ.ಚೌಧರಿ, ಎಂ.ಕೆ.ಂಜಿ ಭಾಯಿ ಮತ್ತು ಡ್ರೈವರ್ ಭಾಲಾಭಾಯಿ. ನ...ಂದ್ರ ಮೋದಿಯನ್ನು ಕೊಲ್ಲುವ ವಿಷಯದ ಕುರಿತು ಆ ...ಲ್ವರು ಶಂಕಿತ ಉಗ್ರರ ನಡುವೆ ನಡೆದ ಸಂಭಾಷಣೆಯ ಸಿಡಿ ತನ್ನಲ್ಲಿದೆಯೆಂದು ಇದೀಗ ಹೇಳಿಕೊಳ್ಳುವ ಗುಪ್ತದಳ ಆ ಸಿಡಿಯನ್ನು ಮ್ಯಾಜಿಸ್ಟ್ರೇಟ್ ತನಿಖೆಯ ಸಂದರ್ಭದಲ್ಲಾಗಲಿ, ನಂತರದ ವಿಶೇಷ ತನಿಖಾ ತಂಡದ (SIT) ತನಿಖೆಯ ಸಂದರ್ಭದಲ್ಲಾಗಲಿ ಹಾಜರುಪಡಿಸಿಲ್ಲ.

ಗುಜರಾತ್ ಮತ್ತಿತರ ರಾಜ್ಯಗಳಲ್ಲಿ ನಡೆದಂತಹ ಬಹುತೇಕ ಎನ್‌ಕೌಂಟರ್‌ಗಳು ನಕಲಿಯಾಗಿದ್ದು ಅವೆಲ್ಲವೂ ಮತಬ್ಯಾಂಕ್ ವೃದ್ಧಿಸುವ ಅಥವಾ ಇನ್ನಿತರ ರಾಜಕೀಯ ಲಾಭಕ್ಕಾಗಿ ನಡೆದಿದ್ದುವೆಂದು ಊಹಿಸಲು ಬಲವಾದ ಕಾರಣಗಳಿವೆ. ಗುಜರಾತ್‌ನಲ್ಲಿ ಸಂಭವಿಸಿದ ಎನ್‌ಕೌಂಟರ್‌ಗಳಲ್ಲಿ ಹತರಾದವರ ಪೈಕಿ ಹೆಚ್ಚಿನವರು ಸಣ್ಣ ಮಟ್ಟದ ಕ್ರಿಮಿನಲ್‌ಗಳು ಎಂಬುದನ್ನು ಗಮನಿಸಬೇಕು. ಕೆಲವರಿಗೆ ಭಯೋತ್ಪಾದನೆಯ ಹಿನ್ನೆಲೆಯೂ ಇರಬಹುದು. ಅವರೆಲ್ಲಾ ಮೋದಿ ಮತ್ತು ಕೆಲವು ಹಿರಿಯ ಬಿಜೆಪಿ ಸಚಿವರನ್ನು ಕೊಲ್ಲುವ ಸಂಚು ರೂಪಿಸಿದ್ದರೆಂದು


ಜೆ.ಎಲ್.ಸಿಂಘಾಲ್ ಕೆ.ಆರ್.ಕೌಶಿಕ್ ಪಿ.ಪಿ.ಪಾಂಡೆ

ಆರೋಪಿಸಲಾಗಿದೆ. ಅದೇನೇ ಇರಲಿ, ಇಂತಹ ಆರೋಪಗಳ ಮೇರೆಗೆ ಯಾರನ್ನೇ ಆಗಲಿ ಕೊಲ್ಲುವ ಮತ್ತು ಕೊಲ್ಲಿಸುವ ಅಧಿಕಾರ ಯಾರಿಗೂ ಇಲ್ಲ; ನ್ಯಾಯಾಲಯದಲ್ಲಿ ಅಪರಾಧ ಸಾಬೀತಾದ ನಂತರ ನ್ಯಾಯಾಧೀಶರಷ್ಟೆ ಗಲ್ಲು ಶಿಕ್ಷೆ ವಿಧಿಸಬಹುದಾಗಿದೆ.

2003-06ರ ಅವಧಿಯಲ್ಲಿ ಗುಜರಾತ್‌ನಲ್ಲಿ ನಡೆದಿದ್ದ 16 ಎನ್‌ಕೌಂಟರ್‌ಗಳ ತನಿಖೆ ನಡೆಸುವಂತೆ ಸರ್ವೋಚ್ಚ ನ್ಯಾಯಾಲಯ ಆದೇಶ ಹೊರಡಿಸಿದಾಗ ನಿವೃತ್ತ ನ್ಯಾಯಾಧೀಶ ಎಂ.ಎಸ್.ಶಾ ನೇತೃತ್ವದಲ್ಲಿ ವಿಶೇಷ ತನಿಖಾ ತಂಡವೊಂದನ್ನು (ಎಸ್‌ಐಟಿ) ರಚಿಸಲಾಯಿತು. ಎಸ್‌ಐಟಿ ನವಂಬರ್ 21, 2011ರಂದು 'ಇಶ್ರತ್ ಪ್ರಕರಣ'ದ ಕುರಿತು ಹೈಕೋರ್ಟಿಗೆ ಸಲ್ಲಿಸಲಿದ್ದ ವರದಿಯಲ್ಲಿ ಕೆಲವು ಪೊಲೀಸ್ ಅಧಿಕಾರಿಗಳನ್ನು ತಪ್ಪಿತಸ್ಥರನ್ನಾಗಿ ಹೆಸರಿಸಲಿದೆ ಎಂಬ ಸುದ್ದಿ ತಿಳಿದಾಕ್ಷಣ ಅಂದಿನ ಉಪ ಗೃಹಸಚಿವ ಪ್ರಫುಲ್ ಪಟೇಲ್ ನೇತೃತ್ವದಲ್ಲಿ ಒಂದು ರಹಸ್ಯ ಸಭೆ ನಡೆಯಿತು. ನವಂಬರ್ 20ರ ಆ ಸಭೆಯಲ್ಲಿ ಶಾಸನರಚನಾ ವ್ಯವಹಾರಗಳ ಸಚಿವ ಪ್ರದೀಪ್ ಸಿಂಗ್ ಜಡೇಜ, ಶಿಕ್ಷಣ ಸಚಿವ ಭೂಪಿಂದರ್ ಚೂಡಾಸಮ, ಅಡ್ವೊಕೇಟ್ ಜನರಲ್ ಕಮಲ್ ತ್ರಿವೇದಿ, ಹೆಚ್ಚುವರಿ ಅಡ್ವೊಕೇಟ್ ಜನರಲ್ ತುಷಾರ್ ಮೆಹತಾ, ಓರ್ವ ವಕೀಲ, ಹೆಚ್ಚುವರಿ ಪ್ರಧಾನ ಕಾರ್ಯದರ್ಶಿ ಗಿರೀಶ್ ಚಂದ್ರ ಮುರ್ಮು (ಈತ 2008ರಿಂದಲೂ ಮೋದಿಯ ನಿಕಟವರ್ತಿ ಅಧಿಕಾರಿ) ಮತ್ತು ಪೊಲೀಸ್ ಅಧಿಕಾರಿ ಸಿಂಘಾಲ್ ಉಪಸ್ಥಿತರಿದ್ದರು. ಎಸ್‌ಐಟಿ ವರದಿ ಹೆಸರಿಸಲಿರುವ ಪೊಲೀಸ್ ಅಧಿಕಾರಿಗಳನ್ನು ಪಾರು ಮಾಡುವ ವಿಧಾನಗಳ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು. ಸಿಂಘಾಲ್ ಇಡೀ ಸಭೆಯ ಕಲಾಪಗಳನ್ನು ದಾಖಲಿಸಿಕೊಂಡಿದ್ದ. ಮರುದಿನ ಎಸ್‌ಐಟಿ ಸಲ್ಲಿಸಿದ ವರದಿಯಲ್ಲಿ ಈ ಎನ್‌ಕೌಂಟರ್ ನಕಲಿ ಎಂದು ಸ್ಪಷ್ಟವಾಗಿ ನಮೂದಿಸಲಾಗಿದೆ.

ಈಗ ಸಿಬಿಐ ತನಿಖೆಯಲ್ಲಿಯೂ ಸಾಬೀತಾಗಿರುವಂತೆ ಅಹಮದಾಬಾದಿನ ಕ್ರೈಮ್ ಬ್ರಾಂಚ್ ಪೊಲೀಸರು ಇಶ್ರತ್ ಜಹಾನ್ ಮತ್ತು ಇತರ ಮೂವರನ್ನು ಜೂನ್ 12, 2004ರಂದು ಮುಂಬಯಿಯಿಂದ ಅಪಹರಿಸಿ ಅಹಮದಾಬಾದಿಗೆ ಕರೆತಂದು ಜೂನ್ 15ರಂದು ಕೊಲೆ ಮಾಡಿದರು. ಸದ್ಯ ಗುಪ್ತದಳದ ವಿಶೇಷ ನಿರ್ದೇಶಕನಾಗಿರುವ ರಾಜೇಂದ್ರ ಕುಮಾರ್ ಎಂಬಾತನೇ 'ಇಶ್ರತ್ ಪ್ರಕರಣ'ದ ಪ್ರಮುಖ ರೂವಾರಿಗಳಲ್ಲೊಬ್ಬನೆಂಬ ಲಿಖಿತ ಹೇಳಿಕೆಯನ್ನು ಓರ್ವ ಆರೋಪಿತ ಪೊಲೀಸ್ ಅಧಿಕಾರಿ ಕೊಟ್ಟಿದ್ದಾರೆಂದು ಸಿಬಿಐ ನ್ಯಾಯಾಲಯಕ್ಕೆ ಅರುಹಲಿದೆ. ಮತ್ತೋರ್ವ ಅಧಿಕಾರಿ ನೀಡಿರುವ ಹೇಳಿಕೆ ಪ್ರಕಾರ ಇಶ್ರತ್‌ಳನ್ನು ಕೊಲ್ಲುವ ಮುನ್ನ ಆಕೆಯನ್ನು ಅಕ್ರಮ ಬಂಧನದಲ್ಲಿರಿಸಿದ್ದಾಗಲೂ ಕುಮಾರ್ ಆಕೆಯನ್ನು ಭೇಟಿಯಾಗಿದ್ದ. ಮೂರನೇ ಅಧಿಕಾರಿ ಸಿಬಿಐಗೆ ತಿಳಿಸಿರುವಂತೆ ಎನ್‌ಕೌಂಟರ್ ಸ್ಥಳದಲ್ಲಿ ದೊರೆತ ಎಕೆ 47 ಬಂದೂಕನ್ನು ಕುಮಾರ್‌ನ ಗುಜರಾತ್ ಐಬಿ ಕಚೇರಿಯಿಂದ ತರಲಾಗಿತ್ತು.

ಸಿಬಿಐ ಪ್ರಕಾರ ಈ ರಾಜೇಂದ್ರ ಕುಮಾರ್ 'ಇಶ್ರತ್ ಪ್ರಕರಣ' ಮಾತ್ರವಲ್ಲದೆ ಜನವರಿ 2003ರ 'ಸಾದಿಕ್ ಜಮಾಲ್ ನಕಲಿ ಎನ್‌ಕೌಂಟರ್ ಪ್ರಕರಣ'ದ ಸೂತ್ರಧಾರಿಯೂ ಆಗಿದ್ದಾನೆ. ಮಹಾರಾಷ್ಟ್ರದ ಎನ್‌ಕೌಂಟರ್ ಪ್ರಕರಣವೊಂದಕ್ಕೆ ಸಂಬಂಧಿಸಿದಂತೆ ಜೈಲು ಶಿಕ್ಷೆ ಅನುಭವಿಸುತ್ತಿರುವ ಸ್ಥಳೀಯ "ಎನ್ಕೌಂಟರ್ ತಜ್ಞ" ಪೊಲೀಸ್ ಅಧಿಕಾರಿ ಪ್ರದೀಪ್ ಶರ್ಮ ಮತ್ತು ಮಹಾರಾಷ್ಟ್ರ ಗುಪ್ತಚರ ಇಲಾಖೆಯ ಇಬ್ಬರು ಅಧಿಕಾರಿಗಳೂ 'ಸಾದಿಕ್ ಪ್ರಕರಣ'ದಲ್ಲಿ ಭಾಗಿಯಾಗಿದ್ದರೆಂದು ಹೇಳುತ್ತಿರುವ ಸಿಬಿಐ ಈಗಾಗಲೆ ಆ ಮೂವರನ್ನೂ ವಿಚಾರಣೆಗೊಳಪಡಿಸಿ... ಸಾದಿಕ್‌ನನ್ನೂ ಲಷ್ಕರ್-ಎ-ತೋಯ್ಬಾ ಕಳುಹಿಸಿದ್ದೆಂಬ ಸು... ಗುಪ್ತಚರ ಮಾಹಿತಿಯ ಮೂಲವೂ ರಾಜೇಂದ್ರ ಕುಮಾ... ಇಶ್ರತ್ ಮತ್ತು ಸಾದಿಕ್ ಕುರಿತ ಮಾಹಿತಿಯನ್ನು ಕ್ರೈಮ್ ಬ್ರಾಂಚ್ ಮುಖ್ಯಸ್ಥ ಡಿ.ಜಿ.ವಂಜಾರ ಹಾಗೂ ಇನ್ನಿತ... ಕೆಲವು ಪೊಲೀಸ್ ಅಧಿಕಾರಿಗಳಿಗೆ ರವಾನಿಸಿದಾತನೇ ಈ... ಎನ್ನಲಾಗಿದೆ. ವಾಸ್ತವದಲ್ಲಿ ಮಹಾರಾಷ್ಟ್ರ ಗುಪ್ತದಳದ ಅಂಬಾ... ಗೋಪಿನಾಥನ್ ಮತ್ತಿತರ ಅಧಿಕಾರಿಗಳು ನಡೆಸಿ... ತನಿಖೆಯಲ್ಲಿ ಸಾದಿಕ್ ಭಯೋತ್ಪಾದಕನಲ್ಲವೆಂ... ತಿಳಿದುಬಂದಿದ್ದು ಈ ಮಾಹಿತಿಯನ್ನು ಕೇಂದ್ರ ಗುಪ್ತಚ... ಇಲಾಖೆಗೂ ಕಳುಹಿಸಲಾಗಿತ್ತು. ಆದರೂ ಮುಂದಿನ ಕೆಲ... ದಿನಗಳಲ್ಲಿ ಸಾದಿಕ್‌ನನ್ನು ಗುಜರಾತಿಗೆ ಕರೆಸಿಕೊಂಡು ಅ... ಕೊಲ್ಲಲಾಯಿತು. ಈ ಎನ್‌ಕೌಂಟರ್‌ಗಳನ್ನು (ಮತ... 'ಸೊಹ್ರಾಬುದ್ದೀನ್ ಶೇಕ್ ಎನ್‌ಕೌಂಟರ್') ನಡೆಸಿದ ವಂಜಾ... ಮತ್ತಿತರ ಆರು ಪೊಲೀಸ್ ಅಧಿಕಾರಿಗಳು ಈಗಾಗ... ಜೈಲಿನ ಕಂಬಿ ಎಣಿಸುತ್ತಿದ್ದಾರೆ.

ಮೋದಿ ನಿಕಟವರ್ತಿ ಕಾನೂನಿನ ಕುಣಿಕೆಗೆ?


ಸಿಬಿಐ ಈಗ ಮಾಜಿ ಗುಜರಾತ್ ಸಚಿವ ಅಮಿ... ಶಾನನ್ನು 'ಸಾದಿಕ್ ಪ್ರಕರಣ'ಕ್ಕೆ ಸಂಬಂಧಿಸಿದಂತೆಯ... ತನಿಖೆಗೊಳಪಡಿಸಲಿದೆ. 'ಸೊಹ್ರಾಬುದ್ದೀನ್ ಪ್ರಕರಣ'ದ... ಆತನ ಪತ್ನಿ ಕೌಸರ್ ಬೀಯನ್ನೂ ಹತ್ಯೆಗೈಯಲಾಗಿತ್ತು... ಸೊಹ್ರಾಬುದ್ದೀನ್ ಕೊಲೆಯನ್ನು ಕಣ್ಣಾರೆ ಕಂಡಿದ್ದ ಆತ... ಸಹಾಯಕ ತುಳಸಿರಾಂ ಪ್ರಜಾಪತಿಯನ್ನು ಮತ್ತೊಂದ... ನಕಲಿ ಎನ್‌ಕೌಂಟರ್‌ನಲ್ಲಿ ಕೊಲ್ಲಲಾಯಿತು. 2007ರ... ಸರ್ವೋಚ್ಚ ನ್ಯಾಯಾಲಯದ ಆದೇಶಾನುಸಾರ ಗುಜರಾ... ಸಿಐಡಿ ವತಿಯಿಂದ ನಡೆಸಲಾಗುತ್ತಿದ್ದ 'ಸೊಹ್ರಾಬುದ್ದೀ... ಪ್ರಕರಣ'ದ ತನಿಖೆಯಲ್ಲಿ ಪಾಲ್ಗೊಂಡಿದ್ದ ಐಪಿಎಸ್ (ಸಿಐ... ಗೀತಾ ಜೋಹರಿ ಎಂಬಾಕೆಗೆ ಅಮಿತ್ ಶಾ ದಾಖಲೆಗಳನ್... ತಿರುಚುವಂತೆ ಹೇಳಿದ್ದನೆಂದು ಪೊಲೀಸ್ ಅಧಿಕಾ... ಸೋಲಂಕಿ ಈಗ ಸಿಬಿಐಗೆ ಸಾಕ್ಷ್ಯ ನುಡಿದಿದ್ದಾರೆ. ಇದೀ... ಸಿಬಿಐ ಹಾಜರುಪಡಿಸಲಿರುವ ಈ ಸಾಕ್ಷಿಯ ಹೇಳಿ... ಅಮಿತ್ ಶಾನನ್ನು ಮತ್ತೊಮ್ಮೆ ಕಾನೂನಿನ ಕುಣಿಕೆ... ಸಿಲುಕಿಸಿಹಾಕಲಿದೆ. ಈಗ ಶಾನನ್ನು ಉತ್ತರ ಪ್ರದೇಶ... ಚುನಾವಣಾ ಮುಖ್ಯಸ್ಥನಾಗಿ ಮೋದಿ ನೇಮಿಸಿದ್ದಾನೆ.


ಮೋದಿಯ ರಾಜಕೀಯ ಭವಿಷ್ಯ ಡೋಲಾಯಮಾನ?

ಮೋದಿಗೆ 'ಇಶ್ರತ್ ಜಹಾನ್ ನಕಲಿ ಎನ್‌ಕೌಂಟರ್... ಪಿತೂರಿಯ ವಿಚಾರ ಮೊದಲೇ ತಿಳಿದಿತ್ತೆಂದು ಪ್ರಕರಣ... ಓರ್ವ ಆರೋಪಿ ಪೊಲೀಸ್ ಅಧಿಕಾರಿ ಸಿಬಿಐ... ತಿಳಿಸಿದ್ದಾನೆ. ಇಶ್ರತ್ ಜಹಾನ್ ಮತ್ತು ಇತರ ಮೂವ... ಕೊಲೆಗೆ 'ಬಿಳಿ ದಾಡಿ' ಮತ್ತು 'ಕರಿ ದಾಡಿ' ಅನುಮ... ನೀಡಿದ್ದಾರೆ ಎಂದು ವಂಜಾರ ರಾಜೇಂದ್ರ ಕುಮಾರ್... ಹೇಳಿದ್ದನ್ನು ತಾನು ಕೇಳಿಸಿಕೊಂಡಿದ್ದೆನೆಂದು ಆ ಪೊಲೀ... ಅಧಿಕಾರಿ ತಿಳಿಸಿದ್ದಾನೆ. 'ಬಿಳಿ ದಾಡಿ' ಅಂದರೆ ನರೇಂ... ಮೋದಿ; 'ಕರಿ ದಾಡಿ' ಅಂದರೆ ಅಮಿತ್ ಶಾ.

ಗುಪ್ತದಳದ ಅವಾಂತರಗಳು

ಜೂನ್ 18ರಂದು ರಾಜೇಂದ್ರ ಕುಮಾರ್‌ನನ್... ಸುದೀರ್ಘ ಕಾಲ ವಿಚಾರಣೆಗೊಳಪಡಿಸಿರುವ ಸಿಬಿಐ ಈ... ಕುಮಾರ್‌ನ ಬಂಧನಕ್ಕಾಗಿ ಆಗ್ರಹಿಸಲಿದೆ ಯೆಂದ... ತಿಳಿದುಬಂದಿದೆ. ಕುಮಾರ್‌ನ ಬಂಧನ ತನ್ನ ಪ್ರತಿಷ್ಠೆ... ಧಕ್ಕೆ ತರಲಿರುವ ಕಾರಣಕ್ಕೆ ಗುಪ್ತದಳ ಅದನ್ನು ತೀವ್ರವಾ... ವಿರೋಧಿಸುತ್ತಿದೆ. ಇದಲ್ಲದೆ ಗೃಹ ಇಲಾಖೆಯ... ಹಲವಾರು ಅಧಿಕಾರಿಗಳೂ ಆತಂಕಿತರಾಗಿರುವುದರಿಂ... ಕುಮಾರ್ ಬಂಧನಕ್ಕೆ ಗೃಹ ಇಲಾಖೆಯ ವಿರೋಧವ... ಇದೆ. ಹೆಚ್ಚುಕಡಿಮೆ ಪ್ರತಿಯೊಂದು ನಕ... ಎನ್‌ಕೌಂಟರ್,... ಪ್ರತಿಯೊಂದು ಭಯೋತ್ಪಾದ... ಪ್ರಕರಣದಲ್ಲಿ ಸುಳ್ಳು ಆರೋಪಗಳನ್ನು ಸೃಷ್ಟಿಸುವುದರಿಂ... ಹಿಡಿದು ನಿರಪರಾಧಿಗಳನ್ನು ಬಂಧಿಸುವ ವಿದ್ಯಮಾನ... ಹಿಂದೆ ಗುಪ್ತದಳ ಮತ್ತು ಪೊಲೀಸರ ಅನೈತಿಕ ಕೂಟ... ಕೈವಾಡವಿರುವ ವಿಚಾರ ರಹಸ್ಯವಾಗು ಳಿದಿಲ್ಲ. ಇದ... ಹಲವಾರು ನಿದರ್ಶನಗಳನ್ನು ಕೊಡಬಹುದು.


ಎನ್‌ಕೌಂಟರ್‌ನಲ್ಲಿ ಬಲಿಯಾದ ಇಶ್ರತ್ ಜಹಾನ್ ಹಾಗೂ ಇತರರು


....ಇಶ್ರತ್ ಕುಟುಂಬದವರೊಂದಿಗೆ

1996ರ ಲಜಪತ್ ನಗರ ಕೇಂದ್ರ ಮಾರುಕಟ್ಟೆ ಸ್ಫೋಟ ಪ್ರಕರಣ

ನವದೆಹಲಿಯ 13 ನಾಗರಿಕರನ್ನು ಬ...

...ಕೊಂಡು 38 ಮಂದಿಯನ್ನು ಗಾಯಾಳುಗಳಾಗಿಸಿದ ...ಪ್ರಕರಣದಲ್ಲಿ ಗಲ್ಲು ಶಿಕ್ಷೆಗೊಳಗಾಗಿದ್ದ ಇಬ್ಬರು ...ಾಧಿಗಳೆಂದು ತಿಳಿದುಬಂದು ಬಿಡುಗಡೆಗೊಂಡ ...ಯು ವಿದ್ಯಮಾನ ವೊಂದು ಇತ್ತೀಚೆಗೆ ನಡೆದಿದೆ. ...ವರ್ಷಗಳ ಕಾಲ ಜೈಲಿನಲ್ಲಿ ಕಳೆದ ಮೊಹಮ್ಮದ್ ...ಖಿಲ್ ಮತ್ತು ಮಿರ್ಜಾ ನಿಸ್ಸಾರ್ ಹುಸೇನ್‌ರನ್ನು ...ಡುಗಡೆಗೊಳಿಸಿರುವ ದೆಹಲಿ ಉಚ್ಚನ್ಯಾಯಾಲಯ, ...ೀಸ್ ಇಲಾಖೆಯಿಂದ ಆಗಿರುವ ಪ್ರಮಾದಗಳಿಗೆ ... ಅದಕ್ಷತೆಗಾಗಿ ಇಲಾಖೆಯನ್ನು ತೀವ್ರ ತರಾಟೆಗೆ ...ತೆಗೆದುಕೊಂಡಿದೆ.

...02ರ ಅನ್ಸಲ್ ಪ್ಲಾಜಾ ಎನ್‌ಕೌಂಟರ್

...ಅನ್ಸಲ್ ಪ್ಲಾಜಾ ಶಾಪಿಂಗ್ ಮಳಿಗೆಯಲ್ಲಿ ನಡೆದ ...ನ ಚಕಮಕಿಯಲ್ಲಿ ಇಬ್ಬರು ಕಾಶ್ಮೀರಿ ಉಗ್ರರು ...ಸತ್ತರೆಂದು ದೆಹಲಿ ಪೊಲೀಸರು ಮಾಧ್ಯಮಗಳಿಗೆ ...ದ್ದರು. ಆದರೆ ಎದ್ದು ನಿಲ್ಲಲೂ ಆಗದ, ನಡೆಯಲೂ ... ಪರಿಸ್ಥಿತಿಯಲ್ಲಿದ್ದ ಅವರಿಬ್ಬರನ್ನು ಪೊಲೀಸರೇ ಸ್ಥಳಕ್ಕೆ ... ತಂದು ಗುಂಡು ಹಾರಿಸಿ ಸಾಯಿಸಿದರೆಂದು ...ಕ್ಷಿಯೊಬ್ಬರು ಹೇಳಿದ ಬಳಿಕ ಪೊಲೀಸರ ಕಟ್ಟುಕತೆ ...ಯಾಯಿತು.

2008ರ ಬಾಟ್ಲಾ ಹೌಸ್ ಎನ್‌ಕೌಂಟರ್

...ದೆಹಲಿ ಪೊಲೀಸರು ಬಾಟ್ಲಾ ಹೌಸ್‌ನಲ್ಲಿ ನಡೆಸಿದ ...ಎನ್‌ಕೌಂಟರ್" ಒಂದರ ವೇಳೆ ಇಬ್ಬರು ಶಂಕಿತ ಉಗ್ರರು ...ಸತ್ತರು. ಇಬ್ಬರು "ಉಗ್ರರು" ತಪ್ಪಿಸಿಕೊಂಡರು. ...ವನನ್ನು ಬಂಧಿಸಲಾಯಿತು. ಇದೊಂದು ನಕಲಿ ...ಎನ್‌ಕೌಂಟರ್ ಆಗಿತ್ತೆಂದು ಅನೇಕ ಮಾನವಹಕ್ಕು ...ಸಂಘಟನೆಗಳು ಆಪಾದಿಸಿವೆ.

ಕಾಶ್ಮೀರಿ ಪತ್ರಕರ್ತ ಇಫ್ತಿಕಾರ್ ಗಿಲಾನಿ ಪ್ರಕರಣ

...ಜಮ್ಮುವಿನ ದಿನಪತ್ರಿಕೆ ಕಾಶ್ಮೀರ್ ಟೈಮ್ಸ್‌ನ ದೆಹಲಿ ...ಬ್ಯೂರೋದ ಮುಖ್ಯಸ್ಥ ಎರಡು ಪಾಕಿಸ್ತಾನಿ ಪತ್ರಿಕೆಗಳ ...ದ ವರದಿಗಾರ ಹಾಗೂ ಓರ್ವ ಒಳ್ಳೆಯ, ಗೌರವಾನ್ವಿತ ...ಪತ್ರಕರ್ತನಾದ ಇಫ್ತಿಕಾರ್ ಗಿಲಾನಿಯನ್ನು ಜೂನ್ 9, ...ರಂದು ಅಧಿಕೃತ ರಹಸ್ಯಗಳ ಕಾಯ್ದೆಯಡಿ ಬಂಧಿಸಿ ...ತಿಂಗಳ ಕಾಲ ತಿಹಾರ್ ಜೈಲಿನಲ್ಲಿ ಕಳೆಯುವಂತೆ ...ಮಾಡಿದ್ದು ಗುಪ್ತದಳ ಮತ್ತು ದೆಹಲಿ ಪೊಲೀಸರು (ಮತ್ತು ... ಹಿಂದೂತ್ವವಾದಿ ರಾಜಕಾರಣಿಗಳು) ಸೇರಿಕೊಂಡು. ... ಬಳಿ ಪಾಕಿಸ್ತಾನಿ ಸಂಶೋಧನಾ ಸಂಸ್ಥೆಯೊಂದು ...ಪ್ರಕಟಿಸಿದ್ದ ಪುಸ್ತಕವೊಂದರಿಂದ ಉದ್ಧರಿಸಿದ ಭಾರತೀಯ ...ಸೇನಾಪಡೆಗಳ ನಿಯೋಜನೆಯ ಕುರಿತಾದ ಹಳೆಯ ...ಮಾಹಿತಿಗಳಿದ್ದುವೆಂಬ ಕಾರಣ ನೀಡಿ ಆತನ ವಿರುದ್ಧ ...ದ್ರೋಹದ ಸುಳ್ಳು ಆರೋಪ ಹೊರಿಸಲಾಯಿತು!

...ಆರೆಸ್ಸೆಸ್‌ನ ನಾಗಪುರ ಕಚೇರಿ ಮೇಲಣ "ದಾಳಿ"

...ವಾಸ್ತವದಲ್ಲಿ ಇದೊಂದು ರಾಜಕೀಯ ಉದ್ದೇಶಗಳಿಗಾಗಿ ...ಗುಪ್ತದಳದ ಮೂಲಕ ರೂಪಿಸಿ ಪೊಲೀಸರ ಮೂಲಕ ...ಕಾರ್ಯಗತಗೊಳಿಸಲಾದ ಕಾರ್ಯಾಚರಣೆಯಾಗಿತ್ತೆಂದು ...ಲು ಬಲವಾದ ಕಾರಣಗಳಿವೆ. ಪೊಲೀಸರು ಹರಿಬಿಟ್ಟ ...ಕತೆ ನಂಬಲರ್ಹವಲ್ಲ ಎನ್ನುತ್ತದೆ ದಾಳಿಯ ತನಿಖೆ ನಡೆಸಿದ ...ಹೈಕೋರ್ಟ್‌ನ ನಿವೃತ್ತ ನ್ಯಾ. ಬಿ.ಜಿ. ಕೋಲ್ಸೆ-ಪಾಟೀಲ್ ...ನೇತೃತ್ವದ ಸತ್ಯಶೋಧನಾ ಸಮಿತಿ.

ಪ್ರಶ್ನಾರ್ಹ ವಿದ್ಯಮಾನಗಳು

...ಗುಪ್ತದಳದಲ್ಲಿ, ಪೊಲೀಸ್ ಇಲಾಖೆಯಲ್ಲಿ (ಅದರಲ್ಲೂ ...ವಿಶೇಷವಾಗಿ ಎಟಿಎಸ್ ಮತ್ತು ಸ್ಪೆಷಲ್ ಸೆಲ್‌ಗಳಲ್ಲಿ) ...ರೆಡ್ಡಿ ಕುಮಾರನಂತಹ ಅಪ್ರಾಮಾಣಿಕ ಅಧಿಕಾರಿಗಳು ... ಹಿಂದೂತ್ವವಾದಿ ಅಧಿಕಾರಿಗಳು ಇನ್ನೂ ...ಇದ್ದಾರೆಂದು ನಂಬಲು ಬಲವತ್ತರವಾದ ಕಾರಣಗಳಿವೆ. ...ಸರ್ವೋಚ್ಚ ನ್ಯಾಯಾಲಯದ 2006ರ ಆದೇಶವನ್ನು ... ಸಿಟ್ಟಾಗಿ ಪಾಲಿಸಿ ಪೊಲೀಸ್ ಇಲಾಖೆಯನ್ನು ...ಸಂಪೂರ್ಣವಾಗಿ ಪುನರ್‌ರಚಿಸಬೇಕಾಗಿದೆ. ಸೂಕ್ತ ಕಾಯ್ದೆ ...ರಚಿಸಿ ಗುಪ್ತದಳವನ್ನು ಸಂಸತ್ತಿನ ನಿಯಂತ್ರಣಕ್ಕೆ ಒಳಪಡಿಸ ...ಬೇಕಾಗಿದೆ. ಗುಪ್ತದಳವನ್ನು ಪುನರ್‌ರಚಿಸಿ ವಿವಿಧ ಧರ್ಮ, ... ಸಮುದಾಯ, ಪ್ರದೇಶಗಳಿಗೆ ಸೇರಿದ ಜಾತ್ಯತೀತ ...ಮನೋಭಾವದ ಅಧಿಕಾರಿಗಳನ್ನು ನೇಮಿಸಬೇಕಾಗಿದೆ. ಕಳೆದ ...ವರ್ಷಗಳಿಂದ ಗುಪ್ತದಳ ಮತ್ತು ಪೊಲೀಸ್ ಇಲಾಖೆ ...ಯೋತ್ಪಾದನೆ ವಿಷಯಗಳಿಗೆ ಸಂಬಂಧಿಸಿದಂತೆ ಸಲ್ಲಿಸಿರುವ ... ಮತ್ತು ಟಿಪ್ಪಣಿಗಳನ್ನು ಒಂದು ಸ್ವತಂತ್ರ ಸಂಸ್ಥೆಯ ...ಕ ಪುನರ್‌ಪರಿಶೀಲನೆಗೊಳಪಡಿಸಬೇಕಾಗಿದೆ. ತಪ್ಪಿತಸ್ಥ ಅಧಿಕಾರಿ ...ಶಿಕ್ಷೆ ವಿಧಿಸಲು ರಾಜ್ಯಪಾಲ/ರಾಷ್ಟ್ರಪತಿಗಳ ಪೂರ್ವಾ... ...ಅಗತ್ಯ ಎಂಬ ಬ್ರಿಟಿಷರ ಕಾಲದ ನಿಯಮವನ್ನು ...ಈಗಿನ ಪರಿಸ್ಥಿತಿಯಲ್ಲಿ ಕ್ರಾಂತಿಕಾರಿ ಬದಲಾವಣೆ ...ಸಾಧ್ಯವಿಲ್ಲ.

● ಸುರೇಶ್ ಭಟ್ ಬಾಕ್ರಬೈಲು

ಬದುಕು-ಬಯಲು: ಒಂದು ವಿಶಿಷ್ಟ ನಾಟಕ

'ಜನಮನದಾಟ ಹೆಗ್ಗೋಡು' ಅಭಿನಯಿಸಿರುವ ಹಿಜ್ರಾ ಬದುಕನ್ನು ಕುರಿತಾದ ಕನ್ನಡದ ಪ್ರಪ್ರಥಮ ನಾಟಕವೇ 'ಬದುಕು-ಬಯಲು'. ಇದು ಎ. ರೇವತಿಯವರ ಆತ್ಮಚರಿತ್ರೆಯನ್ನಾಧರಿಸಿ ರೂಪುಗೊಂಡ ನಾಟಕವಾಗಿದೆ. ಈ ಆತ್ಮಕಥೆಯನ್ನು ದು. ಸರಸ್ವತಿಯವರು ತಮಿಳಿನಿಂದ ಕನ್ನಡಕ್ಕೆ ಅನುವಾದ ಮಾಡಿದ್ದಾರೆ.

ಜನಮನದಾಟ ರಂಗತಂಡ ಸತ್ಯವಂತಿಕೆ ಮತ್ತು ಕಲಾಸೌಂದರ್ಯದಲ್ಲಿ ಶ್ರೀಮಂತವಾದುದು ಎಂದು ಇಂದಿಗೂ ಗುರುತಿಸಲ್ಪಟ್ಟಿದೆ. ಬಡತನವನ್ನೇ ಕಲಾತ್ಮಕವಾಗಿ ಸವಾಲಾಗಿ ಸ್ವೀಕರಿಸುವ ಜನಮತದಾಟ ಸರಳ ಸಂಪನ್ಮೂಲಗಳಿಂದಲೇ ಸೃಜನಶೀಲತೆಯನ್ನು ಕಟ್ಟುವ ಕಾರ್ಯದಲ್ಲಿ ನಿರತವಾಗಿದೆ.

ಜನಮನದಾಟಕ್ಕೆ ಇರುವ ಇನ್ನೊಂದು ಹೆಸರು "ಬಡವರ ನಗುವಿನ ಶಕ್ತಿ". ಆ ಬಡವರ ನಗುವಿನ ಶಕ್ತಿಯೇ 'ಶ್ರದ್ಧಾ ಮತ್ತು ಹಣತೆ', 'ಉಚಲ್ಯಾ', 'ರಹಸ್ಯ ವಿಶ್ವ', 'ತಬರನ ಕಥೆ', 'ಬಾಬಾ ಸಾಹೇಬ್ ಅಂಬೇಡ್ಕರ್', 'ಸೂರ್ಯನ ಕುದುರೆ' ಮತ್ತು 'ಊರುಕೇರಿ' ತರಹದ ನಾಟಕಗಳನ್ನು ಸಿದ್ಧಪಡಿಸಿ 350 ಕ್ಕೂ ಹೆಚ್ಚಿನ ಪ್ರದರ್ಶನಗಳನ್ನು ನಾಡಿನಾದ್ಯಂತ ನೀಡುವಂತೆ ಮಾಡಿದೆ. ಅದರಲ್ಲೂ 'ಊರುಕೇರಿ' ನಾಟಕ ಈಗಾಗಲೇ 109 ಯಶಸ್ವಿ ಪ್ರದರ್ಶನಗಳನ್ನು ಕಂಡಿದೆ.

ಇಲ್ಲಿ ಪ್ರತಿಭೆಯ ಬೆಂಕಿಯಲ್ಲಿ ಬಡವರು ಬೆಂದು ಚಿನ್ನದ ಪ್ರತಿಮೆಯಾಗಿ ಹೊರಬರುತ್ತಾರೆ. ಈ ಪ್ರತಿಮೆಗಳೇ ಹಿಜ್ರಾ ಒಬ್ಬಳ ಬದುಕನ್ನು ಆಧರಿಸಿ ರೇವತಿಯವರ 'ಬದುಕು-ಬಯಲು' ಕೃತಿಯನ್ನು ಅಭಿನಯಿಸಿದ್ದಾರೆ.

ಹಿಜ್ರಾಗಳ ಬದುಕು ಅಸ್ಪೃಶ್ಯರಿಗಿಂತ ಕಡೆಯಾದ ಬದುಕು. ಗಂಡು ಅಥವಾ ಹೆಣ್ಣಾಗಿ ಹುಟ್ಟಿದ ಯಾರಿಗೇ ಆಗಲಿ ಸಮಾಜದಲ್ಲಿ ಒಂದು ಅಸ್ತಿತ್ವ ಇರುತ್ತದೆ. ಆದರೆ ಗಂಡಾಗಿ ಹುಟ್ಟಿ ಹೆಣ್ಣುಮಕ್ಕಳ ಬಯಕೆಗಳನ್ನು ಹೊತ್ತು ಪರಿವರ್ತನೆಯಾದ ಹಿಜ್ರಾಗಳ ಬದುಕು ಯಾತನಾಮಯವಾದದ್ದು. ಇದನ್ನು ನಾಟಕದಲ್ಲಿ ರೇವತಿಯ ಪಾತ್ರಧಾರಿ ಅದ್ಭುತವಾಗಿ ತೋರಿಸಿದ್ದಾರೆ.


ರೇವತಿಯ ಕುಟುಂಬದ ಸದಸ್ಯರೇ ಅವಳ ಭಾವನೆಗಳನ್ನು ಅರ್ಥಮಾಡಿಕೊಳ್ಳುವುದಿಲ್ಲ. ಅವಳ ಅಣ್ಣ ಮತ್ತು ತಾಯಿ ರೇವತಿಯನ್ನು ಹೊಡೆಯುವುದು-ಬೈಯ್ಯುವುದು ಮಾಡುವಾಗ ರೇವತಿ ದೇವರಲ್ಲಿ "ನನ್ನನ್ನು ಗಂಡಾಗಿ ಇಲ್ಲವೇ ಹೆಣ್ಣಾಗಿ ಪರಿವರ್ತಿಸು, ಈ ನರಕಯಾತನೆಯಿಂದ ತಪ್ಪಿಸು" ಎಂದು ಪ್ರಾರ್ಥಿಸಿಕೊಳ್ಳುವ ಸನ್ನಿವೇಶ ಪ್ರೇಕ್ಷಕರ ಮನಸ್ಸನ್ನು ಕರಗಿಸುತ್ತದೆ.

ರೇವತಿ ಎಂಬುವರು ತಮಿಳುನಾಡಿನ ಸೇಲಂ ಜಿಲ್ಲೆಯ ನಮಕ್ಕಲ್ ತಾಲ್ಲೂಕಿನ ಪುಟ್ಟ ಹಳ್ಳಿಯಲ್ಲಿ ದೊರೈಸಾಮಿಯಾಗಿ ಹುಟ್ಟಿದವರು. ಗಂಡಾಗಿ ಹುಟ್ಟಿ ಹೆಣ್ಣಾಗಿ ಪರಿವರ್ತನೆಗೊಂಡು ಹಿಜ್ರಾಗಳ ಯಾತನಾಮಯ ಬದುಕನ್ನು ಅನುಭವಿಸಿದರು. ತನ್ನ ಸಮುದಾಯದ ಎಲ್ಲಾ ನೋವುಗಳಿಗೆ ಪ್ರತಿಸ್ಪಂದಿಸಲು ಹಿಜ್ರಾ ಸಾಮಾಜಿಕ ಕಾರ್ಯಕರ್ತೆಯಾಗಿ ತಮ್ಮನ್ನು ಇಂದಿಗೂ ತೊಡಗಿಸಿಕೊಂಡಿದ್ದಾರೆ. ಇವರ ಹೋರಾಟದ ಮುಖ್ಯ ಧ್ಯೇಯ "ಮನುಷ್ಯತ್ವದ ಹುಡುಕಾಟ"ವಾಗಿದೆ.

ಈ ನಾಟಕದಲ್ಲಿ ದೊರೈಸಾಮಿ ತನ್ನಲ್ಲಿ ಹೆಣ್ಣಿನ ಭಾವನೆಗಳು ಮೂಡುತ್ತಿದ್ದಂತೆ ಅದರಂತೆ ವರ್ತಿಸುತ್ತಿದ್ದದ್ದನ್ನು ಕಂಡು ಅವನನ್ನು ಹೊಡೆಯುತ್ತಿದ್ದ ಅಣ್ಣನ ಪಾತ್ರ ಸಮಾಜದಲ್ಲಿ ದೊರೈಸಾಮಿ ತರಹದವರ ನಡವಳಿಕೆಯಿಂದ ಜನ ಹೇಗೆ ತಮಗೆ ಮತ್ತು ತನ್ನ ಕುಟುಂಬಕ್ಕೆ ಅವಮಾನ ಎಂದು ಭಾವಿಸುತ್ತಾರೆ ಎಂಬುದನ್ನು ತೋರಿಸಲಾಗಿದೆ. ದೊರೆಸಾಮಿಯ ಭಾವನೆಗಳನ್ನು ಅರ್ಥಮಾಡಿಕೊಂಡ ಅವನ ತಂದೆ ಮಾತ್ರ ಯಾವಾಗಲೂ ದೊರೆಸಾಮಿಯ ಪರವಾಗಿಯೇ ನಿಂತುಕೊಂಡಿರುವುದು ಮತ್ತು ಇವನ ಉತ್ತಮ ಗುಣಗಳನ್ನು ದೇವರಿಗೆ ಹೋಲಿಸಿ "ನೀನು ದೇವರಿಗೆ ಹತ್ತಿರವಾದವನು" ಎಂದು ತನ್ನ ಮಗನನ್ನು ಪ್ರಶಂಸಿಸುವ ದೃಶ್ಯ ಬಹಳ ಚೆನ್ನಾಗಿ ಮೂಡಿಬಂದಿದೆ.

ದೊರೆಸಾಮಿ ತನ್ನ ಭಾವನೆಗಳನ್ನು ತನ್ನಂಥವರ ಬಳಿಯಲ್ಲಿಯೇ ವ್ಯಕ್ತಪಡಿಸಿಕೊಳ್ಳಬೇಕೆಂಬ ಹುಡುಕಾಟದಲ್ಲಿ ಮುಂಬೈಗೆ ಹೋಗಿ ಅಲ್ಲಿ ಹಿಜ್ರಾಗಳ ಒಬ್ಬ ಮುಖ್ಯಸ್ಥೆಯನ್ನು ಭೇಟಿಯಾಗುತ್ತಾನೆ. ಅವಳನ್ನೇ ತನ್ನ ತಾಯಿ ಎಂದು ಭಾವಿಸಿ ತನ್ನ ಮನದಾಳದ ಎಲ್ಲ ವಿಚಾರಗಳನ್ನು ಅವಳ ಬಳಿ ವ್ಯಕ್ತಪಡಿಸಿ ಅವಳಿಂದಲೇ 'ರೇವತಿ' ಎಂಬ ಹೆಸರನ್ನು ನಾಮಕರಣ ಮಾಡಿಕೊಳ್ಳುತ್ತಾನೆ.

ಹಿಜ್ರಾಗಳಿಗೆ ಹಿಂದಿನ ಕಾಲದಲ್ಲಿ ಬಹಳ ಪ್ರೀತಿ, ಗೌರವ ಸಿಗುತ್ತದೆಂಬುದನ್ನು ರಾಮಾಯಣದ ಒಂದು ಕಥೆಯ ಮೂಲಕ ತಿಳಿದುಕೊಂಡ ದೊರೆಸಾಮಿ ಇಂದು ನಮ್ಮ ಸಮಾಜವು ಈ ರೀತಿಯಾಗಿ ತಮ್ಮ ಮೇಲೆ ದೌರ್ಜನ್ಯ ಎಸಗುತ್ತಿರುವುದಕ್ಕೆ ವ್ಯಥೆ ಪಡುತ್ತಾನೆ. ಹಿಂದಿನ ಕಾಲದಲ್ಲಿ ಎಲ್ಲಾ ಮಂಗಳ ಕಾರ್ಯಗಳಿಗೆ ಮಂಗಳಮುಖಿಯರನ್ನು (ಹಿಜ್ರಾ) ಆಹ್ವಾನಿಸುವುದು ಸಾಮಾನ್ಯ ವಿಚಾರವಾಗಿತ್ತು, ಏಕೆಂದರೆ ಇವರು ಹೇಳುವುದೆಲ್ಲ ನಿಜವಾಗಲಿ ಎಂಬ ವರವನ್ನು ಶ್ರೀರಾಮ ಇವರಿಗೆ ನೀಡಿದ್ದ ಎಂಬುದು ಅಂದಿನ ಜನರ ನಂಬಿಕೆಯಾಗಿತ್ತು. ರಾಮಾಯಣದ ಈ ಕತೆಯನ್ನು ಮಂಗಳಮುಖಿಯರ ಮುಖ್ಯಸ್ಥೆ ಹೇಳುವ ದೃಶ್ಯ ನಾಟಕದಲ್ಲಿದೆ.



ದೊರೆಸಾಮಿ ತನ್ನ ಭಾವನೆಗಳನ್ನು ಅದಮಿಟ್ಟುಕೊಳ್ಳಲಾರದೆ ವೈದ್ಯರ ಬಳಿ ಲಿಂಗ ಶಸ್ತ್ರಚಿಕಿತ್ಸೆಯನ್ನು ಮಾಡಿಸಿಕೊಂಡು ಹೆಣ್ಣಾಗಿ ಪರಿವರ್ತನೆಯಾಗುವುದನ್ನು ಈ ನಾಟಕದಲ್ಲಿ ತೋರಿಸಲಾಗಿದೆ. ಈ ಮೂಲಕ ಹಿಜ್ರಾಗಳ ಮನಃಸ್ಥಿತಿಯನ್ನು ನಾವು ಅರ್ಥಮಾಡಿಕೊಳ್ಳಲು ಸಾಧ್ಯವಾಗಿಸುತ್ತದೆ.

ತಾನು ಬೇರೆ ಹೆಣ್ಣುಮಕ್ಕಳಂತೆ ಮದುವೆಯಾಗಿ ಸಂಸಾರ ಸುಖವನ್ನು ಪಡೆಯಲು ಸಾಧ್ಯವಾದ ಕಾರಣ ರೇವತಿ ಕಾಮದ ಬಯಕೆಯ ಈಡೇರಿಕೆಗಾಗಿ ವೇಶ್ಯಾವಾಟಿಕೆ ವೃತ್ತಿಗೆ ಹೋದರೂ ಆಕೆಯ ಮನಸ್ಸು ಅದಕ್ಕೆ ಒಪ್ಪದೇ ಹಿಂತಿರುಗಲು ಬಯಸಿದರು. ಒಮ್ಮೆ ಆಕೆ ಗೂಂಡಾಗಳಿಂದ ಅತ್ಯಾಚಾರಕ್ಕೆ ಒಳಪಡುವ ಸನ್ನಿವೇಶ ಪ್ರೇಕ್ಷಕರ ಮನಸ್ಸಿಗೆ ನೋವನ್ನುಂಟುಮಾಡುವಂತಿದೆ. ಇಂತಹ ಪರಿಸ್ಥಿತಿಯಲ್ಲಿ ಪೊಲೀಸರ ಕೈಗೆ ಸಿಕ್ಕಿ ಪೊಲೀಸ್ ಠಾಣೆಯಲ್ಲಿ ಅವಳನ್ನು ನಗ್ನಳನ್ನಾಗಿಸಿ ಅವಮಾನಗೊಳಿಸುವ ಸನ್ನಿವೇಶವೂ ಪ್ರೇಕ್ಷಕರ ಮನಸ್ಸನ್ನು ಗಾಯಗೊಳಿಸಿದಂತಿದೆ.

ತನ್ನ ತಮ್ಮ ದೊರೆಸಾಮಿಯ ಇಂತಹ ನಡವಳಿಕೆಯಿಂದ ಬೇಸತ್ತ ಅವನ ಅಣ್ಣ ಆಸ್ತಿಯಲ್ಲಿ ರೇವತಿಗೆ ಪಾಲನ್ನು ಕೊಡಲು ಒಪ್ಪದೇ ಇದ್ದಾಗ, ರೇವತಿಯ ತಂದೆ ಅವಳಿಗೆ ಆಸ್ತಿಯನ್ನು ಕೊಡಿಸಲು ಕೋರ್ಟಿನ ಮೆಟ್ಟಲು ಏರುತ್ತಾರೆ. ಆಗ ವಕೀಲರು ರೇವತಿಯು ದೊರೆಸಾಮಿಯಾಗಿ ವೇಷ ಬದಲಿಸಿಕೊಂಡು ಬಂದು ನ್ಯಾಯಾಲಯಕ್ಕೆ ಮನವಿ ಮಾಡಿಕೊಳ್ಳಬೇಕೆಂದು ಹೇಳುವ ಮೂಲಕ ಆತನ ಅವೈಜ್ಞಾನಿಕತೆಯನ್ನು ತೋರಿಸಿಕೊಳ್ಳುತ್ತಾನೆ. ಇದು ಸಮಾಜದ ಅವೈಜ್ಞಾನಿಕತೆಯಂತೆ ಬಿಂಬಿತವಾಗಿದೆ.


ಈ ಎಲ್ಲಾ ದೌರ್ಜನ್ಯಗಳಿಂದ ಬೇಸತ್ತು ಕೊನೆಗೆ ತನ್ನ ತಂದೆತಾಯಿಯ ಆಶ್ರಯವನ್ನು ರೇವತಿ ಪಡೆದುಕೊಳ್ಳುತ್ತಾರೆ. ಆಕೆಯ ತಾಯಿ ಸಾವು-ಬದುಕಿನ ನಡುವೆ ಹೋರಾಟ ಮಾಡುತ್ತಿದ್ದಾಗ ರೇವತಿಯೇ ಆಕೆಯ ಸಹಾಯಕ್ಕೆ ನಿಲ್ಲುತ್ತಾರೆ. ಆದರೆ ಆಕೆ ಎಷ್ಟೇ ಪ್ರಯತ್ನಪಟ್ಟರೂ ತಾಯಿಯನ್ನು ಉಳಿಸಿಕೊಳ್ಳಲಾಗುವುದಿಲ್ಲ. ಆಕೆಯ ತಂದೆ ರೇವತಿಯನ್ನು "ನೀನು ದೇವರಿಗೆ ಹತ್ತಿರವಾದವಳು" ಎಂದು ಪ್ರಶಂಸಿಸುವಾಗ ತನ್ನ ಮಗಳ ಬಗ್ಗೆ ತಂದೆಗೆ ಇರುವ ಅಭಿಮಾನ ಮತ್ತು ಗೌರವವನ್ನು ನಾಟಕದ ಕೊನೆಯ ಭಾಗದಲ್ಲಿ ಮೂಡಿಸಲಾಗಿದೆ. ಇದು ಕೊನೆಗೂ ರೇವತಿಯ ಬದುಕಿನಲ್ಲಿ ಶುಭ ಸಂಕೇತವಾಗಿ ಕಂಡುಬರುತ್ತದೆ.

ನಮ್ಮ ಸಮಾಜವು ಹಿಜ್ರಾಗಳನ್ನು ಕಡೆಗಣಿಸಿದ್ದರಿಂದಲೇ ಅವರು ಒರಟಾಗಿ ಕಾಣುತ್ತಾರೆ. ಅವರ ರೀತಿ-ರಿವಾಜು, ಹಾವಭಾವಗಳು ಪ್ರತಿಭಟನೆಯ ಅಸ್ತ್ರಗಳಾಗಿವೆ. ಅವರ ಜೋರಾದ ಕೈ ಚಪ್ಪಾಳೆಯ ಧ್ವನಿ ಅವರ ಅಂತರಾಳದ ನೋವಾಗಿದೆ. ಸಮಾಜದ ನಿರ್ಲಕ್ಷ್ಯದಿಂದಾಗಿಯೇ ಈ ಸಮುದಾಯಗಳು ಭಿಕ್ಷಾಟನೆ ಮತ್ತು ವೇಶ್ಯಾವಾಟಿಕೆಯಂತಹ ವೃತ್ತಿಗಳಲ್ಲಿ ತೊಡಗಿಸಿಕೊಂಡಿವೆ.

ಎಲ್ಲರಂತೆ ಶಿಕ್ಷಣ, ಉದ್ಯೋಗ, ವಸತಿ, ಸ್ಥಾನಮಾನ, ಗೌರವದಿಂದ ಬದುಕು ನಡೆಸುವ ಅವಕಾಶವನ್ನು ಇವರಿಗೆ ಸಮಾಜ ಕಲ್ಪಿಸಿಕೊಡಬೇಕಾಗಿದೆ.

ಈ ನಾಟಕದ ಪರಿಕಲ್ಪನೆ, ವಿನ್ಯಾಸ, ನಿರ್ದೇಶನವನ್ನು ಎಂ. ಗಣೇಶ್, ಹೆಗ್ಗೋಡು (ನೀನಾಸಂ)ರವರು ಮಾಡಿದ್ದು ಸಮಾಜದಲ್ಲಿ ಕಡೆಗಣಿಸಲ್ಪಟ್ಟಿರುವ ಹಿಜ್ರಾ ಸಮುದಾಯದ ನೋವನ್ನು ಈ ನಾಟಕದ ಮೂಲಕ ಸಮಾಜಕ್ಕೆ ತೋರಿಸಿಕೊಟ್ಟಿದ್ದಾರೆ. ಇಂತಹ ಪ್ರದರ್ಶನಗಳನ್ನು ಕಂಡ ನಂತರವಾದರೂ ಹಿಜ್ರಾಗಳನ್ನು ಕುರಿತು ನಮ್ಮ ಸಮಾಜದ ಗ್ರಹಿಕೆ ಬದಲಾಗಬೇಕಿದೆ. ಮಾತ್ರವಲ್ಲ ಇಂತಹವರ ನೆರವಿಗೆ ನಿಂತು ಅವರ ಅಭಿವೃದ್ಧಿಗಾಗಿ ಶ್ರಮಿಸಬೇಕಿದೆ.

● ಎಸ್. ಅಖ್ತರ್



ಕನ್ನಡಕ್ಕೆ ಸಂಗ್ರಹ ಅನುವಾದ: ನಡಹಳ್ಳಿ ವಸಂತ್

ಕಣ್ಣಿಗೆ ಬಿದ್ದ ನಾಯಕ

ಅದೊಂದು ಪ್ರಖರವಾದ ಬಿಸಿಲಿರುವ ಮಧ್ಯಾಹ್ನ. ಸಾಮಾನ್ಯವಾಗಿ ಕಾಡುಪ್ರಾಣಿಗಳು ಇಂತಹ ಸಮಯದಲ್ಲಿ ಹೊರಹೋಗುವುದಿಲ್ಲ. ವಸತಿಗೃಹದ ಜಗಲಿಯಲ್ಲಿ ಚಹಾ ಹೀರುತ್ತಾ ಕುಳಿತಿದ್ದ ನನಗೆ ದೂರದಲ್ಲಿದ್ದ ಹಳ್ಳದ ಬಳಿ ಏನೋ ಚಲಿಸಿದಂತೆ ಕಂಡಿತು. ಕೆಲವೇ ಕ್ಷಣಗಳಲ್ಲಿ ಹಳ್ಳದ ಹಿಂದಿದ್ದ ಹುಲ್ಲಿನ ಮೆಳೆಯಿಂದ ಚಿರತೆ ನಿಧಾನವಾಗಿ ಹೊರಬಂತು. ಏನಾದರೂ ಅಪಾಯದ ಸೂಚನೆಗಳಿರಬಹುದೇ ಎಂದು ಅದು ವಸತಿಗೃಹದ ಕಡೆಗೆ ದಿಟ್ಟಿಸಿ ನೋಡುತ್ತಿತ್ತು. ನಾನು ನಿಶ್ಚಲನಾಗಿ ಕುಳಿತಿದ್ದೆ. ಹಾಗಾಗಿ ಅದು ಮುಂದೆ ಬಂದು ಹಳ್ಳದ ನೀರನ್ನು ಕುಡಿಯತೊಡಗಿತು. ಹಾಗೆ ಕುಡಿಯುವಾಗಲೂ ನನ್ನ ಕಡೆ ಆಗಾಗ ನೋಡುತ್ತಲೇ ಇತ್ತು. ಇದು ಈ ಚಿರತೆಯೊಡನೆ ನನ್ನ ಪ್ರಥಮ ಭೇಟಿ.

ಮತ್ತೊಂದು ದಿನ ನಾನು ಬೆಳಗಿನ ನಡಿಗೆಯ ನಂತರ ಹಿಂತಿರುಗುತ್ತಿದ್ದೆ. ಆಗ ಕಾಡುಕೋಳಿಗಳ ಗುಂಪೊಂದು ಕೂಗುತ್ತಾ ಮೇಲೆ ಹಾರಿ ಮರವೊಂದರಲ್ಲಿ ಆಶ್ರಯ ಪಡೆದವು. ಅವು ನನ್ನ ಬರವನ್ನು ಗಮನಿಸಿರಬಹುದೇ ಎಂದುಕೊಳ್ಳುವಷ್ಟರಲ್ಲಿ ಪೊದೆಗಳ ಹಿಂದಿನಿಂದ ಹೊರಬಂದ ಅದೇ ಚಿರತೆ ಕೋಳಿಗಳಿದ್ದ ಮರವನ್ನೇರಲು ಹವಣಿಸಿತು. ಕಾಡುಕೋಳಿಗಳು ಮತ್ತೆ ದೂರ ಹಾರಿದಾಗ ಮರಕ್ಕೆ ಆತು ನಿಂತ ಚಿರತೆಗೆ ಏನೋ ಅಪಾಯದ ಸೂಚನೆ ಸಿಕ್ಕಿರಬೇಕು. ಕತ್ತನ್ನು ತಿರುಗಿಸಿ ನನ್ನನ್ನು ನೋಡಿದ ತಕ್ಷಣ ಮರದ ಹಿಡಿತವನ್ನು ಸಡಿಲಿಸಿ, ನಿಧಾನವಾಗಿ ನೆಲಕ್ಕೆ ಉರುಳಿ ಎದ್ದು ನಿಂತಿತು. ಕೆಲವು ಕ್ಷಣ ಸಾಕಿದ ನಾಯಿಯಂತೆ ಬಾಲವನ್ನಲ್ಲಾಡಿಸಿ ನಿಧಾನವಾಗಿ ಪೊದೆಗಳಲ್ಲಿ ಮರೆಯಾಯಿತು.

ಮೂರನೆಯ ಬಾರಿ ನಾನು ನನ್ನ ಫೋರ್ಡ್ ಕಾರಿನಲ್ಲಿ ವಸತಿಗೃಹದಿಂದ ಪೆನ್ನಾಗ್ರಾಮದ ಕಡೆ ಹೋಗುವಾಗ ಈ ಚಿರತೆಯನ್ನು ನೋಡಿದೆ. ತಿರುವೊಂದರಲ್ಲಿ ಕಾರನ್ನು ನಡೆಸುತ್ತಿದ್ದಾಗ ರಸ್ತೆಗೆ ಚಾಚಿಕೊಂಡಿದ್ದ ದೊಡ್ಡ ರೆಂಬೆಯೊಂದರ ಮೇಲೆ ಇದು ಅಡಗಿ ಕುಳಿತಿತ್ತು. ರೆಂಬೆಯ ಕೆಳಗಿನ ದಾರಿಯಲ್ಲಿ ಹಾದುಹೋಗುವ ಪ್ರಾಣಿಗಳನ್ನು ಬೇಟೆಯಾಡುವುದು ಇದರ ಹಂಚಿಕೆಯಾಗಿತ್ತು. ಕಾರು ಇಳಿಜಾರಿನಲ್ಲಿದ್ದುದರಿಂದ ಅದರ ಶಬ್ದ ಚಿರತೆಯ ಕಿವಿಗೆ ಬಿದ್ದಿರಲಿಲ್ಲ. ಕಾರು ರೆಂಬೆಯ ಕೆಳಗೆ ಬಂದಾಗ ಗಾಬರಿಗೊಂಡ ಚಿರತೆ ದಿಕ್ಕುದೆಸೆಯನ್ನು ನೋಡದೆ ಜಿಗಿಯಿತು. ಕಾರಿನ ಹಿಂದಿನ ಸೀಟಿನ ಮೇಲೆ ಬಿದ್ದ ಅದು ಮತ್ತೆ ಅಲ್ಲಿಂದ ಜಿಗಿದು ಪೊದೆಗಳಲ್ಲಿ ಮರೆಯಾಯಿತು. ಹಾಗೆ ಹೋಗುವಾಗ ಮೊದಲೇ ಹರಿದುಕೊಂಡಿದ್ದ ಕಾರಿನ ಸೀಟಿನಲ್ಲಿ ತನ್ನ ಹಿಂಗಾಲುಗಳ ಉಗುರಿನಿಂದ ದೊಡ್ಡ ತೂತೊಂದನ್ನು ಕೊರೆದು ಹೋಗಿತ್ತು!

ಜುಂಗಲ್‌ಪಾಳ್ಯಮ್‌ನ ರಸಿಕರು!

ಅದೇ ದಾರಿಯಲ್ಲಿ ಜುಂಗಲ್‌ಪಾಳ್ಯಮ್ ಎನ್ನುವ ಹಳ್ಳಿಯಿತ್ತು. ಇಲ್ಲಿನ ಜನ ಎಲ್ಲಾ ನಾಗರಿಕತೆಯಿಂದ ದೂರವಿದ್ದರೂ, ಹಸನ್ಮುಖರೂ ಮತ್ತು ತೃಪ್ತರೂ ಆಗಿದ್ದರು. ಇಲ್ಲಿಗೆ ಭೇಟಿ ನೀಡಿ ಜನರೊಡನೆ ಮಾತನಾಡುವುದು ನನಗೆ ಯಾವಾಗಲೂ ಖುಷಿಯ ವಿಚಾರವಾಗಿತ್ತು.

ಪ್ರತಿ ತಿಂಗಳು ಹುಣ್ಣಿಮೆಯ ಆಚೀಚೆ ನಾಲ್ಕೈದು ದಿನ ಹಳ್ಳಿಯ ಜನರೆಲ್ಲಾ ಸೇರಿ ರಾತ್ರಿ ಎಂಟರಿಂದ ಮಧ್ಯರಾತ್ರಿಯವರೆಗೆ ಆಟವಾಡುತ್ತಿದ್ದರು. ಹೆಣ್ಣು ಮಕ್ಕಳೆಲ್ಲಾ ಊರಿನ ಮಧ್ಯದಲ್ಲಿ ಸೇರಿ ಹಾಡುನೃತ್ಯಗಳಲ್ಲಿ ಸಂತೋಷವನ್ನು ಪಡೆದರೆ, ಗಂಡಸರು ಗುಡಿಸಲಿನಿಂದ ಸ್ವಲ್ಪ ದೂರದಲ್ಲಿ ನೆರೆದು ಬೇರೆಬೇರೆ ರೀತಿಯ ಆಟವಾಡುತ್ತಿದ್ದರು. ಇಂತಹ ಆಟಗಳಲ್ಲಿ ಅತ್ಯಂತ ಜನಪ್ರಿಯವಾದದ್ದು ಕಬಡ್ಡಿ-ಗೊಡ್ಡೋಗೊಡ್ಡೋ ಎನ್ನುವುದು ಅಲ್ಲಿನ ಪ್ರಾದೇಶಿಕ ಹೆಸರು- ಆಗಿತ್ತು. ನಾನೂ ಕೂಡ ಇಂತಹ ರಾತ್ರಿಗಳಲ್ಲಿ ಹಳ್ಳಿಯ ಜನರೊಡನೆ ಸೇರಿಕೊಂಡ ನನ್ನ ಕಬಡ್ಡಿಯ ಪರಿಣಿತಿಯನ್ನು ಪರೀಕ್ಷಿಸುತ್ತಿದ್ದೆ. ಅಲ್ಲಿನ ಯುವಕರನ್ನು ಹಿಡಿಯಲು ಪರದಾಡುತ್ತಿದ್ದ ನನ್ನ ಪಡಿಪಾಟಲನ್ನು ನೋಡಲು ಕೆಲವೊಮ್ಮೆ ಹೆಂಗಳೆಯರೂ ಸೇರುತ್ತಿದ್ದರು. ನಾನಿದ್ದ ತಂಡ ಯಾವಾಗಲೂ ಸೋಲುತ್ತಿದ್ದರೂ ನನ್ನನ್ನು ಸಂತೋಷಪಡಿಸಲು ಯಾರೂ ದೂರುತ್ತಿರಲಿಲ್ಲ!

ಚಿರತೆಯ ಆಕ್ರಮಣ


ಇಂತಹ ಒಂದು ರಾತ್ರಿಯನ್ನು ಚಿರತೆ ತನ್ನ ಆಕ್ರಮಣಕ್ಕಾಗಿ ಉಪಯೋಗಿಸಿತು. ನಾನು ಹಿಂದೆ ಕಾರಿನಲ್ಲಿ ಹೋಗುವಾಗ ಕುಳಿತಿದ್ದ ಮರದಿಂದಲೇ ಕೆಳಗೆ ಸಾಮಾನು ಹೊತ್ತು ಬರುತ್ತಿದ್ದ ಕತ್ತೆಯ ಮೇಲೆ ಆಕ್ರಮಣ ಮಾಡಿತ್ತು. ತಿರುವಿನ ಹಿಂದೆ ಹಣ್ಣನ್ನು ಕೀಳಲು ನಿಂತಿದ್ದ ಮಾಲಿಕನಿಗೆ ಕತ್ತೆ ಧಢ್ ಎಂದು ಬಿದ್ದ ಸದ್ದು ಮತ್ತು ಅದರ ನರಳಾಟ ಕೇಳಿತು. ಕತ್ತೆಗೆ ಯಾವುದೇ ಅಪಾಯದ ಸೂಚನೆ ಇರದಿದ್ದ ಕಾರಣ ಆ ವ್ಯಕ್ತಿ ಮುಂದೆ ಯಾವುದೋ ಕಾಡಾನೆ ಇರಬಹುದೆಂದು ಶಂಕಿಸಿದ. ತಿರುವಿನ ಅಂಚಿನಲ್ಲಿ ನಿಂತು ಸುತ್ತಲೂ ಕಣ್ಣಾಡಿಸಿದಾಗ ಆತ ದಂಗಾಗಿಹೋದ. ಸತ್ತ ಕತ್ತೆಯ ಕುತ್ತಿಗೆಯಲ್ಲಿ ತನ್ನ ಕಾಲಿನ ಉಗುರನ್ನು ನೆಟ್ಟಿದ್ದ ಚಿರತೆ ಅಲ್ಲಿಂದ ಹರಿಯುತ್ತಿದ್ದ ಬಿಸಿ ನೆತ್ತರನ್ನು ಆನಂದಿಸುತ್ತಾ, ಅದನ್ನು ರಸ್ತೆಯ ಬದಿಗೆ ಎಳೆದೊಯ್ಯುತ್ತಿತ್ತು.

ಆನೆಯನ್ನು ನಿರೀಕ್ಷಿಸಿ ಓಡಲು ಸಿದ್ಧನಾಗಿದ್ದ ಆ ಮನುಷ್ಯ ಚಿರತೆಯನ್ನು ಕಂಡು ಕೋಪದಿಂದ ಕೈಯಲ್ಲಿದ್ದ ಮರದ ಹಲಗೆಯನ್ನು ಝುಳಪಿಸುತ್ತಾ ಅದರತ್ತ ಮುನ್ನುಗ್ಗಿದ. ಆಗಷ್ಟೇ ಕೊಂದ ಬಲಿಯ ಬಿಸಿ ರಕ್ತ ಇನ್ನೂ ತನ್ನ ಹಲ್ಲುಗಳಲ್ಲಿ ಒಸರುತ್ತಿದ್ದ ಖುಷಿಯಲ್ಲಿದ್ದ ಚಿರತೆ ತನ್ನ ಭೋಜನವನ್ನು ಬಿಟ್ಟುಕೊಡುವ ಮನಸ್ಥಿತಿಯಲ್ಲಿರಲಿಲ್ಲ. ಆ ಮನುಷ್ಯ ಅದರತ್ತ ನುಗ್ಗಿದ ರೀತಿಗೆ ಚಿರತೆಗೆ ಓಡುವ ಅವಕಾಶವೂ ಇದ್ದಿರಲಾರದು. ಹಲಗೆಯಿಂದ ಧಡಾರನೆ ಚಿರತೆಯ ಬೆನ್ನಿಗೆ ಆ ಮನುಷ್ಯ ಬಡಿದಾಗ ಅದು ಅವನತ್ತ ಆಕ್ರಮಣ ಮಾಡಿತು. ಉದ್ದವಾಗಿ ಬೆಳೆದಿದ್ದ ಅವನ ಗಡ್ಡದಿಂದಾಗಿ ಗುರಿ ಹಿಡಿಯಲಾಗದ ಚಿರತೆ ಅವನ ಕುತ್ತಿಗೆಗೆ ಬದಲಾಗಿ ಎದೆಗೆ ಗುದ್ದಿ ಹಲ್ಲುಗಳನ್ನು ನೆಟ್ಟಿತು. ಆಯತಪ್ಪಿ ಹಿಂದೆ ಬಿದ್ದ ಆ ಮನುಷ್ಯ ಜೋರಾಗಿ ಕಿರುಚತೊಡಗಿದ.

ನಾನು ಆಗ ಗೆರ್ಹಟ್ಟಿಯ ಹಾಡಿಯ ಹಿಂದಿನ ಇಳಿಜಾರಿನ ಕಾಡಿನಲ್ಲಿ ನನ್ನ ಕಸಿನ್ ಒಬ್ಬನಿಗಾಗಿ ಒಂದು ರೀತಿಯ ವೀಳ್ಯದ ಎಲೆಯ ಹುಡುಕಾಟದಲ್ಲಿದ್ದೆ. ನನಗೆ ಈ ವ್ಯಕ್ತಿಯ ಕಿರುಚಾಟ ದೂರದಲ್ಲಿ ಕೇಳಿಸಿತು. ಬಹುಶಃ ಆನೆಯೊಂದು ಯಾರನ್ನೋ ಸಾಯಿಸುತ್ತಿದೆ ಎಂದುಕೊಳ್ಳುತ್ತಾ ಶಬ್ದ ಬಂದ ದಿಕ್ಕಿಗೆ ಓಡತೊಡಗಿದೆ. ದುರಾದೃಷ್ಟವೆಂದರೆ ಯಾವುದೇ ಅಪಾಯದ ಮುನ್ಸೂಚನೆ ಇಲ್ಲದಿದ್ದರಿಂದ ನಾನು ನನ್ನ ಬಂದೂಕನ್ನು ವಸತಿಗೃಹದಲ್ಲಿಯೇ ಬಿಟ್ಟು ಬಂದಿದ್ದೆ.

ಸ್ವಲ್ಪ ಮುಂದೆ ಬರುವಷ್ಟರಲ್ಲಿ ಕ್ಷೀಣವಾಗಿ ಕೇಳಿಸುತ್ತಿದ್ದ ಧ್ವನಿ ನಿಂತುಹೋಗಿತ್ತು. ಹಾಗಾಗಿ ನನಗೆ ಅಲ್ಲಿಂದ ಯಾವ ದಿಕ್ಕಿನಲ್ಲಿ ಹೋಗಬೇಕೆಂದು ತಿಳಿಯಲಿಲ್ಲ. ಆನೆ ಆಕ್ರಮಣ ಮಾಡಿರುವುದಾದರೆ ಅದು ಜುಂಗಲ್‌ಪಾಳ್ಯದ ರಸ್ತೆಯಲ್ಲಿಯೇ ಇರಬೇಕೆಂದು ಊಹಿಸಿ ಅತ್ತಕಡೆ ಏಳುತ್ತಾಬೀಳುತ್ತಾ ಓಡಿದೆ.

ಆನೆಯನ್ನು ನಿರೀಕ್ಷಿಸಿ ಓಡಲು ಸಿದ್ಧನಾಗಿದ್ದ ಆ ಮನುಷ್ಯ, ಚಿರತೆಯನ್ನು ಕಂಡು ಕೋಪದಿಂದ ಕೈಯಲ್ಲಿದ್ದ ಮರದ ಹಲಗೆಯನ್ನು ಝುಳಪಿಸುತ್ತಾ ಅದರತ್ತ ಮುನ್ನುಗ್ಗಿದ. ಆಗಷ್ಟೇ ಕೊಂದ ಬಲಿಯ ಬಿಸಿ ರಕ್ತ ಇನ್ನೂ ತನ್ನ ಹಲ್ಲುಗಳಲ್ಲಿ ಒಸರುತ್ತಿದ್ದ ಖುಷಿಯಲ್ಲಿದ್ದ ಚಿರತೆ ತನ್ನ ಭೋಜನವನ್ನು ಬಿಟ್ಟುಕೊಡುವ ಮನಸ್ಥಿತಿಯಲ್ಲಿರಲಿಲ್ಲ. ಆ ಮನುಷ್ಯ ಅದರತ್ತ ನುಗ್ಗಿದ ರೀತಿಗೆ ಚಿರತೆಗೆ ಓಡುವ ಅವಕಾಶವೂ ಇದ್ದಿರಲಾರದು. ಹಲಗೆಯಿಂದ ದಢಾರನೆ ಚಿರತೆಯ ಬೆನ್ನಿಗೆ ಆ ಮನುಷ್ಯ ಬಡಿದಾಗ ಅದು ಅವನತ್ತ ಆಕ್ರಮಣ ಮಾಡಿತು.



ಮುಖ್ಯ ರಸ್ತೆಯನ್ನು ತಲುಪಿದಾಗ ಯಾವ ಅಪಾಯದ ಸೂಚನೆಯೂ ಕಾಣದೆ ಎತ್ತಕಡೆ ಹೋಗುವುದೆಂದು ತಿಳಿಯದಾಯಿತು. ಕೊನೆಗೆ ಜುಂಗಲ್‌ಪಾಳ್ಯದ ಹಾಡಿಯ ಕಡೆಗೆ ಹೋಗುವುದೆಂದು ನಿರ್ಧರಿಸಿ, ಕೋಪಗೊಂಡ ಆನೆಯ ನಿರೀಕ್ಷೆಯಲ್ಲಿ ಮೈಯೆಲ್ಲಾ ಕಣ್ಣಾಗಿಸಿಕೊಂಡು ಸದ್ದಿಲ್ಲದೆ ನಡೆಯತೊಡಗಿದೆ.

ಮೊದಲನೆಯ ನರಬಲಿ

ಯಾವುದೇ ಪ್ರತ್ಯುತ್ತರ ಬರದಿದ್ದರೂ ಜೋರಾಗಿ ಮತ್ತೆ ಮತ್ತೆ ಕರೆಯುತ್ತಾ ರಸ್ತೆಯ ಅದೇ ತಿರುವಿನತ್ತ ತಲುಪಿದೆ. ಅಲ್ಲಿ ಆ ವ್ಯಕ್ತಿ ಸತ್ತ ಕತ್ತೆಯ ಪಕ್ಕ ಬಿದ್ದುಕೊಂಡಿದ್ದ. ಮನುಷ್ಯರ ಬಗೆಗೆ ಮೂಲಭೂತವಾಗಿ ಹೆದರಿಕೆಯುಳ್ಳ ಚಿರತೆ ಈ ವ್ಯಕ್ತಿಯ ಮೇಲೆ ಅನಿವಾರ್ಯವಾಗಿ ಆಕ್ರಮಣ ಮಾಡಿದ್ದರೂ ನಂತರದ ಅವನ ಕೂಗಾಟದಿಂದ ಓಡಿಹೋಗಿರಬೇಕು. ನಾನು ಮಾತನಾಡಿಸಿದಾಗ ಆ ವ್ಯಕ್ತಿ ತನ್ನ ಹೆಸರು ಮತ್ತು ಘಟನೆಯ ವಿವರಗಳನ್ನು ಹೇಳುತ್ತಾ ಎಚ್ಚರ ತಪ್ಪಿದ. ತಡಮಾಡದೆ ಅವನನ್ನು ಹೆಗಲ ಮೇಲೆತ್ತಿಕೊಂಡ ವಸತಿಗೃಹದ ಕಡೆ ನಡೆಯತೊಡಗಿದೆ. ಅಲ್ಲಿಂದ ಅವನನ್ನು ನನ್ನ ಕಾರಿನಲ್ಲಿ ಬೆಂಗಳೂರಿನ ಆಸ್ಪತ್ರೆಗೆ ಸಾಗಿಸುವುದು ನನ್ನ ಉದ್ದೇಶವಾಗಿತ್ತು.

ದುರಾದೃಷ್ಟವೆಂದರೆ ನಾನು ಅವನನ್ನು ವಸತಿಗೃಹದ ಹಜಾರದಲ್ಲಿ ಮಲಗಿಸುವಷ್ಟರಲ್ಲಿ ಸಾವಿನ ಮುನ್ಸೂಚನೆಗಳು ಕಾಣತೊಡಗಿದವು. ಎದೆಯ ಮೇಲಿನ ಗಾಯದಿಂದ ಮತ್ತು ಬಾಯಿಯಿಂದ ಕೂಡ ರಕ್ತ ಬರತೊಡಗಿತು. ಚಿರತೆಯ ಏಟಿಗೆ ಅವನ ಶ್ವಾಸಕೋಶ ನಜ್ಜುಗುಜ್ಜಾಗಿತ್ತು. ನಾನು ಅವನನ್ನು ಎತ್ತಿ ಕಾರಿಗೆ ಹಾಕುವಷ್ಟರಲ್ಲಿ ಅವನು ಕೊನೆಯುಸಿರೆಳೆದ.

ಮುಂದೆ ಮಾಮೂಲಿನಂತೆ ಸರ್ಕಾರೀ ಅಧಿಕಾರಿಗಳಿಗೆ ಎಲ್ಲವನ್ನೂ ವಿವರಿಸುವ ಕಷ್ಟವನ್ನು ಎದುರಿಸಬೇಕಾಯಿತು. ಇವನ ಸಾವಿನ ಬಗೆಗಿನ ಪೊಲೀಸ್ ವಿಚಾರಣೆ ನಡೆಯುತ್ತಿರುವಾಗಲೇ ನಾನು ಸುತ್ತಲಿನ ಗ್ರಾಮಗಳಿಗೆ ಹೋಗಿ ಈ ಚಿರತೆ ಅಪಾಯಕಾರಿಯಾಗಬಹುದಾದ ಬಗೆಗೆ ಎಚ್ಚರಿಕೆ ನೀಡಿದೆ.

(ಮುಂದುವರೆಯುವುದು)

ಒಂದು ಹೆದ್ದಾರಿಯ ಹೆಣ

ಈಗ
ಸ್ವಲ್ಪ ಹೊತ್ತಿನ ಮುಂಚೆ
ಯಾವುದೋ ವಾಹನವೊಂದು
ದಿಕ್ಕಿಲ್ಲದ ಹಕ್ಕಿಗೆ
ಡಿಕ್ಕಿ ಹೊಡೆದು
ದಾರಿಯ
ಹೆಣವಾಗಿಸಿ ಮುಂದೆ ಸಾಗಿದೆ

ಬಿಸಿ ರಕ್ತ ಬಿಡಿಸಿದ
ಬಣ್ಣದ ಚಿತ್ತಾರ
ಫೇಟ್ ಚಿತ್ರಕಾರನನ್ನೇ ಹೋಲುತ್ತಿದೆ
ಬಾಯಾರಿದ ಕುಂಚ
ಕೆಂಪು ಬಣ್ಣಕ್ಕೆ ಕಾತರಿಸುತ್ತಿದೆ

ಕಣ್ಣಲ್ಲಿ ಹನಿ ನೀರಿಲ್ಲದ
ಖಾಲಿ ಕೊಡಗಳಂಥ
ಮೋಡಗಳು
ಈಗೀಗ ಅಳುವುದನ್ನೇ ಮರೆತುಬಿಟ್ಟಿವೆ
ಆಕಾಶ
ತುಂಬಾ ಎತ್ತರದಲ್ಲಿದೆ


ಆಳ ಕಣಿವೆಯ
ಎದೆಯಾಳದಿ
ಹೇಳಲಾರದ ದುಃಖವ ಹುಗಿದ
ಡಾಂಬರು ರಸ್ತೆಯು
ತುಟಿಯೊಡೆದ ಕಂದನಂತೆ
ಮೌನ
ತಾನಾಗಿ ಬಿಕ್ಕುತಿದೆ

ಒಂದರ ಮೇಲೊಂದು
ಕಾರು ಲಾರಿ ಬಸ್ಸುಗಳು
ಭರ್ರನೆ ಹರಿದು
ನೆತ್ತರು ಸೋಕಿದ ಕಲೆಯ
ಗುರುತೂ ಸಿಕ್ಕದೆ
ಮೋಕ್ಷ ಪಡೆಯಿತು ಅನಾಥ ಪಕ್ಷಿ

ಎಂದಿನಂತೆ
ನ್ಯಾಯಾಲಯದ ಕಟಕಟೆಯಲ್ಲಿ
ಕಣ್ಣು ಕಟ್ಟಿಕೊಂಡ ನ್ಯಾಯ
ದ
ದೇವತೆ
ಕನಸು ಕಾಣುತ್ತಿದ್ದಾಳೆ

ಅಭಿವೃದ್ಧಿಯ ಪಥದಲ್ಲಿ
ದೇಶ ಪ್ರಕಾಶಿಸುತ್ತಿದೆ.

- ವಿ.ಹರಿನಾಥ ಬಾಬು,
ಹೊಸಪೇಟೆ



ವಂಚಕ ರಿಪ್ಪನ್ ಮಲ್ಹೋತ್ರಾ...

<<<11ನೇ ಪುಟದಿಂದ

ಹೀಗೆ ಕೈಹಾಕಿದ ಕಡೆಯೆಲ್ಲಾ ಹಣ ಕಳೆದುಕೊಂಡ ರಿಪ್ಪನ್ ತನ್ನ ಹೂಡಿಕೆದಾರರಿಗೆ ಲಾಭ ನೀಡುವುದನ್ನು ಮೊದಲು ನಿಲ್ಲಿಸಿಬಿಟ್ಟ. ಯಾಕೆಂದು ಕೇಳಲು ಬಂದವರಿಗೆ 'ನಿಮಗೆ ಅಸಲು ಸಿಗುವುದೂ ಕಷ್ಟ' ಎಂದು ಸಬೂಬು ಹೇಳತೊಡಗಿದ. ಆಗ ಗಾಬರಿಯಾದ ಪ್ರತಿಭಾವಂತ ಹೂಡಿಕೆದಾರರು ಪೊಲೀಸರಿಗೆ ಕಂಪ್ಲೇಂಟ್ ಕೊಡಲು ಶುರು ಮಾಡಿದರು.

ಯಾವಾಗ ಪೊಲೀಸರ ವಿಚಾರಣೆ ಶುರುವಾಯಿತೊ ರಿಪ್ಪನ್ ಕಂಗಾಲಾದ. ಅವನ ಕನಸಿನ, ಮಹತ್ವಾಕಾಂಕ್ಷೆಯ ಉದ್ಯಮ ಸಾಮ್ರಾಜ್ಯ ಕುಸಿದು ಬಿದ್ದಿತ್ತು. ತಾನು ಕಾಯ್ದೆ ಕಾನೂನು ಉಲ್ಲಂಘಿಸಿ, ಜನರಿಗೆ ವಂಚಿಸಿ, ನೂರಾರು ಕೋಟಿ ರೂಪಾಯಿ ಲಾಸ್ ಆಗಲು ಕಾರಣನಾಗಿದ್ದೇನೆಂಬುದು ಅವನಿಗೇ ತಿಳಿದಿತ್ತು.

ಇಂಥ ರಿಪ್ಪನ್‌ಗೆ ಇದ್ದ ಆಯ್ಕೆ ಎರಡೇ!

ಒಂದೋ ಸಿಕ್ಕಷ್ಟು ಹಣ ಎತ್ತಿಕೊಂಡು ತಲೆ ಮರೆಸಿಕೊಂಡು ಓಡಿಹೋಗುವುದು!

ಇಲ್ಲ ಪೊಲೀಸರ ಕೈಗೆ ಸಿಕ್ಕು ಜೈಲು ಪಾಲಾಗುವುದು!!

ಆದರೆ ರಿಪ್ಪನ್ ಬರಿಗೈಯಾಗಿದ್ದ. ತಲೆಮರೆಸಿಕೊಂಡು ಓಡಿದರೂ ಬದುಕಲು ಬೇಕಿದ್ದಷ್ಟು ಹಣ ಇರಲಿಲ್ಲ. ಉಳಿದಂತೆ ಬದುಕಿರುವಷ್ಟೂ ದಿನ ಜೈಲುವಾಸವೇ ಕಾಯಂ ಎಂಬ ಸ್ಥಿತಿ ಎದುರಿಗಿತ್ತು.

ಹಾಗಾಗಿ ರಿಪ್ಪನ್ ಯಾರೂ ಊಹಿಸಿರದಿದ್ದ ಮೂರನೇ ದಾರಿ ಹಿಡಿದು, ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಖರೆ ಅಂದ್ರ ನಾನೇ ಬಸವರಾಜ ಹೊರಟ್ಟೀರಿ!

ಅಧಿಕಾರ ಕಳೆದುಕೊಂಡ ಒಂದೇ ತಿಂಗಳಿಗೆ ಪ್ರವಾಹ ಸ್ಥಿತಿ ಪರಿಸ್ಥಿತಿ ಎದುರಿಸುತ್ತಿರುವ ಬಿಜೆಪಿಯ ಬಕರಾಗಳು, ಹುಚ್ಚರಂತೆ ವರಲುತ್ತ "ಎಲ್ಲಿದಿಯಪ್ಪಾ ಎಡೂರಪ್ಪ, ಬೇಗ ಬಾ ಕಾಪಾಡು. ಮುಂದಿನ ಲೋಕಸಭಾ ಚುನಾವಣೆಯಲ್ಲಾದರು ನಮ್ಮನ್ನು ಕಾಪಾಡು ತಂದೆ" ಎಂದು ಕೂಗುತ್ತಿವೆಯಂತಲ್ಲಾ. ಈ ಕೂಗಿನ ಸದ್ದನ್ನೂ ಕೇಳಿಕೊಳ್ಳಲಾಗದ ಈಶ್ವರಪ್ಪ ಎಂಬ ದಾನವ ಸಿಡಿಲಿಗೊಂಡು "ಎಡೂರಪ್ಪನನ್ನು ಕರೆ ತರುವುದು ನಮ್ಮ ಕೈಯಲ್ಲಿಲ್ಲ. ಅದೇನಿದ್ದರೂ ಕೇಂದ್ರದ ವರಿಷ್ಠರಿಗೆ ಬಿಟ್ಟ ವಿಚಾರ" ಎಂದು ಇತ್ತ ಹೇಳುತ್ತಲೇ ಅತ್ತ ಈ ಎಡೂರಪ್ಪ ಬಿಜೆಪಿ ಬಾಗಿಲಿಗೆ ಬರದಂತೆ ತಡೆಯಬೇಕಾದರೆ ಏನು ಮಾಡಬೇಕೆಂದು ಯೋಚಿಸತೊಡಗಿದರಂತಲ್ಲಾ.

ಈ ನಡುವೆ ಮತ್ತೊಬ್ಬ ಈಶ್ವರಪ್ಪನ ಆಪ್ತನಲ್ಲದ ಅವಮಾನಾಸ್ಪದ ಗೆಳೆಯ ಆಯನೂರು ಮಂಜುನಾಥ್ "ಎಡೂರಪ್ಪ ಮಹಾ ಸಮರ್ಥ ನಾಯಕನೇ ಆಗಿದ್ದರೆ ಅವನಿಗೆ ನಲವತ್ತು ಸೀಟು, ನಮಗೆ ಆರು ಸೀಟು ಬರಬೇಕಿತ್ತು. ಆದರೆ ಫಲಿತಾಂಶ ಉಲ್ಟಾ ಆಗಿರುವುದರಿಂದ ನಾವು ನಮ್ಮ ಸೀಟನ್ನ ಹೆಚ್ಚಿಸಿಕೊಳ್ಳುವತ್ತ ಗಮನ ಹರಿಸಬೇಕೆ ಹೊರತು ಎಡೂರಪ್ಪನಿಗೆ ಕಾಯಬಾರದು" ಎಂದನಂತಲ್ಲಾ. ಇದರಿಂದ ಕೆಂಡಮಂಡಲವಾದ ರೇಣುಕೆಯ ಭಕ್ತ "ಈ ಆಯನೂರು ಮಂಜುನಾಥ ಆಯಿಕೊಂಡು ತಿನ್ನುವ ಗಿರಾಕಿ. ಜನತಾ ಕ್ಕೇ ಕಾಂಗ್ರೆಸ್‌ಗೆ ಹೋಗಿ, ಅಲ್ಲಿಂದ ಮಲ್ಯನ ಬಳಿಗೆ ಹೋಗಿ, ಕಡೆಗೆ 'ಅದೇ ತಿಂತಿನಿ ಕದ ತೆಗಿ' ಎನ್ನುವಂತೆ ಬಿಜೆಪಿಗೆ ಬಂದವನು. ಇಂತವನ ಸ್ಥಿತಿ ನಮ್ಮ ಪ್ರತ್ಯಕ್ಷ ದೈವ ಎಡೂರಪ್ಪನಿಗೇನೂ ಬಂದಿಲ್ಲ, ಬದಲಿಗೆ ಬಿಜೆಪಿಗಳೇ ಬೇಡಿಕೊಳ್ಳುತ್ತಿದ್ದಾರೆ. ಹೆಚ್ಚಿಗೆ ಮಾತನಾಡಿದರೆ ಕೆಜೆಪಿಗೆ ಬಂದು ನೋಡಿಕೊಳ್ಳುತ್ತೇನೆ" ಎಂದನಂತಲ್ಲಾ, ಥೂತ್ತೇರಿ!

* * *

ರೇಣುಕಾಚಾರಿಯ ಗದರಿಕೆ ಕೇಳಿಸಿಕೊಂಡ ಕಾಂಗ್ರೆಗಳು ಹೀಗೆ ನೋಡಿದರೆ, ರೇಣು, ಯಡ್ಡಿ, ಬಡ್ಡಿಗಳೆಲ್ಲಾ ಬಹಳ ಬದಲ್ಲೇನೂ ಇಲ್ಲ. ಬಿಜೆಪಿ ತೆಕ್ಕೆಯಲ್ಲಿವೆ. ಆ ಬಿಜೆಪಿ ಎಂತಹ ಪಾರ್ಟಿ ಎಂದರೆ ಬಳ್ಳಾರಿ ಶಾಂತ 'ನಾನು ಬಿಆರ್‌ಎಸ್ ಕಾಂಗ್ರೆಸ್' ಎಂದರೂ ತಲೆ ಕೆಡಿಸಿಕೊಳ್ಳಲಿಲ್ಲ, ಸ್ವತಃ ಎಡೂರಪ್ಪನ ಮಗ ರಾಘವೇಂದ್ರ 'ನಾನು ಕೆಜೆಪಿ ಸಂಸದನೇ ಹೊರತು ಬಿಜೆಪಿಯವನಲ್ಲ' ಎಂದರೂ ಕೇಳಿಸಿಕೊಳ್ಳಲಿಲ್ಲ, ಒಂದೂವರೆ ವರ್ಷದಿಂದ ಜನಾರ್ದನ ರೆಡ್ಡಿ ಜೈಲಿನಲ್ಲಿದ್ದರೂ ಅವನನ್ನು ಪಾರ್ಟಿಯಿಂದ ತೆಗೆಯಲಿಲ್ಲ, ಲಂಚ ತೆಗೆದುಕೊಳ್ಳುವಾಗ ಎಲ್ಲೊ ಹ್ಯಾಂಡಿನಲ್ಲಿ ಸಿಕ್ಕವರನ್ನೂ ಪಾರ್ಟಿಯಿಂದ ತೆಗೆದಿಲ್ಲ, ಅಂತಾದ್ದರಲ್ಲಿ ಯಡ್ಡಿಯ ಟೀಮು ಹೊರಗಿದ್ದರೇನು, ಒಳಗಿದ್ದರೇನು'' ಎಂದು ತರ್ಕಿಸಿದವಂತಲ್ಲಾ.



ಇತ್ತ ಚೆಡ್ಡಿಗಳು ಸಿಲ್ಕ್‌ಮಿಕ್ಸ್ ಚೆಡ್ಡಿ ಹೊಲಿಸಿಕೊಂಡು, ಹೊಸಾ ಬದಿರು ದೊಣ್ಣೆಗೆ ಪಾಲಿಷ್ ಹಾಕುತ್ತ ಎಡೂರಪ್ಪನ ಆಗಮನ ನಿರೀಕ್ಷೆಯಲ್ಲಿದ್ದರೆ, ಅತ್ತ ಬೇಲೆಕೇರಿಯಲ್ಲಿ ಮಾಯವಾದ ಅದಿರನ್ನ ಹುಡುಕುತ್ತಿರುವ ಅಧಿಕಾರಿಗಳು ಯಾರನ್ನ ವಿಚಾರಿಸಿದರೂ ಅಂದಿನ ಅರಣ್ಯಮಂತ್ರಿ- ಗಣಿಮಂತ್ರಿ- ಮುಖ್ಯಮಂತ್ರಿಯತ್ತಲೇ ಸಾಕ್ಷಿಯ ದಿಕ್ಸೂಚಿಗಳು ತಿರುಗುತ್ತಿವೆಯಂತಲ್ಲಾ, ಇದಲ್ಲವೇ ಚದುರಂಗದಾಟ, ಥೂತ್ತೇರಿ!

* * *

ಮುಂದಿನ ಡಿಸೆಂಬರ್ ತಿಂಗಳಿಗೆ ಲೋಕಸಭಾ ಚುನಾವಣೆ ಬಂದೇ ಬರುತ್ತದೆಂಬ ಸುಳಿವು ಸಿಕ್ಕ ಕೂಡಲೇ ಖುದೂರನೆ ಎದ್ದು ಕುಳಿತ ಮಾಜಿ ಪ್ರಧಾನಿಗಳಾದ ದೇವೇಗೌಡರು ಸಹಾಯಕರ ಭುಜಬಲದ ಆಶ್ರಯದಲ್ಲಿ ನಡೆಯುತ್ತಾ ಬಂದು ಕಡೂರು ರೈಲ್ವೆ ಸ್ಟೇಷನ್ ಬಳಿ ಕಾಣಿಸಿಕೊಂಡರಂತಲ್ಲಾ, ದೇವೇಗೌಡರು ಕಂಡಕೂಡಲೇ ಕಡೂರಿನ ಜನ "ಈ ಪ್ರಾಂತ್ಯದಲ್ಲಿ ಯಾವುದೋ ತಿಥಿ ಇರಬಹುದು, ಇಲ್ಲ ಹೆಗ್ಗಾಳವಂತರ ಮನೆ ಮದುವೆ ಇರಬಹುದು" ಎಂದು ಯೋಚಿಸಿದರಂತಲ್ಲಾ.

ಗೌಡರು ಶಾನೇ ಸಿಟ್ಟು ಮತ್ತು ಸಿಡುಕಿನಿಂದ "ಈ ರೈಲ್ವೆ ನಿಲ್ದಾಣದ ಸಮಸ್ಯೆಗಳು ನನ್ನ ಗಮನಕ್ಕೆ ಬಂದಿವೆ. ಮುಖ್ಯವಾಗಿ ಕಾಮಗಾರಿ ಕಳಪೆಯಾಗಿವೆ. ಟಿಕೆಟ್ಟಿಗಾಗಿ ಕ್ಯೂ ನಿಂತವರನ್ನು ತಳ್ಳಿ ಜಾಗ ಮಾಡಿಕೊಂಡು ರೈಲಿನ ಕಡೆ ಓಡಬೇಕಿದೆ. ಕುಡಿಯುವ ನೀರು, ವಿಶ್ರಾಂತಿ ತಾಣ, ಶೌಚಾಲಯವೂ ಇಲ್ಲದ್ದು ನನ್ನ ಗಮನಕ್ಕೆ ಬಂದಿದೆ" ಎನ್ನುತ್ತಿರುವಾಗ ರೈಲು ಪ್ರಯಾಣಿಕನೊಬ್ಬ "ನೀವು ಮಾಜಿ ಪ್ರಧಾನಿಗಳೇ ಆಗಿದ್ರೆ ನಾಲ್ಕು ಎಕ್ಸ್‌ಪ್ರೆಸ್ ಗಾಡಿಗಳು ಇಲ್ಲಿ ನಿಂತು ಹೋಗಂಗೆ ಮಾಡಿ ನೋಡನ" ಎಂದನಂತಲ್ಲಾ, ಥೂತ್ತೇರಿ!

* * *

ಬೆಂಗಳೂರಿನ ಆನಂದರಾವ್ ಸರ್ಕಲ್ ಬಳಿಯಿರುವ ಟೂರಿಸ್ಟ್ ಹೋಟೆಲ್ ಕಡೆ ಹೋಗುತ್ತಿರಬೇಕಾದರೆ, ನಮ್ಮ ಬಸವರಾಜ ಹೊರಟ್ಟಿಯವರನ್ನು ಹೋಲುವ ವ್ಯಕ್ತಿಯೊಂದು ಮಾರ್ಗಾವಣೆ ತಡೆಹಿಡಿಯಲು ಬಂದ ಉಪಾಧ್ಯಾಯನಂತೆ ದಾಪುಗಾಲು ಹಾಕುತ್ತಿತ್ತಲ್ಲಾ. ಆದರೆ ಮುಖದಲ್ಲಿ ಹೊರಟ್ಟಿ ಕಳೆ ಇರಲಿಲ್ಲವಾದ್ದರಿಂದ, ಅನುಮಾನಗೊಂಡು ಹತ್ತಿರ ಹೋಗಿ, ಆದದ್ದಾಗಲಿ ಎಂದು "ನಮಸ್ಕಾರ್ರಿ ಸರ್" ಎನ್ನಲಾಗಿ,

ಥೂತ್ತೇರಿ

ಯಾಹೂ

"ನಮಸ್ಕಾರ್ರಿ. ಯಾರಿ ನೀವು?"

"ನಾನು ಯಾಹು ಅಂತ್ರೀ ಸರ. ನಿಮ್ಮ ನೋಡಿ ಒಂದ ನಮೂನಿ ಆತು. ಅದಕ ನಮಸ್ಕಾರ ಅಂದಿನಿ ಸರ."

"ನನ್ನ ನೋಡಿ ಯದಕ್ಕ ಒಂದ ನಮೂನಿ ಆತ್ರಿ?"

"ಏನಿಲ್ರೀ ಸರ. ನಾನು ಒಂದೀಟು ಗೌರವ ಕೊಡೊ ರಾಜಕಾರಣಿ ಅದಾನ. ನಿಮ್ಮನ್ನ ನೋಡಿದ ಕೂಢ್ಲೆ ಅವ ನೆಪ್ಪಿಗ ಬಂದ. ಅದಕ ನಾನು ಮಾತಾಡಿಸಿದ್ನಿ ಸರ."

"ಯಾರ್ರಿ, ಅವ ಈ ಕಾಲ್ದಾಗೂ ಗೌರವ ಉಳಿಸಿಕೊಂಡಿರೊ ರಾಜಕಾರಣಿ?"

"ಏ, ಬಾಳ ಛೇಷ್ ಅದಾನ ಬಿಡ್ರಿ ಅವ. ಅಂತ ದ್ಯಾವೇಗೌಡ್ರು, ಕುಮಾರಸ್ವಾಮಿನೆ ನಂಬಿಗಿ ಮನುಷ ಅಂದ್ರೆ ಅವ ಅಂತಾರ್ರಿ."

"ಹೌದೇನ್ರಿ?"

"ಹೌದ್ರಿ ಸರ. ಕಳದ ಎಲೆಕ್ಷನ್ನಿನಾಗ ಅವ ಏನಂದ ಗೊತ್ತೇನ?"

"ಏನಂದನ್ರಿ?"

"ಧಾರವಾಡ ಜಿಲ್ಲಾದಾಗ ಜೆ.ಡಿ.ಎಸ್.ಗೆ ಐದರಿಂದ ಆರು ಎಮ್ಮೆಲ್ಲೆ ಸೀಟು ಬರಲಿಲ್ಲಂದ್ರ ನಾನು ಬೆಂಗಳೂರಿಗೆ ಕಾಲಿಕ್ಕುದಿಲ್ಲ ಅಂತ ಶಪಥ ಮಾಡ್ಯಾನ್ರಿ. ಆದ್ರ ಅಷ್ಟು ಸೀಟು ಬರಲಿಲ್ಲ; ಆದ್ರೂ ನುಡದಂಗೆ ನ್ಯಡದ ಮನುಷ್ಯ ಅಂದ್ರ ಅವರ್ರಿ. ಈ ಕಾಲದಾಗ ಅಂತ ಮಂದಿನ್ನ ಎಲ್ಯಾರ ನೋಡಿರೇನ? ಅದಕ ನಾನು ಅವರ ತರನೇ ಇದ್ದ ನಿಮಗ ನಮಸ್ಕಾರ್ರಿ ಅಂದಿದ್ದು."

"ಖರೆ ಅಂದ್ರ ನಾನಾ ಬಸವರಾಜ ಹೊರಟ್ಟಿರಿ."

"ಥೂತ್ತೇರಿ!!" •

ಡಿಕ್ಟೇಶನ್



ಕೆಲವರು ನನಗೆ, 'ನೀವೇ ಬರೆಯಲಾಗದಿದ್ದರೆ ಹೇಳಿಬರೆಸಿ, ಡಿಕ್ಟೇಟ್ ಮಾಡಿ' ಎಂದು ಹೇಳುತ್ತಾರೆ. ಶಿವರಾಮ ಕಾರಂತರು, ಮಾಸ್ತಿಯವರು, ಡಿ.ವಿ. ಗುಂಡಪ್ಪನವರು ಹೇಳಿ ಬರೆಸುತ್ತಿದ್ದರು. ನಾನೂ ಹಾಗೆಯೇ ನನ್ನ ಬರಹಗಳನ್ನು ಹೇಳಿ ಬರೆಸಲು ಯತ್ನಿಸಿದೆ. ಅದು ಸಾಧ್ಯವಾಗಲಿಲ್ಲ. ಇನ್ನೊಬ್ಬರು ನನ್ನ ಬಳಿ ಕೂತು ನಾನು ಹೇಳಿದ್ದನ್ನು ಬರೆದುಕೊಳ್ಳುತ್ತಿದ್ದರೆ ನನ್ನ ಬರಹದ ಸೊಗಸು ಮಾಯವಾದಂತೆ ನನಗೆ ಅನ್ನಿಸುತ್ತದೆ. ಬರಹ ನನ್ನ ದೃಷ್ಟಿಯಲ್ಲಿ ತೀರಾ ಖಾಸಗಿಯಾದದ್ದು; ಅದನ್ನು ಬರೆದುಕೊಳ್ಳುತ್ತ ಇನ್ನೊಬ್ಬರು ಕೂತಿದ್ದಾರೆ ಎನ್ನುವುದೇ ನನ್ನಲ್ಲಿ ಕಸಿವಿಸಿ ಹುಟ್ಟಿಸುತ್ತದೆ; ಹೇಳಿಬರೆಸಿದ್ದಕ್ಕೆ ಸಾರ್ವಜನಿಕ ಧೋರಣೆ ಬರುತ್ತದೆ. ಅಷ್ಟೇ ಅಲ್ಲ, ಒಬ್ಬ ಲೇಖಕ ಸುಮ್ಮನೇ ಬರೆಯುತ್ತಾ ಹೋಗುವುದಿಲ್ಲ; ಭಾಷಣ ಮಾಡಿದಂತೆ ಬರೆಯುವುದಿಲ್ಲ. ಇದ್ದಕ್ಕಿದ್ದಂತೆ ಒಂದು ವಾಕ್ಯದಲ್ಲಿ ಸೂಕ್ಷ್ಮತೆ, ವ್ಯಂಗ್ಯ ಸೂಚನೆ ಬರಬೇಕಾಗುತ್ತದೆ; ಒಂದೊಂದು ಮಾತೂ ಮುಖ್ಯವಾಗುತ್ತದೆ. ಇದು ವೈಜ್ಞಾನಿಕ ಪ್ರಬಂಧವಲ್ಲ; ರಾಜಕೀಯ ಘೋಷಣೆಯಲ್ಲ. ಲೇಖಕ ತನ್ನೆದುರಿಗಿರುವ ಹಾಳೆಯ ಮೇಲೆ ಅನಿರೀಕ್ಷಿತ ರೂಪಗಳನ್ನು ಸೃಷ್ಟಿಸುವ ಕ್ರಿಯೆ.

ನಾನು ಹೀಗೆ 'ಹೇಳಿ ಬರೆಯುವ' ಕ್ರಿಯೆಯನ್ನು ಅಲೌಕಿಕಗೊಳಿಸಲು ಬಯಸುವುದಿಲ್ಲ; ಬರವಣಿಗೆ ಋಷಿಗಳ ಮಂತ್ರದಂತೆ ಎಂದು ಸೂಚಿಸುವ ಮಟ್ಟಕ್ಕೆ ಇಳಿಯುವುದಿಲ್ಲ, ಆದರೆ ನಿಮ್ಮ ಅಂತರ್ಯದ ಪಿಸುಮಾತನ್ನು ಯಾರಾದರೂ ಕೇಳಿಸಿಕೊಂಡರೆ, ನಿಮ್ಮ ಪ್ರೇಯಸಿಯೊಂದಿಗಿನ ಸಂಭಾಷಣೆಯನ್ನು ಯಾರಾದರೂ ಕದ್ದು ಕೇಳಿದರೆ ಏನಾಗುತ್ತದೆ ಎಂದು ನೋಡಿಕೊಳ್ಳಿ. ಈ ಪತ್ರಿಕೆ ಬರಹವನ್ನು ಕೂಡ ಒಬ್ಬನೇ ಕೂತು ರೂಪಿಸುವುದು ನನಗೆ ಇಷ್ಟ. ಡಿಕ್ಟೇಶನ್, ಡಿಕ್ಟೇಟರ್ ಮುಂತಾದ್ದಕ್ಕೆ ಸ್ಥಾನವೇ ಇಲ್ಲ!

ಆತ್ಮಜ್ಞಾನ ಮತ್ತು ಆತ್ಮವಂಚನೆ

ಆತನ ಹರಳೆಣ್ಣೆ ಮುಖ ನೋಡಿದೊಡನೆ ಆತ ಅನೇಕ ವರ್ಷಗಳ ನಂತರ ನನ್ನನ್ನು ನೋಡಲು ಬಂದಿರುವ ಕಾರಣವನ್ನು ಊಹಿಸಿದ ನಾನು, "ನಾನು ಹಣದ ಬಿಕ್ಕಟ್ಟಿನಿಂದ ಬಳಲಿಹೋಗಿದ್ದೇನೆ, ಏನು ಮಾಡುವುದೋ ಗೊತ್ತಾಗುತ್ತಿಲ್ಲ" ಎಂದು ಡಿಫೆನ್ಸ್ ಶಾಟ್ ಬಿಟ್ಟೆ. ಅವನು ಅಷ್ಟಕ್ಕೆ ಸೋಲೊಪ್ಪಿಕೊಳ್ಳುವ ಆಸಾಮಿಯಲ್ಲ, "ನಾನು ಹಣಕ್ಕಾಗಿ ಬಂದಿಲ್ಲ" ಎಂದು ಹೇಳಿದ ಆತ, 'ನನ್ನ ನಿಮ್ಮ ಸಂಬಂಧದಲ್ಲಿ ಹಣ ಮುಖ್ಯವಲ್ಲ, ನೀವು ಕನ್ನಡದ ಈ ಶತಮಾನದ ಅತ್ಯಂತ ಅರ್ಥಪೂರ್ಣ ವ್ಯಕ್ತಿ ಎಂದು ಮಾತ್ರ ತಿಳಿದಿದ್ದೇನೆ. ನಿಮ್ಮೊಂದಿಗೆ ಕ್ಷಣ ಇದ್ದದ್ದೇ ನನ್ನ ಬದುಕಿನ ಮುಖ್ಯ ಪ್ರಸಂಗ" ಎಂದ. ಆತ ತನ್ನ ಸಂಗೀತವನ್ನು ಮುಂದುವರಿಸಬಹುದೆಂದು ಅವನ ಕಣ್ಣಲ್ಲಿ ಕಣ್ಣಿಟ್ಟು ಪರೀಕ್ಷಿಸತೊಡಗಿದೆ. ಆದರೆ ಅವನು ನನ್ನ ಪ್ರತಿಕ್ರಿಯೆಗಾಗಿ ಕಾದ. ನಾನು 'ಇದೆಲ್ಲ ಅತಿಯಾಗುತ್ತಿದೆ' ಅಂದುಕೊಂಡು, "ನೋಡು, ನನ್ನ ಬಗ್ಗೆ ನಿನ್ನ ಅಭಿಪ್ರಾಯ. ಆದರೆ ನಾನೇ ಬಲ್ಲಂತೆ ನಾನೊಬ್ಬ ತೀರಾ ಸಾಮಾನ್ಯ ಮನುಷ್ಯ, ಶ್ರೇಷ್ಠ ಕತೆ ಬರೆಯಬೇಕೆಂದು ಹೊರಟು ಎಲ್ಲರೂ ಓದುವಂಥ ಸಾಮಾನ್ಯ ಕೃತಿ ಬರೆದವನು ನಾನು. 'ಇವತ್ತು ಬದುಕುವುದಕ್ಕಾಗಿ ಬರೆಯುತ್ತೀಯೋ, ನಾಳೆಯಿಂದ ಅಮರನಾಗಲು ಬರೆಯುತ್ತೀಯೋ' ಎಂದು ಯಾರಾದರೂ ಕೇಳಿದರೆ ನಾನು 'ಇವತ್ತು ಬದುಕುವುದಕ್ಕಾಗಿ ಬರೀತೇನೆ' ಎಂದು ಪ್ರಾಮಾಣಿಕವಾಗಿ ಹೇಳುವವನು. ವಿಶ್ವವಿದ್ಯಾಲಯದ ಕೆಲಸ ಬಿಟ್ಟು ನನಗೆ ಅನ್ನ ಕೊಡುವಂಥ ವೃತ್ತಿಗಾಗಿ ಹುಡುಕಿ ಕೊನೆಯಲ್ಲಿ ಒಂದು ರೀತಿಯ ನೆಮ್ಮದಿ ಗಳಿಸಿದವನು; ಯಾರ ಹಂಗೂ ಇಲ್ಲದೆ ಬದುಕುವ ಸುಖ ಪಡೆದವನು. ನೀನು ಹೋದಸಲ ಒಂದು ಪತ್ರಿಕೆ ಮಾಡಲು ಹೊರಟೆ, ಸೋತುಸುಣ್ಣನಾದೆ. ನನಗೆ ಕಾಗದ ಬರೆದು 'ನೀವು ಭ್ರಷ್ಟರು' ಎಂದು ಆಪಾದಿಸಿದೆ. ನಾನು ಸುಮ್ಮನಿದ್ದೆ. ಈಗ ಒಂದು ಸ್ಕೂಲ್ ಮಾಡಲು ಯತ್ನಿಸುತ್ತಿದ್ದೀ ಎಂದು ಎಲ್ಲರೂ ಹೇಳುತ್ತಿದ್ದಾರೆ. ಆದರೆ ನಾನು ನಿನ್ನ ಬಗ್ಗೆ ತಿಳಿದಿರುವಂತೆ, ಅದೆಲ್ಲ ನಿನಗೆ ಕಷ್ಟ. ಹಣ ಇದ್ದರೆ ಬ್ಯಾಂಕಿನಲ್ಲಿ ಹಾಕಿಬಿಡು... ನೀನು ಬರೆದುಕೊಂಡು, ವಿಚಾರ ಸಂಕಿರಣಗಳಲ್ಲಿ ಭಾಗವಹಿಸುತ್ತಾ ಆರಾಮಾಗಿರು. ಇದನ್ನು ನಾನು ಬಹಳ ಯೋಚಿಸಿ ಹೇಳುತ್ತಿದ್ದೇನೆ" ಅಂದೆ.

ಆತ ಕೇಳುತ್ತಿದ್ದ.

"ನನ್ನ ಬಗ್ಗೆ ಇನ್ನೊಂದು ಮಾತು ಹೇಳಲೇ?" ಅಂದೆ.

"ಹೇಳಿ" ಅಂದ.

"ನನ್ನ ಶಕ್ತಿ ಇರುವುದು ನನ್ನನ್ನು ಅರ್ಥಮಾಡಿಕೊಂಡು ಕೆಲಸವನ್ನು ಅದಕ್ಕೆ ತಕ್ಕಂತೆ ಮಾಡುವುದರಲ್ಲಿ. ಭವಿಷ್ಯ ಯಾರಿಗೆ ಗೊತ್ತು? ನಾವೆಲ್ಲ ಬರೆದದ್ದು ಎಷ್ಟು ದಿನ ಬದುಕುತ್ತೋ ಬಲ್ಲವರು ಯಾರು? ನೀನು ಕೂಡ ನಿನ್ನನ್ನು ಸ್ವವಿಮರ್ಶೆಗೆ ಒಳಪಡಿಸಿಕೊಳ್ಳಬೇಕು" ಅಂದೆ.

"ಆದರೆ ನನ್ನ ಬೇಡಿಕೆಯನ್ನು ನೀವು ಈಡೇರಿಸಲಿಲ್ಲ" ಅಂದ.

"ನನ್ನ ಉತ್ತರದಲ್ಲಿ ಅದೆಲ್ಲ ಇದೆ" ಎಂದು ಹೇಳಿದೆ. ಆತನ ಮನಸ್ಸಿನಲ್ಲಿ ಅನೇಕ ಆಸೆಗಳಿದ್ದವು. ಪತ್ರಿಕೆಯಲ್ಲಿ ಬರೆಯಬೇಕು, ನನ್ನ ನೆರವು ಪಡೆಯಬೇಕು ಈ ಶತಮಾನದ ಈ ಮುಖ್ಯ ವ್ಯಕ್ತಿಯ ಆಶ್ರಯ ಪಡೆಯಬೇಕು..." ಎಂಬಂತಹ ಆಸೆಗಳೆಲ್ಲ ಇದ್ದವು.

"ಆತ್ಮಜ್ಞಾನ ಇಲ್ಲದಿದ್ದರೆ ಆತ್ಮವಂಚನೆ ಶುರುವಾಗುತ್ತೆ. ಜಗತ್ತಿನ ಕಾಮಿಡಿಗಳ ವಸ್ತುವೇ ಇದು...." ಎಂದೆ.

ಎರಡು ವ್ಯಸನಗಳು

ಈ ಪುಟ್ಟ ಪ್ರಾಣಿ ಅದೆಂತು ನಿಮ್ಮ ಮನಸ್ಸನ್ನು ಸೆರೆಹಿಡಿದುಬಿಡುತ್ತದೆ ಎಂಬುದು ವಿಚಿತ್ರ. ನಾಯಿಯನ್ನು ಸಾಕದೆ ಇದನ್ನು ಓದುವವರಿಗೆ ನನ್ನ ಮಾತು ಅರ್ಥವಾಗುವುದಿಲ್ಲ. ನಾಯಿ ತುಂಬ ಉದ್ವಿಗ್ನ ಪ್ರಾಣಿ; ಅದು ನಿಮ್ಮಿಂದ ಬೇಡುವುದು ಊಟ, ತಿಂದಿಯನ್ನು ಎಷ್ಟು ತಿಂದರೂ ಅದು ತನ್ನ ಒಡನಾಟ, ವೈಯಾರ, ಚಾಂಚಲ್ಯವನ್ನು ಬಿಡುವುದಿಲ್ಲ. ಕ್ರಮೇಣ ನಿಮ್ಮ ಪುಟ್ಟಿಗೆ ಇಳಿದುಹೋಗುತ್ತದೆ. ಮೌನವಾಗಿರುವ, ತೀರಾ ಖಾಸಗಿ ಬದುಕಿನ ವ್ಯಕ್ತಿಗಳಿಗೆ (ನಾನು ಗಮನಿಸಿರುವಂತೆ) ಎರಡು ಮುಖ್ಯ ಕಾಳಜಿಗಳಿರುತ್ತವೆ. ಅವುಗಳಲ್ಲಿ ಒಂದು ನಾಯಿಯ ಸ್ನೇಹ. ಇನ್ನೊಂದು ಜೂಜು. ನಾಯಿಯ ಜೊತೆಗೆ ನೀವು ಮಾತಾಡಬೇಕಾದ್ದಿಲ್ಲ, ಅದಕ್ಕೆ ನೀವು ಭಾಷಣ ಕೊಡುವ ಅಗತ್ಯವಿಲ್ಲ. ಅದು ಸುಮ್ಮನೇ ಜೊತೆಗೆ ಇದ್ದುಬಿಡುತ್ತದೆ. ಅವುಗಳ ಮೂಗು ಮತ್ತು ಕಿವಿ ತುಂಬ ಸೂಕ್ಷ್ಮ; ಮನುಷ್ಯರಿಗೆ ಕೇಳಿಸದೆ ಇರುವ ಸದ್ದುಗಳು ನಾಯಿಗಳಿಗೆ ಕೇಳಿಸುತ್ತವೆ. ಎಲ್ಲೋ ನಡೆಯುವ ಕಿತ್ತಾಟ, ಘರ್ಷಣೆಗೆ ಪ್ರತಿಕ್ರಿಯೆಯಾಗಿ ಬೊಗಳಿ ತನ್ನ ಸಿಟ್ಟು ತೋರುತ್ತದೆ. ಇದನ್ನೆಲ್ಲ ನೋಡಿದಾಗ ಇಂಗ್ಲಿಷರು ಯಾಕೆ ನಾಯಿಗಳನ್ನು ಬಹುವಾಗಿ ಪ್ರೀತಿಸುತ್ತಾರೆ ಎಂದು ತಿಳಿಯುತ್ತದೆ. ಅದು ಮೌನಿಗಳ ಸ್ನೇಹಿತ; ಆಪತ್ತಿನಲ್ಲಿ ರಕ್ಷಕ. ಹಾಗೆಯೇ ಗೆಳೆಯರ ತರಲೆಯೇ ಇಲ್ಲದೆ ನಿಮಗೆ ಪ್ರೀತಿ, ನಿಷ್ಠೆ ಅನುಕಂಪ ತೋರುವ ಪ್ರಾಣಿ. ಹಾಗೆಯೇ ಈತ ಶಿಕಾರಿಯ ಗೆಳೆಯ: ಜೊತೆಗೆ ಇರುವ ಮನುಷ್ಯರು ಬೇಕಾದ್ದು, ಬೇಡವಾದ್ದು ಎಲ್ಲ ಮಾತಾಡಿ ಪ್ರಾಣ ತಿನ್ನುತ್ತಾರೆ. ನಾಯಿ ಏಕಾಗ್ರವಾಗಿ ಶಿಕಾರಿ ಮಾತ್ರ ಮಾಡುತ್ತದೆ. ಪ್ರಸಿದ್ಧ ಇಂಗ್ಲಿಷ್‌ಮನ್ ಜಿಮ್ ಕಾರ್ಬೆಟ್ ಬೇಟೆಗಾರ, ಪ್ರಾಣಿಪ್ರೇಮಿ; ಆತನ ನಾಯಿಯ ಹೆಸರು ರೂಬಿನ್. ಒಂದು ನಾಯಿ ನಮ್ಮೆಲ್ಲರನ್ನು ಆವರಿಸಿ ಪ್ರೇಮ ಹಬ್ಬಿಸುವಂತೆಯೇ ಈ ರೂಬಿನ್ ಕೂಡ ಜಿಮ್ ಕಾರ್ಬೆಟ್‌ನನ್ನು ಆವರಿಸಿತು. 'ಇಡೀ ಜಗತ್ತನ್ನೇ ಕೊಟ್ಟರೂ ನನ್ನ ರೂಬಿನ್‌ನನ್ನು ಯಾರಿಗೂ ಕೊಡುವುದಿಲ್ಲ' ಎಂದು ಆತ ಹೇಳಿದ. 'ನಾಯಿ ನಿಮ್ಮ ಶ್ರೇಷ್ಠ ಗೆಳೆಯ' ಎನ್ನುವುದು ಇಂಗ್ಲಿಷ್ ನಾಣ್ಣುಡಿ.

ಇಂಗ್ಲಿಷ್‌ಮನ್ ನಾಯಿಯನ್ನು ಪ್ರೀತಿಸುವಂತೆಯೇ ಜೂಜನ್ನು ಪ್ರೀತಿಸುವವನು. ಜೂಜು ಮನುಷ್ಯನನ್ನು ನಿರಂತರತೆಗೆ, ನಿಗೂಢ ಅಲೌಕಿಕತೆಗೆ ಪರಿಚಯಿಸುವ ಮಾಧ್ಯಮ. ಇಂಗ್ಲೆಂಡಿನಲ್ಲಿ ಎಪ್‌ಸಂ ಡರ್ಬಿ, ಫುಟ್‌ಬಾಲ್ ಪೂಲ್ ಪ್ರಸಿದ್ಧವಾದವು. ಕುದುರೆಗಳ ಖುರಪುಟ ಧ್ವನಿಗೆ ಮಂತ್ರಮುಗ್ಧನಾಗದೆ ಇರುವ ಇಂಗ್ಲೆಂಡಿನ ಮನುಷ್ಯನಿಲ್ಲ. ಹಾಗೆಯೇ ನಾಯಿಗಳ ರೇಸ್ ಇರುತ್ತದೆ.

ಏಕಾಂತಕ್ಕೆ ಜೀವ ತರುವ ಜೂಜು ಮತ್ತು ಶ್ವಾನಪ್ರೇಮ ವಿಚಿತ್ರವಾದವು. ಇತ್ತೀಚೆಗೆ ಮಂಗೋಲಿಯಾದ ಒಬ್ಬ ತನ್ನ ನಾಯಿ ತೀರಿಕೊಂಡಿದ್ದನ್ನು ಕುರಿತು ಒಂದು ಅದ್ಭುತ ಸಿನಿಮಾ ಮಾಡಿದ; ಅದರ ಹೆಸರು State of Dogs, ನಾಯಿಯ ಸ್ಥಿತಿ. ಬೆಲ್ಜಿಯಂ, ಮಂಗೋಲಿಯನ್ ನಿರ್ಮಾಪಕರು ಮಾಡಿದ ಚಿತ್ರ ಇದು. ಇದು ಎಂಟು ಪ್ರಶಸ್ತಿಗಳನ್ನು ಗೆದ್ದಿದೆ. ಈ ವರ್ಷದ ಫಿಲ್ಮೋತ್ಸವಗಳಲ್ಲಿ ಎಲ್ಲರ ಮೆಚ್ಚುಗೆ ಗಳಿಸಲಿದೆ...



****

ಜೂಜು ಮತ್ತು ನಾಯಿ ಮನುಷ್ಯರ ಚೇತನವನ್ನು ಆವರಿಸುವಂತೆಯೇ ಬದಲಾದ ಸಂದರ್ಭಗಳು ಬದಲಾದ ನಲ್ಮೆ ಹುಟ್ಟಿಸುತ್ತ ಹೋಗುತ್ತವೆ. ಇವತ್ತು ವಿಯೆಟ್ನಾಂಗೆ ಹೋಗುವ ಅಮೆರಿಕನ್ನರು ನೋಡುವುದು ರಕ್ತಪಾತವನ್ನಲ್ಲ; ವಿಯೆಟ್ನಾಂ ಕಾಲೋನಿಗಳಲ್ಲಿ ಬಿದ್ದ ಶವಗಳನ್ನೆಲ್ಲ, ಪ್ರೀತಿಗಾಗಿ ಹಾತೊರೆವ ಜನರನ್ನು, ಬುಟ್ಟಿಗಟ್ಟಲೆ ಹೂವು ಹಿಡಿದು ಸ್ವಾಗತಿಸುವ ಜನ ದಿವಾಳಿ ಎದ್ದ ಹೃದಯಗಳಲ್ಲಿ ಕೂಡ ಪ್ರೀತಿಯ ಒರತೆ ಹುಟ್ಟಿಸುತ್ತಾರೆ...


• ಜನವರಿ 13, 1999

ರಂಗ-ಅಂತರಂಗ

ಶಿವಮೊಗ್ಗದ ಹೊಂಗಿರಣ

ಶಿವಮೊಗ್ಗದಲ್ಲಿ ಹಲವಾರು ನಾಟಕ ತಂಡಗಳಿವೆ. ಅವುಗಳಲ್ಲಿ ತಮ್ಮತಮ್ಮ ಅಜೆಂಡಾಗಳನ್ನೇ ಸೂಕ್ಷ್ಮವಾಗಿ ಪ್ರತಿಪಾದಿಸುವ ತಂಡಗಳೂ ಇವೆ. ಇಂತವು ಒಂದೆರಡು ನಾಟಕ ಆಡಿ ಸುಮ್ಮನಾದದ್ದೂ ಇದೆ. ಆದರೆ 'ಹೊಂಗಿರಣ' ಎಂಬ ತಂಡದ ತರುಣ ಪಡೆ ಬಹಳ ವಿಶಿಷ್ಟ ಪ್ರಯೋಗಗಳನ್ನು ಮಾಡಿದೆ. ಆ ತುದಿಯಿಂದ ಪೌರಾಣಿಕ 'ಕರ್ಣಾಂತರಂಗ'ದಿಂದ ಹಿಡಿದು ಈ ತುದಿಯ 'ದೇವರ ಹೆಣ'ದವರೆಗೂ ನಾಟಕವಾಡುತ್ತಿರುವ ಹೊಂಗಿರಣ ತಂಡವು, ಗಾಜನೂರಿನ ಮೊರಾರ್ಜಿ ಶಾಲೆಯಲ್ಲಿ ಮಕ್ಕಳ ರಂಗ ಚಟುವಟಿಕೆಗಳಿಗಾಗಿ ಜನ್ಮ ತಳೆದು ಈಗ ಪ್ರೌಢಾವಸ್ಥೆಗೆ ಬಂದಿದೆ. ಅವತ್ತಿನ ಮಕ್ಕಳು ಇಂದು ಜನಮೆಚ್ಚುಗೆಯ ಕಲಾವಿದರಾಗಿ ರೂಪುಗೊಂಡಿದ್ದಾರೆ.

ಈ ತಂಡ ಆರಿಸಿಕೊಳ್ಳುವ ನಾಟಕಗಳಲ್ಲಿ ಸಾಮಾನ್ಯವಾಗಿ ಹಾಸ್ಯ ಪ್ರಧಾನವಾಗಿರುತ್ತದೆ. 'ಶ್ರೀಕೃಷ್ಣ ಸಂಧಾನ', 'ಇದೇನು ನಡೆಯುತ್ತಿದೆ ಇಲ್ಲಿ', 'ಮೃತ್ಯು', 'ದನಕಾಯೋ ಹುಡುಗ್ರ ದೊಡ್ಡಾಟ', 'ಹೆಬ್ಬೆಟ್ಟು', 'ಹಂಚಿನ ಮನೆ ಪರಸಪ್ಪ', 'ಕನಸಿನವರಾ', 'ದೇವರ ಹೆಣ', 'ಹೇಳಿ ನಿವ್ವಾರ ಕಡೆ', 'ಧರೆ ಹತ್ತಿ ಉರಿದೊಡೆ' ಮುಂತಾದ 40 ಕ್ಕೂ ಹೆಚ್ಚಿನ ನಾಟಕಗಳು ಹೊಂಗಿರಣದಿಂದ ಮೂಡಿ ಬಂದಿವೆ. 'ಮದಗದ ಕೆಂಚವ್ವ ಒಗಟಿನ ರಾಣಿ' ಎಂಬ ಅತ್ಯುತ್ತಮ ರೂಪಕವನ್ನು ಅದ್ಭುತವಾಗಿ ಅಭಿನಯಿಸಿರುವ ಈ ತಂಡವು ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ಮೂರು ಬಾರಿ ರಾಜ್ಯ ಪ್ರಶಸ್ತಿ ಗಳಿಸಿದೆ.






ಈ ತಂಡದ ಇನ್ನೊಂದು ಹೆಚ್ಚುಗಾರಿಕೆಯೆಂದರೆ, ಹೊಸಹೊಸ ನಾಟಕಗಳಿಗೆ ಕೈ ಹಾಕುತ್ತಲೇ ಮಕ್ಕಳ ನಾಟಕಗಳನ್ನು ಆಡಿಸುತ್ತ ಬಂದಿರುವುದು. ನಾಟಕದ ಸಂಸ್ಕೃತಿ ಬೆಳೆಯಲು ಇದು ಬಹಳ ಮುಖ್ಯ ಬುನಾದಿ. ಈ ತಂಡದ ಮುಖ್ಯಸ್ಥರಾಗಿರುವ ಸಾಸ್ವೆಹಳ್ಳಿ ಸತೀಶ್ 'ಕಟ್ಟೆಪುರಾಣ'ದ ವಾಟಿಸ್ಸೆ ಪಾತ್ರಧಾರಿಯಾಗಿ ಖ್ಯಾತರಾಗಿದ್ದಾರೆ. ಅಲ್ಲದೆ ಕಳೆದ 20 ವರ್ಷಗಳಿಂದಲೂ ರಂಗಭೂಮಿ ಚಟುವಟಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಬಾಳೆಹೊನ್ನೂರಿನ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಕನ್ನಡ ಉಪನ್ಯಾಸಕರಾಗಿರುವ ಸತೀಶ್, ಪ್ರವೃತ್ತಿಯಿಂದ ರಂಗಭೂಮಿ ಕಲಾವಿದ. ಗಿರೀಶ್ ಕಾರ್ನಾಡರ ನಾಟಕಗಳನ್ನು ಕುರಿತು ಪ್ರೌಢ ಪ್ರಬಂಧ ಮಂಡಿಸಿ ಪಿಎಚ್‌ಡಿ ಪದವಿ ಪಡೆದಿರುವ ಸತೀಶ್, 50 ಕ್ಕೂ ಹೆಚ್ಚು ನಾಟಕಗಳಲ್ಲಿ ಪ್ರಮುಖ ಪಾತ್ರ ವಹಿಸಿ, ಎಂಟು ಬಾರಿ ರಾಜ್ಯದ ಶ್ರೇಷ್ಠ ನಟಿ ಪ್ರಶಸ್ತಿ ಗಳಿಸಿದ್ದಾರೆ. ಅಲ್ಲದೆ 18 ದೊಡ್ಡವರ ನಾಟಕಗಳನ್ನು ಮತ್ತು 30 ಮಕ್ಕಳ ನಾಟಕಗಳನ್ನು ನಿರ್ದೇಶಿಸಿ, ಐದು ಬಾರಿ ಶ್ರೇಷ್ಠ ಕಥೆಗಳನ್ನು ನಾಟಕವಾಗಿಸಿ, ದೆಹಲಿ-ಗುಜರಾತ್-ಮುಂಬೈ ಮುಂತಾದ ಕಡೆ ಪ್ರದರ್ಶಿಸಿ ಮೆಚ್ಚುಗೆ ಗಳಿಸಿದ್ದಾರೆ.

'ಕರ್ಣ', 'ದಾರಶಿಕೊ' ಎಂಬ ಏಕವ್ಯಕ್ತಿ ನಾಟಕಗಳಲ್ಲಿ ನಟಿಸಿರುವ ಸತೀಶ್ ರಂಗಭೂಮಿಯ ಬಗ್ಗೆ ರಾಷ್ಟ್ರೀಯ ವಿಚಾರ ಸಂಕಿರಣಗಳಲ್ಲಿ ಪ್ರಬಂಧ ಮಂಡಿಸಿದ್ದಾರೆ. ಇವರು ಒಂದು ಶಿಷ್ಯಪಡೆಯನ್ನೇ ನಿರ್ಮಿಸಿದ್ದು ಅವರಲ್ಲಿ ಚಂದ್ರಶೇಖರ, ಅಜಯ್ ಗೌಡ, ಸುರೇಂದ್ರ, ರಕ್ಷಿತ್, ಶೃತಿ ಶೆಟ್ಟಿ ತರಹದವರು ಎಂಥ ಪಾತ್ರ ಕೆ... ಲೀಲಾಜಾಲವಾಗಿ ಅಭಿನಯಿಸುತ್ತಾರೆ. ಕಳೆದ ಮೇ ತಿಂಗಳು ಈ... ಅಭಿನಯಿಸಿದ 'ಕಡಿದಾಳು ಶಾಮಣ್ಣ' ನಾಟಕ ನೋಡಿದ ರೈತ... ಲೀಡರುಗಳು, ಸಂಘಕ್ಕೆ ಮರುಜೀವ ಕೊಡಲು ಸದರಿ ನಾಟಕವನ್ನು ... ಮೈಸೂರು, ಹಾಸನ ಇಲ್ಲೆಲ್ಲಾ ಆಡಿಸುವ ಶಪಥ ಮಾಡಿಹೋದರು... ತಂಡವು ಅಭಿನಯಿಸಿದ 'ಕರ್ಣಾಂತರಂಗ' ಎಂಬ ನಾಟಕ ನೋಡಿದ ... ಜಿಲ್ಲೆ ನಾಗಮಂಗಲದ ಜನ 'ನಾವಿಂತಹ ನಾಟಕವನ್ನೇ ನೋಡಿಲ್ಲ, ... ಪೌರಾಣಿಕ ನಾಟಕಗಳ ಬದಲು ಮಹಾಭಾರತದ ಕೆಲವು ಪ್ರಸಂಗ ತೆಗೆದು... ಎರಡುಮೂರು ಗಂಟೆ ಆಡಿದರೆ ಸಾಕಲ್ಲವೆ' ಎಂಬ ಅಭಿಪ್ರಾಯ ವ್ಯಕ್ತಪಡಿ... ಹೊಂಗಿರಣ ತಂಡ ನಾಟಕ ಆಡುವುದಲ್ಲದೆ, ರಂಗ ತರಬೇತಿ ಶಿಬಿರ, ಪ್ರ... ತರಬೇತಿ ಶಿಬಿರ ಮತ್ತು ಪುಸ್ತಕ ಪ್ರಕಾಶನ, ಜನಪದ ಕಾರ್ಯಕ್ರ... ಆಯೋಜನೆಯಲ್ಲದೆ ಸಾಹಿತ್ಯದ ಕಾರ್ಯಕ್ರಮಗಳನ್ನೂ ಮಾಡಿಕೊಂಡು ಬರುತ್ತಿದೆ. ಬರೀ ನಾಟಕವೇ ಆಡಿದ್ದರೆ ಇಷ್ಟರಲ್ಲಿ ಹೊಂಗಿರಣ ಕಮರಿ ಹೋಗುತ್ತಿತ್ತೋ ಏನೋ. ಆದರೆ ರಂಗಭೂಮಿಗೆ ಬೇಕಿರುವ ಎಲ್ಲಾ ಜೀವಂತಿಕೆಯ ಸೆಲೆಗಳನ್ನು ತಡಕುವ ಹೊಂಗಿರಣ ತಂಡ ಜನಮೆಚ್ಚುಗೆಯ ತಂಡವಾಗಿದೆ.



● ಬಿ.ಚಂದ್ರೇಗೌಡ

ದೇವರಿಗೇ ಅಪಚಾರ ಮಾಡುವ ಕಾವಿಧಾರಿಗಳು



ಜಗತ್ತಿನ ಎಲ್ಲಾ ದೇಶದ ಜನರು ದೇವರನ್ನು ನಂಬುತ್ತಾರೆ ನಿಜ. ಆದರೆ ಇಡೀ ಜಗತ್ತಿನಲ್ಲಿ ದೇವರ ಹೆಸರನ್ನು ಅತೀ ಹೆಚ್ಚು ದುರುಪಯೋಗ ಮಾಡುವವರೆಂದರೆ ಭಾರತೀಯರು ಮಾತ್ರ. ನಮ್ಮಲ್ಲಿ ದೇವರುಗಳ ಸಂಖ್ಯೆಯೂ ತುಂಬಾ ಹೆಚ್ಚು, ಆದರಂತೆ ದೇವರ ಹೆಸರಿನ ದುರುಪಯೋಗವೂ ಭಾರತದಲ್ಲೇ ಅತೀ ಹೆಚ್ಚು, ಅದರಲ್ಲೂ ದೇವರು-ಧರ್ಮದ ಬ್ರೋಕರುಗಳಾದ ಕಾವಿಧಾರಿಗಳು, ಪುರೋಹಿತರು, ಜ್ಯೋತಿಷಿಗಳು, ವಾಸ್ತುಪಂಡಿತರು, ಇವರುಗಳೇ ದೇವರ ಹೆಸರನ್ನು ಅಥವಾ ಜನಸಾಮಾನ್ಯರಲ್ಲಿರುವ ದೈವಭೀರುತನವನ್ನು ತಮ್ಮ ಸ್ವಾರ್ಥಕ್ಕಾಗಿ ಅತೀ ಹೆಚ್ಚು ದುರುಪಯೋಗ ಮಾಡುತ್ತಿರುವುದು. ಇದು ಮತ್ತೊಮ್ಮೆ ಉತ್ತರಾಖಂಡದ ಪ್ರಾಕೃತಿಕ ವಿಕೋಪದ ಸಮಯದಲ್ಲಿ ಸಂಪೂರ್ಣ ಬಹಿರಂಗವಾಯಿತು. ಕಾವಿಯುಟ್ಟ ಸಾಧುಗಳು ಸತ್ತ ಯಾತ್ರಿಗಳಿಂದ ಲೂಟಿ ಹೊಡೆದ ಕೋಟ್ಯಂತರ ರೂಪಾಯಿ ಮೌಲ್ಯದ ಆಭರಣ ಮತ್ತು ಹಣದೊಂದಿಗೆ ಸಿಕ್ಕಿ ಬಿದ್ದರು.



ವಾಸ್ತು ಪಂಡಿತರು ಮತ್ತು ಟಿ.ವಿ. ಜ್ಯೋತಿಷಿಗಳು ಅದ್ಯಾವುದೋ ಧಾರೀದೇವಿ ಹೆಸರಿನ ದೇವತೆಯ ದೇವಸ್ಥಾನ ಸ್ಥಳಾಂತರಿಸಿದ್ದಕ್ಕೆ ಈ ನೆರೆ ಹಾವಳಿ ಬಂತೆಂದು ಭಯಂಕರ ಬೂಸಿ ಬಿಟ್ಟು ವೀಕ್ಷಕರನ್ನು ಹೆದರಿಸಿ ಟಿಆರ್‌ಪಿ ಏರಿಸಿಕೊಂಡರು. ಹಾಗಾದರೆ ಕೆಲ ವರ್ಷಗಳ ಹಿಂದೆ ತಮಿಳುನಾಡಿನಲ್ಲಿ ಬಂದ ಸುನಾಮಿ, ಒರಿಸ್ಸಾದ ಚಂಡ ಮಾರುತ, ಗುಜರಾತಿನ ಭೂಕಂಪ, ಕರ್ನಾಟಕದ ಬರಗಾಲ- ಇವೆಲ್ಲಾ ಯಾವ ದೇವರ ಕೋಪ-ಶಾಪದಿಂದ ಉಂಟಾಗಿದ್ದು ಎಂದು ಈ ಜ್ಯೋತಿಷಿಗಳು-ವಾಸ್ತು ಪಂಡಿತರು ವಿವರಿಸುವ ಗೋಜಿಗೆ ಹೋಗಿಲ್ಲ.

ಪ್ರಜ್ಞಾವಂತರ ಅಭಿಪ್ರಾಯದ ಪ್ರಕಾರ ಭಾರತದ ಈ ಲಕ್ಷಾಂತರ ಕಳ್ಳ ಜ್ಯೋತಿಷಿಗಳು, ಪುರೋಹಿತರು, ಕಾವಿಧಾರಿಗಳು, ವಾಸ್ತುಪಂಡಿತರು, ಇವರುಗಳೆಲ್ಲಾ ತನ್ನ ಹೆಸರಲ್ಲಿ ಮುಗ್ಧ ಜನರ ಭಕ್ತಿಯ ಸತತ ದುರುಪಯೋಗ ಮಾಡಿ ಸ್ವಾರ್ಥ ಸಾಧನೆ ಮಾಡುತ್ತಿರುವುದನ್ನು ನೋಡಿ-ನೋಡಿ ರೋಸಿ ಹೋಗಿ ಆ ಭಗವಂತನು ಈ ಪ್ರಕೃತಿ ವಿಕೋಪ ಉಂಟು ಮಾಡಿರಬಹುದು. ಈ ದೇವರ ಏಜೆಂಟರ ಅನಾಚಾರ ದುರಾಚಾರದ ಜೊತೆಜೊತೆಗೆ ಮಾನವನು ಪ್ರಕೃತಿಯ ಮೇಲೆ ನಡೆಸಿದ ನಿರಂತರ ಗ್ಯಾಂಗ್‌ರೇಪ್ ನೋಡಿ ಸ್ವತಃ ಭೂದೇವಿಯ ಅಪಾರ ತಾಳ್ಮೆಯೂ ಕಟ್ಟೆಯೊಡೆದಿರಬೇಕು. ಕಾಳಿ, ದುರ್ಗೆ, ನರಸಿಂಹ, ವೀರಭದ್ರ ಮುಂತಾದ 'ಕೋಪಿಷ್ಠ' ದೇವರುಗಳ ಕಲ್ಪನೆಯನ್ನು ಹಿಂದಿನ ಕಾಲದ ಪುರೋಹಿತರು ಹುಟ್ಟುಹಾಕಿದ್ದು ಜನರ ಮನಸ್ಸಿನಲ್ಲಿ ಭಕ್ತಿಗಿಂತ ಹೆಚ್ಚಾಗಿ ಭಯ ಮೂಡಿಸಿ ಸಮಾಜವನ್ನು ತಮ್ಮ ಹಿಡಿತದೊಳಗೆ ಇಟ್ಟುಕೊಳ್ಳಲು ಮಾತ್ರ. ಎಲ್ಲಿ ದೇವರಲ್ಲೂ ಸಾತ್ವಿಕತೆ ಮಾತ್ರ ಇರಲು ಸಾಧ್ಯವೇ ಹೊರತು ತಾಮಸಿಕ ಗುಣಗಳು ಮತ್ತು ಅರಿಷಡ್ವರ್ಗಗಳು ಇರಲು ಸಾಧ್ಯವೇ ಇಲ್ಲ ಎಂದು ಸ್ವಲ್ಪ ತರ್ಕ ಉಪಯೋಗಿಸಿದರೆ ಅರ್ಥವಾದೀತು. ದೇವರಿಗೆ ಸಿಟ್ಟು ಬರುತ್ತದೆ, ದೇವರಿಗೆ ಒಣ ಪ್ರತಿಷ್ಠೆಯಿದೆ, ತನ್ನ ಸ್ವಪ್ರತಿಷ್ಠೆ ತೋರಿಸಲು ದೇವರು ಸಾವಿರಾರು ಮುಗ್ಧ ಭಕ್ತರನ್ನು ಬಲಿ ತೆಗೆದುಕೊಂಡು ಸೇಡು ತೀರಿಸಿಕೊಳ್ಳುತ್ತಾರೆ ಎಂದು ಭಾವಿಸುವುದು ದೇವರಿಗೇ ಅವಮಾನ ಮಾಡಿದಂತೆ. ಕೋಪ- ಸ್ವಪ್ರತಿಷ್ಠೆ-ಸೇಡು ಇಂತಹ ಮಾನವನಲ್ಲಿರುವ ನಕಾರಾತ್ಮಕ ಗುಣಗಳನ್ನು ದೇವರಿಗೂ ಆರೋಪಿಸುವುದು ಕರುಣಾಮಯಿ ದೇವರಿಗೇ ಅಪಚಾರ ಮಾಡಿದಂತೆ.

-ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು

ಅತ್ಯಾಚಾರದ ಹಿಂದೆ ಆರೆಸ್ಸೆಸ್ ಬುದ್ಧಿಯವರು

ಮಣಿಪಾಲದ ಪೈಗಳಂತೂ ಸಂಘಪರಿವಾರಕ್ಕೆ ತಮ್ಮನ್ನು ಮಾರಿಕೊಂಡಿದ್ದಾರೆ. ಅವರ 'ಉದಯವಾಣಿ' ಮತ್ತು 'ತರಂಗ' ಪತ್ರಿಕೆಗಳು ಆರೆಸ್ಸೆಸ್ಸಿನ 'ಆರ್ಗನೈಸರ್' ಪತ್ರಿಕೆಯನ್ನೂ ಮೀರಿಸುತ್ತವೆ.


ಕಂದಾಚಾರಿ ಪೇಜಾವರ ಸ್ವಾಮಿಗೆ ಜಾತ್ಯತೀತತೆ ಅರ್ಥವಾಗುವುದೂ ಒಂದೇ, ಅತ್ಯಾಚಾರಿ ಸಂಘಪರಿವಾರದ ದುರುಳರಿಗೆ ಹೆಣ್ಣಿನ ಮನಸ್ಸು ಅರ್ಥವಾಗುವುದೂ ಒಂದೇ. ಎಬಿವಿಪಿಗಳು ಹುಯಿಲೆಬ್ಬಿಸಿ ಉಡುಪಿಯಲ್ಲಿ ಬಂದ್ ಎಂದಾಗಲೇ ಅತ್ಯಾಚಾರದ ಹಿಂದೆ ಸಂಘಿಗಳಿರಬೇಕು ಎಂಬ ಸಂದೇಶ ಬಂದಿತ್ತು.

ಅತ್ಯಾಚಾರಕ್ಕೆ ಒಳಗಾದ ಯುವತಿ ಇನ್ನು ದೂರು ಕೊಟ್ಟಿಲ್ಲವೆಂದರೆ ಬಹುಶಃ ಆಕೆಗೆ ಎಬಿವಿಪಿಗಳು ಬೆದರಿಕೆ ಹಾಕಿರಬೇಕು. ಆರೆಸ್ಸೆಸ್ಸಿನ ಮಿದುಳು ಎಂದರೆ ಸಾಮಾನ್ಯವೇ?

- ರವಿಕುಮಾರ್, ಹಾಸನ

ಆನೆಗಳ ಹೋರಾಟ!

ದಿನವು ಶೋಷಣೆಯಲ್ಲೆ ಜೀವಿಸಿರುವ ನಾವುಗಳು ಅಧಿಕಾರದ ಭಯಕ್ಕೊ ಅಥವಾ ಸ್ವಾರ್ಥದಲ್ಲಿ ಮುಳುಗಿಯೋ ನಮ್ಮ ಹಕ್ಕುಗಳನ್ನು ಕೇಳುವುದನ್ನೇ ಮರೆತು ಹಲ್ಲು ಕಿತ್ತ ಹಾವುಗಳಾಗಿದ್ದೇವೆ. ಈ ನಿಟ್ಟಿನಲ್ಲಿ ನೋಡಿದರೆ ಆನೆಗಳ ಹೋರಾಟ (ಜುಲೈ 10, 2013 ಸಂಚಿಕೆಯಲ್ಲಿನ ದಾ... ಅವರ 'ಅಂಚಿನಿಂದ' ಅಂಕಣ) ನಿಜಕ್ಕೂ ನ... ಪಾಠವಾಗಿದೆ. ಹೇಮಾವತಿ ನದಿ ಉಳಿಸಿ ಹೋ... ಕುಡಂಕುಳಂ ಹೋರಾಟ, ಜಾತಿನಿನಾಶದ ವಿರುದ್ಧ ಸಾ... ಶಿಕ್ಷಣಕ್ಕೆ.. ಹೀಗೆ ಪ್ರಗತಿಪರ ಹೋರಾಟದಲ್ಲಿ ... ಪಾತ್ರಗಳಾದರು ಏನು?



ಇನ್ನಾದರು ಇದರ ಬಗ್ಗೆ ನಾವುಗಳು ಗಂಭೀ... ಯೋಚಿಸಬೇಕಿದೆ. ವಾಸುರವರ ಕಲ್ಪನೆಯಂತೆ ಆ... ಮುಂದೊಂದು ದಿನ ವಿಧಾನ ಸೌಧದ ಕಡೆ ಹೊ... ಬದಲಿಸಲಿ. ಪ್ರತಿ ಬಾರಿ ಆನೆಗಳ ದಾಳಿಯೆಂದು ಓದ... ಆದರೆ ಇದು ಆನೆಗಳ ಹೋರಾಟವೆಂಬ ವಾಸು ಸರಿ... ತರ್ಕಿಸಿದ್ದಾರೆ.

- ಸರೋವರ ಬೆಂಕಿಕೆರೆ, ಈ ಮೇಲ್ ಮ...

ಚಾನೆಲ್‌ಗಳು ನಾಲ್ಕನೇ ಸ್ತಂಭವಾಗಲಿ


ಅನಂತ ಚಿನಿವಾರ 'ಜನಶ್ರೀ' ತ್ಯಜಿಸಿ 'ಸುವ... ಚಾನಲ್‌ನ ಉಸ್ತುವಾರಿ ವಹಿಸಿಕೊಂಡಿದ್ದು ಮತ್ತು 'ಕಾ... 'ಸುವರ್ಣ' ಚಾನಲ್‌ನಿಂದ ಅನುಭವಿ ಶಶಿಧರ ... ಹೊಸದಾಗಿ 'ಜನಶ್ರೀ'ಯ ಮುಖ್ಯಸ್ಥ... ಸೇರ್ಪಡೆಯಾಗುತ್ತಿರುವುದು, ಹಾಗೂ ಚಾನಲ್‌ಗಳ ... ನಷ್ಟದ ಮಾಹಿತಿ ಜೂನ್ 10, 2013ರ 'ಗೌರಿ ಲಂ... ಪತ್ರಿಕೆ' ಓದಿ ತಿಳಿಯಿತು.

ಚಾನಲ್‌ಗಳು ಇಂದು ಮನೊರಂಜನೆಯ ಹೆಸರಿ... ಹಿಂಸಾತ್ಮಕ ಹಾಗೂ ಅಶ್ಲೀಲತೆಯಿಂದ ಕೂ... ಕಾರ್ಯಕ್ರಮಗಳನ್ನು ಹೆಚ್ಚಾಗಿ ಪ್ರಸಾರ ಮಾಡುತ್ತವೆ ಎ... ತಪ್ಪಾಗಲಿಕ್ಕಿಲ್ಲ, ನಾಗರಿಕ ಸಮಾಜ ತಪ್ಪು ದಾರಿ... ಸಾಗುತ್ತಿದ್ದರೆ ಸಮಾಜವನ್ನು ಎಚ್ಚರಿಸುವ ದೊಡ್ಡ ಜವಾ... ಚಾನಲ್‌ಗಳದ್ದಾಗಿರುತ್ತದೆ. ಈಗಿನ ಹೆಚ್ಚಿನ ಚಾನಲ್... ವಾಸ್ತವಿಕ ಸಮಾಚಾರಗಳನ್ನು ಮಾತ್ರ ಬಿತ್ತರಿಸದೇ ಒಳ... ಸಮಾಚಾರಗಳನ್ನು ಹುಡುಕಿ ಬಿತ್ತರಿಸುವಂತಾಗಬೇಕಾ...

ಸುವರ್ಣ, ಜನಶ್ರೀಗೆ ಬಂದ ಹೊಸ ತಂಡ ... ತಮ್ಮ ಚಾನಲ್‌ಗಳ ಲಾಭನಷ್ಟದ ಜೊತೆಗೆ ನಾ... ಸಮಾಜದ ಲಾಭ ನಷ್ಟದ ಕಡೆಗೂ ಸ್ವಲ್ಪ ಗ... ಹರಿಸಲಿ ಎಂದು ಬಯಸುತ್ತೇನೆ. ಪ್ರಜಾಪ್ರಭುತ್ವದ ನಾ... ಸ್ತಂಭವೂ ಆದ ಮಾಧ್ಯಮಗಳು ಇದರ ಕಡೆ ಗ... ಹರಿಸುತ್ತವೆಂದು ಅಪೇಕ್ಷೆ ಹಾಗೂ ಅ... ನಿರೀಕ್ಷೆಯಲ್ಲಿದ್ದೇನೆ.


-ಪ್ರೊ. ಎಂ.ಬಿ.ಪಾಟೀಲ, ರಾಮದು...

...ೋಮಲ್ ಅತಿಕ್ರಮಣ



ಕೋಮಲ್ ಈಗ ಮತ್ತೊಂದು ಹೊಸ ಅವತಾರದಲ್ಲಿ ...ಕೊಳ್ಳುತ್ತಿದ್ದಾರೆ. ಆದರೆ ಅದು ನೇರವಾಗಿ ಅಲ್ಲ, ಪರೋಕ್ಷವಾಗಿ.

...ಸ್ಯಾರ್‌ಗೆ ಆಗ್‌ಬಿಟ್ಟೈತೆ' ಚಿತ್ರಕ್ಕೆ 'ಸಂಗೊಳ್ಳಿ ರಾಯಣ್ಣ' ಖ್ಯಾತಿಯ ಕೇಶವಾದಿತ್ಯ ... ಸಂಭಾಷಣಾಕಾರರು. ಅವರು ಸಂಭಾಷಣೆ ಬರೆದ ನಂತರ ಅದ್ಯಾಕೋ ... ನಾಯಕ ನಟ ಕೋಮಲ್‌ಗೆ ಅದು ಇಷ್ಟವಾಗಲಿಲ್ಲವಂತೆ. ಇಡೀ ...ಷಣೆ ಐತಿಹಾಸಿಕ ಚಿತ್ರದ ಮಾದರಿಯಲ್ಲಿದ್ದು ಅದು ಎಲ್ಲೂ ಕೋಮಲ್ ...ರಿಸಂಗೆ ಹೋಲುತ್ತಿರಲಿಲ್ಲವಂತೆ. ಇದರಿಂದ ಬೇಸರಪಟ್ಟುಕೊಂಡ ...ಮಲ್ ನೇರವಾಗಿ ನಿರ್ಮಾಪಕರ ಬಳಿ ತನ್ನ ಅಳಲನ್ನು ತೋಡಿಕೊಂಡು



"ನನ್ನ ಭಾಗದ ಸಂಭಾಷಣೆಯನ್ನು ನಾನೇ ಬರೆದುಕೊಳ್ಳಲೇ"? ಎಂದು ವಿನಂತಿಸಿಕೊಂಡರಂತೆ. ಆಗ ನಿರ್ಮಾಪಕ 'ಯಸ್' ಅಂದಿದ್ದೇ ತಡ ಕೋಮಲ್ ಸಂಭಾಷಣಾಕಾರರಾಗಿ ರೂಪಾಂತರಗೊಂಡಿದ್ದಾರೆ. ಈ ಚಿತ್ರದ ತನ್ನ ಪಾತ್ರಕ್ಕೆ ಕೋಮಲ್‌ರವರು ಸ್ವತಃ ತಾವೇ ಸಂಭಾಷಣೆಯನ್ನು ಬರೆದು ಕೊಂಡಿದ್ದಾರೆ. ...ಚಿತ್ರದ ಟೈಟಲ್ ಕಾರ್ಡ್‌ನಲ್ಲಿ ಕೇಶವಾದಿತ್ಯ ಅವರ ಹೆಸರೇ ರಾರಾಜಿಸುತ್ತಿದೆ. ...ದಿತ್ಯ ಅವರು ಕೋಮಲ್‌ರವರ ಈ ಅತಿಕ್ರಮಣವನ್ನು ಹೇಗೆ ...ಕೊಳ್ಳುತ್ತಾರೋ ನೋಡಬೇಕು.

...ೋಮಲ್ ಈ ರೀತಿ ತನ್ನ ಪಾತ್ರಕ್ಕೆ ಹಿಂದೆಯೂ ಅನೇಕ ಬಾರಿ ...ಷಣೆಯನ್ನು ತಾವೇ ಬರೆದಿದ್ದರು. ಅದನ್ನು ಕೆಲವು ಪತ್ರಕರ್ತರ ಬಳಿ ಗುಟ್ಟಾಗಿ ಕೋಮಲ್ ಹೇಳಿಕೊಳ್ಳುತ್ತಿದ್ದರು. ಆದರೆ ಎಲ್ಲೂ ಈತನಕ ಬಹಿರಂಗವಾಗಿ ಕೋಮಲ್ ಈ ಬಗ್ಗೆ ಬಾಯಿಬಿಟ್ಟವರಲ್ಲ.

ತಮಿಳುನಾಡಿನಲ್ಲಿ ಅನೇಕ ನಾಯಕನಟರು ತಮ್ಮ ಪಾತ್ರಕ್ಕೆ ತಾವೇ ಸಂಭಾಷಣೆಯನ್ನು ಬರೆಯುವ ರೂಢಿಯನ್ನು ಬೆಳೆಸಿಕೊಂಡಿದ್ದಾರೆ. ಖಂಡಿತವಾಗಿಯೂ ಅದು ತಪ್ಪೇನಲ್ಲ, ಆದರೆ ಕೋಮಲ್‌ರಂತಹ ನಟ ಇದನ್ನು ಕದ್ದುಮುಚ್ಚಿ ಮಾಡಿ ಆ ಮೂಲಕ ಅಧಿಕೃತ ಸಂಭಾಷಣಾಕಾರರನ್ನು ಪೇಚಿಗೆ ಸಿಲುಕಿಸುವುದು ಮಾತ್ರ ಸರಿಯಲ್ಲ.

'ಭದ್ರಾವತಿ'ಯವರ ಸ್ಟೋರಿ

'ಕಾಂಜಿಪಿಂಜಿ ಲವ್ ಸ್ಟೋರಿ' ಎಂಬ ಹೊಸ ಚಿತ್ರ ಮೊನ್ನೆ ಆರಂಭವಾಗಿದೆ. ಈ ಚಿತ್ರದ ವಿಶೇಷತೆಯೆಂದರೆ ಇದರ ನಿರ್ಮಾಪಕರು, ನಿರ್ದೇಶಕರು, ನಾಯಕ-ನಾಯಕಿ ಮತ್ತು ಹೆಚ್ಚಿನ ಕಲಾವಿದರು ಭದ್ರಾವತಿ ತಾಲ್ಲೂಕಿನವರು. "ನಾವೆಲ್ಲ ಭದ್ರಾವತಿಯವರು" ಎಂದು ಈ ಚಿತ್ರತಂಡ ಸಾಹಸದ ತರಹ ಹೇಳುತ್ತಿರುವುದು ಮಜವಾಗಿದೆ.

ಈ ಚಿತ್ರದ ನಿರ್ದೇಶಕರ ಹೆಸರು ಭದ್ರಾವತಿ ರಾಮಕೃಷ್ಣ, ನಾಯಕನ ಹೆಸರು ಡ್ಯಾನ್ಸರ್ ವಿಜಯ್. ನಾಯಕಿ ದೀಪಿಕಾ ದಾಸ್. ನಿರ್ಮಾಪಕರ ಹೆಸರು ಕುಮಾರ್ ಮತ್ತು ಅಕ್ಬರ್ ಷರೀಫ್.

ಒಂದು ಚಿತ್ರಕ್ಕೆ ಬೇಕಾದ ಕಲಾವಿದರನ್ನು ಪರಭಾಷೆಯಿಂದ ಕರೆತರುವ ಟ್ರೆಂಡ್‌ಗೆ ವಿರುದ್ಧವಾಗಿ ಎಲ್ಲ ನಟನಟಿಯರು ಮತ್ತು ತಂತ್ರಜ್ಞರನ್ನು ಲೋಕಲ್ ಲೆವೆಲ್‌ನಲ್ಲೇ ಆಯ್ಕೆ ಮಾಡುವ ಈ ಪ್ರಕ್ರಿಯೆ ಬಹುಶಃ ಕನ್ನಡ ಚಿತ್ರೋದ್ಯಮದ



ಮಟ್ಟಿಗೆ ಹೊಸ ಸಂಗತಿ. ಇಂತಹ ವಿಷಯದಲ್ಲಿ ಒಂದು ಪ್ರದೇಶದ ಮೇಲಿನ ಪ್ರೀತಿ-ಪ್ರೇಮವನ್ನು ತೋರಿಸುವುದು ಅಷ್ಟೇನೂ ಸಮಂಜಸವಲ್ಲ ಎಂದು ಅರಿತರೂ ನಮ್ಮ ಜನ ಯಾಕೆ ಈ ರೀತಿ ಮಾಡುತ್ತಿದ್ದಾರೆ ಎಂಬುದು ಅರ್ಥವಾಗುತ್ತಿಲ್ಲ.

ಮುಖ್ಯ ವಿಷಯವೇನೆಂದರೆ ಭದ್ರಾವತಿಯಿಂದ ಈತನಕ ಚಿತ್ರರಂಗಕ್ಕೆ ಬಂದು ದೊಡ್ಡ ಹೆಸರು ಮಾಡಿದವರೆಂದರೆ ದೊಡ್ಡಣ್ಣ ಮತ್ತು ಎಸ್.ನಾರಾಯಣ್. ಇವರಿಬ್ಬರೂ ಈ ಭದ್ರಾವತಿಯವರ ಚಿತ್ರದಲ್ಲಿ ಇಲ್ಲದಿರುವುದು ವಿಶೇಷವಾಗಿ ಕಾಣಿಸುತ್ತದೆ.


ಕೀಳು ಪ್ರಚಾರದ ಅಮಲು!

ಯಾವಾಗಲೂ ವಿವಾದ ಮತ್ತು ಗಿಮಿಕ್‌ಗಳಲ್ಲೇ ಸಂತೋಷವನ್ನು ಕಾಣುವ ನಾಯಕ ನಟ ಉಪೇಂದ್ರ ಈ ಬಾರಿ ಮತ್ತೊಮ್ಮೆ ಅಂತಹ ವಿವಾದದಲ್ಲಿ ಸಿಲುಕಿಕೊಂಡಿದ್ದಾರೆ. ಅವರು ನಾಯಕನಾಗಿ ನಟಿಸಲಿರುವ 'ಬಸವಣ್ಣ' ಚಿತ್ರಕ್ಕೆ ಸಂಬಂಧಪಟ್ಟ ಸುದ್ದಿ ಇದು.



ಈ ಚಿತ್ರವನ್ನು 'ದಂಡುಪಾಳ್ಯ' ಖ್ಯಾತಿಯ ಶ್ರೀನಿವಾಸ್‌ರಾಜು ನಿರ್ದೇಶಿಸುತ್ತಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಕಳೆದ ವಾರ ಪತ್ರಿಕೆಗಳಲ್ಲಿ ಜಾಹೀರಾತು ಪ್ರಕಟಗೊಂಡಿತ್ತು, ಆ ಜಾಹೀರಾತಿನಲ್ಲಿ 'ಬಸವಣ್ಣ'ನ ಶೈಲಿಯಲ್ಲಿ ಉಪ್ಪಿ ಕುಳಿತುಕೊಂಡಂತೆ ಅಸ್ಪಷ್ಟವಾಗಿ ಚಿತ್ರಿಸಲಾಗಿತ್ತು, ಆ ವ್ಯಕ್ತಿಯ ಕೆಳಗಡೆ ಒಂದು ಗನ್‌ಅನ್ನು ಇಡಲಾಗಿತ್ತು. ಆ ಜಾಹೀರಾತನ್ನು ನೋಡಿ ಬಸವಣ್ಣನ ಭಕ್ತರು ಮತ್ತು ಅಭಿಮಾನಿಗಳು ತೀವ್ರವಾಗಿ ಪ್ರತಿಭಟಿಸಿದರು.

ಆದರೆ ಉಪೇಂದ್ರ ಅವರಿಗೆ ಈ ಬಗ್ಗೆ - ಅಂದರೆ ಪ್ರತಿಭಟನೆಯಾದ ಬಗ್ಗೆ ಅಥವಾ ಚಿತ್ರದ ಶೀರ್ಷಿಕೆ ವಿವಾದದ ಕೇಂದ್ರಬಿಂದುವಾಗಿದ್ದ ಬಗ್ಗೆ - ಗೊತ್ತೇ ಇಲ್ಲವಂತೆ. "ನಾವು ಮುಂದಿನ ವಾರ ಲಂಡನ್‌ಗೆ ಚಿತ್ರೀಕರಣಕ್ಕೆ ಹೋಗುತ್ತೇವೆ. ಅಲ್ಲಿಂದ



ಬಂದನಂತರ ಈ ಬಗ್ಗೆ ಮಾತನಾಡುತ್ತೇವೆ. ಅಂದಹಾಗೆ ಈ ಚಿತ್ರದ ಶೀರ್ಷಿಕೆ 'ಬಸವಣ್ಣನಿಗೂ, 12ನೇ ಶತಮಾನದ ಬಸವಣ್ಣನಿಗೂ' ಯಾವುದೇ ಸಂಬಂಧವಿಲ್ಲ, ಇದೊಂದು ಕಾಲ್ಪನಿಕ ಕಥೆ" ಎಂದು ಉಪ್ಪಿ ಹೇಳಿದರು.

ಈ ಹಿಂದೆಯೂ ಉಪ್ಪಿ ನಟನೆಯ 'ಹಿಂದೂ' ಮತ್ತು 'ಮಾಸ್ತಿ' ಚಿತ್ರಗಳ ಶೀರ್ಷಿಕೆಗಳು ವಿವಾದದ ಕೇಂದ್ರಬಿಂದುವಾಗಿದ್ದವು. ಇದನ್ನೆಲ್ಲ ನೋಡಿದರೆ ಉಪ್ಪಿಗೆ ಚಿತ್ರಕ್ಕೆ ವಿವಾದಾಸ್ಪದ ಹೆಸರಿಟ್ಟು ಪುಕ್ಕಟೆ ಪ್ರಚಾರ ಗಿಟ್ಟಿಸುವ ಚಾಳಿ ಮುಂದುವರಿದಿರುವಂತೆ ಕಾಣಿಸುತ್ತದೆ.

ಇಂತಹ ವಿವಾದ ಅಥವಾ ಪುಕ್ಕಟೆ ಪ್ರಚಾರದಿಂದ ಚಿತ್ರಕ್ಕೆ ಯಾವ ರೀತಿಯಲ್ಲೂ ಸಹಾಯವಾಗುವುದಿಲ್ಲ ಎಂಬ ಸತ್ಯ ಗೊತ್ತಿದ್ದೂ ಉಪ್ಪಿ ಇನ್ನೂ ಯಾಕೆ ಇಂತಹ ಚೀಪ್ ಗಿಮಿಕ್‌ಗಳಿಗೆ ಅವಕಾಶ ಕೊಡುತ್ತಾರೆ ಎಂಬುದೇ ಅರ್ಥವಾಗುತ್ತಿಲ್ಲ. ಅವರ 'ಎ', 'ಸೂಪರ್', 'ಓಂ', '?' ಮೊದಲಾದ ಚಿತ್ರಗಳ ಟೈಟಲ್‌ಗಳನ್ನಾದರೂ ಜೀರ್ಣಿಸಿಕೊಳ್ಳಬಹುದು. ಆದರೆ ಪುರಾಣದ ವ್ಯಕ್ತಿಗಳಿಗೆ ಅವಹೇಳನವಾಗುವಂತಹ ಟೈಟಲ್ ಇಡುವುದು ಖಂಡಿತವಾಗಿಯೂ ಶೋಭೆ ತರುವಂಥದ್ದಲ್ಲ.

• ಶೆಣೈ

ಕೆಪಿಎಸ್‌ಸಿ ಹಗರಣ: ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ

...ಮ್ಮ ಪತ್ರಿಕೆಯಲ್ಲಿ ಪ್ರಕಟವಾದ ಕರ್ನಾಟಕ ...ಸೇವಾ ಆಯೋಗದ 'ಮಾಜಿ ಅಧ್ಯಕ್ಷ ಗೋನಾಳ್ ...ಷ್ಗೆ ಜೈಲು ಸನ್ನಿಹಿತ' ಎಂಬುದನ್ನು ಓದಿದಾಗ ...ರ ಅನ್ಯಾಯಕ್ಕೆ ಒಳಗಾದ ಅಭ್ಯರ್ಥಿಗಳ ಸಂತೋಷಕ್ಕೆ ... ಇಲ್ಲದಂತಾಗುತ್ತದೆ. ಈತನ ಅವಧಿಯಲ್ಲಿ ನಡೆದ ...ಉನ್ನತ ಹುದ್ದೆಗಳ ಆಯ್ಕೆಯಲ್ಲಿ ಭ್ರಷ್ಟಾಚಾರವೇ ...ಖವಾಗಿದ್ದು, ಹುದ್ದೆಗಳನ್ನು ಹರಾಜು ಹಾಕಿದಂತೆ ...ನೆ. ಇದನ್ನೇ ಮುಂದುವರಿಸಿ ಈ ವರ್ಷದ ಕೆಎಎಸ್ ... 1 ಮತ್ತು 2 ಹುದ್ದೆಗಳ ಆಯ್ಕೆಯಲ್ಲಿ ...ದ್ದರುವುದು. ಅಧ್ಯಕ್ಷನೇ ಹೀಗಿರುವಾಗ ಇತರೆ ಸದಸ್ಯರು ...ಷ್ಟ ಬಂದಂತೆ ದೋಚುತ್ತಾರೆ. ಹಿಂದಿನ ಅಧ್ಯಕ್ಷನಿಗಾದ ... ಶಿಕ್ಷೆಯಿಂದಲೂ ಇವರು ಪಾಠ ಕಲಿಯಲಿಲ್ಲ. ... ಇದನ್ನು ಸೂಕ್ತ ತನಿಖೆಗೆ ಆದೇಶಿಸಿರುವುದು ...ದ ಕ್ರಮ. ತಪ್ಪಿತಸ್ಥರ ವಿರುದ್ಧ ಕಾನೂನುಕ್ರಮ ...ಕೊಳ್ಳುವುದಲ್ಲದೆ, ಅಕ್ರಮವಾಗಿ ಸಂಪಾದಿಸಿರುವ ...ಸ್ನು ಇವರಿಂದ ವಸೂಲಿ ಮಾಡಬೇಕು.

...ಂದಿನ ಮುಖ್ಯಮಂತ್ರಿ ಕುಮಾರಸ್ವಾಮಿಯವರು ...ಸ್ವ ಜಾತಿಯವನೊಬ್ಬನನ್ನು ಈ ಆಯೋಗಕ್ಕೆ ನೇಮಿಸಿ ...ಸ್ವ ಜಾತಿ/ಪಂಗಡ ಮತ್ತು ಹಿಂದುಳಿದ ಜನಾಂಗದ ...ಕಾಪಾಡಬಲ್ಲ ಎಂದು ಭಾವಿಸಿದ್ದರು. ಆ ನಿಟ್ಟಿನಲ್ಲಿ ...ಳ್ ಭೀಮಪ್ಪನನ್ನು ನೇಮಿಸಲಾಗಿತ್ತು, ಆದರೆ ಈತ ...ನಾಂಗಕ್ಕೇ ಅನ್ಯಾಯ ಮಾಡಿದ್ದಾರೆ.

...ರಿಶಿಷ್ಟ ಕೋಟಾದಡಿ ಆಯೋಗಕ್ಕೆ ಸದಸ್ಯೆಯಾಗಿರುವ ...ಡಾ ಶ್ರೀಧರ್‌ರವರ ಸುಳ್ಳು ಜಾತಿ ಪತ್ರದ ಬಗ್ಗೆ ... ಬೆಳಕು ಚೆಲ್ಲಿದೆ. ಇದನ್ನು ಕುರಿತು ಸಂಬಂಧಿಸಿದ ...ಿ ಸೂಕ್ತ ತನಿಖೆ ನಡೆಸಲಿ.

-ಎಚ್.ಕೆ. ಈರಪ್ಪ, ಬೆಂಗಳೂರು

...ರಾಜ್ಯಕ್ಕೆ 6ನೇ ರ್‍ಯಾಂಕ್ ಪಡೆದಿದ್ದೇನೆ. ನನ್ನ ಪತಿ ಮೇಜರ್ ಸಿದ್ದಲಿಂಗಯ್ಯ ಹಿರೇಮಠ್ ಭಾರತ ಸೇನೆಯಲ್ಲಿದ್ದು ಕಾಶ್ಮೀರ, ಅಸ್ಸಾಂ ಮುಂತಾದೆಡೆ ಸೇವೆ ಸಲ್ಲಿಸಿ ನಂತರ 2008ರ KAS ಪರೀಕ್ಷೆಯಲ್ಲಿ ಅಸಿಸ್ಟೆಂಟ್ ಕಮೀಷನರ್ ಆಫ್ ಕಮರ್ಷಿಯಲ್ ಟ್ಯಾಕ್ಸ್ ಆಫೀಸರ್ ಆಗಿ ಆಯ್ಕೆಯಾಗಿದ್ದಾರೆ. ಆಗಲೇ ನಾನೂ ಸಹ KAS ಪರೀಕ್ಷೆ ಬರೆದು ಲಿಖಿತ ಪರೀಕ್ಷೆಯಲ್ಲಿ ನಾವಿಬ್ಬರೂ ಉತ್ತಮ ಅಂಕಗಳನ್ನು ಪಡೆದಿದ್ದಾಗಲೂ ಇಂಟರ್‌ವ್ಯೂನಲ್ಲಿ ತಾರತಮ್ಯಕ್ಕೊಳಗಾಗಿ ಕಡಿಮೆ ಅಂಕ ಗಳಿಸಿದ್ದೆವು. 927 ಅಂಕ ಪಡೆದಿದ್ದ ನನಗೆ ಇಂಟರ್‌ವ್ಯೂನಲ್ಲಿ ಕೇವಲ 55 ಅಂಕ ನೀಡಲಾಗಿತ್ತು. ಆದರೂ ಛಲ ಬಿಡದೆ 2011ರ KAS ಪರೀಕ್ಷೆಯಲ್ಲಿ 1055 ಅಂಕ ಪಡೆದು ಇಂಟರ್‌ವ್ಯೂನಲ್ಲಿ 150 ಅಂಕ ಗಳಿಸಿದ್ದೇನೆ. ಇದು ನನ್ನ ಶ್ರಮಕ್ಕೆ ಸಿಕ್ಕಿರುವ ಪ್ರತಿಫಲ.

ಆದರೆ ನಿಮ್ಮ ಪತ್ರಿಕೆಯಲ್ಲಿ ಇದು ನಾನು ಮಾಡಿದ ಅಪರಾಧವೆಂಬಂತೆ ಬರೆದಿದ್ದೀರಿ. ಇನ್ನು ಮೈಸೂರಿನ ಜಿಲ್ಲಾಧಿಕಾರಿ ಶ್ರೀ ಪಿ.ಎಸ್. ವಸ್ತ್ರದ್‌ರವರೊಂದಿಗೆ ನಮಗೆ ಸಂಪರ್ಕವಿಲ್ಲ, ಅವರಿಂದ ನಾವು ಯಾವ ನೆರವೂ ಪಡೆದಿಲ್ಲ.

ಕೌಸರ್ ರೇಷ್ಮಾ ಎಂಬುವರಿಗೆ ಇಂಟರ್‌ವ್ಯೂನಲ್ಲಿ ಕಡಿಮೆ ಅಂಕ ಬಂದಿರುವ ಬಗ್ಗೆ ನನಗೆ ನಿಜಕ್ಕೂ ವಿಷಾದವೆನಿಸಿದೆ. ಆದರೆ ಅದಕ್ಕೆ ನಾನು ಕಾರಣಳಲ್ಲ.



ನಿಮ್ಮ ಪತ್ರಿಕೆಯ ವರದಿಯಿಂದ ನನಗೆ ನೋವಾಗಿದೆ.

-ಅನುರಾಧ ವಸ್ತ್ರದ್, ಬೈಲಹೊಂಗಲ

ಪತ್ರಿಕೆಯಲ್ಲಿ ಬರುತ್ತಿರುವ ಡಾ.ವಾಸು ಅವರ 'ಅಂಚಿನಿಂದ' ಅಂಕಣವು ತುಂಬಾ ಉಪಯುಕ್ತವಾಗಿವೆ. ಧನ್ಯವಾದಗಳು.

- ಭೀಮನಗೊಂಡ ಪರಗೊಂಡ, ಜೇವರ್ಗಿ

ಗೌರಿ ಲಂಕೇಶ್ ಪತ್ರಿಕೆಯಲ್ಲಿ ರಂಗಭೂಮಿ ಬಗ್ಗೆ ಹೊಸ ಅಂಕಣ ಶುರುವಾಗಿರುವುದು ಸ್ವಾಗತಾರ್ಹ. ಎಲ್ಲ ರಂಗಕರ್ಮಿಗಳು ಈ ಪತ್ರಿಕೆಯನ್ನು ಕೊಂಡು ಓದಬೇಕಿದೆ.

- ಲವಕುಮಾರ್, ತಿಪ್ಪೂರು


...ನ ನೋಯಿಸಿದ ವರದಿ

KAS ಹಗರಣಕ್ಕೆ ಸಂಬಂಧಿಸಿದಂತೆ ದಿನಾಂಕ 10-...13 ಸಂಚಿಕೆಯ 'ಲಂಕೇಶ್' ವಾರ ಪತ್ರಿಕೆ ವರದಿಯಲ್ಲಿ ...

ಲೇಖನ : ನಿಮ್ಮ ಅನಿಸಿಕೆಗಳನ್ನು, lankesh70@rediffmail.com ಗೆ ... 9980331427 ...

ಮಣಿಪಾಲ ವರದಿಯ ದನಿ ನೋವುಂಟು ಮಾಡಿದೆ

ಜುಲೈ 10, 2013ರ ಸಂಚಿಕೆಯಲ್ಲಿ ಮಣಿಪಾಲದ ದುರ್ಘಟನೆ ಕುರಿತು ಪ್ರಕಟವಾಗಿರುವ ಲೇಖನದಲ್ಲಿ ('ಮಣಿಪಾಲ ಪೈ ರಿಪಬ್ಲಿಕ್‌ನಲ್ಲಿ ಗ್ಯಾಂಗ್ ರೇಪ್') ಕೆಲವು ಆಕ್ಷೇಪಾರ್ಹ ಹೇಳಿಕೆಗಳಿವೆ. ಲೇಖನದ ಶೀರ್ಷಿಕೆಯೇ ಮಣಿಪಾಲ ಇಡಿಯಾಗಿ ಡ್ರಗ್ಸ್ ಹಾಗು ಕುಣಿತದ ಕೇಂದ್ರವಾಗಿಬಿಟ್ಟಿದೆ ಎಂದು ಅರ್ಥ ಕೊಡುವಂತಿದೆ. ಆದರೆ ವಾಸ್ತವ ಹಾಗಿಲ್ಲ, ದೇಶದ ಇತರ ಪ್ರತಿಷ್ಠಿತ ಶಿಕ್ಷಣ ಕೇಂದ್ರಗಳ ಹಾಗೆ ಮಣಿಪಾಲದಲ್ಲೂ ಬಹುಪಾಲು ವಿದ್ಯಾರ್ಥಿಗಳು ವ್ಯಾಸಂಗದಲ್ಲಿ ಗಂಭೀರವಾಗಿ ತೊಡಗಿಸಿಕೊಂಡವರು. ಇವರು ಬೆತ್ತಲೆಯಾಗಿ ಓಡಾಡುವುದೂ ಇಲ್ಲ. ಕರ್ನಾಟಕದ ಇತರ ಪ್ರೊಫೆಷನಲ್ ಕಾಲೇಜು ಕ್ಯಾಂಪಸ್‌ಗಳಿಗಿಂತ ಮಣಿಪಾಲದ ಕ್ಯಾಂಪಸ್ ಭಿನ್ನವಾಗಿಲ್ಲ. ಇಲ್ಲಿನ ವಿದ್ಯಾರ್ಥಿಗಳು ಶ್ರೀಮಂತರ ಮನೆಯಿಂದ ಬಂದವರು ಎಂಬುದು ನಿಜ; ಆದರೆ ಇವರೆಲ್ಲರೂ ಸಾರಾಸಗಟಾಗಿ ಸ್ವೇಚ್ಛಾಚಾರ, ಕುಡಿತ, ಕುಣಿತ, ಡ್ರಗ್ಸ್‌ಗಳಲ್ಲಿ ಮುಳುಗಿರುತ್ತಾರೆ ಎಂಬುದು ಎಷ್ಟು ಮಾತ್ರಕ್ಕೂ ನಿಜವಲ್ಲ. ಇಂತಹದ್ದೆಲ್ಲ ಇಲ್ಲಿ ನಡೆಯುವುದೇ ಇಲ್ಲ ಎಂಬುದು ನಮ್ಮ ವಾದವಲ್ಲ. ಆದರೆ ಲೇಖನದ ಶೀರ್ಷಿಕೆ ಮಾತ್ರ ಖಂಡಿತವಾಗಿಯೂ ಒಂದು ಅತಿಶಯೋಕ್ತಿ. ಅದು ಮಣಿಪಾಲದ ವಿದ್ಯಾರ್ಥಿನಿಯರನ್ನು ಅವಮಾನಿಸುವಂತಹದ್ದೂ ಹೌದು. ಲೇಖನದ ಮಡಿವಂತಿಕೆಯ ಧೋರಣೆಯ ಬಗ್ಗೆ ಸಹ ನಮಗೆ ಅಸಮಾಧಾನವಿದೆ.



ಮಣಿಪಾಲದ ಸುಮಾರು 35000 ವಿದ್ಯಾರ್ಥಿಗಳಲ್ಲಿ ಎಲ್ಲರೂ ಕನಿಷ್ಠ 18-19 ವರ್ಷ ಪ್ರಾಯ ಮೀರಿದ ಯುವಕಯುವತಿಯರು; ಹೆಚ್ಚಿನವರು ಮತದಾನದ ಹಕ್ಕನ್ನೂ ಪಡೆದಿರುವಂತಹವರು. ದಿನದ 24 ಗಂಟೆಯೂ ಇವರ ಮೇಲೆ ನಿಗಾ ಇಟ್ಟುಕೊಳ್ಳುವುದು ಯಾರಿಂದಲೂ ಸಾಧ್ಯವಿಲ್ಲ. ಅದೂ ಅಲ್ಲದೆ ಒಂದು ವಿಶ್ವವಿದ್ಯಾಲಯ ಅಥವಾ ಕಾಲೇಜಿನ ಕ್ಯಾಂಪಸ್‌ನ ಎಲ್ಲ ಜಾಗಗಳಲ್ಲೂ ಒಂದೇ ಬಗೆಯ ಶಿಸ್ತು ಮತ್ತು ನಿಯಂತ್ರಣಗಳನ್ನು ಜಾರಿಗೆ ತರುವುದು ಅಸಾಧ್ಯದ ಮಾತು. ಕ್ಲಾಸುರೂಮುಗಳು ಅವುಗಳ ಹೊರಗಿನ ಕಾರಿಡಾರು, ಮತ್ತು ಕ್ಯಾಂಪಸ್‌ನ ರಸ್ತೆಗಳಲ್ಲಿ ವಿದ್ಯಾರ್ಥಿಗಳ ವರ್ತನೆ ಒಂದೇ ಬಗೆಯ ಶಿಸ್ತಿಗೆ ಒಳಪಟ್ಟಿರಬೇಕು ಎಂದು ನಿರೀಕ್ಷಿಸುವುದೂ ಸರಿಯಲ್ಲ, ಪ್ರಾಯಕ್ಕೆ ಬಂದ ವಿದ್ಯಾರ್ಥಿಗಳ ಮೇಲೆ ಬಂದೀಖಾನೆಗಳ ಕಠೋರ ಶಿಸ್ತು ಹೇರುವುದು ಪ್ರಜಾಪ್ರಭುತ್ವಕ್ಕೆ ಅನುಗುಣವಾದ ನಡವಳಿಕೆಯೂ ಅಲ್ಲ. ಆದರೆ ವಿದ್ಯಾರ್ಥಿಗಳ, ವಿಶೇಷವಾಗಿ ವಿದ್ಯಾರ್ಥಿನಿಯರ, ಉಡುಪು ತೊಡಪು ಮತ್ತು ಜೀವನಶೈಲಿಗಳ ಮಾತು ಬಂದಾಗ ಬಲಪಂಥೀಯರು, 'ಒರಟು ಮಾದರಿ'ಯ ಎಡಪಂಥೀಯರು ಮತ್ತು ಎಲ್ಲ ಮತಧರ್ಮಗಳ ಮೂಲಭೂತವಾದಿಗಳದ್ದೂ ಒಂದೇ ಬಗೆಯ ಅಸಹನೆಯ ಪ್ರತಿಕ್ರಿಯೆ; ಈ ಲೇಖನದ ಮನೋಭಾವವೂ ಅಂತಹುದೇ ಆಗಿದೆ.

ಈ ಪತ್ರವನ್ನು ಬರೆಯುತ್ತಿರುವ ನಾವಿಬ್ಬರೂ ದಶಕಗಳ ಕಾಲ ಮಣಿಪಾಲವನ್ನು ನೋಡಿದ್ದೇವೆ; ನಮ್ಮ ಮಕ್ಕಳೂ ಮಣಿಪಾಲದ ಈ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡಿದ್ದಾರೆ/ಮಾಡುತ್ತಿದ್ದಾರೆ; ಈ ಕಾರಣವಾಗಿ ಮಣಿಪಾಲಕ್ಕೆ ಬರುವ ಭಾರತ ಮತ್ತು ಜಗತ್ತಿನ ಇತರ 17 ದೇಶಗಳ ಹಲವು ವಿದ್ಯಾರ್ಥಿಗಳ ಜೊತೆ ನಾವು ಒಡನಾಡಿಯಾಗಿದ್ದೇವೆ. ನಮ್ಮಲ್ಲೊಬ್ಬರು (ಫಣಿರಾಜ್) 24 ವರ್ಷಗಳಿಂದ ಮಣಿಪಾಲದ ಇಂಜಿನಿಯರಿಂಗ್ ಕಾಲೇಜಿನಲ್ಲಿ ಮೇಷ್ಟ್ರಾಗಿ ಹೊಸ ತಲೆಮಾರಿನ ವಿದ್ಯಾರ್ಥಿಗಳ ಜೊತೆ ಪಾಠ-ಒಡನಾಟದಲ್ಲಿದ್ದಾರೆ; ಆಧುನಿಕ ಉಡುಗೆ-ತೊಡುಗೆಯ, ಸ್ನೇಹದಲ್ಲಿ ಬಿಂದಾಸ್ ಆಗಿರುವ ಯುವಕ-ಯುವತಿಯರು ಮನುಷ್ಯ ಸಂಬಂಧಗಳ ಭಾವದಲ್ಲಿ ಎಷ್ಟು ಸೂಕ್ಷ್ಮಜ್ಞರಾಗಿರ್ತಾರೆ ಎನ್ನುವುದನ್ನು ಅನುಭವದಿಂದ ನಾವು ಬಲ್ಲವರಾಗಿದ್ದೇವೆ. ಹೀಗಾಗಿ ಮಣಿಪಾಲವೆಂದರೆ 'ಮಾದಕ ಪದಾರ್ಥಗಳಿಗೆ ದಾಸರಾದ, ಕಾಮುಕತೆ ಮತ್ತು ತೊಗಲಿನ ಲಾಲಸೆಯಿಂದ ಹಪಹಪಿಸುವ ಯುವಜನರ 'ಲೋಕ' ಎಂಬಂತೆ ಮಾತನಾಡುವುದು ಸರಿಯಲ್ಲ. ಈ ಮಾತುಗಳನ್ನು ಫ್ಯಾಸಿಸ್ಟ್ ಅಬೆಂದಾದ ಮಂದಿ ಮಾತನಾಡುತ್ತಿರುವುದನ್ನು ನಾವು ಕೇಳುತ್ತಿದ್ದೇವೆ; ಪತ್ರಿಕೆಯ ವರದಿಯೂ ಆ ದನಿಯನ್ನು ಅನುಸರಿಸುವುದು ನಮಗೆ ನೋವನ್ನುಂಟುಮಾಡಿದೆ.

- ಜೆ.ರಾಜಶೇಖರ್ ಮತ್ತು ಕೆ. ಫಣಿರಾಜ್, ಉಡುಪಿ

Registered No.KA/RNP/BGS/2036/2011-13 Posted at : GPO, Bangalore-01. Friday R B P LANKESH, Kannada Weekly Price Rs. 14/- 17-07-2013 RNI No. KARKAN2005/1

ಗುಬ್ಬಿ ದುನಿಯಾ ಸ್ಟೈಲ್ ಫೇಲ್!



ಗುಬ್ಬಿ ಟಾಕೀಸ್ ಬ್ಯಾನರ್‌ನಲ್ಲಿ ಪ್ರೀತಮ್ ಗುಬ್ಬಿ ನಿರ್ಮಿಸಿ, ನಿರ್ದೇಶಿಸಿದ 'ನಮ್ ದುನಿಯಾ ನಮ್ ಸ್ಟೈಲ್' ಚಿತ್ರ ಕಳೆದ ವಾರ ತೆರೆ ಕಂಡಿದೆ. ಗುಬ್ಬಿ ಕುಟುಂಬದ ಬಹುತೇಕ ಎಲ್ಲರೂ ಈ ಚಿತ್ರಕ್ಕೆ ಆರ್ಥಿಕ ಸಹಾಯವನ್ನು ನೀಡಿದ್ದಾರೆ. ಈ ಕಾರಣದಿಂದ ಇದು ಗುಬ್ಬಿ ವಂಶದ ಚಿತ್ರ ಎಂಬ ಹಣೆಪಟ್ಟಿ ಪಡೆದು ಭಾರಿ ನಿರೀಕ್ಷೆ ಮೂಡಿಸಿತ್ತು. ಜೊತೆಗೆ 'ಮುಂಗಾರು ಮಳೆ' ಚಿತ್ರದ ನಂತರ ಪ್ರೀತಮ್ ಗುಬ್ಬಿಗೆ ಒಬ್ಬ ಒಳ್ಳೆಯ ಕಥೆಗಾರ ಎಂಬ ಹೆಗ್ಗಳಿಕೆ ಇದ್ದುದ್ದು ಕೂಡ ಈ ಚಿತ್ರಕ್ಕೆ ಪ್ಲಸ್ ಪಾಯಿಂಟ್ ಆಗಿತ್ತು. ಚಿತ್ರದ ಶೇಕಡಾ 90 ಭಾಗವನ್ನು ಮಲೇಶಿಯಾದಲ್ಲಿ ಚಿತ್ರೀಕರಿಸಿದ್ದರಿಂದ ಈ ಚಿತ್ರದ ಶ್ರೀಮಂತಿಕೆಯ ಬಗ್ಗೆ ಕುತೂಹಲ ಹೆಚ್ಚಾಗಿತ್ತು.



ಇವೆಲ್ಲವೂ ಚಿತ್ರ ಬಿಡುಗಡೆಯ ಮೊದಲು ಇದ್ದಿದ್ದು ನಿಜ. ಆದರೆ 'ನಮ್ ದುನಿಯಾ ನಮ್ ಸ್ಟೈಲ್' ಚಿತ್ರವನ್ನು ವೀಕ್ಷಿಸಿದ ನಂತರ ಆ ಎಲ್ಲ ನಿರೀಕ್ಷೆಗಳು ತಲೆಕೆಳಗಾಗುತ್ತದೆ. ತಲೆ ಚಿಟ್ಟು ಹಿಡಿಸುವ ಇಂತಹ ಚಿತ್ರವನ್ನು ಪ್ರೀತಮ್ ಗುಬ್ಬಿ ಯಾವ ಪುರುಷಾರ್ಥಕ್ಕಾಗಿ ನಿರ್ಮಿಸಿದರೋ ಎಂದು ನೋಡುಗನಿಗೆ ಅನಿಸುತ್ತದೆ. 'ಮುಂಗಾರು ಮಳೆ'ಯಂತಹ ಚಿತ್ರಕ್ಕೆ ಉತ್ತಮ ಕಥೆಯನ್ನು ನೀಡಿದ್ದ ಪ್ರೀತಮ್ ಗುಬ್ಬಿ ಈ ಚಿತ್ರದಲ್ಲಿ ಕಥೆಗಾರನಾಗಿಯೂ ಮತ್ತು ನಿರ್ದೇಶಕನಾಗಿಯೂ ಸಂಪೂರ್ಣ ವಿಫಲಗೊಂಡಿದ್ದಾರೆ.

ಚಿತ್ರ ನೋಡಿದವರಿಗೆ ಮಲೇಶಿಯಾದ ಹೊರಾಂಗಣ ಸೊಬಗನ್ನು ನೋಡಿದ ತೃಪ್ತಿಯಷ್ಟೆ ಸಿಗುತ್ತದೆ. ಇದರಲ್ಲಿ ಒಂದರ್ಧ ಡಜನ್ ಯುವಕಯುವತಿಯರು ನಟಿಸಿದ್ದರೂ ನಮ್ಮ ಮನಸ್ಸಿನಲ್ಲಿ ಉಳಿಯುವುದು 'ಮದರಂಗಿ' ಚಿತ್ರದ ನಾಯಕ ಕೃಷ್ಣ ನಾಗಪ್ಪರವರ ಲವಲವಿಕೆಯ ನಟನೆ ಮಾತ್ರ.

ಯುವ ನಿರ್ದೇಶಕರಲ್ಲಿ ಭಾರಿ ಭರವಸೆಯನ್ನು ಮೂಡಿಸಿದ್ದ ಪ್ರೀತಮ್ ಗುಬ್ಬಿ ಈ ಚಿತ್ರದಲ್ಲಿ ಸಂಪೂರ್ಣವಾಗಿ ನೋಡುಗರನ್ನು ನಿರಾಶೆಗೊಳಿಸುತ್ತಾರೆ ಎನ್ನದೇ ವಿಧಿ ಇಲ್ಲ.

ಬಿಗ್‌ಬಾಸ್‌ಗೆ ಲಹರಿ ಕುಣಿಕೆ



'ಬಿಗ್‌ಬಾಸ್' ಕಾರ್ಯಕ್ರಮ ಮುಗಿದುಹೋಗಿದೆ. ಆದರೆ 'ಬಿಗ್‌ಬಾಸ್' ಕಾರ್ಯಕ್ರಮ ನಂತರದ ಸುದ್ದಿಗಳಿಗೇನೂ ಬರವಿಲ್ಲ. ಕನಿಷ್ಠವೆಂದರೂ ಮುಂದಿನ ಐದಾರು ವಾರ 'ಬಿಗ್‌ಬಾಸ್'ಗೆ ಸಂಬಂಧಪಟ್ಟಂತೆ ಏನಾದರೂ ಸುದ್ದಿ ಕೇಳಿ ಬರುತ್ತಲೇ ಇರುತ್ತದೆ. ಅಂತಹವುದರಲ್ಲಿ ಒಂದು ಸಣ್ಣ ವಿವಾದದ ಸುದ್ದಿ ನಮ್ಮ ಕಿವಿಗೆ ಬಿದ್ದಿದೆ.

ಅದೇನೆಂದರೆ ಲಹರಿ ಕ್ಯಾಸೆಟ್ ಸಂಸ್ಥೆಯ ಮಾಲೀಕರಾದ ಲಹರಿ ವೇಲು ಅವರು 'ಬಿಗ್‌ಬಾಸ್' ಕಾರ್ಯಕ್ರಮವನ್ನು ನಿರ್ಮಾಣ ಮಾಡಿದ 'ಈ ಟಿ.ವಿ.' ಸಂಸ್ಥೆಯ ವಿರುದ್ಧ ಕೋರ್ಟಿನಲ್ಲಿ ಮೊಕದ್ದಮೆ ಹೂಡಿದ್ದಾರಂತೆ. ಈ ಕಾರ್ಯಕ್ರಮದಲ್ಲಿ ತಮ್ಮ ಬಳಿ ಇರುವ ಅನೇಕ ಹಾಡುಗಳನ್ನು ತಮ್ಮ ಅನುಮತಿ ಇಲ್ಲದೆ ಯಥೇಚ್ಛವಾಗಿ ಬಳಸಿದ್ದು ಕಾನೂನುಬಾಹಿರ ಎಂದು ಹೇಳಿ ಲಹರಿ ವೇಲು ಆರೋಪಿಸಿದ್ದಾರೆ.

ಇತ್ತೀಚೆಗೆ ನಾಗಶೇಖರ್ ನಿರ್ದೇಶನದ 'ಮೈನಾ' ಚಿತ್ರ ಬಿಡುಗಡೆಯಾಗುವ ಸಂದರ್ಭದಲ್ಲೂ ಲಹರಿ ಅವರು "ಆ ಚಿತ್ರದಲ್ಲಿ ನನ್ನ ಬಳಿ ಇರುವ ಹಾಡೊಂದನ್ನು ನಾಗಶೇಖರ್ ಅನುಮತಿ ಇಲ್ಲದೆ ಬಳಸಿದ್ದಾರೆ" ಎಂದು ಆರೋಪಿಸಿ ಕೋರ್ಟ್ ಮೆಟ್ಟಿಲನ್ನು ಏರಿದ್ದರು. ಕೊನೆಗೆ ಆ ಚಿತ್ರದ ನಿರ್ಮಾಪಕರು ವೇಲುಗೆ ಐದ... ರೂಪಾಯಿಗಳನ್ನು ನೀಡುವ ಮುಖಾಂತರ ಆ ವಿವಾದಕ್ಕೆ ... ಹಾಡಿದ್ದರು.

ಇದೀಗ ಕನ್ನಡ ಟಿ.ವಿ. ಲೋಕದಲ್ಲೇ ಅತ್ಯಂತ ಶ್ರೀಮ... ನಿರ್ಮಾಣಗೊಂಡ 'ಬಿಗ್‌ಬಾಸ್' ಈ ವಿವಾದವನ್ನು ಹೇಗೆ ಎದು... ಎಂಬುದನ್ನು ಕಾದು ನೋಡಬೇಕಾಗಿದೆ.



ಚೆಲ್ಲಾಪಿಲ್ಲಿ ಐಶ್ವರ್ಯಾ ನಾಗ್

ಸಿನಿಮಾ ನೋ ಸ್ಟಾ...

ಕನ್ನಡ ಚಿತ್ರರಂಗದಲ್ಲಿ ಈಗ ಒಂದು ರೀತಿಯ ನಿರ್ವಹಣಾ ಪರಿಸ್ಥಿತಿ ನಿರ್ಮಾಣವಾಗಿದೆ. ಸಾಮಾನ್ಯವಾಗಿ ಕೆಲವು ಶೋ ರೂಂಗಳಲ್ಲಿ 'ಸ್ಟಾಕ್ ಮುಗಿದಿದೆ' ಎಂದು ಹೇಗೆ ಬೋರ್ಡ್‌ನ್ನು ನೇತಾಡಿಸುತ್ತಾರೋ ಅಂತಹ ಪರಿಸ್ಥಿತಿ ಕನ್ನಡ ಚಿತ್ರರಂಗಕ್ಕೆ ಒದಗಿಬಂದಿದೆ.

ಉದಾಹರಣೆಗೆ ಗಾಂಧಿನಗರದ ಹಂಚಿಕೆ... ಮತ್ತು ಥಿಯೇಟರ್ ಮಾಲೀಕರ ಒಂದು ... ಸಮಸ್ಯೆಯನ್ನು ನೀವಿಲ್ಲಿ ಗಮನಿಸಬಹುದು. 'ನ... ಸಾರ್, ಮುಂದಿನ ನಾಲ್ಕು ತಿಂಗಳು ದೊಡ್ಡ ದ... ನಟರ ಯಾವುದೇ ಚಿತ್ರ ಬಿಡುಗಡೆಗೆ ಇಲ್ಲ. ಇ... ಪರಿಸ್ಥಿತಿಯಲ್ಲಿ ನಾವು ಹೇಗೆ ತಾನೆ ಬದುಕುವುದು...' ಎಂಬುದು ಅವರ ಪ್ರಶ್ನೆ.

ಹಂಚಿಕೆದಾರರ ಈ ಮಾತಲ್ಲಿ ಸತ್ಯ ಇದೆ. ಯಾಕೆಂದರೆ ಸದ್ಯಕ್ಕೆ ಪುನೀತ್ ರಾಜ್‌ಕುಮಾರ್ ... ನಟನೆಯ ಯಾವುದೇ ಚಿತ್ರ ಬಿಡುಗಡೆಗೆ ರೆಡಿಯ... 'ಬಿಗ್‌ಬಾಸ್'ನಲ್ಲಿ ಬ್ಯುಸಿಯಾಗಿದ್ದ ಸುದೀಪ್ ನಟ... ಹೊಸ ಚಿತ್ರ ಇನ್ನು ಆರಂಭವಾಗಬೇಕಾಗಿದೆ. ಶಿವರಾಜ್‌ಕುಮಾರ್ ಅಭಿನಯದ ಯಾವ ಚಿತ್ರವೂ ಬಿಡುಗಡೆಗೆ ಸಿದ್ಧಗೊಂಡಿಲ್ಲ. ದರ್ಶನ್ ನಟಿಸಿರುವ 'ಬೃಂದಾವನ' ಚಿತ್ರ ಸಂಪೂರ್ಣಗೊಳ್ಳಲು ಇನ್ನು ಮೂ... ತಿಂಗಳು ಬೇಕೇಬೇಕುಂ. ಉಪೇಂದ್ರ ಕೂಡ ಸದ್ಯಕ್ಕೆ ಯಾವುದೇ ಹೊಸ ಚಿತ್ರ ಮುಗಿಸಿಲ್ಲ. ಹೀಗೆ ಬಾಕ್ಸ್ ಆಫೀಸ್‌ನಲ್ಲಿ ಗೆಲ್ಲುವ ದೊಡ್ಡ ನಟರ ಚಿತ್ರಗಳು ಹಂಚಿಕೆದಾರರಿಗೆ ಸಿಗುವುದಿಲ್ಲ ಎಂದರೆ ಅದರರ್ಥ ಮುಂದಿನ ನಾಲ್ಕು ತಿಂಗಳು ಗಾಂಧಿನಗರದಲ್ಲಿ ಅನಾವ... ಗ್ಯಾರಂಟಿ.

ಅಷ್ಟೇ ಅಲ್ಲದೆ ಸ್ಟಾರ್ ವಾಲ್ಯೂ ಹೊಂದಿರುವ ಯಾವುದೇ ನಿರ್ದೇಶಕರ ಚಿತ್ರಗಳೂ ಈಗ ಬಿಡುಗಡೆ... ಸಿದ್ಧವಾಗಿಲ್ಲ. ಉದಾಹರಣೆಗೆ ಯೋಗರಾಜ್ ಭಟ್, ಸ... ಪ್ರೇಮ್ ಮೊದಲಾದವರ ಯಾವುದೇ ಚಿತ್ರಗಳು ಇನ್... ಸೆಟ್ಟೇರಿಲ್ಲ. ಇವೆಲ್ಲವನ್ನು ವ್ಯಾಪಾರ ದೃಷ್ಟಿಯಿಂದ ಅವಲೋಕಿಸಿದರೆ ಮುಂದಿನ ನಾಲ್ಕು ತಿಂಗಳು ಗಾಂಧಿನಗರದ ವ್ಯಾಪಾರ ಸಪ್ಪೆ ಆಗಲಿದೆ.

ರಘುಗೆ ನಾಯಕ ಸ್ಥಾನಕ್ಕೆ ಬಡ್ತಿ

ಇತ್ತೀಚೆಗೆ ಕೋಮಲ್ ಮತ್ತು ಶರಣ್ ಎಂಬ ಹಾಸ್ಯನಟರು ನಾಯಕ ನಟರಾಗಿ ಬಡ್ತಿ ಪಡೆದ ನಂತರ ಈಗ ಬಹುತೇಕ ಹಾಸ್ಯನಟರಿಗೂ ನಾಯಕನಾಗಿ ಮರ ಸುತ್ತುವ ಆಸೆ ಉಂಟಾಗಿದೆ. ಈ ನಿಟ್ಟಿನಲ್ಲಿ ಮೊದಲ ಸ್ಥಾನದಲ್ಲಿರುವವರು ಹಾಸ್ಯನಟ ರಂಗಾಯಣ ರಘು. ನೀನಾಸಂನ ಕೊಡುಗೆಯಾದ ರಂಗಾಯಣ ರಘು ಈಗ 'ಐಸಾ ಪೈಸಾ' ಎಂಬ ಚಿತ್ರದಲ್ಲಿ ನಾಯಕ ನಟನಾಗಿ ನಟಿಸುತ್ತಿದ್ದಾರೆ.

ಇವರಿಗೆ ಜೋಡಿಯಾಗಿ ಕನ್ನಡದ ಹುಡುಗಿ ನೀತು ಕಾಣಿಸಿಕೊಳ್ಳಲಿದ್ದಾರೆ. ಈ ಚಿತ್ರದ ಎಕ್ಸಿಕ್ಯೂಟಿವ್ ನಿರ್ಮಾಪಕರಾಗಿ ಪತ್ರಕರ್ತ ಮಂಜು ಕಾರ್ಯ ನಿರ್ವಹಿಸುತ್ತಿದ್ದಾರೆ.

ಈ ಹಿಂದೆ ರಂಗಾಯಣ ರಘು ನಾಯಕನಾಗಿ ಸಾಧುಕೋಕಿಲ ಜೊತೆ ಒಂದೆರಡು ಚಿತ್ರಗಳಲ್ಲಿ ಕಾಣಿಸಿಕೊಂಡಿದ್ದರೂ ಸಹ ಫುಲ್‌ಲೆಂತ್ ಹೀರೋ ಆಗಿ ಕಾಣಿಸಿಕೊಂಡಿರಲಿಲ್ಲ. ಹೀಗಾಗಿ ರಂಗಾಯಣ ರಘು ಪಾಲಿಗೆ ನಾಯಕನಾಗಿ ಇದು ಚೊಚ್ಚಲ ಚಿತ್ರ.



ಖಂಡಿತವಾಗಿಯೂ ರಂಗಾಯಣ ರಘು ಪ್ರತಿಭಾವಂತ. ಆದರೆ ನಾಯಕ ನಟನಿಗೆ ಇರಬೇಕಾದ ಮೈಕಟ್ಟು, ಸೌಂದರ್ಯ ಮತ್ತು ಮುಖಚರ್ಯೆ ಇವರಿಗಿದೆಯೇ? ಎಂಬುದು ಹಲವರ ಪ್ರಶ್ನೆ. ಆದರೆ ವಾಸ್ತವವಾಗಿ ಅಂತಹ ಅಂಶಗಳು ಹಾಸ್ಯನಟರಿಂದ ನಾಯಕ ನಟ ಸ್ಥಾನಕ್ಕೆ ಬಡ್ತಿಪಡೆದ ಜಗ್ಗೇಶ್, ಕೋಮಲ್ ಅವರಲ್ಲೂ ಇಲ್ಲ ಎಂಬುದು ಸತ್ಯ.

ಕೋಮಲ್ ಮತ್ತು ಶರಣ್ ಮಾಡಿದಂತಹ ಮ್ಯಾಜಿಕ್‌ನ್ನು ರಂಗಾಯಣ ರಘು ಕೂಡ ಮಾಡುವಲ್ಲಿ ಯಶಸ್ವಿಯಾದರೆ ಕನ್ನಡದಲ್ಲಿ ಮುಂದಿನ ದಿನಗಳಲ್ಲಿ ಹಾಸ್ಯನಟರ ಕೊರತೆ ಉಂಟಾಗುವ ಸಮಸ್ಯೆಯನ್ನು ಉದ್ಯಮದವರು ನಿಭಾಯಿಸಬೇಕಾಗುತ್ತದೆ. ಏನೇ ಇರಲಿ, ರಂಗಾಯಣ ರಘು ಇತ್ತೀಚಿನ ದಿನಗಳಲ್ಲಿ ಕನ್ನಡ ಚಿತ್ರರಂಗ ಕಂಡ ಒಬ್ಬ ಪ್ರತಿಭಾವಂತ ನಟನಾಗಿರುವುದರಿಂದ ಈ ಚಿತ್ರದಲ್ಲಿ ಖಂಡಿತವಾಗಿ ಏನಾದರೂ ಒಂದು ವಿಶೇಷತೆಯನ್ನು ನಿರೀಕ್ಷಿಸೋಣ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore-4, Phone : 26676427, Fax : 26604536, E-mail :lankesh70@rediffmail.com